ಮಂಗಳವಾರ, ನವೆಂಬರ್ 28, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 328 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಔಷಧ, ಆಹಾರ, ವ್ಯಾಯಾಮ ಇವುಗಳ ಸಮನ್ವಯದಲ್ಲಿನ ಶಿಸ್ತಿನಿಂದ ಮಧುಮೇಹಿಗಳು ಆರೋಗ್ಯಕರ ಬಾಳ್ವೆ ನಡೆಸಬಹುದು

ಆಳ-ಅಗಲ
ಕಾರ್ಮಿಕರ ರಕ್ಷಣೆಗೆ ಹತ್ತುಹಲವು ತಡೆ

ಗುಜರಾತ್‌ನಲ್ಲಿ ಅಕಾಲಿಕ ಮಳೆ: ಸಿಡಿಲಿಗೆ 27 ಮಂದಿ ಸಾವು 7

ಇ-ಸಂಗ್ರಹಣೆ ಪೋರ್ಟಲ್ 2.0ಗೆ ಚಾಲನೆ 5

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹63,900 (ಬೆಂಗಳೂರು) ▲	₹76,400 (ಬೆಂಗಳೂರು) ▼

ಸಂಜೆಯವರೆಗೂ ನಡೆದ ಸಿ.ಎಂ ಜನಸ್ಪಂದನ • ಜಿಲ್ಲಾಧಿಕಾರಿಗಳಿಗೆ ಚಾಟಿ ಬೀಸಿದ ಸಿದ್ದರಾಮಯ್ಯ

ಅಹವಾಲುಗಳ ಮಹಾಪೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತ ಚುಕ್ಕಾಣಿ ಹಿಡಿದು ಆರು ತಿಂಗಳು ತುಂಬಿದ ಸಂಭ್ರಮದ ಬೆನ್ನಲ್ಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹಮ್ಮಿಕೊಂಡಿದ್ದ 'ಜನ ಸ್ಪಂದನ' ಕಾರ್ಯಕ್ರಮಕ್ಕೆ ರಾಜ್ಯದ ವಿವಿಧೆಡೆಯಿಂದ ತರಹೇವಾರಿ ದೂರು–ದುಮ್ಮಾನ ಹೊತ್ತು ಮೂರು ಸಾವಿರಕ್ಕೂ ಹೆಚ್ಚು ಜನರು ಬಂದರು. ಕೆಲವು ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿದ ಮುಖ್ಯಮಂತ್ರಿ, ಇತ್ಯರ್ಥವಾಗದ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು ವಾರದೊಳಗೆ ಸ್ಪಂದಿಸಬೇಕೆಂದು ತಾಕೀತು ಮಾಡಿದರು.

ಎಲ್ಲ ಇಲಾಖೆಗಳ ರಾಜ್ಯಮಟ್ಟದ ಹಿರಿಯ ಅಧಿಕಾರಿಗಳನ್ನು ಇದೇ ಮೊದಲ ಬಾರಿಗೆ ತಮ್ಮ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಒಂದೇ ಸೂರಿನಡಿ ಕುಳ್ಳಿರಿಸಿದ ಮುಖ್ಯಮಂತ್ರಿ, ಜನರ ಬೇಡಿಕೆಗಳಿಗೆ ಕಿವಿಯಾದರು. ಸಾವಧಾನವಾಗಿ ಎಲ್ಲ ಸಮಸ್ಯೆಗಳನ್ನು ಆಲಿಸಿದರು.

ಪ್ರತಿ ಸಮಸ್ಯೆಗೂ ಸಂಬಂಧಿಸಿದಂತೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಅಧಿಕಾರಿಗಳನ್ನು ವಿಡಿಯೊ ಸಂವಾದದ ಮೂಲಕ ಸಂಪರ್ಕಿಸಿ ಪರಿಹಾರ ಒದಗಿಸಲು ಸೂಚಿಸಿದರು.

ಮುಖ್ಯಮಂತ್ರಿ ಬಳಿ ತಮ್ಮ ನೋವು ಭಿನ್ನವಿಸಿಕೊಂಡ ಹಲವರ ಮುಖದಲ್ಲಿ, ವರ್ಷಗಳಿಂದಲೂ ಪರಿಹಾರ ಕಾಣದ ತಮ್ಮ ಸಮಸ್ಯೆಗಳು ಇತ್ಯರ್ಥಗೊಳ್ಳಬಹುದೆಂಬ ಆಶಾಭಾವನೆ ಕಾಣಿಸಿತು. ಸಮಸ್ಯೆ ಪರಿಹರಿಸುವಂತೆ ಅಧಿಕಾರಿಗಳನ್ನು ಗದರುತ್ತಿದ್ದ ಮುಖ್ಯಮಂತ್ರಿಯ ನಡೆ ಕೆಲವರಿಗೆ ಪರಿಹಾರ ಸಿಕ್ಕಿದಷ್ಟು ಖುಷಿ ತಂದಿತ್ತು. ಮುಖದಲ್ಲಿ ಕಿರುನಗೆ ಮೂಡಿಸಿತ್ತು.

ವೃದ್ಧೆಯೊಬ್ಬರು ಸೋಮವಾರ ಜನಸ್ಪಂದನ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹರಸಿದರು

> **3 ತಿಂಗಳಿಗೊಮ್ಮೆ 'ಜನಸ್ಪಂದನ' ಮಾಡುತ್ತೇನೆ. ಮುಂದಿನ ಬಾರಿ ಹೆಚ್ಚು ಜನ ಬಂದರೆ, ನಿರ್ಲಕ್ಷ್ಯ ತೋರಿದ ತಳಹಂತದ ಅಧಿಕಾರಿಗಳ ವಿರುದ್ಧ ಕ್ರಮ ಖಚಿತ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಬಂದಿದ್ದ ಬಹುತೇಕ ಮನವಿಗಳು, ಕುಂದುಕೊರತೆಗಳು ಸ್ಥಳೀಯಮಟ್ಟದಲ್ಲಿಯೇ ಪರಿಹಾರ ಒದಗಿಸುವಂಥದ್ದು ಆಗಿದ್ದವು. ಅಂಥ ದೂರುಗಳನ್ನು ಕಂಡು ಸಿಡಿಮಿಡಿಗೊಂಡ ಮುಖ್ಯಮಂತ್ರಿ, 'ಸ್ಥಳೀಯ ಮಟ್ಟದಲ್ಲಿ ಬಗೆಹರಿಯಬೇಕಾದ ಸಮಸ್ಯೆಗಳು ಬೆಂಗಳೂರಿನವರೆಗೂ ಬರಬಾರದು. ಬಂದರೆ ಅದು ನಿಮ್ಮ ವೈಫಲ್ಯ. ಅದನ್ನು ಸಹಿಸುವುದಿಲ್ಲ' ಎಂದು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಅಹವಾಲು ಸಲ್ಲಿಸಲು ಬೆಳ್ಳಂಬೆಳಿಗ್ಗೆಯೇ 'ಕೃಷ್ಣಾ'ದ ಮುಂಭಾಗದಲ್ಲಿ ಜನರ ದಂಡು ಸೇರಿತ್ತು. ಮನವಿಗಳನ್ನು ಸ್ವೀಕರಿಸಲು 20 ಕೌಂಟರ್‌ಗಳನ್ನು ಸ್ಥಾಪಿಸಲಾಗಿತ್ತು. ಅಂಗವಿಕಲರು ಮತ್ತು ಹಿರಿಯ ನಾಗರಿಕರಿಗೆ ಎರಡು ಕೌಂಟರ್‌ಗಳನ್ನು ಮೀಸಲಿರಿಸಲಾಗಿತ್ತು. ಅಹವಾಲು ಸ್ವೀಕಾರ ಮತ್ತು ಪರಿಶೀಲನೆಗೆ ವಿವಿಧ ಇಲಾಖೆಗಳ 300ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅಹವಾಲುಗಳನ್ನು ಇಲಾಖಾವಾರು ವಿಂಗಡಿಸಿ, ತಂತ್ರಾಂಶದಲ್ಲಿ ದಾಖಲಿಸಿ, ಅರ್ಜಿದಾರರಿಗೆ ಸ್ವೀಕೃತಿ ಪತ್ರ ನೀಡಿದ ನಂತರ ಮುಖ್ಯಮಂತ್ರಿಯ ಬಳಿಗೆ ಕಳುಹಿಸಲಾಯಿತು.

ಅಂಕಿ-ಅಂಶಗಳು

3,812
'ಜನಸ್ಪಂದನ'ದಲ್ಲಿ ಸ್ವೀಕರಿಸಿದ ಅರ್ಜಿಗಳು

2,862
'ಐಪಿಜಿಆರ್‌ಎಸ್' ತಂತ್ರಾಂಶದಲ್ಲಿ ನೋಂದಣಿಯಾದ ಅರ್ಜಿಗಳು

950
ನೇರವಾಗಿ ಸ್ವೀಕರಿಸಿದ ಅರ್ಜಿಗಳು

ವೃದ್ಧಾಪ್ಯ ವೇತನ ಮಂಜೂರಾತಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಹಲವು ದೂರುಗಳು ಬಂದ ಹಿನ್ನೆಲೆಯಲ್ಲಿ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆ ನಿರ್ದೇಶಕರನ್ನು ಕರೆದು, 'ತಾಂತ್ರಿಕ ತೊಂದರೆ ಇದ್ದರೆ ತಕ್ಷಣ ಬಗೆಹರಿಸಬೇಕು. ಸಿಬ್ಬಂದಿಯಿಂದ ತೊಂದರೆ ಆಗುತ್ತಿದ್ದರೆ ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚನೆ ನೀಡಿದರು.

ಅಹವಾಲು ಆಲಿಸುವ ನಡುವೆಯೇ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಕರೆ ಮಾಡಿದ ಮುಖ್ಯಮಂತ್ರಿ, ಕಂದಾಯ ಇಲಾಖೆಗೆ ಸಂಬಂಧಿಸಿದ ಅರ್ಜಿಗಳನ್ನು ಇತ್ಯರ್ಥಪಡಿಸುವ ಕುರಿತಂತೆ ಚರ್ಚೆ ನಡೆಸಿದರು. ಬೆಳಗಾವಿಯ ಕನ್ನಡಾಭಿಮಾನಿಯೊಬ್ಬರು, 'ಎಂಇಎಸ್ ಪುಂಡಾಟಿಕೆಯಿಂದ ಕನ್ನಡ ಧ್ವಜಕ್ಕೆ ಅಪಮಾನವಾಗುತ್ತಿದೆ' ಎಂದು ದೂರು ನೀಡಿದಾಗ, ಸ್ಥಳದಲ್ಲೇ ಇದ್ದ ಕಾನೂನು ಸುವ್ಯವಸ್ಥೆಯ ಎಡಿಜಿಪಿ ಆರ್. ಹಿತೇಂದ್ರ ಅವರಿಗೆ ಈ ಬಗ್ಗೆ ಗಮನಿಸುವಂತೆ ಸೂಚಿಸಿದರು.

6ನೇ ಪುಟ ನೋಡಿ

'ಅಹವಾಲುಗಳಿಗೆ ತಕ್ಷಣ ಸ್ಪಂದಿಸಿ'

ಬೆಂಗಳೂರು: 'ಇಂದಿನ ಜನಸ್ಪಂದನ ಕಾರ್ಯಕ್ರಮ ಎರಡು ತಿಂಗಳ ಹಿಂದೆಯೇ ನಡೆಯಬೇಕಾಗಿತ್ತು. ಜಿಲ್ಲೆಗಳಲ್ಲಿ ಜನತಾ ಸ್ಪಂದನ ಕಾರ್ಯಕ್ರಮ ಮಾಡಿ ವರದಿ ಸಲ್ಲಿಸುವಂತೆ ಎಲ್ಲ ಜಿಲ್ಲಾ ಸಚಿವರಿಗೆ ಪತ್ರ ಬರೆದಿದ್ದೆ. ಕೆಲವು ಜಿಲ್ಲೆಗಳಿಂದ ಮಾತ್ರ ವರದಿ ಬಂದಿದೆ. ಇದನ್ನು ಸಹಿಸಲ್ಲ' ಎಂದು ಮುಖ್ಯಮಂತ್ರಿ ಹೇಳಿದರು.

'ಅನೇಕ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಅಧಿಕಾರಿಗಳು ಪರಿಹಾರ ನೀಡಲು 'ಜನತಾ ಸ್ಪಂದನ' ದಿಂದ ಅವಕಾಶವಾಗುತ್ತದೆ. ಕೆಲವು ಅರ್ಜಿಗಳನ್ನು ಇತ್ಯರ್ಥಪಡಿಸಲು ಸಮಯ ಬೇಕಾಗುತ್ತದೆ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕು. ಇಲ್ಲವಾದರೆ ಬೆಳೆಯುತ್ತಲೇ ಹೋಗುತ್ತವೆ' ಎಂದರು.

'ಇಂದು ಬಂದ ಅರ್ಜಿಗಳಲ್ಲಿ ಬಹುತೇಕವಾಗಿ ಕಂದಾಯ, ಪೊಲೀಸ್ ಇಲಾಖೆ, ಗೃಹಲಕ್ಷ್ಮಿ ಯೋಜನೆ, ಬಿಬಿಎಂಪಿ, ಪಿಂಚಣಿ, ಗ್ರಾಚ್ಯುಟಿ ಇತ್ಯರ್ಥ, ವಸತಿ ಕೊಡಿ, ಉದ್ಯೋಗ ಕೊಡಿಸಿ ಎಂಬ ಮನವಿಗಳು ಬಂದಿವೆ. ವಿಶೇಷವಾಗಿ ಅಂಗವಿಕಲರು ಉದ್ಯೋಗ ಕೊಡಿಸಿ, ತ್ರಿಚಕ್ರ ವಾಹನ ಕೊಡಿಸಿ ಎಂದು ಮನವಿ ಸಲ್ಲಿಸಿದ್ದಾರೆ. 4 ಸಾವಿರ ತ್ರಿಚಕ್ರ ವಾಹನ ಒದಗಿಸಲಾಗಿದೆ' ಎಂದರು

ವಿಶೇಷವಾಗಿ ಜಿಲ್ಲಾಧಿಕಾರಿಗಳು ಸ್ಥಳೀಯವಾಗಿಯೇ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತದೆ. ಖಾತೆ, ಪಹಣಿ, ಪೋಡಿ ಮಾಡಲು ನನ್ನ ಬಳಿ ಬರಬೇಕಾ? ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಕೆಲಸ ಮಾಡಿದರೆ ಜನರು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ತಿಳಿಸಿದ್ದೇನೆ' ಎಂದರು.

6ನೇ ಪುಟ ನೋಡಿ

ಮೆರವಣಿಗೆ ಸಿಖ್ ಧರ್ಮ ಸಂಸ್ಥಾಪಕ ಗುರುನಾನಕ ದೇವ ಅವರ ಜಯಂತಿ ಅಂಗವಾಗಿ ಬೀದರ್‌ನಲ್ಲಿ ಸೋಮವಾರ ಸಂಜೆ ಧಾರ್ಮಿಕ ಧ್ವಜ ಹಾಗೂ ಖಡ್ಗಗಳೊಂದಿಗೆ ಸಿಖ್ಖರು ಮೆರವಣಿಗೆ ನಡೆಸಿದರು
–ಪ್ರಜಾವಾಣಿ ಚಿತ್ರ: ಲೋಕೇಶ ಮರಕಲ್

ತೆಲಂಗಾಣದಲ್ಲಿ ಜಾಹೀರಾತು ನಿಲ್ಲಿಸಿ ಕರ್ನಾಟಕಕ್ಕೆ ಆಯೋಗ ತಾಕೀತು

ನವದೆಹಲಿ (ಪಿಟಿಐ): ತೆಲಂಗಾಣದ ಮಾಧ್ಯಮಗಳಲ್ಲಿ ತನ್ನ ಸಾಧನೆಗಳ ಬಗ್ಗೆ ಜಾಹೀರಾತು ನೀಡುವುದನ್ನು ನಿಲ್ಲಿಸಬೇಕು ಮತ್ತು ನೀತಿ ಸಂಹಿತೆ ಪ್ರಕಾರ ತನ್ನ ಪೂರ್ವಾನುಮತಿ ಪಡೆಯದೇ ಇರುವುದರ ಬಗ್ಗೆ ವಿವರಣೆ ನೀಡಬೇಕು ಎಂದು ಕರ್ನಾಟಕದ ಕಾಂಗ್ರೆಸ್ ಸರ್ಕಾರಕ್ಕೆ ಚುನಾವಣಾ ಆಯೋಗವು ಸೋಮವಾರ ಸೂಚಿಸಿದೆ.

ತೆಲಂಗಾಣದ ಮಾಧ್ಯಮಗಳಲ್ಲಿ ಜಾಹೀರಾತು ನೀಡಲು ಅನುಮತಿ ಪಡೆದಿರಲಿಲ್ಲ ಎಂದು ಈ ಕುರಿತು ಕರ್ನಾಟಕದ ಮುಖ್ಯ ಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ ಆಯೋಗ ತಿಳಿಸಿದೆ.

ಇದೇ 30ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕದ ಕಾಂಗ್ರೆಸ್ ಸರ್ಕಾರವು ತೆಲಂಗಾಣದ ಮಾಧ್ಯಮಗಳಲ್ಲಿ ಜಾಹೀರಾತುಗಳನ್ನು ಬಿತ್ತರಿಸುತ್ತಿದೆ ಎಂದು ಆರೋಪಿಸಿ ಬಿಜೆಪಿಯು ಸೋಮವಾರ ಬೆಳಿಗ್ಗೆ ಆಯೋಗಕ್ಕೆ ದೂರು ನೀಡಿತ್ತು.

ಈ ವಿಷಯದ ಬಗ್ಗೆ ಬಿಆರ್‌ಎಸ್ ಕೂಡ ಆಯೋಗದ ಗಮನ ಸೆಳೆದಿತ್ತು.

ಕರ್ನಾಟಕ ಸರ್ಕಾರದ ಕ್ರಮವು ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ ಎಂದಿರುವ ಆಯೋಗವು ಅಗತ್ಯ ಅನುಮತಿ ಪಡೆಯುವವರೆಗೂ ಸರ್ಕಾರದ ಜಾಹೀರಾತುಗಳ ಪ್ರಸಾರವನ್ನು ಕೂಡಲೇ ನಿಲ್ಲಿಸಬೇಕು ಎಂದು ತಾಕೀತು ಮಾಡಿದೆ.

ಮಂಗಳವಾರ ಸಂಜೆ 5 ಗಂಟೆ ಒಳಗೆ ವಿವರಣೆ ನೀಡಬೇಕು ಎಂದು ಕೂಡಾ ಸರ್ಕಾರಕ್ಕೆ ಸೂಚಿಸಿದೆ. ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಸ್ತುವಾರಿ ಕಾರ್ಯದರ್ಶಿ ವಿರುದ್ಧ ಶಿಸ್ತು ಕ್ರಮ ಏಕೆ ಕೈಗೊಳ್ಳಬಾರದು ಎಂದು ವಿವರಣೆ ನೀಡುವಂತೆಯೂ ಕರ್ನಾಟಕ ಸರ್ಕಾರಕ್ಕೆ ಕೇಳಿದೆ.

ಕರ್ನಾಟಕ ಸರ್ಕಾರವು ತೆಲುಗು ಭಾಷೆಯಲ್ಲಿ ಜಾಹೀರಾತು ನೀಡಿದೆ. ಇದು ಕರ್ನಾಟಕ ರಾಜ್ಯ ಭಾಷೆ ಅಲ್ಲ. ಕರ್ನಾಟಕದಲ್ಲಿ ಆರು ತಿಂಗಳುಗಳಲ್ಲಿ ಆಗಿದೆ ಎನ್ನಲಾದ ಸಾಧನೆಗಳ ಬಗ್ಗೆ ಮತ್ತು ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕರ್ನಾಟಕ ಅಭಿವೃದ್ಧಿ ಹೊಂದಿದೆ ಎಂದು ಹೇಳಿಕೊಂಡು ಜಾಹೀರಾತು ನೀಡಲಾಗಿದೆ ಎಂದು ಬಿಜೆಪಿ ನೀಡಿರುವ ದೂರಿನಲ್ಲಿ ಹೇಳಿತ್ತು.

ಜಾಹೀರಾತಿನಲ್ಲಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಶಿವಕುಮಾರ್ ಮತ್ತು ಇತರ ಸಚಿವರುಗಳ ಚಿತ್ರವೂ ಇದೆ ಎಂದು ಅದು ತಿಳಿಸಿತ್ತು. ಕರ್ನಾಟಕ ಸರ್ಕಾರ, ಸಿದ್ದರಾಮಯ್ಯ, ಸಚಿವರುಗಳು ಮತ್ತು ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಬಿಜೆಪಿ ಆಯೋಗವನ್ನು ಒತ್ತಾಯಿಸಿತ್ತು.

ನಾರಾಯಣಸ್ವಾಮಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ನಾರಾಯಣ ಸ್ವಾಮಿ

ಬೆಂಗಳೂರು: ಹಿಮಾಚಲಪ್ರದೇಶ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್. ನಾರಾಯಣ ಸ್ವಾಮಿ ಅವರನ್ನು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಇವರೊಂದಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಕೆ. ವಂಟಿಗೋಡಿ ಮತ್ತು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮಾಜಿ ಅಧ್ಯಕ್ಷ ಟಿ. ಶ್ಯಾಂ ಭಟ್ ಅವರನ್ನು ಆಯೋಗದ ಸದಸ್ಯರನ್ನಾಗಿ ನೇಮಿಸಲಾಗಿದೆ.

ಮೂವರನ್ನೂ ನೇಮಕ ಮಾಡಿ ಶನಿವಾರ ಆದೇಶ ಹೊರಡಿಸಲಾಗಿದೆ. ಐದು ವರ್ಷ ಅಥವಾ ಅಧ್ಯಕ್ಷರು ಹಾಗೂ ಸದಸ್ಯರಿಗೆ 70 ವರ್ಷ ವಯಸ್ಸಾಗುವವರೆಗೆ ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಧಿಕಾರಾವಧಿಯನ್ನು ಹೊಂದಿರುತ್ತಾರೆ.

12ನೇ ಪುಟ ನೋಡಿ

ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರು

ಯಂತ್ರ ಬದಿಗಿಟ್ಟು ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ 41 ಮಂದಿ ಕಾರ್ಮಿಕರನ್ನು ರಕ್ಷಿಸಲು ಭಾರಿ ಯಂತ್ರ ಬಳಸದೆ ಅಡ್ಡವಾಗಿ ಸುರಂಗ ಕೊರೆಯುವ ಕೆಲಸ ಸೋಮವಾರ ಆರಂಭವಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ತಿಳಿಸಿದೆ. ಕಾರ್ಮಿಕರ ರಕ್ಷಣೆಗಾಗಿ ಲಂಬವಾಗಿ ಸುರಂಗ ಕೊರೆಯುವ ಕಾರ್ಯ ಕೂಡ ಮುಂದುವರಿಯಲಿದೆ.

ಯಂತ್ರಗಳ ನೆರವಿಲ್ಲದೆ ಒಂದು ಮೀಟರ್‌ನಷ್ಟು ಸುರಂಗ ಕೊರೆಯಲಾಗಿದೆ, ಅಲ್ಲಿಯವರೆಗೆ ಪೈಪ್ ಸಹ ತೂರಿಸಲಾಗಿದೆ. ಕಾರ್ಮಿಕರನ್ನು ತಲುಪಲು ಇನ್ನು 11 ಮೀಟರ್‌ನಷ್ಟು ಸುರಂಗ ಕೊರೆಯಬೇಕಿದೆ ಎಂದು ಎನ್‌ಡಿಎಂಎ ಹೇಳಿದೆ.

ಕಾರ್ಮಿಕರನ್ನು ತಲುಪಲು ಅಡ್ಡವಾಗಿ ಸುರಂಗ ಕೊರೆಯುತ್ತಿದ್ದ ಯಂತ್ರವು 46.8 ಮೀಟರ್‌ನಷ್ಟು ಒಳಕ್ಕೆ ಸಾಗಿತ್ತು. ಆದರೆ ಅಲ್ಲಿ ಅದಕ್ಕೆ ಹಲವು ಅಡ್ಡಿಗಳು ಎದುರಾಗಿದ್ದವು. 'ಸುರಂಗ ಕೊರೆಯುವ ಯಂತ್ರದ ಬ್ಲೇಡ್‌ಗಳು ಮುರಿದಿದ್ದವು. ಅವುಗಳನ್ನು ಹೊರತೆಗೆಯಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರ ರಕ್ಷಣೆಗೆ ನಡೆದಿರುವ ಕಾರ್ಯ
–ಎಎಫ್‌ಪಿ ಚಿತ್ರ

'ಭಾರತೀಯ ಸೇನೆಯ ಎಂಜಿನಿಯರ್‌ಗಳು, ಯಂತ್ರಗಳ ನೆರವಿಲ್ಲದೆ ಸುರಂಗ ಕೊರೆಯುವ ಪರಿಣತರು ಹಾಗೂ ಇತರ ತಜ್ಞರ ಸಹಾಯದಿಂದ ಅಡ್ಡವಾಗಿ ಸುರಂಗ ಕೊರೆಯುವ ಕೆಲಸವನ್ನು ಆರಂಭಿಸಲಾಗಿದೆ' ಎಂದು ಎನ್‌ಡಿಎಂಎ ಸದಸ್ಯ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತ್ತಾ ಹಸ್ನೈನ್ ತಿಳಿಸಿದ್ದಾರೆ. ಆರು ಜನರು, ಮೂರು ಜನರ ಎರಡು ತಂಡಗಳಾಗಿ ಕೆಲಸ ಮಾಡಲಿದ್ದಾರೆ.

ಈಗ ಕಾರ್ಮಿಕರನ್ನು ರಕ್ಷಿಸಲು ಲಂಬವಾಗಿ ಹಾಗೂ ಅಡ್ಡವಾಗಿ ಸುರಂಗ ಕೊರೆಯುವ ಕೆಲಸ ನಡೆದಿದೆ. ಇದರ ಜೊತೆಯಲ್ಲೇ, ಬಾರ್ಕೋಟ್ ಕಡೆಯಿಂದ ಅಡ್ಡವಾಗಿ ಇನ್ನೊಂದು ಸುರಂಗ ಕೊರೆಯುವ ಕೆಲಸ ಕೂಡ ಪ್ರಗತಿಯಲ್ಲಿದೆ.

ಕಾರ್ಮಿಕರನ್ನು ಹೊರಗೆ ಕರೆತರಲು ಲಂಬವಾಗಿ 86 ಮೀಟರ್ ಕೊರೆಯಬೇಕಿದೆ. ಅಲ್ಲಿಂದ ಕಾರ್ಮಿಕರನ್ನು ರಕ್ಷಿಸಲು, 1.2 ಮೀಟರ್ ವ್ಯಾಸದ ಪೈಪ್ ಅಳವಡಿಸಬೇಕಿದೆ. ಈ ಕೆಲಸವು ಭಾನುವಾರದಿಂದ ಆರಂಭವಾಗಿದೆ.

'ಲಂಬವಾಗಿ ಅಂದಾಜು 32 ಮೀಟರ್ ಸುರಂಗ ಕೊರೆಯುವ ಕೆಲಸವನ್ನು ಎಸ್‌ಜೆವಿಎನ್‌ಎಲ್ ಪೂರ್ಣಗೊಳಿಸಿದೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಬ್ಬಿನಗದ್ದೆಯ ನಡುವೆ ಇರುವ ಆಲೆಮನೆಯಲ್ಲಿ ಪರೀಕ್ಷೆ, ವಾರಾಂತ್ಯದಲ್ಲಿ ಸ್ಕ್ಯಾನಿಂಗ್

ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ

• ಎಂ.ಎನ್.ಯೋಗೇಶ್

ಮಂಡ್ಯ: ತಾಲ್ಲೂಕಿನ ಹಾಡ್ಯ ಗ್ರಾಮದ ಸಮೀಪ ಕಬ್ಬಿನಗದ್ದೆಯ ನಡುವಿನ ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ ಕಾರ್ಯ ನಡೆಯುತ್ತಿತ್ತು ಎಂಬ ಸಂಗತಿ ಗ್ರಾಮಸ್ಥರಲ್ಲಿ ತೀವ್ರ ಆಘಾತವನ್ನು ಉಂಟು ಮಾಡಿದೆ.

ಹಾಡ್ಯ ಹಾಗೂ ಹುಳ್ಳೇನಹಳ್ಳಿ ನಡುವೆ ಇರುವ ಆಲೆಮನೆಯಲ್ಲಿ ಶನಿವಾರ–ಭಾನುವಾರ ಭ್ರೂಣಲಿಂಗ ಪತ್ತೆ ಪರೀಕ್ಷೆ ನಡೆಯುತ್ತಿತ್ತು. ಹೆಣ್ಣುಭ್ರೂಣ ಪತ್ತೆಯಾದರೆ ವಾರದ ಇತರ ದಿನಗಳಲ್ಲಿ ಮೈಸೂರು ಅಥವಾ ಬೆಂಗಳೂರಿನ ಆಸ್ಪತ್ರೆಗಳಲ್ಲಿ ಭ್ರೂಣಹತ್ಯೆ ಮಾಡಲಾಗುತ್ತಿತ್ತು ಎಂಬ ವಿಚಾರ ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

> **ಭ್ರೂಣ ಲಿಂಗ ಪತ್ತೆ ಪರೀಕ್ಷೆ ಮತ್ತು ಹೆಣ್ಣುಭ್ರೂಣ ಹತ್ಯೆ ಬಗ್ಗೆ ಹಿಂದೆಯೇ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದೆವು. ಆದರೆ ಪ್ರಕರಣ ಪತ್ತೆ ಹಚ್ಚಲು ವಿಫಲರಾಗಿದ್ದರು**
> **ಡಿ.ಪೂರ್ಣಿಮಾ**
> ಜಿಲ್ಲಾ ಘಟಕದ ಸಂಚಾಲಕಿ, ಅತ್ಯಾಚಾರ ವಿರೋಧಿ ಆಂದೋಲನ ಸಮಿತಿ

5ನೇ ಪುಟ ನೋಡಿ

ಕಬ್ಬಿನಗದ್ದೆಯ ನಡುವೆ ಇರುವ ಆಲೆಮನೆ

ಸುರೇಶ್ ರಾವ್ ಬಾರ್ಕೂರುಗೆ 'ಕಾಳಿಂಗ ನಾವಡ ಪ್ರಶಸ್ತಿ'

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ನೀಡುವ 2023ನೇ ಸಾಲಿನ 'ಕಾಳಿಂಗ ನಾವಡ ಪ್ರಶಸ್ತಿ'ಗೆ ಭಾಗವತರು, ಪ್ರಸಂಗಕರ್ತರು ಆದ ಸುರೇಶ್ ರಾವ್ ಬಾರ್ಕೂರು ಆಯ್ಕೆಯಾಗಿದ್ದಾರೆ.

'ಸಂಸ್ಥೆಯು ಪ್ರತಿ ವರ್ಷ ಯಕ್ಷಗಾನ ಸಾಧಕರೊಬ್ಬರಿಗೆ ಈ ಪ್ರಶಸ್ತಿ ನೀಡುತ್ತಿದೆ. ಪ್ರಶಸ್ತಿಯು ₹ 10 ಸಾವಿರ ನಗದು, ಬೆಳ್ಳಿತಟ್ಟೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಡಿ. 25ರ ಸಂಜೆ 6 ಗಂಟೆಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟ ಹಂದಟ್ಟು ಗ್ರಾಮದ ಉರಾಳ ಕೇರಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ' ಎಂದು ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣ ಉರಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುರೇಶ್ ರಾವ್ ಬಾರ್ಕೂರು

ಲಾ ಏಷಿಯಾ ಸಮ್ಮೇಳನದಲ್ಲಿ ರಾಮಚಂದ್ರ ಗುಹಾ ಅಭಿಮತ

ಯುದ್ಧ ತಡೆಗೆ ಗಾಂಧಿ ತತ್ವವೇ ಅಸ್ತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದಲ್ಲಿ ಯುದ್ಧದ ಕಾರ್ಮೋಡ, ಭಯೋತ್ಪಾದನಾ ಕೃತ್ಯಗಳು ನಡೆದಾಗಲೆಲ್ಲ ಗಾಂಧೀಜಿಯವರ ಅಹಿಂಸಾ ತತ್ವ ಮುನ್ನೆಲೆಗೆ ಬರುತ್ತದೆ. ಹಾಗಾಗಿಯೇ, ಗಾಂಧಿ ಇಂದಿಗೂ ಪ್ರಸ್ತುತವಾಗಿದ್ದಾರೆ ಎಂದು ಅಂಕಣಕಾರ ರಾಮಚಂದ್ರ ಗುಹಾ ಹೇಳಿದರು.

ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಸೋಮವಾರ ಹಮ್ಮಿಕೊಂಡಿದ್ದ ಲಾಏಷಿಯಾ 36ನೇ ಸಮ್ಮೇಳನದಲ್ಲಿ 'ಮಹಾತ್ಮ ಗಾಂಧಿ ಇಂದಿಗೂ ಏಕೆ ಪ್ರಸ್ತುತ' ವಿಷಯ ಕುರಿತ ಚರ್ಚೆಯಲ್ಲಿ ಅವರು ಮಾತನಾಡಿದರು.

'ಇಂದು 21ನೇ ಶತಮಾನದ ಬಹುದೊಡ್ಡ ಅಪಾಯವಾಗಿ ಪರಿಣಮಿಸಿರುವ ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸಲು ನಮಗೆ ಗಾಂಧಿಯ ಹೆಜ್ಜೆಗಳು ನೆನಪಾಗುತ್ತಿವೆ. ಅವರ ಆದರ್ಶ, ತಂತ್ರ, ಕಾರ್ಯಯೋಜನೆ ಉಪಯೋಗಕ್ಕೆ ಬರುತ್ತಿವೆ' ಎಂದರು.

'ವಕೀಲ ವೃತ್ತಿಯಲ್ಲಿ ಅಂದು ಯಶಸ್ಸು ಕಾಣದ್ದರಿಂದಲೇ ಗಾಂಧೀಜಿ ಮಹಾತ್ಮರಾಗಲು ವೇದಿಕೆ ದೊರಕಿತು. ಮಾನವ ಇತಿಹಾಸದಲ್ಲೇ ಅತ್ಯಂತ ವಿಫಲ ವಕೀಲರಾಗಿದ್ದಕ್ಕೆ ಭಾರತೀಯರು ಕೃತಜ್ಞರಾಗಿರಬೇಕು. ವಕೀಲರಾಗಿ ಸಾಧನೆ ಮಾಡಲು ಅನುವು ಮಾಡಿಕೊಡದ ಹೈಕೋರ್ಟ್‌ಗೂ ಧನ್ಯವಾದ ಹೇಳಬೇಕು. ವಕೀಲರಾಗಿ ಅವರು ಸಾಧನೆ ಮಾಡಿದ್ದರೆ 'ಇವತ್ತು ಗಾಂಧಿ ಕುರಿತು ಜಗತ್ತು ಮಾತನಾಡುತ್ತಲೇ ಇರಲಿಲ್ಲ' ಎಂದರು.

ರಾಮಚಂದ್ರ ಗುಹಾ

ಈ ಕಾಲ ಘಟ್ಟದಲ್ಲೂ ಗಾಂಧಿ ಪ್ರಸ್ತುತರಾಗಲು ಅವರ ಅಹಿಂಸಾತ್ಮಕ ಹಾಗೂ ಸಾಮೂಹಿಕ ಹೋರಾಟವೇ ಕಾರಣ. ಬಲ ಪ್ರಯೋಗಿಸದೆ ಅನ್ಯಾಯದ ಅಧಿಕಾರವನ್ನು ವಿರೋಧಿಸುವ ವಿಧಾನವನ್ನು 'ಇಡೀ ಜಗತ್ತಿಗೆ ಪರಿಚಯಿಸಿದರು. ಅವರ ಈ ಕಾರ್ಯತಂತ್ರವನ್ನು ಸತ್ಯಾಗ್ರಹ, ಸತ್ಯದ ಶಕ್ತಿ ಎಂದು ಕರೆಯಲಾಯಿತು. ಬದಲಾವಣೆಗಾಗಿ ಬಲಪ್ರಯೋಗ ಎನ್ನುವ ಶತಶತಮಾನದ ಪರಿಕಲ್ಪನೆಗೆ ಹೊಸ ಆಯಾಮ ನೀಡಿದರು. ಶಾಂತಿ ಮಾರ್ಗದಿಂದಲೂ ಬದಲಾವಣೆ ಸಾಧ್ಯ ಎನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟರು ಎಂದು ಸ್ಮರಿಸಿದರು.

ಅಸಮಾನತೆ ಪ್ರತಿಪಾದಿಸುವ ಕಾನೂನುಗಳು, ಆಚರಣೆಗಳು ಹಾಗೂ ಪದ್ಧತಿಗಳನ್ನು ಶಾಂತಿಯುತವಾಗಿ ಮತ್ತು ಸಾಮೂಹಿಕವಾಗಿ ಪ್ರಶ್ನಿಸುವ ಮತ್ತು ಪ್ರತಿಭಟಿಸುವ ಒಂದು ವಿನೂತನ ಕ್ರಮ, ತಂತ್ರವನ್ನು ಜನರ ಮುಂದಿಟ್ಟರು. 'ಸತ್ಯಾಗ್ರಹ' ಎನ್ನುವ ವಿಚಾರಕ್ಕೆ ಮೊಟ್ಟ ಮೊದಲ ಬಾರಿ ಚಳವಳಿಯ ಸ್ವಸ್ವರೂಪ ನೀಡಿದರು. ಇಂತಹ ಪರಿಕಲ್ಪನೆ ಅವರಿಗೆ ಮೂಡಿದ್ದು ದಕ್ಷಿಣ ಆಫ್ರಿಕಾದಲ್ಲಿ. ಗಾಂಧಿ ಮುಂದಿಟ್ಟ ಹಾದಿಯಲ್ಲಿ ಅಲ್ಲಿನ ಜನಾಂಗೀಯ ವಿರೋಧಿ ಕಾನೂನುಗಳನ್ನು ಅಹಿಂಸಾತ್ಮಕವಾಗಿ, ಸಾಮೂಹಿಕವಾಗಿ ವಿರೋಧಿಸಿದರು ಎಂದು ಇತಿಹಾಸ ಮೆಲುಕುಹಾಕಿದರು.

ದೇಶದ ಒಳಗಿನ ಕುಂದು– ಕೊರತೆ, ದೋಷಗಳನ್ನೂ ಗಾಂಧಿ ಅರಿತಿದ್ದರು. ದೇಶದಲ್ಲಿ ಕೆಲವು ಸಮಸ್ಯೆಗಳಿವೆ. ಅವುಗಳಿಗೆ ತುರ್ತು ಪರಿಹಾರ ಬೇಕು ಎನ್ನುವ ವಾಸ್ತವದ ಅರಿವು ಅವರಿಗಿತ್ತು. ಮಹಿಳೆಯರು, ಅಸ್ಪೃಶ್ಯರನ್ನು ದೇಶ ನಡೆಸಿಕೊಳ್ಳುತ್ತಿರುವ ಬಗ್ಗೆ ಅಸಮಾಧಾನವಿತ್ತು. ಈ ತಾರತಮ್ಯವನ್ನು ತೊಡೆದು ಹಾಕಲು ಅವರು ತಮ್ಮ ಜೀವಿತಾವಧಿಯಲ್ಲಿ ಸಾಕಷ್ಟು ಪ್ರಯತ್ನಿಸಿದರು. ಸಮಾಜದ ಮುಖ್ಯವಾಹಿನಿಗೆ ತರಲು ರಚನಾತ್ಮಕ ಪ್ರಯತ್ನಗಳನ್ನು ಮಾಡಿದರು ಎಂದರು.

ತಾನೂ ಒಬ್ಬ ಹಿಂದೂವಾಗಿ, ಸನಾತನ ಹಿಂದೂ ಆಚರಣೆಗಳನ್ನು ಪಾಲಿಸಿದರೂ ಭಾರತ ಹಿಂದೂ ರಾಷ್ಟ್ರವಲ್ಲ, ಅದೊಂದು ಬಹುಸಂಸ್ಕೃತಿ ಹಾಗೂ ಬಹುಧರ್ಮಗಳ ರಾಷ್ಟ್ರ ಎಂದು ಪ್ರತಿಪಾದಿಸಿದರು.

ಹಿಂದೂ–ಮುಸ್ಲಿಮರ ನಡುವೆ ಸಾಮರಸ್ಯ ಸಾಧಿಸಲು ತಮ್ಮ ಇಡೀ ಬದುಕು ಸವೆಸಿದರು ಎಂದು ಹೇಳಿದರು.

ಲಾಏಷಿಯಾ ನಿಯೋಜಿತ ಅಧ್ಯಕ್ಷ ಶ್ಯಾಮ್ ದಿವಾನ್ ಉಪಸ್ಥಿತರಿದ್ದರು.

ವಿಶ್ವದ ವಿವಿಧ ಭಾಗಗಳ; ವಿಶೇಷವಾಗಿ ಏಷ್ಯಾ ಖಂಡದ ವಕೀಲರ ಸಂಘಗಳ ಮುಖಂಡರು ಹಾಗೂ ನ್ಯಾಯಮೂರ್ತಿಗಳನ್ನು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ (ಮೊದಲ ಸಾಲಿನಲ್ಲಿ ಎಡದಿಂದ ಆರನೆಯವರು) ಸೋಮವಾರ ಸನ್ಮಾನಿಸಿದರು. ಹೈಕೋರ್ಟ್ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಬೆಂಗಳೂರು ವಕೀಲರ ಸಂಘ ಆಯೋಜಿಸಿತ್ತು. ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ (ಮೊದಲ ಸಾಲಿನಲ್ಲಿ ಎಡದಿಂದ ಐದನೆಯವರು) ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ (ಮೊದಲ ಸಾಲಿನಲ್ಲಿ ಎಡದಿಂದ ಎಂಟನೆಯವರು) ಇದ್ದರು. ನಗರದಲ್ಲಿ ನಾಲ್ಕು ದಿನಗಳ ಕಾಲ ನಡೆದ ಲಾ ಏಷ್ಯಾ–2023ರ ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಇವರೆಲ್ಲಾ ಪಾಲ್ಗೊಂಡಿದ್ದರು. ಲಾ ಏಷ್ಯಾದ ಉಪಾಧ್ಯಕ್ಷರೂ ಆದ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪರೀಕ್ಷೆ ಮುಂದೂಡಿ: ಪಿಎಸ್‌ಐ ಅಭ್ಯರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ (ಪೊಲೀಸ್ ಸಬ್ ಇನ್‌ಸ್ಪೆಕ್ಟರ್) 545 ಹುದ್ದೆಗಳಿಗೆ ಮರು ಲಿಖಿತ ಪರೀಕ್ಷೆ ನಡೆಸಲು ನಿಗದಿಪಡಿಸಿದ ದಿನಾಂಕವನ್ನು ಮುಂದೂಡುವಂತೆ ಆಗ್ರಹಿಸಿ ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಲು ಮುಂದಾದ ಕೆಲವು ಅಭ್ಯರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದರು.

'ಕೃಷ್ಣಾ'ದಲ್ಲಿ ಮುಖ್ಯಮಂತ್ರಿ 'ಜನ ಸ್ಪಂದನ' ನಡೆಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ಅಭ್ಯರ್ಥಿಗಳು, 'ಡಿ. 23 ರಂದು ಮರು ಪರೀಕ್ಷೆ ನಡೆಸುವುದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ. ಏಕಾಏಕಿ ಪರೀಕ್ಷೆ ನಡೆಸಬಾರದು. ಈಗ ಪ್ರಕಟಿಸಿರುವ ದಿನಾಂಕವನ್ನು ಮುಂದೂಡಬೇಕು' ಎಂದು ಆಗ್ರಹಿಸಿದರು.

'ಪಿಎಸ್‌ಐ ಪರೀಕ್ಷೆ ಅಕ್ರಮ ಬಯಲಿಗೆ ಎಳೆದಿದ್ದು ನಾವು. ಈ ಸರ್ಕಾರ ಅಧಿಕಾರಕ್ಕೆ ಬರಲು ನಮ್ಮ ಪಾತ್ರ ದೊಡ್ಡದು. ಪರೀಕ್ಷೆಗೆ ತಯಾರಿ ನಡೆಸಲು ಎರಡರಿಂದ ಮೂರು ತಿಂಗಳು ಕಾಲಾವಕಾಶ ನೀಡಬೇಕು' ಎಂದು ಅಭ್ಯರ್ಥಿಗಳು ಒತ್ತಾಯಿಸಿದರು.

ಆದರೆ, ಪ್ರತಿಭಟನೆಗೆ ಅವಕಾಶ ನೀಡದೆ ಎಲ್ಲರನ್ನೂ ಪೊಲೀಸರು ವಶಕ್ಕೆ ಪಡೆದರು.

ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ

'ಗಾಂಧಿ ಮೌಲ್ಯಗಳ ಖರೀದಿ ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತ್ಯ, ಅಹಿಂಸೆಯಂತಹ ಮೌಲ್ಯಗಳನ್ನು ದುಡ್ಡುಕೊಟ್ಟು ಖರೀದಿಸಲು ಸಾಧ್ಯವಿಲ್ಲ. ಅನುಸರಿಸುತ್ತಲೇ ಅಳವಡಿಸಿಕೊಳ್ಳಬೇಕು ಎಂದು ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಕೋಶದ ಅಧಿಕಾರಿ ಪ್ರತಾಪ್ ಲಿಂಗಯ್ಯ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಎನ್‌ಎಸ್‌ಎಸ್, ಮಹಾರಾಷ್ಟ್ರದ ಗಾಂಧಿ ಸಂಶೋಧನಾ ಪ್ರತಿಷ್ಠಾನ, ಟಿ. ದಾಸರಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೋಮವಾರ ಹಮ್ಮಿಕೊಂಡಿದ್ದ ಗಾಂಧಿ ವಿಚಾರ ಸಂಸ್ಕಾರ ಪರಿಷತ್ತಿನ 6ನೇ ಘಟಿಕೋತ್ಸವ ಹಾಗೂ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಗಾಂಧೀಜಿ ಹೇಳಿದಂತೆ ನಮ್ಮ ಜೀವನವೇ ಇತರರಿಗೆ ಸಂದೇಶವಾಗಬೇಕು. ಆಗ ಮಾತ್ರ ಸಾಮಾಜಿಕ ಮೌಲ್ಯಗಳ ಅನುಷ್ಠಾನ ಸಾಧ್ಯ. ಮಕ್ಕಳಿಗೆ ಬಾಲ್ಯದಿಂದಲೇ ಗಾಂಧಿ ಮೌಲ್ಯಗಳ ಕುರಿತು ಮಾಹಿತಿ ನೀಡುತ್ತಾ ಹೋದರೆ ಅವರ ಬದುಕೂ ಸಮಾಜಮುಖಿಯಾಗುತ್ತದೆ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ಮಹಾತ್ಮ ಗಾಂಧಿ ಚಿಂತನೆಗಳು ಭಾರತದಲ್ಲಷ್ಟೇ ಅಲ್ಲ, ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಅನುಸರಿಸುತ್ತಿದ್ದಾರೆ. ವ್ಯಕ್ತಿಗಳ ಕುರಿತು ವಿಶ್ವದಲ್ಲಿ ಅತಿ ಹೆಚ್ಚು ಪ್ರಕಟವಾದ ಪುಸ್ತಕಗಳಲ್ಲಿ ಗಾಂಧಿಯೇ ಅಗ್ರಸ್ಥಾನದಲ್ಲಿ ಇದ್ದಾರೆ' ಎಂದರು.

ಗಾಂಧೀಜಿ ಆಶಯದಂತೆ ಸಂವಿಧಾನದಲ್ಲಿ ಸಮಾನತೆ, ಸಮಾಜವಾದ, ಭ್ರಾತೃತ್ವದ ಪರಿಕಲ್ಪನೆ ಅಳವಡಿಸಲಾಗಿದೆ. ಅಸ್ಪೃಶ್ಯತೆ ನಿಷೇಧಿಸಲಾಗಿದೆ. ಮಹಿಳೆಯರಿಗೆ ಆದ್ಯತೆ ದೊರಕಿಸಲಾಗಿದೆ. ಆ ಮೂಲಕ ಗಾಂಧೀಜಿ ಎಲ್ಲರ ಮನೆಮನಗಳಲ್ಲೂ ನೆಲೆಸಿದ್ದಾರೆ ಎಂದು ಹೇಳಿದರು.

ಗಾಂಧಿ ಸಂಶೋಧನಾ ಪ್ರತಿಷ್ಠಾನದ ಪರೀಕ್ಷಾ ನಿಯಂತ್ರಕ ಗಿರೀಶ್ ಕುಲಕರ್ಣಿ, ಗಾಂಧಿ ಸ್ಮಾರಕ ನಿಧಿಯ ಖಜಾಂಚಿ ಎಚ್.ಬಿ.ದಿನೇಶ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಅಬಿದಾ ಬೇಗಂ ಉಪಸ್ಥಿತರಿದ್ದರು.

ಬೆಂಗಳೂರಿನ ಗಾಂಧಿ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಗಾಂಧಿ ವಿಚಾರ ಸಂಸ್ಕಾರ ಪರಿಷತ್ತಿನ 6ನೇ ಘಟಿಕೋತ್ಸವದಲ್ಲಿ ಅಬಿದಾ ಬೇಗಂ, ಪ್ರತಾಪ್ ಲಿಂಗಯ್ಯ,ಎಚ್.ಬಿ.ದಿನೇಶ್, ವೂಡೇ ಪಿ. ಕೃಷ್ಣ, ಗಿರೀಶ್ ಕುಲಕರ್ಣಿ ಇದ್ದಾರೆ.

'ಸಂವಿಧಾನ ಕಾಯಕಲ್ಪ ಕಾರ್ಯಕ್ಕಾಗಿ ರಾಜೀನಾಮೆ'

ಬೆಂಗಳೂರು: ದೇಶದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಸಂವಿಧಾನದ ತತ್ವಗಳು ಅಪಾಯದಲ್ಲಿವೆ ಎಂದು ಹೇಳಿರುವ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ(1ನೇ ಪಡೆ, ಆಂತರಿಕ ಭದ್ರತಾ ವಿಭಾಗ) ಅಸಿಸ್ಟೆಂಟ್ ಕಮಾಂಡೆಂಟ್ ಸುಹೇಲ್ ಅಹಮದ್ ಅವರು, ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಸಂಬಂಧ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ (ಆಡಳಿತ ವಿಭಾಗ) ಪತ್ರ ಬರೆದಿದ್ದಾರೆ. 'ಸಂವಿಧಾನ ಕಾಯಕಲ್ಪ ಕಾರ್ಯಕ್ಕಾಗಿ ರಾಜೀನಾಮೆ ನೀಡುತ್ತಿದ್ದೇನೆ. ಸಂವಿಧಾನ ಕೊಡುಗೆಯಾಗಿ ನೀಡಿದ ಹುದ್ದೆಯನ್ನು ದೇಶಕ್ಕೆ ಸಂವಿಧಾನ ಸಮರ್ಪಣೆಯಾದ ಈ ಮಹತ್ವದ ದಿನದಂದು ಸಮರ್ಪಿಸಿ ರಾಜೀನಾಮೆ ನೀಡುತ್ತಿದ್ದೇನೆ' ಎಂದು ನವೆಂಬರ್ 26ರಂದು ಪತ್ರ ಬರೆದಿದ್ದಾರೆ. ಈ ಪತ್ರವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಸುಹೇಲ್ ಅಹಮದ್

ನಿಧನ ವಾರ್ತೆ

ಆರ್.ಅಂಬಿಕಾಪತಿ

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಆರ್.ಅಂಬಿಕಾಪತಿ ಸೋಮವಾರ ಹೃದಯಾಘಾತ ದಿಂದ ನಿಧನರಾದರು. ಮೃತರಿಗೆ ಪತ್ನಿ, ಪಾಲಿಕೆ ಮಾಜಿ ಸದಸ್ಯೆ ಅಂಜನಮ್ಮ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಅನಾರೋಗ್ಯಕ್ಕೀಡಾಗಿದ್ದ ಅವರು, ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ಸುಲ್ತಾನ್ ಪಾಳ್ಯದ ಗಣೇಶ್ ಲೇಔಟ್‌ನಲ್ಲಿ ಅವರು ನೆಲೆಸಿದ್ದರು. ಮಂಗಳವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಸಂವಿಧಾನ ಹಬ್ಬ, ಸಮಸ್ತ ಭಾರತೀಯರ ಹಬ್ಬ': ಉದ್ಘಾಟನೆ: ಜಯಕರ ಎಸ್.ಎಂ., ಅಧ್ಯಕ್ಷತೆ: ಸಿ.ಬಿ. ಹೊನ್ನು ಸಿದ್ಧಾರ್ಥ, ಅತಿಥಿಗಳು: ಶ್ರೀನಿವಾಸಯ್ಯ, ಶೇಖ್ ಲತೀಫ್, ಚಿಕ್ಕಣ್ಣ ಎ.ಸಿ., ಸಿ. ಶ್ರೀನಿವಾಸ್, ಕೆ.ಪಿ. ಅಶ್ವಿನಿ, ಸುನೀತ ಎಂ., ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 9ರಿಂದ

ಸುವರ್ಣ ಕರ್ನಾಟಕ ರಾಜ್ಯೋತ್ಸವ, ಅಂತರ ಶಾಲಾ ಸಾಂಸ್ಕೃತಿಕ ಸ್ಪರ್ಧೆಗಳು: ಉದ್ಘಾಟನೆ: ರಘುನಾಥ ಚ.ಹ., ಅಧ್ಯಕ್ಷತೆ: ಮಾನಂದಿ ಸುರೇಶ್, ಅತಿಥಿ: ಐ.ಎಸ್. ಪ್ರಸಾದ್, ಉಪಸ್ಥಿತಿ: ಅನುಪಮ, ಆಯೋಜನೆ ಮತ್ತು ಸ್ಥಳ: ವಿ.ವಿ.ಎನ್. ಪದವಿಪೂರ್ವ ಕಾಲೇಜು, ವಾಣಿ ವಿಲಾಸ ರಸ್ತೆ, ಬೆಳಿಗ್ಗೆ 9ರಿಂದ

ಮುನಿಸಿಪಾಲಿಕ–2023, 17ನೇ ಅಂತರರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರದರ್ಶನ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಸುರೇಶ ಬಿ.ಎಸ್., ರಹೀಂ ಖಾನ್, ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಆಯೋಜನೆ: ನಗರಾಭಿವೃದ್ಧಿ ಇಲಾಖೆ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಳಿಗ್ಗೆ 10

ವಾಹನಗಳಿಂದ ಉಂಟಾಗುವ ವಾಯುಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸಲು 'ವ್ಯಂಗ್ಯಚಿತ್ರ' ಪ್ರದರ್ಶನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಉಪಸ್ಥಿತಿ: ಎನ್.ವಿ. ಪ್ರಸಾದ್, ವಿ.ಆರ್. ಸಿ. ಶೇಖರ್, ಎ.ಎಂ. ಯೋಗಿಶ್, ಸಿ. ಮಲ್ಲಿಕಾರ್ಜುನ, ಎಂ. ಶೋಭಾ, ಆಯೋಜನೆ: ಸಾರಿಗೆ ಇಲಾಖೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ನಾವೆದ್ದು ನಿಲ್ಲದಿರೆ' ಬೀದಿ ನಾಟಕ ಪ್ರದರ್ಶನ: ನಿರ್ದೇಶನ: ಶಶಿಧರ ಭಾರಿಘಾಟ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಅತಿಥಿಗಳು: ಗೌರಿ ದತ್ತು, ರುದ್ರೇಶ್ ಅದರಂಗಿ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ. ಆರ್. ಅಂಬೇಡ್ಕರ್ ವೀಧಿ, ಮಧ್ಯಾಹ್ನ 12.30ರಿಂದ

ಕರ್ನಾಟಕ ರಾಜ್ಯೋತ್ಸವ: ಅಧ್ಯಕ್ಷತೆ: ಗೌರವ್ ಗುಪ್ತ, ಅತಿಥಿಗಳು: ಸುಂದರರಾಜ್, ಧರ್ಮೇಂದ್ರ ಕುಮಾರ್, ಅರೇನಹಳ್ಳಿ ಶಿವಶಂಕರ್, ಎಚ್.ಎಸ್. ಸತ್ಯನಾರಾಯಣ, ಸಿ. ನಾಗರಾಜ್, ಆಯೋಜನೆ: ಶಕ್ತಿವಾಹಿನಿ ಕನ್ನಡ ಬಳಗ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಸ್ಥಳ: ಕೆಇಬಿ ಎಂಜಿನಿಯರ್ಸ್, ಸಿಲ್ವರ್ ಜ್ಯೂಬಲಿ ಬಿಲ್ಡಿಂಗ್, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 1

ವಿಜ್ಞಾನ ಕುರಿತು ಸರಣಿ ವಿಶೇಷ ಉಪನ್ಯಾಸದ ಉದ್ಘಾಟನೆ: ಜಗದೀಶ ಗೋಪಾಲನ್, ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಸುಚರಿತಚಂದ್ರ ಎಂ., ವೈ.ಸಿ. ಕಮಲಾ, ಆಯೋಜನೆ: ಬೆಂಗಳೂರು ವಿಜ್ಞಾನ ವೇದಿಕೆ, ಸ್ಥಳ: ಎಚ್. ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 2.30

ಗಾಂಧಿನಗರ ವಿಧಾನಸಭೆ ಕ್ಷೇತ್ರದ 'ಕದಳಿ ಮಹಿಳಾ ವೇದಿಕೆ'ಯ ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಎಸ್. ಮಹದೇವಯ್ಯ, ಪ್ರಮೀಳಾ ಗರಡಿ, ಉಪಸ್ಥಿತಿ: ಹಾ.ವೀ. ಮಂಜುಳಾ ಶಿವಾನಂದ, ಗೀತಾ ಸತೀಶ್, ಉಷಾಕಿರಣ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಸಂಜೆ 4.30

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಚಂದ್ರಶೇಖರ್, ಅತಿಥಿಗಳು: ಗಂಡಸಿ ಸದಾನಂದ ಸ್ವಾಮಿ, ಆಡುಗೋಡಿ ಶ್ರೀನಿವಾಸ್, ಬೆಳ್ಳೂರು ಶಶಿಧರ್, ಬಿ.ಟಿ. ಎಸ್. ಕುಮಾರ್, ಆಯೋಜನೆ: ಉದ್ಭವ ಕಲಾವಿದರು, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4.30

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010–11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560 040
ದೂರವಾಣಿ ಸಂಖ್ಯೆ: 080–23185584, 9538475454, 9980147199.

ಸ್ಥಿರಾಸ್ತಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರ ಸಂಘ ಸುಸ್ತಿದಾರರಾದ ಶ್ರೀ.ರವಿ.ಜಿ.ಎಂ. ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ–441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘ ನಿಯಮಿತ, ಬೆಂಗಳೂರು ಇವರ ಆದೇಶ ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ ಸ.ಸಂ.ಸ.ನಿ/ವ.ಅ/159/2023–24 ದಿನಾಂಕ 16.10.2023 ರ ಮೇರೆಗೆ **ದಿನಾಂಕ 16.12.2023 ರ ಶನಿವಾರದಂದು ಹಗಲು 11.30 ಘಂಟೆಗೆ** ಸ್ಥಿರಾಸ್ಥಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಶ್ರೀ.ರವಿ.ಜಿ.ಎಂ.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀ.ರವಿ.ಜಿ.ಎಂ. #207, 10 'ಎ' ನೇ ಮುಖ್ಯರಸ್ತೆ, ಪರ್ವತವಾಣಿ ರಸ್ತೆ, ಹನುಮಂತನಗರ, ಬೆಂಗಳೂರು–560082.	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಸುಂಕದಕಟ್ಟೆ ಗ್ರಾಮದ ಖಾತಾ ಅಸೆಸ್ಮೆಂಟ್ ನಂ.6/1 ರಲ್ಲಿರುವ ಸ್ವತ್ತಿನ ನಂ.3ರ ಪೈಕಿ ಪಶ್ಚಿಮಾರ್ಧ ಭಾಗದ ಸ್ಥಿರ ಸ್ವತ್ತು, ಈ ಕೆಳಕಂಡ ಚಕ್ಕುಬಂದಿಯ ಮಧ್ಯೆ ಇರುವ ಪೂರ್ವಪಶ್ಚಿಮ: ಉತ್ತರದ ಕಡೆ: 15–9 ಅಡಿಗಳು, ದಕ್ಷಿಣದ ಕಡೆ: 15–0 ಅಡಿಗಳು, ಉತ್ತರ'ದಕ್ಷಿಣ: ಪೂರ್ವದಕಡೆ:48–0 ಅಡಿಗಳು, ಪಶ್ಚಿಮದಕಡೆ: 46–0 ಅಡಿಗಳು, ಒಟ್ಟು 726 ಚದರ ಅಡಿಗಳ ಅಳತೆಯುಳ್ಳ ಖಾಲೀ ನಿವೇಶನ ಮತ್ತು ಕೆಳಕಂಡ ಚಕ್ಕುಬಂದಿಗೊಳಪಟ್ಟ ನಿವೇಶನ ಈ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟದಾಗಿರುತ್ತದೆ. ಚಕ್ಕುಬಂದಿ:– ಪೂರ್ವಕ್ಕೆ : ಇದೇ 3ನೇ ನಂಬರು ಸ್ವತ್ತಿನ ಪೈಕಿ ಪೂರ್ವಾರ್ಧ ಭಾಗ, ಪಶ್ಚಿಮ : 2ನೇ ನಂಬರ್ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : 6/2 ರ ಸ್ವತ್ತು.	3,71,850 ಒಟ್ಟು=3,71,850	ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ. ಸ.ನಿ/ ಸ.ಸಂ.ಸ.ನಿ/ವ.ಅ/159/2023 –24

ವಿಶೇಷ ಸೂಚನೆ: ಮೇಲೆ ಹೇಳಿರುವ ತೀರ್ವ ಮೊಬಲಗು ಹಾಗೂ ದಿನಾಂಕ : 17.12.2021 ರಿಂದ ಬಾಕಿಯಿರುವ ಬಡ್ಡಿ ಹಾಗೂ ನ್ಯಾಯಾಲಯದ ವೆಚ್ಚಗಳನ್ನು ಸಹ ಪಾವತಿಸಬೇಕಾಗಿರುತ್ತದೆ.

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ : 15.11.2023

ಸಹಿ/– ದೀಪು.ಎಸ್.
ಮಾರಾಟಾಧಿಕಾರಿ, ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010–11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560 040
ದೂರವಾಣಿ ಸಂಖ್ಯೆ: 080–23185584, 9538475454, 9980147199.

ಸ್ಥಿರಾಸ್ತಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರ ಸಂಘ ಸುಸ್ತಿದಾರರಾದ ಶ್ರೀ.ಮುನಿರಾಜ್.ಹೆಚ್. ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ–441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘ ನಿಯಮಿತ, ಬೆಂಗಳೂರು ಇವರ ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/155/2023–24 ದಿನಾಂಕ 16.10.2023 ರ ಮೇರೆಗೆ ದಿನಾಂಕ 14.12.2023 ರ ಗುರುವಾರದಂದು ಹಗಲು 11.30 ಘಂಟೆಗೆ ಸ್ಥಿರಾಸ್ಥಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಶ್ರೀ.ಮುನಿರಾಜ್.ಹೆಚ್.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀ.ಮುನಿರಾಜ್. ಹೆಚ್. #226, ರಾಮಗೊಂಡನ ಹಳ್ಳಿ, ಯಲಹಂಕ, ಬೆಂಗಳೂರು–560064.	ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಬೆಂಗಳೂರು ಇವರ ಆದೇಶ ಸಂಖ್ಯೆ ತುಜಜ ಓ.ಅ.ಂಐಓ./(ಓಂಜ)/ಖಖ–139/2008–09 ದಿನಾಂಕ 17.11.2008 ರಮೇರೆಗೆ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆಗೊಂಡಿರುವ ಬೆಂಗಳೂರು ಉತ್ತರ ತಾಲೂಕಿನ ಯಲಹಂಕ ಹೋಬಳಿ ರಾಮಗೊಂಡನ ಹಳ್ಳಿ ಗ್ರಾಮದಲ್ಲಿ, ಸರ್ವೆ ನಂ.9 ಕ್ಕೆ ಸೇರಿದ 1 ಎಕರೆ 01 ಗುಂಟಾ ಜಮೀನು ಹಾಗೂ ಕೆಳಕಂಡ ಚಕ್ಕುಬಂದಿಗೊಳಪಟ್ಟ ಜಮೀನು ಈ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟದಾಗಿರುತ್ತದೆ. ಚಕ್ಕುಬಂದಿ:– ಪೂರ್ವಕ್ಕೆ : ಸುರೇಶ ಎಂಬುವರಿಗೆ ಸೇರಿದ್ದ ಜಮೀನು, ಪಶ್ಚಿಮಕ್ಕೆ : ರಾಮರೆಡ್ಡಿಯವರ ಭೂಮಿ, ಉತ್ತರಕ್ಕೆ : IVRI Compound, ದಕ್ಷಿಣಕ್ಕೆ : ಮುನಿಶಾಮಪ್ಪ ಅವರ ಜಮೀನು.	20,80,153 ಒಟ್ಟು=20,80,153	ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ. ಸ.ನಿ/ ಸ.ಸಂ.ಸ.ನಿ/ ವ.ಅ/155/ 2023–24

ವಿಶೇಷ ಸೂಚನೆ: ಮೇಲೆ ಹೇಳಿರುವ ತೀರ್ವ ಮೊಬಲಗು ಹಾಗೂ ದಿನಾಂಕ: 17.12.2021 ರಿಂದ ಬಾಕಿಯಿರುವ ಬಡ್ಡಿ ಹಾಗೂ ನ್ಯಾಯಾಲಯದ ವೆಚ್ಚಗಳನ್ನು ಸಹ ಪಾವತಿಸಬೇಕಾಗಿರುತ್ತದೆ.

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ : 15.11.2023

ಸಹಿ/– ದೀಪು.ಎಸ್.
ಮಾರಾಟಾಧಿಕಾರಿ, ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-115/1803/2023–24 ದಿನಾಂಕ: 27.11.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ವೆಂಕಟೇಶ್	ಬೆಂಗಳೂರು ಪೂರ್ವ	ಬಿದರಹಳ್ಳಿ	ಅಣಗಲಪುರ	18/1 18/2	2–10 3–12	ವ್ಯವಸಾಯ	ವಸತಿ
					ಒಟ್ಟು	5–22		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕಾಗಿ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಕೋರಿರುತ್ತಾರೆ.

BDA/PRO/CLU-55/2023-24 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

PUBLIC NOTICE

My client intends to purchase the immovable properties mentioned and described in the Schedule hereunder from its respective Owners mentioned here below. The Owners represent and warrant that they are the absolute owners of their respective portion of the Schedule Property and they have a good marketable, right, title and interest therein and that apart from them there are no other person/s having any right or claim over the Schedule Property. The Owners further represent that they have not entered into any Agreements/MoU with any person/s and that the Owners have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objections or claims shall with documentary evidence lodge their objections or claims **within Fifteen (15) days** from the date of this Notice with the Undersigned, failing which, my client shall proceed with the above-mentioned transaction.

SCHEDULE

All that piece and parcel of the agricultural lands situated at Kethohalli Village, Kasaba Hobli, Ramanagara Taluk, Ramanagara District :

Sl. No.	Name of the Owner	Sy. No.	Extent Acres	Extent Guntas	Boundaries East by	West by	North by	South by
1.	Pushpa Kumari, D/o Late Marilingaiah	121/2	02	32 ½	Road & Sy. No.121/6	Sy. No.122/2	Sy. Nos. 121/1A, 121/1B, 121/4, 121/5	Sy. Nos.121/3 & 120
2.	Pushpa Kumari, D/o.Late Marilingaiah	121/4	01	36	Sy. No.121/5	Sy. Nos. 121/1A & 1B	Sy. No.124	Sy. No.121/2
3.	Hemalatha, D/o.Late Marilingaiah	121/6	-	03 ½	Road	Sy. No.121/2	Sy. No. 121/2	Sy. No.121/2
4.	Hemalatha, D/o.Late Marilingaiah	122/2	01	27	Sy. Nos. 122/3A, 122/3B, 121/2 & 120	Sy. Nos. 216/1 & 216/2	Sy. Nos.123 & 122/3B	Sy. Nos.119 & 120
5.	Pushpa Kumari, D/o.Late Marilingaiah	122/3B	-	35	Sy. Nos. 121/1A & 1B	Sy. No.122/2	Sy. No.122/3A	Sy. No.122/2
6.	Pushpa Kumari, D/o.Late Marilingaiah	126/1	01	24	Sy. No. 125	Sy. No.126/2	Sy. No.127	Sy. Nos.126/2 & 123
7.	Pushpa Kumari, D/o.Late Marilingaiah	126/2	05	02	Sy. Nos.126/2 & 123	Sy. Nos.119 & 214	Sy. Nos.214 & 127	Sy. Nos.119 & 216
8.	Hemalatha, D/o.Late Marilingaiah	216/2	01	27	Sy. No.122/2	Sy. No.216/3	Sy. Nos.119, 126/2 & 123	Sy. No.216/1
9.	Hemalatha, D/o.Late Marilingaiah	216/3	-	11	Sy. No.216/2	Sy. No.216/1	Sy. No.119	Sy.No.216/1

Vinay K. S. Advocate,
Jayanth Pattanshetti Associates LLP
102, Ground Floor, "Rams Infantry Manor", No. 70, Infantry Road, Bengaluru-560 001.Ph: 41238516 / 41238367

Bengaluru
Date: 28-11-2023

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/18/2023
ದಿನಾಂಕ : 25–05–2023 ಗೆ ತಿದ್ದುಪಡಿ–6

ಕೆಲಸದ ಹೆಸರು : ಮಾರಿಕುಪ್ಪಂ – ಕುಪ್ಪಂ ಹೊಸ ಮಾರ್ಗ ಯೋಜನೆಯ ಮಿಡ್ ಸೆಕ್ಷನ್ (ಕಿ.ಮೀ.5.72) ಮತ್ತು ಕುಪ್ಪಂ (ಕಿ.ಮೀ.23.7) ನಡುವೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್, ವಿದ್ಯುದೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವೆ ಕಾಮಗಾರಿಗಳನ್ನು ಒಳಗೊಂಡಂತೆ ಹೊಸ ಬ್ರಾಡ್ ಗೇಜ್ ಮಾರ್ಗ ನಿರ್ಮಾಣ. **(ಟೆಂಡರ್ ಉಲ್ಲೇಖ ಸಂ. ಡಬ್ಲ್ಯು.496/ಎಂಕೆಎಂ–ಕೆಪಿಎನ್–ಇಪಿಸಿ–ಫೇಸ್–2)**

ಬಿಡ್ ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
06–12–2023 (11:00 ಗಂಟೆಗೆ)	**30–01–2024 (11:00 ಗಂಟೆಗೆ)**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು
ಬೆಂಗಳೂರು ದಂಡು

ಪಿಯುಬಿ/520/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/ಇಪಿಸಿ/100
ದಿನಾಂಕ : 26–10–2022 ಗೆ ತಿದ್ದುಪಡಿ–9

ಕೆಲಸದ ಹೆಸರು : ಮಲುಗೂರು (ಚೈ : 0.000) ನಿಂದ ಪಾಲಸಮುದ್ರಂ (ಚೈ : 17150.000) ನಡುವೆ ಸಿಗ್ನಲಿಂಗ್ ಟೆಲಿಕಮ್ಯುನಿಕೇಶನ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ವಿದ್ಯುದೀಕೃತ ಹೊಸ ಬ್ರಾಡ್ ಗೇಜ್ ಮಾರ್ಗ ಟ್ರ್ಯಾಕ್ ನಿರ್ಮಾಣ. (17.15 ಕಿ.ಮೀ) **(ಟೆಂಡರ್ ಉಲ್ಲೇಖ ಸಂ. ಎಂಎಲ್‌ಯು–ಪಾಲಸಮುದ್ರಂ–ಇಪಿಸಿ–01)**

ಬಿಡ್ ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
06–12–2023 (15:00 ಗಂಟೆಗೆ)	**30–01–2024 (15:00 ಗಂಟೆಗೆ)**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು
ಬೆಂಗಳೂರು ದಂಡು

ಪಿಯುಬಿ/521/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

South Western Railway - SWR | SWRRLY | SWRRLY

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೋಲಾರ ವಿಭಾಗ, ಕೋಲಾರ

ಸಂ: ಕರಾಸಾ/ಕೋವಿ/ಸಂಚಾರ/ವಾಣಿಜ್ಯ/1360/2023–24 ದಿನಾಂಕ: 22.11.2023

ಸಂಧಾನ/ಮಾತುಕತೆ ಪ್ರಕಟಣೆ ಸಂ.10/2023 (ವಾಣಿಜ್ಯ ಮಳಿಗೆಗಳು)

(ಸಾ.ಸ್ಥಾ.ಆದೇಶ ಸಂಖ್ಯೆ 787/17 ಹಾಗೂ ಪೂರಕ ಆದೇಶಗಳಂತೆ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೋಲಾರ ವಿಭಾಗದ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಮತ್ತು ಖಾಲಿ ಆಗಲಿರುವ ವಾಣಿಜ್ಯ ಮಳಿಗೆಗಳಿಗೆ ಸಂಧಾನ / ಮಾತುಕತೆ ಪ್ರಕಟಣೆ 10/2023 ಹೊರಡಿಸಿದ್ದು **ದಿ:12–12–2023** ರಂದು **12.00 ಗಂಟೆಗೆ** ಸಂಧಾನವನ್ನು ನಿಗದಿ ಪಡಿಸಲಾಗಿದೆ. ಆಸಕ್ತಿದಾರರು ಕಛೇರಿ ವೇಳೆಯಲ್ಲಿ ಸೂಚಿತ ಅರ್ಜಿ ಶುಲ್ಕ ಪಾವತಿಸಿ ದಿ:– **11–12–2023** ರ **12.00 ಗಂಟೆಯವರೆಗೆ** ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ನಿಗದಿತ ಅರ್ಜಿ ಶುಲ್ಕದ ಡಿಡಿ ಸಲ್ಲಿಸಿ ಅಥವಾ ಈ ಕಛೇರಿಯಲ್ಲಿ ನಗದು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ ಕ.ರಾ.ರ.ಸಾ.ನಿಗಮ ಕೋಲಾರ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ 7760990602 (ವಿಭಾಗೀಯ ಸಂಚಲನಾಧಿಕಾರಿಗಳು), 7760990620 (ಸಹಾಯಕ ಸಂಚಾರ ವ್ಯವಸ್ಥಾಪಕರು), 9448316268 (ವಿಷಯ ನಿರ್ವಾಹಕರು).

ಯಾವುದೇ ಕಾರಣ ನೀಡದೆ ಸಂಧಾನ / ಮಾತುಕತೆ ಪುರಸ್ಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಮತ್ತು ರದ್ದು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ವಾಸಾಸಂಇ/ವಾಪ್ರ/ಎಲ್‌ಸಿ/2291/2023–24 ಕ.ರಾ.ರ.ಸಾ. ನಿಗಮ, ಕೋಲಾರ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2, (ಬಿಎಂಐಸಿಪಿ),
ನಂ. 14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ,
1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001.

ಸಂ: ಕೆಐಎಡಿಬಿ/ಎಲ್‌ಎಕ್ಯೂ/4100/2023–24 ದಿನಾಂಕ: 27.11.2023

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಬೀರಸಂದ್ರ, ಬೈರದೇನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ನಾಗದೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 118–37 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ಕೆಐಎಡಿ ಕಾಯ್ದೆ 1966 ಕಲಂ 28(4)ರಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 198 ಎಸ್‌ಪಿಕ್ಯೂ (ಇ) 2023 ದಿನಾಂಕ: 07.03.2023 ರಾಜ್ಯಪತ್ರ ಪ್ರಕಟಿತ ದಿನಾಂಕ 08.03.2023ರನ್ವಯ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಈ ಜಮೀನುಗಳಿಗೆ ಕೆಐಎಡಿ ಕಾಯ್ದೆ ಕಲಂ 29(2)ರನ್ವಯ ಪರಿಹಾರ ನಿಗದಿಪಡಿಸಲು ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಕೆಐಎಡಿಬಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ **ದಿನಾಂಕ 29.11.2023 ರಂದು ಬೆಳಗ್ಗೆ 11.00 ಘಂಟೆಗೆ** ಈ ಕೆಳಕಂಡ ವಿಳಾಸದಲ್ಲಿ ಭೂದರ ಸಲಹಾ ಸಮಿತಿ ಸಭೆಯನ್ನು ಕರೆಯಲಾಗಿದೆ.

**"ಗೋವಿಂದಪ್ಪ ಕನ್ವೆನ್ಷನ್ ಹಾಲ್", ಕುಂದಾಣ ರಸ್ತೆ,
ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗ, ಚಪ್ಪರದಕಲ್ಲು, ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ–562110.**

ಆದುದರಿಂದ, **ದಿನಾಂಕ 29.11.2023ರಂದು** ನಡೆಯುವ ಭೂದರ ಸಲಹಾ ಸಮಿತಿ ಸಭೆಗೆ ಭೂಮಾಲೀಕರು ಮಾತ್ರ ಹಾಜರಾಗಲು ತಿಳಿಸಿದೆ.

ಸಹಿ/–ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ(ಬಿಎಂಐಸಿಪಿ),
ನೃಪತುಂಗ ರಸ್ತೆ, ಬೆಂಗಳೂರು.

ಕಾರ್ಯಸಾಧ್ಯತೆಯ ಬಗ್ಗೆ ಅಧ್ಯಯನ: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್

ನಗರ ಸುತ್ತ ವೃತ್ತರೈಲು ಸಂಪರ್ಕ ಜಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲವನ್ನು (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವ ಯೋಜನೆ ಇದ್ದು, ಅದರ ಕಾರ್ಯಸಾಧ್ಯತೆಯ ಬಗ್ಗೆ ಅಧ್ಯಯನ ನಡೆಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ ಚಿಂತನೆಗಳು ಮುಂದಿನ 40-50 ವರ್ಷಗಳ ಅಭಿವೃದ್ಧಿಯ ಬಗ್ಗೆಯೇ ಇರುತ್ತವೆ. ವೃತ್ತರೈಲು ಯೋಜನೆ ಮುಂದಿನ 20-30 ವರ್ಷಗಳಲ್ಲಿ ಉಂಟಾಗಬಹುದಾದ ವಾಹನ ದಟ್ಟಣೆ, ಜನದಟ್ಟಣೆಯನ್ನು ತಪ್ಪಿಸುವುದು ಆಗಿದೆ' ಎಂದು ತಿಳಿಸಿದರು.

ಸಂಪರ್ಕ ಜಾಲ: ನಿಡವಂದ-ದೊಡ್ಡಬಳ್ಳಾಪುರ-ದೇವನಹಳ್ಳಿ-ಮಾಲೂರು-ಹೀಲಲಿಗೆ-ಸೋಲೂರು-ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲ 287 ಕಿ.ಮೀ. ಇರಲಿದೆ. ಈ ಯೋಜನೆಯ ಸಾಧಕ-ಬಾಧಕಗಳನ್ನು ತಿಳಿಯಲು ₹ 7 ಕೋಟಿ ವೆಚ್ಚದಲ್ಲಿ ಸರ್ವೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನೈರುತ್ಯ ರೈಲ್ವೆಯ ನಿರ್ಮಾಣ ಸಂಸ್ಥೆಗಳಿಂದ ಅಧ್ಯಯನ ನಡೆಯಲಿದ್ದು, ಶೀಘ್ರದಲ್ಲಿ ಟೆಂಡರ್ ಕರೆಯಲಾಗುವುದು. 2024ರ ಸೆಪ್ಟೆಂಬರ್ ಒಳಗೆ ಸರ್ವೆ ಪೂರ್ಣಗೊಳಿಸಿ, 2025ರಲ್ಲಿ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುವುದು. ವೃತ್ತರೈಲು ಯೋಜನೆ ಸಿದ್ಧವಾದ ಮೇಲೆ ಪ್ರತಿ ವರ್ಷ 80 ರಿಂದ 90 ಕಿ.ಮೀ. ಕಾಮಗಾರಿ ನಡೆಯಬಹುದು. ವಿದ್ಯುದ್ದೀಕರಣ ಹೊಂದಿರುವ ಕನಿಷ್ಠ ಎರಡು ಮಾರ್ಗಗಳು ಇರಲಿವೆ ಎಂದರು.

ಯಶವಂತಪುರದಲ್ಲಿ ರೈಲ್ವೆ ಕಾಮಗಾರಿಗಳನ್ನು ಸಚಿವ ಅಶ್ವಿನಿ ವೈಷ್ಣವ್ ವೀಕ್ಷಿಸಿದರು

ಯಶವಂತಪುರ ಮತ್ತು ಕೆಎಸ್‌ಆರ್ ನಿಲ್ದಾಣಗಳ ಅಭಿವೃದ್ಧಿ ಕಾಮಗಾರಿಗಳು ಭರದಿಂದ ಸಾಗುತ್ತಿವೆ. ಹೆಚ್ಚುವರಿಯಾಗಿ ನಾಲ್ಕು ಪ್ಲಾಟ್‌ಫಾರ್ಮ್‌ಗಳನ್ನು ನಿರ್ಮಿಸಲಾಗುವುದು ಎಂದು ವಿವರಿಸಿದರು.

ಸಾರಿಗೆಯಲ್ಲಿ ಶೇ 80ರಷ್ಟು ಆದಾಯ ರೈಲ್ವೆಯಿಂದಲೇ ಬರುತ್ತಿತ್ತು. ಹಿಂದಿನ ಕಾಂಗ್ರೆಸ್ ಸರ್ಕಾರದ ತಪ್ಪು ನೀತಿಗಳಿಂದಾಗಿ ಈ ಪ್ರಮಾಣ ಶೇ 27ಕ್ಕೆ ಕುಸಿದಿತ್ತು. ನರೇಂದ್ರ ಮೋದಿ ಅವರು ರೈಲ್ವೆ ಬಜೆಟ್ ಅನ್ನು ಮುಖ್ಯ ಬಜೆಟ್‌ನೊಂದಿಗೆ ವಿಲೀನ ಮಾಡುವುದೂ ಸೇರಿದಂತೆ ಅನೇಕ ದಿಟ್ಟ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮತ್ತೆ ಆದಾಯ ಹೆಚ್ಚಾಗುವಂತೆ ಮಾಡಿದ್ದಾರೆ. ಅಲ್ಲಿವರೆಗೆ ಬಜೆಟ್‌ನಲ್ಲಿ ₹ 35 ಸಾವಿರ ಕೋಟಿ ಅನುದಾನ ಮಾತ್ರ ರೈಲ್ವೆಗೆ ಸಿಗುತ್ತಿತ್ತು. ಈ ಕ್ರಮದಿಂದ ₹ 2.40 ಲಕ್ಷ ಕೋಟಿಗೆ ಏರಿದೆ ಎಂದರು.

ಹಿಂದೆ ರೈಲು ನಿಲ್ದಾಣಗಳ ಅಭಿವೃದ್ಧಿ ಅಂದರೆ ಬಣ್ಣ ಬಳಿಯುವುದು ಆಗಿತ್ತು. ಈಗ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ವಿಶ್ವದರ್ಜೆಯ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ. ದೇಶದಲ್ಲಿ 1309 ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲಾಗಿದ್ದು, ಕರ್ನಾಟಕದ 57 ನಿಲ್ದಾಣಗಳು ಅದರಲ್ಲಿ ಸೇರಿವೆ ಎಂದು ಹೇಳಿದರು.



ಪ್ರಜಾವಾಣಿ ಗ್ರಾಫಿಕ್ಸ್

ಬಿಎಸ್‌ಆರ್‌ಪಿಗೆ ವೇಗ ನೀಡಲು ಕ್ರಮ

ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಹೆಚ್ಚು ತಾಂತ್ರಿಕವಾಗಿರುವ ಕಾರಣ ನಿಧಾನವಾಗಿ ತಯಾರಾಗುತ್ತಿದೆ. ಈ ಕಾಮಗಾರಿಗಳಿಗೆ ಇನ್ನಷ್ಟು ವೇಗ ನೀಡಲು ಏನು ಮಾಡಬೇಕು ಎಂದು ಚಿಂತನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

'ಬಿಎಸ್‌ಆರ್‌ಪಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲುದಾರಿಕೆಯಲ್ಲಿ ನಡೆಯುತ್ತಿದೆ. ಇದು ಕಟ್ಟಡ ನಿರ್ಮಾಣ ಕಾಮಗಾರಿಯಂತೆ ಅಲ್ಲ. ರೈಲು ಮಾರ್ಗ, ರೈಲು ನಿಲ್ದಾಣಗಳನ್ನು ನಿರ್ಮಿಸುವುದಕ್ಕೆ ಹೆಚ್ಚು ಸಮಯ ಮತ್ತು ಹೆಚ್ಚು ತಾಂತ್ರಿಕತೆ ಬೇಕಾಗುತ್ತದೆ. ಸಣ್ಣ ಲೋಪ ಕೂಡ ಆಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಕಾಮಗಾರಿ ನಿಧಾನವಾಗಿ ಸಾಗುತ್ತಿದೆ' ಎಂದು ಸ್ಪಷ್ಟನೆ ನೀಡಿದರು.

'ಸಿ.ಎಂ ಕಚೇರಿಯಲ್ಲಿ ಏಕ ಗವಾಕ್ಷಿ ವ್ಯವಸ್ಥೆಗೆ ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರ ಅಹವಾಲುಗಳಿಗೆ ಕಾಲಮಿತಿಯಲ್ಲಿ ಸ್ಪಂದಿಸುವ ಉದ್ದೇಶದಿಂದ ಮುಖ್ಯಮಂತ್ರಿ ಕಚೇರಿಯಲ್ಲಿ ಏಕ ಗವಾಕ್ಷಿ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚೆ ನಡೆಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

'ಸರ್ಕಾರದ ಆಡಳಿತವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಸಿ.ಎಂ ಸಿದ್ದರಾಮಯ್ಯ ಅವರು ನಡೆಸಿದ ಜನಸ್ಪಂದನ ಕಾರ್ಯಕ್ರಮ ಮಹತ್ವದ ಹೆಜ್ಜೆ' ಎಂದು ಬಣ್ಣಿಸಿದ್ದಾರೆ.

'ಬಿಜೆಪಿ ಅವಧಿಯಲ್ಲಿ ನಿಂತ ನೀರಿನಂತಾಗಿ ಆಡಳಿತ ಯಂತ್ರ ಜಡ್ಡುಗಟ್ಟಿತ್ತು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಚುರುಕು ನೀಡಲಾಗಿದೆ. ಜನಸ್ಪಂದನ ಕಾರ್ಯಕ್ರಮವು ಆಡಳಿತದಲ್ಲಿ ಬಹು ದೊಡ್ಡ ಬದಲಾವಣೆಗೆ ಕಾರಣವಾಗಲಿದೆ' ಎಂದಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದ ಜನಸ್ಪಂದನ ಕಾರ್ಯಕ್ರಮಕ್ಕೆ ಸಮಸ್ಯೆಯನ್ನು ಹೊತ್ತು ಬಂದಿದ್ದ ನೂರಾರು ಜನರಿಗೆ ಸ್ಥಳದಲ್ಲೇ ಪರಿಹಾರ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಆಡಳಿಕ್ಕೆ ವೇಗ ನೀಡಿ ಸರ್ಕಾರದ ಎಲ್ಲಾ ಯೋಜನೆಗಳ ಲಾಭ ಶೇ 100ರಷ್ಟು ಫಲಾನುಭವಿಗಳಿಗೆ ತಲುಪಿಸುವಂತೆ ಎಚ್ಚರ ವಹಿಸಲಾಗುವುದು. ಸರ್ಕಾರದ ಆಶಯಗಳಿಗೆ ತಕ್ಕಂತೆ ನಮ್ಮ ಯೋಜನೆ ಮತ್ತು ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆಯೇ ಎಂಬುದನ್ನು ತಿಳಿದುಕೊಳ್ಳಲು ಸಮೀಕ್ಷೆ ನಡೆಸುವ ಆಲೋಚನೆಯೂ ಇದೆ' ಎಂದಿದ್ದಾರೆ.



ಕಟ್ಟಡ ಬೀಳುವ ಸ್ಥಿತಿಯಲ್ಲಿದ್ದರೂ ನಿರ್ಲಕ್ಷ್ಯ: ವಾಹನಗಳು ಜಖಂ

ಕುಸಿದ ಬಿಬಿಎಂಪಿ ನರ್ಸರಿ ಶಾಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರದ ಕುಕ್ಸ್ ಮುಖ್ಯರಸ್ತೆಯ 'ಬಿ' ಅಡ್ಡರಸ್ತೆಯಲ್ಲಿರುವ ಬಿಬಿಎಂಪಿ ನರ್ಸರಿ ಶಾಲೆಯ ಕಟ್ಟಡ ಸೋಮವಾರ ಮುಂಜಾನೆ ಕುಸಿದು ಬಿದ್ದಿದೆ. ಮುಂಜಾನೆ ಈ ಅವಘಡ ಸಂಭವಿಸಿರುವುದರಿಂದ ಜೀವಾಪಾಯ ಉಂಟಾಗಿಲ್ಲ. ಕಟ್ಟಡ ಕುಸಿದು ಬಿದ್ದಿದ್ದರಿಂದ ಪಕ್ಕದಲ್ಲಿ ನಿಂತಿದ್ದ ಹತ್ತಾರು ವಾಹನಗಳು ಜಖಂ ಆಗಿವೆ.

75 ವರ್ಷಗಳ ಇತಿಹಾಸವಿರುವ ಈ ನರ್ಸರಿ ಶಾಲೆಯಲ್ಲಿ 75ಕ್ಕೂ ಅಧಿಕ ಮಕ್ಕಳು ಓದುತ್ತಿದ್ದಾರೆ. ಕಟ್ಟಡ ಬೀಳುವ ಸ್ಥಿತಿಯಲ್ಲಿ ಇರುವ ಬಗ್ಗೆ ಬಿಬಿಎಂಪಿ ಅಧಿಕಾರಿಗಳು, ಜನಪ್ರತಿನಿಧಿಗಳ ಗಮನಕ್ಕೆ ತರಲಾಗಿತ್ತು. ಆದರೂ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಅವಘಡ ಉಂಟಾಗಿದೆ. ಹಗಲು ವೇಳೆ ಈ ಘಟನೆ ಸಂಭವಿಸಿದ್ದರೆ ಮಕ್ಕಳ ಗತಿ ಏನಾಗುತ್ತಿತ್ತು. ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳು ಹೇಳಿಕೊಳ್ಳುವುದಕ್ಕಿಂತಲೂ ಹಳೆಯ ಕಟ್ಟಡವಾಗಿದೆ. ಶಾಸಕ ರಿಜ್ವಾನ್ ಅವರು ಎರಡು ತಿಂಗಳ ಹಿಂದೆಯಷ್ಟೇ ಶಾಲೆಯನ್ನು ಪರಿಶೀಲಿಸಿ ಮಕ್ಕಳನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದರು. ಬಿಬಿಎಂಪಿ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪಾಲಿಕೆ ಮಾಜಿ ಸದಸ್ಯರ ಸೈಯ್ಯದ್ ಸುಜಾವುದ್ದೀನ್ ಬೇಸರ ವ್ಯಕ್ತಪಡಿಸಿದರು. ಘಟನೆ ಬಳಿಕ ಎಚ್ಚೆತ್ತುಕೊಂಡಿರುವ ಬಿಬಿಎಂಪಿ, ನಗರದಲ್ಲಿರುವ ಎಲ್ಲ ಹಳೇ ಶಾಲೆಗಳ ವಿವರ ಪಡೆಯಲು ಮುಂದಾಗಿದೆ.

ಶಿವಾಜಿನಗರದ ಕುಕ್ಸ್ ರಸ್ತೆಯ ಬಿಬಿಎಂಪಿ ನರ್ಸರಿ ಶಾಲೆಯ ಕಟ್ಟಡ ಸೋಮವಾರ ಮುಂಜಾನೆ ಕುಸಿದು ಬಿದ್ದಿದ್ದು, ಅವಶೇಷಗಳನ್ನು ತೆರವುಗೊಳಿಸುತ್ತಿರುವ ಕಾರ್ಯವನ್ನು ಸಾರ್ವಜನಿಕರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಹಳೇ ಕಟ್ಟಡಗಳ ಸರ್ವೆ: 'ನಗರದಲ್ಲಿ ಹಲವು ಹಳೇ ಶಾಲಾ ಕಟ್ಟಡಗಳಿವೆ. ಅವುಗಳಲ್ಲಿ ಕೆಲವನ್ನು ದುರಸ್ತಿಗೊಳಿಸಲು, ಇನ್ನು ಕೆಲವು ಶಾಲೆಗಳಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಶಿವಾಜಿನಗರದ ಈ ಶಾಲೆಯೂ ಪ್ರಸ್ತಾವನೆಯ ಪಟ್ಟಿಯಲ್ಲಿ ಸೇರಿತ್ತು. ಆದರೆ, ಕುಸಿದು ಬೀಳುವ ಹಂತದಲ್ಲಿತ್ತು ಎಂಬುದು ಗೊತ್ತಿರಲಿಲ್ಲ. ಮುಂಜಾನೆ ಕಟ್ಟಡ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಅಪಾಯ ಉಂಟಾಗಿಲ್ಲ. ಈ ಶಾಲೆಯ ಮಕ್ಕಳನ್ನು ಪಕ್ಕದ ಸರ್ಕಾರಿ ಶಾಲೆಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗಿದೆ' ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಎಷ್ಟು ಶಾಲೆಗಳು ತೀರ ದುಃಸ್ಥಿತಿಯಲ್ಲಿವೆ ಎಂದು ಎರಡು ದಿನಗಳ ಒಳಗೆ ಸರ್ವೆ ಮಾಡಿ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ

ಪ್ರೀತಿ ಗೆಹಲೋತ್,
ಬಿಬಿಎಂಪಿ ವಲಯ ಆಯುಕ್ತೆ ಮತ್ತು ಶಿಕ್ಷಣ ವಿಭಾಗದ ಮುಖ್ಯಸ್ಥೆ

ಕವಿತೆ ನಿರಂತರ: ಜೋಗಿ

ಬೆಂಗಳೂರು: ಕಾದಂಬರಿ ಬರೆದರೆ ಮುಗಿಯುತ್ತದೆ. ಕವಿತೆ ಮುಗಿಯುವುದಿಲ್ಲ. ನಿರಂತರವಾಗಿರುತ್ತದೆ ಎಂದು ಬರಹಗಾರ ಜೋಗಿ ಅವರು ಹೇಳಿದರು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಪ್ನಬುಕ್ ಹೌಸ್ ಆಯೋಜಿಸಿದ್ದ 'ರಾಜ್ಯೋತ್ಸವ -ಕಾವ್ಯೋತ್ಸವ' ಕವಿಗೋಷ್ಠಿಯಲ್ಲಿ ಮಾತನಾಡಿದರು.

ಕವಿತೆಯೇ ಒಂದು ಬಂಡಾಯ. ಪ್ರತಿಯೊಂದು ಕವಿತೆಯೂ ಪ್ರತಿಭಟನೆ. ಒಂದು ಕವಿತೆ ಇನ್ನೊಂದರ ತರಹ ಇರುವುದಿಲ್ಲ. ಕವಿಯ ವ್ಯಕ್ತಿತ್ವದ ಗುರುತಾಗಿರುತ್ತದೆ.ಕವಿಗೂ ಓದುಗನಿಗೂ ಬಹಳ ಮಾನಸಿಕ ಸಂಬಂಧವಿರುತ್ತದೆ ಎಂದರು.

24 ಕವಿಗಳು ಕವನ ವಾಚನ ಮಾಡಿದರು. ನಾಟಕಕಾರ ಬೇಲೂರು ರಘುನಂದನ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ದೊಡ್ಡೇಗೌಡ ಸ್ವಾಗತಿಸಿದರು. ಸಪ್ನಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಇದ್ದರು.

ಮಲ್ಲೇಶ್ವರ: ಕಡಲೆಕಾಯಿ ಪರಿಷೆ ಡಿ. 2ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡು ಮಲ್ಲೇಶ್ವರ ಬಳಗದಿಂದ ಡಿ. 2ರಿಂದ 4ರವರೆಗೆ ಮಲ್ಲೇಶ್ವರದ ಕಾಡುಮಲ್ಲೇಶ್ವರದೇವಸ್ಥಾನದ ಆವರಣದಲ್ಲಿ 7ನೇ ವರ್ಷದ ಕಡಲೆಕಾಯಿ ಪರಿಷೆ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ, 'ನಗರದ ಜನರಿಗೆ ಗ್ರಾಮೀಣ ಸಂಸ್ಕೃತಿ, ಜೀವನ ಪದ್ಧತಿಯನ್ನು ಪರಿಚಯಿಸಲು ಕಾರ್ತಿಕ ಮಾಸದಲ್ಲಿ ಮೂರು ದಿನ ಕಡಲೆಕಾಯಿ ಪರಿಷೆ ಹಮ್ಮಿಕೊಳ್ಳಲಾಗುತ್ತಿದೆ' ಎಂದರು.

'ಗಂಗಮ್ಮ ದೇವಿ ದೇವಸ್ಥಾನದ ಮುಂಭಾಗದಲ್ಲಿ 20 ಅಡಿ ಅಗಲ, 22 ಅಡಿ ಎತ್ತರದ ನಂದಿ ಪ್ರತಿಕೃತಿಯನ್ನು ಪ್ರತಿಷ್ಠಾಪಿಸಲಾಗುತ್ತಿದ್ದು, 800 ಕೆ.ಜಿ. ಕಡಲೆಕಾಯಿಗಳಿಂದ ಅಲಂಕಾರ ಮಾಡಲಾಗುತ್ತಿದೆ. ಪ್ಲಾಸ್ಟಿಕ್ ಮುಕ್ತ ಪರಿಷೆಯಾಗಬೇಕೆಂಬ ಉದ್ದೇಶದಿಂದ 'ಮನೆಯಿಂದ ಕೈಚೀಲ ತನ್ನಿ' ಎಂಬ ಅಭಿಯಾನವನ್ನೂ ಹಮ್ಮಿಕೊಳ್ಳಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಈಬಾರಿಪರಿಷೆಯಿಂದಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ತುಮಕೂರು, ಕನಕಪುರ ಜಿಲ್ಲೆಯ ರೈತರು ಸೇರಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ರೈತರು ಪಾಲ್ಗೊಳ್ಳಲಿದ್ದಾರೆ. ರೈತರು ಬೆಳೆದ ಕಡಲೆಕಾಯಿ ಮತ್ತು ತರಕಾರಿ ಕರಕುಶಲ ವಸ್ತುಗಳ ಮಾರಾಟಕ್ಕಾಗಿ 300 ಮಳಿಗೆಗಳನ್ನು ಉಚಿತವಾಗಿ ತೆರೆಯಲು ಅವಕಾಶ ಕಲ್ಪಿಸಲಾಗಿದೆ' ಎಂದರು.

ಮಲ್ಲೇಶ್ವರದ ಗಂಗಮ್ಮ ದೇವಿ ದೇವಸ್ಥಾನದ ಮುಂಭಾಗದಲ್ಲಿ ಪ್ರತಿಷ್ಠಾಪಿಸಿರುವ ನಂದಿ ಪ್ರತಿಕೃತಿಗೆ ಕಡಲೆಕಾಯಿ ಅಲಂಕಾರ ಮಾಡುತ್ತಿರುವುದು.

ಡಿ. 2ರಂದು ಬೆಳಿಗ್ಗೆ 11ಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಕಡಲೆಕಾಯಿ ಪರಿಷೆಗೆ ಚಾಲನೆ ನೀಡಿಲಿದ್ದಾರೆ. ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಬಿ.ಕೆ. ಹರಿಪ್ರಸಾದ್, ಮುನಿರತ್ನ, ಡಾ.ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ. ಜಿತ್ಸಾವನ ಮಹಿಳಾ ಯಕ್ಷಗಾನ ಮಂಡಳಿಯಿಂದ 'ಕೃಷ್ಣಲೀಲೆ' 'ಕಂಸ ವಧೆ' ಯಕ್ಷಗಾನ ಪ್ರದರ್ಶನ ಇರಲಿದೆ. ಡಿ. 3ರಂದು ಸಂಗೀತ ಕಾರ್ಯಕ್ರಮ ನಡೆಯಲಿದೆ. ಡಿ. 4 ರಂದು ಕಾಡು ಮಲ್ಲಿಕಾರ್ಜುನ ಸ್ವಾಮಿಗೆ 1 ಸಾವಿರ ಕೆ.ಜಿ ಕಡಲೆಕಾಯಿಯಿಂದ ಅಭಿಷೇಕ ಮಾಡಲಾಗುವುದು' ಎಂದರು.

'ಬಿಡದಿ ಸ್ಮಾರ್ಟ್ ಸಿಟಿ ಯೋಜನೆ' ಆದೇಶ

ರಾಮನಗರ: ಜಿಲ್ಲೆಯ ಪ್ರಮುಖ ಕೈಗಾರಿಕಾ ಪ್ರದೇಶ ನೆಲೆಸಿರುವ ಬಿಡದಿಯನ್ನು ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್‌ಸಿಟಿ ಯೋಜನೆ(ಜಿಬಿಡಿಎ) ಎಂದು ಘೋಷಿಸಿ ನಗರಾಭಿವೃದ್ಧಿ ಇಲಾಖೆ ಇತ್ತೀಚೆಗೆ ಆದೇಶ ಹೊರಡಿಸಿದೆ.

ಹಿಂದೆ ಇದ್ದ ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಹೆಸರನ್ನು ಬದಲಾಯಿಸಿ, ನ. 18ರಂದು ಆದೇಶ ಹೊರಡಿಸಲಾಗಿದೆ. ಬಿಡದಿ ಸ್ಮಾರ್ಟ್‌ಸಿಟಿ ಯೋಜನೆಯನ್ನು ಗ್ರೇಟರ್ ಬೆಂಗಳೂರು ಯೋಜನೆ ಎಂದು ಘೋಷಿಸುವುದಾಗಿ, ಇತ್ತೀಚೆಗೆ ಟೊಯೊಟೊ ಕಂಪನಿ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಘೋಷಿಸಿದ್ದ ಬೆನ್ನಲ್ಲೇ ಈ ಆದೇಶ ಹೊರಬಿದ್ದಿದೆ.

ಬಿಎಂಆರ್‌ಡಿಎ ಆಯುಕ್ತರನ್ನು ಜಿಬಿಡಿಎ ಮುಖ್ಯಸ್ಥರನ್ನಾಗಿ ಮತ್ತು ಬಿಎಂಆರ್‌ಡಿಎ ಯೋಜನಾ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಸರ್ಕಾರ 2006ರಲ್ಲಿ ಬಿಡದಿ ಸ್ಮಾರ್ಟ್ ಸಿಟಿ ಯೋಜನೆ ರೂಪಿಸಿತ್ತು. ಹೋಬಳಿಯ 29 ಗ್ರಾಮಗಳ 10 ಸಾವಿರ ಎಕರೆಯನ್ನು ಸ್ವಾಧೀನಪಡಿಸಿಕೊಂಡು, ಸ್ಮಾರ್ಟ್‌ಸಿಟಿ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು.

ದಾಸರಹಳ್ಳಿ: ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಪೀಣ್ಯದಾಸರಹಳ್ಳಿ: 'ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಮೂಲಸೌಕರ್ಯ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕೆರೆ ಗುಡ್ಡದಹಳ್ಳಿ ಸರ್ಕಾರಿ ಶಾಲೆಯ ಒಂದು ಮತ್ತು ಮಂಜುನಾಥನಗರದ ಸರ್ಕಾರಿ ಶಾಲೆಯ ಐದು ನೂತನ ಕೊಠಡಿಗಳ ನಿರ್ಮಾಣ ಹಾಗೂ ಮಲ್ಲಸಂದ್ರ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ನನ್ನ ಅವಧಿಯಲ್ಲಿ 300ಕ್ಕೂ ಹೆಚ್ಚು ಶಾಲಾ ಕೊಠಡಿಗಳು, ಕಾಂಪೌಂಡ್, ಪೀಠೋಪಕರಣ, ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಕಲ್ಪಿಸಲಾಗಿದೆ. ಮಂಜುನಾಥನಗರದ ಸರ್ಕಾರಿ ಪ್ರೌಢ ಶಾಲೆಯಲ್ಲಿ 1,100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಇಲ್ಲಿ ಕೊಠಡಿಗಳ ಕೊರತೆ ಇತ್ತು. ಆದ್ದರಿಂದ, ಐದು ನೂತನ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ಬಿಜೆಪಿ ಮುಖಂಡರಾದ ನವೀನ್, ರಘು ಸೂರ್ಯ ಇದ್ದರು.

TATA AIA LIFE INSURANCE

Asset Scapping

Offers are invited for sale of used office assets of a Multinational Company, on an as is where basis. **Materials include office desks, storages, electrical fittings, air conditioners/Diesel Generator, Server Rack, Electrical and Lan Cables etc. for disposal.**

The materials at the site, which is located in **474, 6th Block, 80 Feet Road, Opp. BMTC Bus Stop, Kormangala, Bangalore- 5600095,** are open for inspection from **24.11.2023 to 25.11.23.**

Appointment needs to be fixed for inspection by calling Sandeep P K on 9566088991 between 11 am to 3 pm.

Terms and Conditions of Sale are available with the contact person at site. The Company reserves the rights to cancel/postpone/reject/accept offer is at its sole discretion.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಆರ್. ಅಂಬಿಕಾಪತಿ
ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ
ಅಧ್ಯಕ್ಷರು, ಬಿಬಿಎಂಪಿ ಗುತ್ತಿಗೆದಾರರ ಸಂಘ

ದಿ: 27.11.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿನಾಂಕ: 28.11.2023 ರಂದು ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಮೃತರ ಸ್ವಗೃಹ ನಂ. 3/8, 2ನೇ ಅಡ್ಡರಸ್ತೆ, ಗಣೇಶ ಬ್ಲಾಕ್, ಸುಲ್ತಾನ್‌ಪಾಳ್ಯ, ಆರ್.ಟಿ.ನಗರ, ಬೆಂಗಳೂರು–32 ಮಧ್ಯಾಹ್ನ 12.00ರವರೆಗೆ ಇರಿಸಲಾಗುವುದು ತದನಂತರ ಮಧ್ಯಾಹ್ನ 1.00ಕ್ಕೆ ಅಂತಿಮ ಸಂಸ್ಕಾರವನ್ನು ನೆರವೇರಿಸಲಾಗುವುದು.

---------: ದುಃಖತಪ್ತರು :---------
ಕುಟುಂಬದವರು ಮತ್ತು ಬಂಧುಮಿತ್ರರು

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಮಹಾಧರಣಿಯಲ್ಲಿ ಪಾಲ್ಗೊಂಡಿದ್ದ ಹೋರಾಟಗಾರರು – ಪ್ರಜಾವಾಣಿ ಚಿತ್ರ

ಚಳವಳಿ ಮೂಲಕ ಬದಲಾವಣೆ ತರಲು ಕರೆ, ಮಹಾಧರಣಿಗೆ ಸಾವಿರಾರು ಮಂದಿ ಸಾಕ್ಷಿ

‘ಜನವಿರೋಧಿ ನೀತಿ ಹಿಮ್ಮೆಟ್ಟಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸುವುದು ಹಾಗೂ ರೈತ–ಕಾರ್ಮಿಕ ವಿರೋಧಿ ಕಾಯ್ದೆಗಳ ರದ್ದತಿಗೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ‘ಶ್ರಮಿಕ ವರ್ಗದ ಮಹಾಧರಣಿ’ಗೆ ಸೋಮವಾರ ರಾಜ್ಯದ ವಿವಿಧೆಡೆಯಿಂದ ಬೃಹತ್ ಸಂಖ್ಯೆಯಲ್ಲಿ ಹೋರಾಟಗಾರರು ಬಂದಿದ್ದರು.

ಮಹಾಧರಣಿಯ ಎರಡನೇ ದಿನ ‘ಸಂಘರ್ಷದ ದಿನ’ವಾಗಿ ಆಚರಣೆ ಮಾಡಲಾಯಿತು. ಇದಕ್ಕೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಹೋರಾಟಗಾರರು ಸಾಕ್ಷಿಯಾದರು.

ಕೇಂದ್ರ ಸರ್ಕಾರದ ಹಲವು ಜನವಿರೋಧಿ ನೀತಿಗಳನ್ನು ಖಂಡಿಸಿ, ಜನಪರ ಕಾಯ್ದೆಗೆ ಆಗ್ರಹಿಸಿದರು. ಕೇಂದ್ರ– ರಾಜ್ಯ ಸರ್ಕಾರಗಳು ತಮ್ಮ ಅಹವಾಲು ಆಲಿಸುವಂತೆ ಒತ್ತಾಯಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾದ ನಾಯಕ ವಿಜು ಕೃಷ್ಣನ್ ಮಾತನಾಡಿ, ‘ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವುದು ಜನವಿರೋಧಿ ಸರ್ಕಾರ. ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆ, ಜನರಿಗೆ ಒಳ್ಳೆಯ ದಿನಗಳು ಬರುತ್ತವೆ, ಕಡಿಮೆ ಬೆಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದೊರೆಯುವಂತೆ ಮಾಡುತ್ತೇವೆ ಎಂದು ಹೇಳಿ, 2014 ರಲ್ಲಿ ಮೋದಿ ಅಧಿಕಾರಕ್ಕೇರಿದ್ದರು. ಇದಕ್ಕೆ ತದ್ವಿರುದ್ಧ ನಡೆ ನೋಡುತ್ತಿದ್ದೇವೆ’ ಎಂದು ಹೇಳಿದರು.

‘ರೈತರು ಮತ್ತು ಕಾರ್ಮಿಕರು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದಾರೆ. ಬಿಜೆಪಿ ಆಡಳಿತಾವಧಿಯಲ್ಲಿ 4 ಲಕ್ಷಕ್ಕೂ ಹೆಚ್ಚು ರೈತರು, ಯುವಕರು ಹಾಗೂ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೃಷಿ ಉತ್ಪನ್ನಕ್ಕೆ ಬೆಂಬಲ ಬೆಲೆ ನೀಡುವಂತೆ ಒತ್ತಾಯಿಸಿದರೆ, ಅದು ಮತಕ್ಕಾಗಿ ನೀಡಿದ್ದ ಭರವಸೆ ಎಂದು ಕೃಷಿ ಮಂತ್ರಿ ಹೇಳಿದ್ದಾರೆ. ಅವರಿಗೆ ನಾಚಿಕೆ ಆಗಬೇಕು’ ಎಂದು ಹೇಳಿದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ‘ಅಂದು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದೆವು. ಈಗ ಸಂವಿಧಾನ ಉಳಿಸಿಕೊಳ್ಳಲು ಹೋರಾಟ ಮಾಡುವ ಸ್ಥಿತಿ ಬಂದಿದೆ. 2024ರ ಲೋಕಸಭೆ ಚುನಾವಣೆ ದೇಶದ ಜನರಿಗೆ ಮಹತ್ವದ ಚುನಾವಣೆ. ಕೋಮುವಾದ, ಬಂಡವಾಳಶಾಹಿಯನ್ನೇ ಪ್ರತಿನಿಧಿಸುವ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ದೇಶ ಸೋಲುತ್ತದೆ. ಚಳವಳಿ ಮೂಲಕ ಬದಲಾವಣೆ ತರಬೇಕಿದೆ’ ಎಂದು ಒತ್ತಾಯಿಸಿದರು.

ಪ್ರಾಂತ ರೈತ ಸಂಘದ ಮುಖಂಡ ಟಿ.ಯಶವಂತ್, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಲೇಖಕಿ ಷರೀಫಾ, ಇಂದೂಧರ ಹೊನ್ನಾಪುರ, ಎಸ್. ಆರ್.ಹಿರೇಮಠ್, ಮೀನಾಕ್ಷಿ ಬಾಳಿ, ಅಮ್ಜದ್ ಅಲಿ ಇದ್ದರು. ಸ್ಥಳಕ್ಕೆ ಬಂದ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರಿಗೆ ಹಕ್ಕೊತ್ತಾಯ ಪತ್ರ ನೀಡಲಾಯಿತು.

‘ಗ್ಯಾರಂಟಿ ಹಿಂದೆಯೇ ತೇಲಾಡುತ್ತಿರುವ ರಾಜ್ಯ ಸರ್ಕಾರ’

‘ರಾಮಮಂದಿರ ಕಟ್ಟಿದ್ದೇವೆ ಎಂದು ಹೇಳಿಕೊಂಡು ಮತ್ತೆ ಅಧಿಕಾರಕ್ಕೆ ಬರುವ ಭ್ರಮೆಯಲ್ಲಿ ಬಿಜೆಪಿಯಿದೆ. ರಾಮಮಂದಿರದಿಂದ ರೈತರ, ಕಾರ್ಮಿಕರ ಬದುಕು ಹಸನಾಗುವುದಾದರೆ ನಾವೂ ಎಲ್ಲ ಕಡೆಯೂ ರಾಮಮಂದಿರ ಕಟ್ಟೋಣ’ ಎಂದು ರಾಜ್ಯ ರೈತ ಸಂಘದ ಮುಖಂಡ ಎಚ್.ಆರ್.ಬಸವರಾಜಪ್ಪ ಹೇಳಿದರು.

‘ಸಂಪತ್ತು ಸೃಷ್ಟಿಸುವ ಕಾರ್ಮಿಕರಿಗೆ ಸೂಕ್ತ ಸೌಲಭ್ಯಗಳು ಲಭಿಸುತ್ತಿಲ್ಲ. ಧರ್ಮ, ಜಾತಿಗಳ ನಡುವೆ ಬೆಂಕಿ ಹಚ್ಚಿ ಅಧಿಕಾರಕ್ಕೆ ಬರಬಹುದು ಎಂದು ಬಿಜೆಪಿ ನಂಬಿತ್ತು. ರಾಜ್ಯದ ಜನರು ಬಿಜೆಪಿಯನ್ನು ಮನೆಗೆ ಕಳುಹಿಸಿದರು. ಈಗಿರುವ ರಾಜ್ಯ ಸರ್ಕಾರ ಸಹ ಗ್ಯಾರಂಟಿ ಹಿಂದೆಯೇ ತೇಲಾಡುತ್ತಿದೆ. ರೈತ ವಿರೋಧಿ ಕಾಯ್ದೆ ವಾಪಸ್ ಪಡೆಯುವಂತೆ ಮನವಿ ಮಾಡಿದ್ದರೂ ಸ್ಪಂದಿಸಿಲ್ಲ’ ಎಂದು ದೂರಿದರು.

‘ಚರ್ಚಿಸಿ ನಿರ್ಧಾರ’

‘ಹೋರಾಟಗಾರರು 18 ಹಕ್ಕೊತ್ತಾಯಗಳನ್ನು ಮುಂದಿಟ್ಟಿದ್ದಾರೆ. ಸರ್ಕಾರದ ಹಂತದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

‘ಕಂದಾಯ ಇಲಾಖೆಗೆ ಸಂಬಂಧಿಸಿದ ವಿಚಾರಗಳೂ ಇವೆ. ಶೀಘ್ರದಲ್ಲೇ ಹೋರಾಟಗಾರ ಜತೆಗೂ ಸಭೆ ನಡೆಸಲಾಗುವುದು. ಕಾರ್ಮಿಕರು, ಭೂಮಿ ರಹಿತರು ಸೇರಿದಂತೆ ನಾನಾ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿ ಗಮನಕ್ಕೆ ತಂದಿದ್ದೇನೆ’ ಎಂದು ಕೃಷ್ಣ ಬೈರೇಗೌಡ ಅವರು ಹೇಳಿದರು.

ಕೇಬಲ್ ಸಂಕಷ್ಟ..

ಚಿತ್ರ ಕಳುಹಿಸಿ: ನಗರದ ಹಲವೆಡೆ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳನ್ನು ಸುತ್ತಲಾಗಿದೆ. ಪಾದಚಾರಿ ಮಾರ್ಗದಲ್ಲಿ ನಾಗರಿಕರಿಗೆ ಇವು ಸಂಕಷ್ಟ ಉಂಟುಮಾಡಿವೆ. ಅಂತಹ ಅಪಾಯಕಾರಿ ಸ್ಥಳಗಳ ಚಿತ್ರಗಳನ್ನು ವಿಳಾಸದೊಂದಿಗೆ ವಾಟ್ಸ್‌ಆ್ಯಪ್ ಮಾಡಿ... 96060 38256

ಮಾಗಡಿ ರಸ್ತೆಯ ಕೆಂಪಾಪುರ ಅಗ್ರಹಾರ ವಾರ್ಡ್ ಸಂಖ್ಯೆ 122ರ 8ನೇ ಅಡ್ಡರಸ್ತೆಯ ಬಳಿ ಇರುವ ವಿದ್ಯುತ್ ಕಂಬದಲ್ಲಿನ ಕೇಬಲ್‌ಗಳು ಅಪಾಯಕಾರಿ ರೀತಿಯಲ್ಲಿ ನೇತಾಡುತ್ತಿದ್ದು, ಪಾದಚಾರಿಗಳ ಸಂಚಾರಕ್ಕೆ ಸಂಚಕಾರ ಬಂದಿದೆ.
ಚಿತ್ರ ಕಳುಹಿಸಿದವರು: ಉಮಾಶಂಕರ ಬಾಬು



ಚಾಮರಾಜಪೇಟೆಯ ಕಾವೇರಿಬಾಯಿ ಲೇಔಟ್‌ನ 6ನೇ ಕ್ರಾಸ್ 5ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್ ಕಂಬದಲ್ಲಿನ ಕೇಬಲ್ ಕೈಗೆಟಕುವ ಮಟ್ಟದಲ್ಲಿದ್ದು, ಅಪಾಯ ಸಂಭವಿಸುವ ಮುನ್ನ ಬೆಸ್ಕಾಂ ಸಿಬ್ಬಂದಿ ತೆರವುಗೊಳಿಸಬೇಕು.
ಚಿತ್ರ ಕಳುಹಿಸಿದವರು: ರವಿಪ್ರಕಾಶ್

ಸುಬ್ರಹ್ಮಣ್ಯನಗರದ ಬಿಬಿಎಂಪಿ ಸಮುದಾಯಭವನದ ಹಿಂದಿನ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ಟ್ರಾನ್ಸ್‌ಫಾರ್ಮ್‌ಗಳಿಂದ ಕೇಬಲ್‌ಗಳು ಹೊರ ಬಂದಿವೆ. ಇದಕ್ಕೆ ಯಾವುದೇ ಸುರಕ್ಷತೆ ಕ್ರಮಗಳನ್ನು ಕೈಗೊಂಡಿಲ್ಲ. ಕೂಡಲೇ ಈ ಟ್ರಾನ್ಸ್‌ಫಾರ್ಮ್‌ಗೆ ಬ್ಯಾರಿಕೇಡ್ ನಿರ್ಮಿಸಬೇಕು.
ಚಿತ್ರ ಕಳುಹಿಸಿದವರು: ಚಂಗರೆಡ್ಡಿ

ವರದಿ ಪರಿಣಾಮ

ಎನ್‌. ನಾಗನಹಳ್ಳಿಯ ಎಂ.ಸಿ.ಎಸ್‌. ಕನ್ವೆನ್ಷನ್ ಹಾಲ್ ಕೆಂಪೇಗೌಡ ಬಡಾವಣೆಯಲ್ಲಿ ಕೈಗೆಟುಕುವ ಮಟ್ಟದಲ್ಲಿದ್ದ ಕೇಬಲ್‌ಗಳನ್ನು ಬೆಸ್ಕಾಂ ಸಿಬ್ಬಂದಿ ತೆರವುಗೊಳಿಸಿದರು.

ಚಾಮರಾಜಪೇಟೆಯ ವೇಲುಮುರುಗಪುರ, ಭಕ್ಷಿಗಾರ್ಡನ್‌ಗಳಲ್ಲಿ ಅಪಾಯಕಾರಿಯಾಗಿ ನೇತಾಡುತ್ತಿದ್ದ ವಿದ್ಯುತ್ ತಂತಿಗಳನ್ನು ಬೆಸ್ಕಾಂ ತೆರವುಗೊಳಿಸಿದೆ.

ಅರಮನೆ ರಸ್ತೆಯಲ್ಲಿರುವ ಶಾಂಘ್ರಿ–ಲಾ ಹೋಟೆಲ್ ಮುಂಭಾಗದ ವೃತ್ತದಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಅಪಾಯಕಾರಿಯಾಗಿದ್ದ ತಂತಿಗಳನ್ನು ಬೆಸ್ಕಾಂ ಸಿಬ್ಬಂದಿ ತೆರವುಗೊಳಿಸಿ ಬ್ಯಾರಿಕೇಡ್ ಅಳವಡಿಸಿದ್ದಾರೆ.

ಅಪಘಾತ: ಪರಿಹಾರ ಮೊತ್ತ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ (ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ) ಮತ್ತು ಬೈಕ್ ಮಧ್ಯೆ ಕನಕಪುರದಲ್ಲಿ ನಡೆದಿದ್ದ ರಸ್ತೆ ಅಪಘಾತವೊಂದರಲ್ಲಿ ಬೈಕ್ ಚಾಲಕನದ್ದೇ ತಪ್ಪು ಎಂಬ ಅಭಿಪ್ರಾಯದೊಂದಿಗೆ, ಹೈಕೋರ್ಟ್, ಪರಿಹಾರ ನ್ಯಾಯಮಂಡಳಿ ನಿಗದಿ ಮಾಡಿದ್ದ ₹ 3.4 ಲಕ್ಷ ಮೊತ್ತದ ಪರಿಹಾರವನ್ನು ₹ 85 ಸಾವಿರಕ್ಕೆ ಇಳಿಸಿದೆ.

ಈ ಸಂಬಂಧ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಲಲಿತಾ ಕನ್ನೆಗಂಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ಬೈಕ್ ಚಾಲಕ ವೀರಭದ್ರ ಅವರಿಗೆ ಶೇ 6ರ ಬಡ್ಡಿ ಸೇರಿಸಿ ₹ 84,500 ಪರಿಹಾರ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಈ ಮೊದಲು ಪ್ರಕರಣದ ವಿಚಾರಣೆ ನಡೆಸಿದ್ದ ‘ಮೋಟಾರು ವಾಹನ ಅಪಘಾತ ಪರಿಹಾರ ಮಂಡಳಿ‘ ‘ಕೆಎಸ್‌ಆರ್‌ಟಿಸಿ ಬಸ್ ಚಾಲಕನದ್ದು ಶೇ 90ರಷ್ಟು ಮತ್ತು ಬೈಕ್ ಚಾಲಕನದ್ದು ಶೇ 10ರಷ್ಟು ತಪ್ಪಿದೆ‘ ಎಂಬ ತೀರ್ಮಾನಕ್ಕೆ ಬಂದಿತ್ತು. ನಂತರ ಬೈಕ್ ಚಾಲಕನಿಗೆ ₹ 3.4 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್, ‘ಘಟನಾ ಸ್ಥಳದ ಮಹಜರು, ಫೋಟೊ ಮತ್ತು ಸಾಕ್ಷ್ಯಗಳನ್ನು ಆಧರಿಸಿ ಶೇ 75ರಷ್ಟು ತಪ್ಪು ಬೈಕ್ ಸವಾರನದ್ದೇ ಆಗಿದೆ‘ ಎಂಬ ಅಭಿಪ್ರಾಯದೊಂದಿಗೆ ಪರಿಹಾರದ ಮೊತ್ತವನ್ನು ಇಳಿಕೆ ಮಾಡಿದೆ.

ಪ್ರಕರಣವೇನು?

ಅಪಘಾತವು 2008ರ ಮಾರ್ಚ್ 4ರಂದು ನಡೆದಿತ್ತು. ಸಾತನೂರಿಂದ ಕನಕಪುರದ ಕಡೆಗೆ ಹೊರಟ್ಟಿದ್ದ ಕೆಎಸ್‌ಆರ್‌ಟಿಸಿ ಬಸ್ ಚಿಕ್ಕಗೌಡನಹಳ್ಳಿ ಬಳಿ ವೇಗವಾಗಿ ಬಂದು ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಕನಕಪುರದ ನಿವಾಸಿಯಾದ ವೀರಭದ್ರ ಅಪಘಾತದಲ್ಲಿ ಗಾಯಗೊಂಡಿದ್ದರು.

’ಈ ಅಪಘಾತಕ್ಕೆ ಬಸ್ ಚಾಲಕನ ನಿರ್ಲಕ್ಷವೇ ಕಾರಣವಾಗಿದ್ದು, ನನಗೆ ₹ 10 ಲಕ್ಷ ಪರಿಹಾರ ಕೊಡಿಸಬೇಕು‘ ಎಂದು ಕೋರಿ ವೀರಭದ್ರ ‘ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಮಂಡಳಿ‘ಗೆ ಅರ್ಜಿ ಸಲ್ಲಿಸಿದ್ದರು.

ನ್ಯಾಯಮಂಡಳಿ, ‘ಅಪಘಾತಕ್ಕೆ ಕೆಎಸ್‌ಆರ್‌ಟಿಸಿ ಬಸ್ ಚಾಲಕನದ್ದು ಶೇ 90ರಷ್ಟು ಮತ್ತು ಬೈಕ್ ಸವಾರನದ್ದು ಶೇ 10ರಷ್ಟು ತಪ್ಪಿದೆ‘ ಎಂದು ತೀರ್ಮಾನಿಸಿ ಬೈಕ್ ಚಾಲಕನಿಗೆ ₹ 3.4 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿತ್ತು.

ನಕಲಿ ಟಿಕೆಟ್: ಸಿಕ್ಕಿಬಿದ್ದ ಯುವತಿ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1ಕ್ಕೆ ಸ್ನೇಹಿತನನ್ನು ಬಿಳ್ಕೊಡಲು ಭಾನುವಾರ ನಕಲಿ ಟಿಕೆಟ್‌ನೊಂದಿಗೆ ಬಂದಿದ್ದ ಯುವತಿ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾಳೆ.

ಜಾರ್ಖಂಡ್ ಮೂಲದ ಹರ್‌ಪ್ರೀತ್ ಕೌರ್ ಸೈನಿ ತಮ್ಮ ಸ್ನೇಹಿತ ಆಯುಷ್ ಶರ್ಮಾ ಎಂಬುವರನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟು ಹೋಗಲು ಬಂದಿದ್ದರು.

ಸಿಐಎಸ್‌ಎಫ್ ಭದ್ರತಾ ಸಿಬ್ಬಂದಿಗೆ ತಾನೇ ಸೃಷ್ಟಿಸಿದ್ದ ನಕಲಿ ಪಾಸ್ ತೋರಿಸಿ ಟರ್ಮಿನಲ್ 1ರ 5ಎ ದ್ವಾರದಿಂದ ಸ್ನೇಹಿತನೊಂದಿಗೆ ಒಳ ಪ್ರವೇಶಿಸಿದ್ದಾಳೆ.

ಭದ್ರತಾ ಸರದಿಯಲ್ಲಿದ್ದಾಗ ಟಿಕೆಟ್ ತೋರಿಸುತೆ ಭದ್ರತಾ ಸಿಬ್ಬಂದಿ ಸೂಚಿಸಿದಾಗ ಲ್ಯಾಪ್‌ಟಾಪ್ ಅನ್ನು ಟರ್ಮಿನಲ್ 1ರ ಹೊರಗಡೆ ಮರೆತು ಬಂದಿದ್ದೇನೆ ಎಂದು ಸುಳ್ಳು ಹೇಳಿದ್ದಾಳೆ.

ಆಕೆ ಬಳಿ ಇದ್ದ ದಾಖಲೆ ಪರಿಶೀಲಿಸಿದಾಗ ಅವೆಲ್ಲವೂ ನಕಲಿ ಎಂದು ಗೊತ್ತಾಗಿದೆ. ಯುವತಿಯನ್ನು ವಿಚಾರಣೆಗೆ ಒಳಪಡಿಸಿದಾಗ ತಾನೇ ಕಂಪ್ಯೂಟರ್‌ನಲ್ಲಿ ತಯಾರಿಸಿರುವುದಾಗಿ ಒಪ್ಪಿಕೊಂಡಿದ್ದಾಳೆ. ಯುವತಿಯನ್ನು ವಶಕ್ಕೆ ಪಡೆದ ಸಿಐಎಸ್‌ಎಫ್ ಸಿಬ್ಬಂದಿ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 465, 471, 448 ಅಡಿ ವಂಚನೆಯ ಉದ್ದೇಶಕ್ಕೆ ನಕಲಿ ದಾಖಲೆ ಸೃಷ್ಟಿ ಮತ್ತು ಅತಿಕ್ರಮ ಪ್ರವೇಶ ದೂರು ದಾಖಲಿಸಿದ್ದಾರೆ.

ಎಚ್‌.ಎಲ್‌. ನಾಗೇಗೌಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಕ್ತವತ್ಸಲ ರೆಡ್ಡಿ

‘ಜಾನಪದಕ್ಕೆ ರಾಜ್ಯದಲ್ಲಷ್ಟೇ ಪ್ರೋತ್ಸಾಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನಪದ ಕಲೆಗಳು ದಕ್ಷಿಣ ಭಾರತದಲ್ಲಿ ಶ್ರೀಮಂತವಾಗಿವೆ. ಆದರೆ, ಅವುಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಬೆಳೆಸುವ ಕಾರ್ಯ ಕರ್ನಾಟಕ ಬಿಟ್ಟು ಬೇರೆ ರಾಜ್ಯಗಳಲ್ಲಿ ನಡೆಯುತ್ತಿಲ್ಲ ಎಂದು ಜನಪದ ವಿದ್ವಾಂಸ ಎನ್. ಭಕ್ತವತ್ಸಲ ರೆಡ್ಡಿ ವಿಷಾದಿಸಿದರು.

ನಗರದಲ್ಲಿ ಸೋಮವಾರ ನಡೆದ ತೂರ್ಪು ಭಾಗವತಂ ಕಲಾವಿದ ದೇವಗುಪ್ತಪು ವೀರವೆಂಕಟ ಜಗನ್ನಾದ ರಾವ್ ಅವರಿಗೆ ‘ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಜಾನಪದ ಪರಿಷತ್ತು ಇದೆ, ಜಾನಪದ ಅಕಾಡೆಮಿ ಇದೆ, ಜಾನಪದ ವಿಶ್ವವಿದ್ಯಾಲಯ ವಿದೆ. ಎಲ್ಲ ಜನಪದ ಕಲಾ ಪ್ರಕಾರಗಳಿಗೆ ಇಲ್ಲಿ ಪ್ರಾಮುಖ್ಯ ನೀಡಲಾಗಿದೆ. ಉಳಿದ ರಾಜ್ಯಗಳಲ್ಲಿಯೂ ಈ ಕೆಲಸ ಆಗಬೇಕಿದೆ ಎಂದು ಹೇಳಿದರು.

‘ಇಂದು ಪ್ರಶಸ್ತಿ ಸ್ವೀಕರಿಸಿರುವ ದೇವಗುಪ್ತಪು ವೀರವೆಂಕಟ ಜಗನ್ನಾದ ರಾವ್ ಅವರು ಆಂಧ್ರಪ್ರದೇಶದ ‘ತೂರ್ಪು ಭಾಗವತಂ’ ಎಂಬ ಪ್ರಾಚೀನ ಕಲೆಯ ಮೃದಂಗ ಕಲಾವಿದರು. ಅವರು ಏಕಕಾಲಕ್ಕೆ ಮೂರು ಮೃದಂಗಗಳನ್ನು ನುಡಿಸುತ್ತಾ ಹಾಡಬಲ್ಲ ವಿಶಿಷ್ಟ ಪ್ರತಿಭೆ. ವಿಶಾಖಪಟ್ಟಣ ಮತ್ತು ವಿಜಯನಗರ ಸುತ್ತಮುತ್ತಲಿನ ಪರಿಸರದಲ್ಲಷ್ಟೇ ಇರುವ ಅಳಿವಿನಂಚಿಗೆ ತಲುಪಿರುವ ಈ ಕಲೆಯನ್ನು ಜಗನ್ನಾದ ರಾವ್ ಕುಟುಂಬ ಉಳಿಸಿಕೊಂಡು ಬಂದಿದೆ’ ಎಂದು ವಿವರಿಸಿದರು.

ಕರ್ನಾಟಕ ಜಾನಪದ ಪರಿಷತ್ತು ನೀಡುವ ಎಚ್‌.ಎಲ್‌. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಯನ್ನು ತೂರ್ಪು ಭಾಗವತಂ ಮೃದಂಗ ಕಲಾವಿದ ದೇವುಗುಪ್ತಪು ವೀರವೆಂಕಟ ಜಗನ್ನಾದ ರಾವ್ ಅವರಿಗೆ ಸಾಹಿತಿ ಚಂದ್ರಶೇಖರ ಕಂಬಾರ ಪ್ರದಾನ ಮಾಡಿದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಸಾಹಿತಿ ಚಂದ್ರಶೇಖರ ಕಂಬಾರ, ‘ಜನಪದಕ್ಕೆ ಇತ್ತೀಚೆಗೆ ಸರ್ಕಾರ, ವಿವಿಧ ಸಂಘ ಸಂಸ್ಥೆಗಳು ಪ್ರೋತ್ಸಾಹ ನೀಡುತ್ತಿವೆ. ಹಿಂದೆ ಇಂಥ ಪ್ರೋತ್ಸಾಹ ಇರಲಿಲ್ಲ. ಆ ಕಾಲದಲ್ಲಿ ಜಾನಪದ ಪರಿಷತ್ ಕಟ್ಟಿ ಜನಪದ–ಲೋಕವನ್ನೇ ಅನಾವರಣಗೊಳಿಸಿದ ನಾಗೇಗೌಡರ ಕೆಲಸ ದೇಶದಲ್ಲೆಲ್ಲೂ ಆಗಿಲ್ಲ. ನಮ್ಮ ಜನಪದ ಕಲೆಗಳನ್ನು ದೇಶ, ವಿದೇಶದ ಜನರಿಗೆ ಪರಿಚಯಿಸುವ ಕೆಲಸ ಅವರಿಂದಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ಸಂಸ್ಥಾನದ ವಿಜಯನಗರ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಹಿ.ಶಿ. ರಾಮಚಂದ್ರೇಗೌಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಧ್ಯಕ್ಷ ಹಿ.ಚಿ. ಬೋರಲಿಂಗಯ್ಯ, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್, ಪರಿಷತ್ತಿನ ನಗರ ಜಿಲ್ಲಾಧ್ಯಕ್ಷ ಟಿ.ತಿಮ್ಮೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತ ಪಾಟೀಲ್ ಇದ್ದರು.

ಕಾರ್ಯಕ್ರಮದ ಬಳಿಕ ದೇವಗುಪ್ತಪು ವೀರವೆಂಕಟ ಜಗನ್ನಾದ ರಾವ್ ಮತ್ತು ತಂಡದಿಂದ ‘ಸತ್ಯಭಾಮಾ ಕಲಾಪ’ ಪ್ರದರ್ಶನ ನಡೆಯಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

WANTED BUSINESS
Partners Saree Business 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT
And Finance Available On Low Interest Against Properties, Land& Building,Sites,Flats,Converted& Agriculture Lands
Call:7204995189

PERSONAL

Others

WANTED
CA Inter / M.Com Candidate
Having good Accounting & English skills for a growing FMCG company, having interest in NBFC's and Retail business.
Interested candidates may apply on
ceetafmcg@gmail.com
9632215753

Lost

DOCUMENT LOST
I, SYED TANZEEM AGA, have lost my original sales deed Document No: 2045/2007, 832/2008 and GPA documents No.247/2017, situated at, # 9/43, Mavanalla Ooty, Niligiris - 643211. While travelling. Finder please contact or return to this address # 13, Rest House Cresent Road, Bangalore-01. Mob: 6300940200.

Change of Name

I, MURALIDHARA .P S/o Thippanna.P R/at #968, 9th Main, 20th Cross, 7th Sector, HSR Layout, Bengaluru South, Bengaluru- 560102. Have changed my name from Muralidhara .P To Muralidhar. P vide affidavit dated 25-11-2023 before Notary M. Devaraja. Chintamani.

I, RAJANI RAJESH residing at No.7, S.K.Nivas, Muneswara Temple Street, Muneswara Temple, Subbayanapalya, Bangalore-33 have changed my name to REJANI RAJESH vide affidavit dated 28-10-2023 before Notary Uday Kumar.K., Bangalore

I, SATISH CHANDRA KAMATH MAJESHWAR R/o.No.C115 Raghuram Residency.#30 MSR Road,Gokula Bangalore-560054 have changed my Name to SATISH CHANDRA KAMATH vide affidavit dated:25.11.2023 before Notary Ambika,S. Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಮಕ್ಕಳ ಮಾರಾಟ ದಂಧೆ ಸಕ್ರಿಯ: ನಾಲ್ವರು ಆರೋಪಿಗಳ ಬಂಧನ

₹8 ಲಕ್ಷಕ್ಕೆ ಮಕ್ಕಳ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರೂಣ ಲಿಂಗಪತ್ತೆ ಹಾಗೂ ಗರ್ಭಪಾತ ಪ್ರಕರಣದ ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿಯೇ ನಗರದಲ್ಲಿ ಮಕ್ಕಳ ಮಾರಾಟ ಜಾಲ ಸಕ್ರಿಯ ಆಗಿರುವುದು ಪತ್ತೆಯಾಗಿದೆ.

ಸಿಸಿಬಿ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ತಮಿಳುನಾಡಿನ ಈರೋಡ್ ಮುರುಗೇಶ್ವರಿ(22), ಕಣ್ಣನ್ ರಾಮಸ್ವಾಮಿ(51), ಹೇಮಲತಾ (27), ಶರಣ್ಯಾ (33) ಎಂಬುವರನ್ನು ಆರ್.ಆರ್.ನಗರದ ರಾಜರಾಜೇಶ್ವರಿ ದೇವಸ್ಥಾನದ ಬಳಿ ಬಂಧಿಸಲಾಗಿದೆ.

ಬೆಂಗಳೂರು ನಿವಾಸಿ, ಪ್ರಮುಖ ಆರೋಪಿ ಮಹಾಲಕ್ಷ್ಮಿಗೆ ಶೋಧ ಕಾರ್ಯ ಮುಂದುವರಿದಿದೆ. ಕಾರ್ಯಾಚರಣೆಯಲ್ಲಿ ಮುರುಗೇಶ್ವರಿ ಬಳಿಯಿದ್ದ 20 ದಿನದ ಹಸುಗೂಸು ರಕ್ಷಿಸಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವ್ಯಾಪಿಸಿದ ಜಾಲ: ‘ತಲೆಮರೆಸಿಕೊಂಡಿರುವ ಮಹಾಲಕ್ಷ್ಮಿ, ಮಕ್ಕಳ ಮಾರಾಟ ದಂಧೆಯ ಮಧ್ಯವರ್ತಿಯಾಗಿದ್ದಳು. ಆಕೆಗೆ ಕೆಲವು ವೈದ್ಯರು ಹಾಗೂ ಮಕ್ಕಳಾಗದ ದಂಪತಿ ಪರಿಚಯವಿತ್ತು. ಮಕ್ಕಳಾಗದ ದಂಪತಿಗೆ ₹5ರಿಂದ ₹8 ಲಕ್ಷಕ್ಕೆ ಹಸುಗೂಸುಗಳನ್ನು ಮಾರಾಟ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಮುರುಗೇಶ್ವರಿಗೆ ಮಗುವೊಂದನ್ನು ರಾಜರಾಜೇಶ್ವರಿ ದೇವಸ್ಥಾನದ ಬಳಿಗೆ ತರುವಂತೆ ಮಹಾಲಕ್ಷ್ಮಿ ಸೂಚಿಸಿದ್ದಳು. ಅದರಂತೆ ನ.24ರಂದು ಹಸುಗೂಸು ಜತೆಗೆ ನಾಲ್ವರು ರಾಜರಾಜೇಶ್ವರಿ ದೇವಸ್ಥಾನ ಬಳಿ ಬಂದಾಗ ನಾಲ್ವರನ್ನು ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಮುರುಗೇಶ್ವರಿ ಅವಿವಾಹಿತೆ ಎಂಬುದು ಗೊತ್ತಾಗಿದ್ದು ಆಕೆಯ ಬಳಿಯಿದ್ದ ಮಗು ಯಾರದ್ದು ಎಂಬುದು ಕುರಿತು ತನಿಖೆ ನಡೆಸಲಾಗುತ್ತಿದೆ. ಮಗುವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಮಗು ಯಾರದ್ದು ಎಂಬುದನ್ನು ಪತ್ತೆ ಮಾಡಲಾಗುವುದು ಎಂದು ಪೊಲೀಸರು ಹೇಳಿದರು.

ಆರೋಪಿಗಳನ್ನು ಸಿಸಿಬಿ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದು, 60ಕ್ಕೂ ಹೆಚ್ಚು ಮಕ್ಕಳನ್ನು ಮಾರಾಟ ಮಾಡಿರುವುದು ಗೊತ್ತಾಗಿದೆ. ಆರೋಪಿಗಳು ಮಕ್ಕಳಿಲ್ಲದ ದಂಪತಿಗೆ ಮಕ್ಕಳನ್ನು ಮಾರಾಟ ಮಾಡುತ್ತಿದ್ದರು. ಎಲ್ಲಿಂದ ಮಕ್ಕಳನ್ನು ಕಳವು ಮಾಡಿಕೊಂಡು ತರುತ್ತಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಪೋಷಕರಿಗೆ ನೋಟಿಸ್

ಭ್ರೂಣ ಲಿಂಗಪತ್ತೆ ಹಾಗೂ ಗರ್ಭಪಾತ ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳ ಹೇಳಿಕೆ ಆಧರಿಸಿ, ಕೆಲವು ಪೋಷಕರಿಗೆ ನೋಟಿಸ್ ನೀಡಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಹೆಣ್ಣು ಭ್ರೂಣ ಪತ್ತೆ ಮಾಡಿಸಿ, ಗರ್ಭಪಾತ ಮಾಡಿಸಿಕೊಂಡ ಪೋಷಕರ ಮಾಹಿತಿಯನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ.

ಬಂಧಿತ ವೈದ್ಯ ಚಂದನ್ ಬಲ್ಲಾಳ್ ಆಸ್ಪತ್ರೆಯಲ್ಲಿರುವ ರಿಜಿಸ್ಟ್ರಾರ್ ಪುಸ್ತಕ, ಕಂಪ್ಯೂಟರ್ ಸೇರಿದಂತೆ ದಾಖಲಾತಿಗಳನ್ನು ವಶಕ್ಕೆ ಪಡೆಯಲಾಗಿದೆ. ಅವುಗಳಲ್ಲಿ ಅಂದಾಜು 100ಕ್ಕೂ ಅಧಿಕ ಪೋಷಕರ ಮಾಹಿತಿ ದೊರಕಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳ ವಿಚಾರಣೆಯಲ್ಲಿ ಯಾವೆಲ್ಲ ಜಿಲ್ಲೆಗಳ ಗರ್ಭಿಣಿಯರಿಗೆ ಗರ್ಭಪಾತ ಮಾಡಿಸಲಾಗಿದೆ ಎಂಬ ಮಾಹಿತಿ ನೀಡಿದ್ದಾರೆ. ಈ ಆಧಾರದಲ್ಲಿ ಪೋಷಕರಿಗೆ ನೋಟಿಸ್ ನೀಡಲಾಗುವುದು. ಕಾನೂನು ಸಲಹೆ ಪಡೆದು ಗರ್ಭಪಾತ ಮಾಡಿಸಿಕೊಂಡ ಪೋಷಕರನ್ನು ಸಾಕ್ಷಿದಾರರನ್ನಾಗಿ ಮಾಡಬಹುದು ಅಥವಾ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡ್ರೋನ್ ಖರೀದಿ ಒಪ್ಪಂದ ಆಖೈರು

ನವದೆಹಲಿ(ಪಿಟಿಐ): ಶಕ್ತಿಶಾಲಿ ‘ಎಂಕ್ಯೂ-98’ ಪ್ರಿಡೇಟರ್ ಡ್ರೋನ್‌ಗಳ ಖರೀದಿ ಒಪ್ಪಂದವನ್ನು ಅಮೆರಿಕ ಮತ್ತು ಭಾರತ ಶೀಘ್ರವೇ ಅಂತಿಮಗೊಳಿಸಲಿವೆ.

31 ಸಶಸ್ತ್ರ ಡ್ರೋನ್‌ಗಳ ಖರೀದಿಗೆ ಸಂಬಂಧಿಸಿ ಮಾರ್ಚ್ ವೇಳೆಗೆ ಉಭಯ ದೇಶಗಳ ಸರ್ಕಾರಗಳ ಮಟ್ಟದಲ್ಲಿ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳಿಗೆ ಮುಂದಿನ ಕೆಲ ವಾರಗಳಲ್ಲಿ ಅಮೆರಿಕ ಸಂಸತ್ ಅಧಿಕೃತ ಮುದ್ರೆ ಒತ್ತುವ ನಿರೀಕ್ಷೆ ಇದೆ ಎಂದು ಮೂಲಗಳು ಹೇಳಿವೆ.

ರಕ್ಷಣಾ ವ್ಯವಸ್ಥೆಗಳನ್ನು ತಯಾರಿಸುವ ಅಮೆರಿಕದ ಜನರಲ್ ಅಟೊಮಿಕ್ಸ್ (ಜಿಎ) ಕಂಪನಿಯು ಈ ಅತ್ಯಾಧುನಿಕ ಡ್ರೋನ್‌ಗಳನ್ನು ಪೂರೈಕೆ ಮಾಡಲಿದೆ.

ವರ್ಗಾವಣೆ ಸಂಭಾಷಣೆ ತನಿಖೆಗೆ ಆಗ್ರಹಿಸಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರ ನಿರ್ಮಾಪಕ, ಕಾಂಗ್ರೆಸ್ ಮುಖಂಡ ಉಮಾಪತಿ ಶ್ರೀನಿವಾಸಗೌಡ ಹಾಗೂ ಸಾಮಾಜಿಕ ಕಾರ್ಯಕರ್ತ ವಿಜಯ್ ಡೆನ್ನಿಸ್ ಎಂಬುವರ ನಡುವೆ ಇನ್‌ಸ್ಪೆಕ್ಟರ್ ವರ್ಗಾವಣೆ ವಿಚಾರದಲ್ಲಿ ನಡೆದಿದೆ ಎಂದು ಹೇಳಲಾದ ಆಡಿಯೊ ಸಂಭಾಷಣೆ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಇದು ರಾಜಕೀಯ ವಲಯದಲ್ಲಿ ಸಂಚಲನ ಸೃಷ್ಟಿಸಿದೆ.

ಉಮಾಪತಿ ಅವರು ಕಳೆದ ಚುನಾವಣೆಯಲ್ಲಿ ಬೊಮ್ಮನಹಳ್ಳಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು.

ಸಂಭಾಷಣೆಯಲ್ಲಿ ಏನಿದೆ?: ಇನ್‌ಸ್ಪೆಕ್ಟರ್ ವರ್ಗಾವಣೆ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಅದೇ ಠಾಣೆಯಲ್ಲಿ ಉಳಿಯುವ ವಿಚಾರ, ಸಚಿವರೊಬ್ಬರಿಗೆ ಹಣ ನೀಡಿರುವುದು, ನಾನು ಹೇಳಿದರೆ ಸರ್ಕಾರದ ಹಂತದಲ್ಲಿ ಕೆಲಸ ಆಗುವ ಕುರಿತು ಪ್ರಸ್ತಾಪಿಸಲಾಗಿದೆ.

ಈ ಆಡಿಯೊ ಬಹಿರಂಗವಾದ ಮೇಲೆ ಉಮಾಪತಿ ಅವರು ತನಿಖೆಗೆ ಆಗ್ರಹಿಸಿ ಎಚ್‌ಎಸ್‌ಆರ್ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ಉಮಾಪತಿ, ‘ಕಾನೂನು ಹೋರಾಟ ನಡೆಸುತ್ತೇನೆ. ನನ್ನ ವಿರುದ್ಧ ಷಡ್ಯಂತ್ರ ಮಾಡಲಾಗಿದೆ. ಆ ಇನ್‌ಸ್ಪೆಕ್ಟರ್ ಯಾರು ಎಂದು ಆತ ತಿಳಿಸಬೇಕು’ ಎಂದು ಆಗ್ರಹಿಸಿದರು.

‘ಯಾರು ತಪ್ಪಿತಸ್ಥರಿದ್ದಾರೆ ಅವರ ವಿರುದ್ಧ ಕ್ರಮ ಆಗಬೇಕು. ಅಲ್ಲಿ ತನಕ ಹೋರಾಟ ನಿರಂತರ. ಡಿಸಿಪಿ, ನಗರ ಪೊಲೀಸ್ ಆಯುಕ್ತರು, ಲೋಕಾಯುಕ್ತಕ್ಕೂ ದೂರು ಕೊಡುತ್ತೇನೆ’ ಎಂದು ಹೇಳಿದರು.

ತಾಲ್ಲೂಕು ಕಚೇರಿಗೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ನೆಲಮಂಗಲ: ರೈತರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಜಿಲ್ಲಾಡಳಿತ ನಿರ್ಲಕ್ಷ್ಯ ತೋರುತ್ತಿದೆ ಎಂದು ಆರೋಪಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದವರು ಜಂಟಿಯಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ಕಬ್ಬು, ಭತ್ತದ ಹುಲ್ಲು, ನೇಗಿಲನ್ನು ಹೊತ್ತು ಪ್ರವಾಸಿಮಂದಿರದಿಂದ ಪ್ರತಿಭಟನಾ ಮೆರವಣಿಗೆ ಹೊರಟ ರೈತರು ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಇದನ್ನು ತಡೆಯಲು ಮುಂದಾದ ಪೊಲೀಸರು ಮತ್ತು ರೈತರ ನಡುವೆ ತಳ್ಳಾಟ ಉಂಟಾಯಿತು. ತಾಲ್ಲೂಕು ಕಚೇರಿಗೆ ನುಗ್ಗಲು ಯತ್ನಿಸಿದವರನ್ನು ಪೊಲೀಸರು ತಡೆದು, ಗೇಟ್ ಎಳೆದು ಬೀಗ ಹಾಕಿದರು. ಗೇಟ್ ಎದುರೇ ಕುಳಿತ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿದರು.

ರೈತರ ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ ನಿರ್ಲಕ್ಷ್ಯ ತೋರುತ್ತಿದೆ ಎಂದು ಆರೋಪಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದ ಸದಸ್ಯರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪ್ರತಿಭಟನಾನಿರತ ರೈತರನ್ನು ಉದ್ದೇಶಿಸಿ ಮಾತನಾಡಿದ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ‘ರೈತರನ್ನು ವಂಚಿಸುವ ದಲ್ಲಾಳಿಗಳು ಮತ್ತು ಭೂಮಾಫಿಯಾದವರೊಂದಿಗೆ ಅಧಿಕಾರಿಗಳು ಕೈ ಜೋಡಿಸುತ್ತಿದ್ದಾರೆ. ರೈತರ ಕಂದಾಯ ದಾಖಲೆಗಳನ್ನು ಸರಿಪಡಿಸುವ ಬದಲಿಗೆ, ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದ ತಹಶೀಲ್ದಾರ್ ಅರುಂಧತಿ ಅವರನ್ನು ‘ಪ್ರತಿಭಟನೆ ಆಯೋಜಿಸಿರುವುದು ಗೊತ್ತಿದ್ದರೂ ಇದೇ ದಿನ ರಾಷ್ಟ್ರೀಯ ಕಿಸಾನ್ ಸಂಘದ ಜೊತೆ ಸಭೆ ಇಟ್ಟುಕೊಂಡು ನಾಟಕವಾಡುತ್ತಿದ್ದೀರಿ’ ಎಂದರು.

ನಂತರ ಸ್ಥಳಕ್ಕೆ ಭೇಟಿ ನೀಡಿದ ಉಪವಿಭಾಗಾಧಿಕಾರಿ ಎಂ.ಶ್ರೀನಿವಾಸ್, ’ಡಿ.4 ರಂದು ಜಿಲ್ಲಾಧಿಕಾರಿಯವರು ನೆಲಮಂಗಲದಲ್ಲಿ ಸಭೆ ನಡೆಸಿ ರೈತರ ಸಮಸ್ಯೆಗಳನ್ನು ಪರಿಹರಿಸುವರು’ ಎಂದು ಭರವಸೆ ನೀಡಿ, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ನಂತರ ರೈತರು ತಾತ್ಕಾಲಿಕವಾಗಿ ಪ್ರತಿಭಟನೆ ಹಿಂಪಡೆದರು.

ತಾಲ್ಲೂಕು ಅಧ್ಯಕ್ಷ ರಾಜೇಶ್, ಪ್ರಧಾನ ಕಾರ್ಯದರ್ಶಿ ಗುರುಮೂರ್ತಿ, ರವೀಂದ್ರ, ಜಗದೀಶ್, ಸೋಮಶೇಖರ್, ಅತಹಳ್ಳಿ ದೇವರಾಜ್, ಹಳ್ಳಿಕೆರೆಹುಂಡಿ ಭಾಗ್ಯರಾಜ್ ಇದ್ದರು.

ಅಂತರ ಅಪಾರ್ಟ್‌ಮೆಂಟ್ ಕ್ರೀಡೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆಬಿಜಿ ಸ್ವಯಂ ಸೇವಕರು ಮತ್ತು ಅಪಾರ್ಟ್‌ಮೆಂಟ್ ನಿವಾಸಿಗಳು ಬ್ಯಾಟರಾಯನಪುರ ಕ್ಷೇತ್ರದ ವಿವಿಧ ಬಡಾವಣೆಗಳಲ್ಲಿ ಆಯೋಜಿಸಿದ್ದ ಅಂತರ ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವಕ್ಕೆ ಕಂದಾಯ ಸಚಿವ ಕೃಷ್ಣಬೈರೇಗೌಡ ಜಕ್ಕೂರಿನ ಅರ್ಕಾವತಿ ಬಡಾವಣೆಯಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ 110 ಅಪಾರ್ಟ್‌ಮೆಂಟ್‌ಗಳ 1,500ಕ್ಕೂ ಹೆಚ್ಚು ಜನ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದಾರೆ. ಇದರಿಂದ, ಇಲ್ಲಿನ ನಿವಾಸಿಗಳಿಗೆ ತಮ್ಮ ಸುತ್ತಮುತ್ತಲಿನ ನಿವಾಸಿಗಳ ಪರಿಚಯವಾಗಲಿದೆ. ಬೆಂಗಳೂರಿನಲ್ಲಿ ಪ್ರಥಮವಾಗಿ ಇಂತಹ ಕ್ರೀಡಾ ಉತ್ಸವ ಆಯೋಜಿಸಿರುವುದು ಶ್ಲಾಘನೀಯ’ ಎಂದರು.

ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಪಳನಿ ವೆಂಕಟೇಶ್, ವಿ.ಹರಿ, ಆರ್.ಎಂ. ಶ್ರೀನಿವಾಸ್, ಎಚ್.ಎ. ಶಿವಕುಮಾರ್, ಟಿ.ಎಂ. ಶ್ರೀನಿವಾಸ್, ಟಿ.ಎನ್. ಮಹೇಶ್ ಕುಮಾರ್ ಇದ್ದರು.

ಜಕ್ಕೂರಿನ ಅರ್ಕಾವತಿ ಬಡಾವಣೆಯಲ್ಲಿ ಬ್ಯಾಟಿಂಗ್ ಮಾಡುವ ಮೂಲಕ ಅಂತರ ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವಕ್ಕೆ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಿದರು

‘ಭದ್ರತೆ’ಗಾಗಿ ವಿಮೆ ಮಾಡಿಸಿದ್ದವರಿಗೇ ‘ಅಭದ್ರತೆ’

ವಿಮೆದಾರರಿಗೆ ‘ಗಾಳ’: ಅಧಿಕ ಮೊತ್ತದ ಆಮಿಷ

• ಆದಿತ್ಯ ಕೆ.ಎ.

ಬೆಂಗಳೂರು: ವಿಮೆದಾರರಿಗೆ ಗಾಳ ಹಾಕಿ ವಂಚಿಸುವ ಜಾಲ ರಾಜ್ಯದಲ್ಲಿ ಸಕ್ರಿಯವಾಗಿದ್ದು, ಇಂಥವರಿಂದ ವಿಮೆದಾರರು ಲಕ್ಷಾಂತರ ರೂಪಾಯಿ ಕಳೆದುಕೊಳ್ಳುವಂತಾಗಿದೆ. ಹಣ ಕಳೆದುಕೊಂಡವರು ವಿವಿಧ ಸೈಬರ್ ಪೊಲೀಸ್ ಠಾಣೆಗಳ ಮೆಟ್ಟಿಲೇರುತ್ತಿದ್ದಾರೆ.

ಮಕ್ಕಳ ಶಿಕ್ಷಣ, ಮನೆ ನಿರ್ಮಾಣ, ನಿವೇಶನ ಖರೀದಿ, ವೃದ್ಧಾಪ್ಯದಲ್ಲಿ ಆರ್ಥಿಕ ಸಂಕಷ್ಟದಿಂದ ಪಾರಾಗಲು ಜನರು ಹಲವು ಖಾಸಗಿ ಕಂಪನಿಗಳಲ್ಲಿ ವಿವಿಧ ರೀತಿಯ ಪಾಲಿಸಿ ಮಾಡಿಸುತ್ತಾರೆ. ಆ ಪಾಲಿಸಿಗಳ ಅವಧಿ ಮುಕ್ತಾಯವಾದ ವಿಮೆದಾರರನ್ನು ಪತ್ತೆ ಮಾಡಿ ಅವರಿಗೆ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ಹಣ ಬರುವುದಾಗಿ ಆಮಿಷವೊಡ್ಡಿ ವಂಚಿಸುವ ಜಾಲ ಸಕ್ರಿಯವಾಗಿದೆ. ಆನ್‌ಲೈನ್ ಮೂಲಕ ಬ್ಯಾಂಕ್ ಖಾತೆಗೆ ಕನ್ನ ಹಾಕುತ್ತಿದ್ದ ಆರೋಪಿಗಳು, ಈಗ ವಿಮೆ ಪಾಲಿಸಿದಾರರ ಮೇಲೆ ಕಣ್ಣು ಹಾಕಿದ್ದಾರೆ.

‘ಈ ರೀತಿಯ ವಂಚನೆಯಲ್ಲಿ ಸುಶಿಕ್ಷಿತರೇ ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ’ ಎಂದು ಸೈಬರ್ ಠಾಣೆ ಪೊಲೀಸರು ಹೇಳಿದರು.

‘ಹೆಚ್ಚು ವಿಮೆ ಮಾಡಿಸಿದ್ದವರೇ ಗುರಿ’

ಬೆಂಗಳೂರಿನಲ್ಲೂ ಸಕ್ರಿಯವಾಗಿರುವ ಈ ಜಾಲ ದೊಡ್ಡ ಮೊತ್ತದ ಪಾಲಿಸಿ ಮಾಡಿಸಿದವರನ್ನೇ ಪತ್ತೆ ಮಾಡುತ್ತಿದೆ. ವಿಮಾ ಸಂಸ್ಥೆಯ ಹೆಸರಿನಲ್ಲೇ ಕರೆ ಮಾಡಿ ಪಾಲಿಸಿಗಿಂತ ಹೆಚ್ಚಿನ ಮೊತ್ತ ನೀಡುವುದಾಗಿ ಆಮಿಷ ಒಡ್ಡಲಾಗುತ್ತಿದೆ. ಶಿಕ್ಷಕರು, ಉದ್ಯಮಿಗಳು, ಸರ್ಕಾರಿ ಇಲಾಖೆ ಅಧಿಕಾರಿಗಳು, ನಿವೃತ್ತ ನೌಕರರನ್ನೇ ಗುರಿಯಾಗಿಸಿ ಈ ತಂಡವು ಸುಲಿಗೆ ಮಾಡುತ್ತಿದೆ ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ ವಿಶೇಷ

ಆದಾಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿಯೊಬ್ಬರು ಈ ಜಾಲಕ್ಕೆ ಸಿಲುಕಿ, ₹5 ಲಕ್ಷ ಕಳೆದುಕೊಂಡಿದ್ದಾರೆ. ಈ ಸಂಬಂಧ ಪಶ್ಚಿಮ ವಿಭಾಗದ ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

‘ನಾಗರಬಾವಿಯಲ್ಲಿ ನೆಲೆಸಿರುವ ನಿವೃತ್ತ ಅಧಿಕಾರಿ, ಆದಿತ್ಯ ಬಿರ್ಲಾ ವಿಮಾ ಕಂಪನಿಯಲ್ಲಿ ವಾರ್ಷಿಕವಾಗಿ ₹50 ಸಾವಿರ ಪಾವತಿಸುವ ಪಾಲಿಸಿ ಮಾಡಿಸಿದ್ದರು. ನವೆಂಬರ್ 8ಕ್ಕೆ ವಿಮಾ ಕಂತು ಪಾವತಿ ಅವಧಿ ಮುಕ್ತಾಯವಾಗಿ ಹಣ ವಾಪಸ್ ಪಡೆಯಲು ಮುಂದಾಗಿದ್ದರು. ಅದಕ್ಕಾಗಿ ಕಂಪನಿಯ ಏಜೆಂಟರನ್ನು ಸಂಪರ್ಕಿಸಲು ಗೂಗಲ್‌ನಲ್ಲಿ ಮೊಬೈಲ್ ಸಂಖ್ಯೆಗೆ ಹುಡುಕಾಟ ನಡೆಸಿದ್ದರು. ಗೂಗಲ್‌ನಲ್ಲಿ ಸಿಕ್ಕಿದ ಮೊಬೈಲ್ ಸಂಖ್ಯೆಗೆ ನಿವೃತ್ತ ಅಧಿಕಾರಿ ಕರೆ ಮಾಡಿದಾಗ, ಕರೆ ಸ್ವೀಕರಿಸಿದ ವ್ಯಕ್ತಿ ‘ತಾನು ಆದಿತ್ಯ ಬಿರ್ಲಾ ವಿಮಾ ಸಂಸ್ಥೆಯ ಪ್ರತಿನಿಧಿ’ ಎಂದು ಪರಿಚಯಿಸಿಕೊಂಡಿದ್ದ. ಅದಾದ ಮೇಲೆ ಆರ್.ಕೆ.ಮಿಶ್ರಾ ಎಂಬಾತನ ಮೊಬೈಲ್ ಸಂಖ್ಯೆ ನೀಡಿ ಕರೆ ಮಾಡುವಂತೆ ತಿಳಿಸಿದ್ದ’.

ಶುಲ್ಕದ ನೆಪದಲ್ಲಿ ಹಣ ಸುಲಿಗೆ: ‘ಮಿಶ್ರಾ ಎಂಬಾತನ ನಂಬರ್‌ಗೆ ಕರೆ ಮಾಡಿದಾಗ ತಾನು ಮುಂಬೈನ ಪ್ರಧಾನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು, ಪಾಲಿಸಿ ಹಣವನ್ನು ಬಡ್ಡಿ ಸಹಿತ ವಾಪಸ್ ನೀಡುವುದಾಗಿ ಹೇಳಿಕೊಂಡಿದ್ದ. ಬ್ಯಾಂಕ್ ಖಾತೆ ಸಂಖ್ಯೆ ಕಳುಹಿಸುವಂತೆ ತಿಳಿಸಿದ್ದ. ಬ್ಯಾಂಕ್ ಖಾತೆ ಸಂಖ್ಯೆ ಕಳುಹಿಸಿದ ಮೇಲೆ ಬ್ಯಾಂಕ್ ಸಿಬ್ಬಂದಿ ಸಂಪರ್ಕಿಸಿ ಹಣವಿರುವುದನ್ನು ಪತ್ತೆ ಮಾಡಿಕೊಂಡಿದ್ದ. ಅದಾದ ಮೇಲೆ ಕರೆ ಮಾಡಿ ಪಾಲಿಸಿಗಿಂತ ಹೆಚ್ಚಿನ ಹಣ ನೀಡುವುದಾಗಿ ಆಸೆ ತೋರಿಸಿದ್ದ. ಅರ್ಜಿ ವಿಲೇವಾರಿ, ಸ್ಟ್ಯಾಂಪ್ ಶುಲ್ಕ, ಸೆಕ್ಯೂರಿಟಿ ಶುಲ್ಕದ ನೆಪದಲ್ಲಿ ಹಂತ ಹಂತವಾಗಿ ₹ 5 ಲಕ್ಷ ವಸೂಲಿ ಮಾಡಿದ್ದ’ ಎಂದು ತನಿಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಐಪಿಸಿ 420 ಅಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

‘ವೃದ್ಧಾಪ್ಯದಲ್ಲಿ ಆರ್ಥಿಕ ಭದ್ರತೆಗಾಗಿ ವಿಮೆ ಮಾಡಿಸಿದ್ದೆ. ಈಗ ಹಣ ಕಳೆದುಕೊಂಡು ಅಭದ್ರತೆ ಕಾಡುತ್ತಿದೆ. ಕಂಪನಿಯ ಕಚೇರಿಗೆ ತೆರಳಿ ವಿಚಾರಿಸಿದ್ದು, ಕಂಪನಿ ಪ್ರತಿನಿಧಿಗಳು ಸಹ ದೂರು ನೀಡುವುದಾಗಿ ಭರವಸೆ ನೀಡಿದ್ದಾರೆ. ಈ ರೀತಿ ಯಾರಾದರೂ ಕರೆ ಮಾಡಿದರೆ ಹಣ ನೀಡಬೇಡಿ’ ಎಂದು ಹಣ ಕಳೆದುಕೊಂಡ ನಿವೃತ್ತ ಅಧಿಕಾರಿ ಎಚ್ಚರಿಸುತ್ತಾರೆ.

‘ಜೈ ತುಳುನಾಡು ಪುತ್ತೂರು’ ಅತಿವೇಗದ ಕೋಣಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಕಂಬಳ ನಮ್ಮ ಕಂಬಳ’ದಲ್ಲಿ ಭಾಗವಹಿಸಿದ 159 ಜೋಡಿ ಕೋಣಗಳಲ್ಲಿ ಜೈ ತುಳುನಾಡು ಪುತ್ತೂರು ಬೊಟ್ಯಾಡಿ ಕಿಶೋರ್ ಭಂಡಾರಿಯವರ ಕೋಣಗಳು ಅತಿವೇಗದ ಕೋಣಗಳಾಗಿ ಹೊರಹೊಮ್ಮಿವೆ. ನೇಗಿಲು ಕಿರಿಯ ವಿಭಾಗದಲ್ಲಿ ಪೆಂರ್ಗಾಲು ಕೃತಿಕ್ ಗೌಡ ಓಡಿಸಿದ ಈ ಕೋಣಗಳು 9.09 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಕೂಟ ದಾಖಲೆ ಮಾಡಿವೆ.

ಅರಮನೆ ಮೈದಾನದಲ್ಲಿ ರಾಜ–ಮಹಾರಾಜ ಜೋಡುಕರೆಯಲ್ಲಿ ಶನಿವಾರ ಮತ್ತು ಭಾನುವಾರ ಎರಡು ದಿನ ಕಂಬಳ ಸ್ಪರ್ಧೆ ನಡೆದಿದ್ದವು. ಸೋಮವಾರ ಮುಂಜಾನೆ 4ರ ಹೊತ್ತಿಗೆ ಕೊನೆಗೊಂಡಿತು.

ಕನೆಹಲಗೆಯಲ್ಲಿ 7 ಜೋಡಿ, ಅಡ್ಡ-ಹಲಗೆಯಲ್ಲಿ 6 ಜೋಡಿ, ಹಗ್ಗ ಹಿರಿಯ ವಿಭಾಗದಲ್ಲಿ 21 ಜೋಡಿ, ನೇಗಿಲು ಹಿರಿಯ ವಿಭಾಗದಲ್ಲಿ 32 ಜೋಡಿ, ಹಗ್ಗ ಕಿರಿಯ ವಿಭಾಗದಲ್ಲಿ 31 ಜೋಡಿ, ನೇಗಿಲು ಕಿರಿಯ ವಿಭಾಗದಲ್ಲಿ 62 ಜೋಡಿ ಸೇರಿ ಒಟ್ಟು 159 ಜೋಡಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಫಲಿತಾಂಶ ವಿವರ

ಅಡ್ಡ ಹಲಗೆ: ಪ್ರಥಮ: ಎಸ್. ಎಮ್. ಎಸ್ ಫ್ಯಾಮಿಲಿ ಬೆಂಗಳೂರು, ಹಲಗೆ ಮುಟ್ಟಿದವರು: ಭಟ್ಕಳ ಹರೀಶ್, ದ್ವಿತೀಯ: ಬೋಳಾರ ತ್ರಿಶಾಲ್ ಕೆ ಪೂಜಾರಿ, ಹಲಗೆ ಮುಟ್ಟಿದವರು: ಸಾವ್ಯ ಗಂಗಯ್ಯ ಪೂಜಾರಿ.

ಹಗ್ಗ ಹಿರಿಯ: ಪ್ರಥಮ: ನಂದಳಿಕೆ ಶ್ರೀಕಾಂತ್ ಭಟ್ ‘ಸಿ’, ಓಡಿಸಿದವರು: ಬಂಬ್ರಾಣಬೈಲು ವಂದಿತ್ ಶೆಟ್ಟಿ, ದ್ವಿತೀಯ: ಮಾಳ ಆನಂದ ನಿಲಯ ಶೇಖರ ಎ. ಶೆಟ್ಟಿ, ಓಡಿಸಿದವರು: ಭಟ್ಕಳ ಶಂಕರ್ ನಾಯ್ಕ್.

ಹಗ್ಗ ಕಿರಿಯ: ಪ್ರಥಮ: ಸುರತ್ಕಲ್ ಪಾಂಚಜನ್ಯ ಯೋಗೀಶ್ ಕರಿಯ ಪೂಜಾರಿ, ಓಡಿಸಿದವರು: ಮಾಸ್ತಿ ಕಟ್ಟೆ ಸ್ವರೂಪ್, ದ್ವಿತೀಯ: ನಿಟ್ಟೆ ಪರಪ್ಪಾಡಿ ಸುರೇಶ್ ಕೋಟ್ಯಾನ್ ‘ಎ’, ಓಡಿಸಿದವರು: ಅತ್ತೂರು ಕೋಡಂಗೆ ಸುಧೀರ್ ಸಾಲ್ಯಾನ್

ನೇಗಿಲು ಕಿರಿಯ: ಪ್ರಥಮ: ಜೈ ತುಳುನಾಡು ಪುತ್ತೂರು ಬೊಟ್ಯಾಡಿ ಕಿಶೋರ್ ಭಂಡಾರಿ, ಓಡಿಸಿದವರು: ಪೆಂರ್ಗಾಲು ಕೃತಿಕ್ ಗೌಡ, ದ್ವಿತೀಯ: ಎರ್ಮಾಳ್ ಪುಚ್ಚೊಟ್ಟುಬೀಡು ಬಾಲಚಂದ್ರ ಶೆಟ್ಟಿ, ಓಡಿಸಿದವರು: ಬೈಂದೂರು ವಿವೇಕ್ ಪೂಜಾರಿ.

‘ಬೆಂಗಳೂರು ಕಂಬಳ ನಮ್ಮ ಕಂಬಳ’ದಲ್ಲಿ ನೇಗಿಲು ಹಿರಿಯ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪಡೆದ ಕೋಣಗಳ ಮಾಲೀಕ ಬಂಗಾಡಿ ಪರಂಬೇಲು ನಾರಾಯಣ ಮಲೆಕುಡಿಯ ಮತ್ತು ಕೋಣ ಓಡಿಸಿದ್ದ ಸರಪಾಡಿ ಧನಂಜಯ ಗೌಡರನ್ನು ಬಹುಮಾನ ನೀಡಿ ಗೌರವಿಸಲಾಯಿತು

ಕಾಂತಾರದ ಕೋಣಗಳಿಗೆ ಪ್ರಶಸ್ತಿ

‘ಕಾಂತಾರ’ ಕನ್ನಡ ಚಲನಚಿತ್ರ ದಲ್ಲಿದ್ದ ಬೋಳ್ಳಂಬಳ್ಳಿ ಚೈತ್ರ ಪರಮೇಶ್ವರ ಭಟ್ ‘ಬಿ’ ಕೋಣ ಗಳು ಕನೆಹಲಗೆ ವಿಭಾಗದಲ್ಲಿ ಬಹುಮಾನ ಪಡೆದು ಮಿಂಚಿವೆ.

6.5 ಕೋಲು (ಒಂದು ಕೋಲು ಅಂದರೆ 2.5 ಅಡಿ) ನಿಶಾನೆಗೆ ನೀರು ಹಾಯಿಸಿವೆ. ಹಲಗೆ ಮುಟ್ಟಿದವರು: ಉಲ್ಲೂರು ಕಂದಾವರ ಗಣೇಶ್.

ಮಲೆಕುಡಿಯರ ಮಿಂಚು

ಕಾಡಿನಂಚಿನಲ್ಲಿ ಇರುವ ಮಲೆಕುಡಿಯ ಬುಡಕಟ್ಟು ಸಮುದಾಯದ ಕೋಣಗಳು ಬೆಂಗಳೂರಿನ ಕಂಬಳದಲ್ಲಿ ಮಿಂಚು ಹರಿಸಿವೆ. ನೇಗಿಲು ಹಿರಿಯ ವಿಭಾಗದಲ್ಲಿ ಬಂಗಾಡಿ ಪರಂಬೇಲು ನಾರಾಯಣ ಮಲೆಕುಡಿಯ ಅವರ ಕೋಣಗಳು ಪ್ರಥಮ ಸ್ಥಾನ ಪಡೆದಿವೆ. ಸರಪಾಡಿ ಧನಂಜಯ ಗೌಡ ಕೋಣಗಳನ್ನು ಓಡಿಸಿದ್ದರು. ಗುರುಚರಣ್ ಓಡಿಸಿದ್ದ ಮಾಳ ಆನಂದ ನಿಲಯ ಶೇಖರ ಎ. ಶೆಟ್ಟಿಯವರ ಕೋಣಗಳು ದ್ವಿತೀಯ ಸ್ಥಾನ ಪಡೆದಿವೆ.

ಪ್ರಕರಣ ದಾಖಲು

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಿದ್ದ ಆರೋಪದಡಿ ಬೆಂಗಳೂರು ಕಂಬಳ ಆಯೋಜಕರ ವಿರುದ್ಧ ಸದಾಶಿವ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಬಿಎಂಪಿ ವಾರ್ಡ್ ಸಂಖ್ಯೆ 35ರ ಕಂದಾಯ ನಿರೀಕ್ಷಕ ಕೆ.ಸಿದ್ಧಗಂಗಯ್ಯ ಅವರು ದೂರು ನೀಡಿದ್ದಾರೆ.

ಕಂಬಳ ಆಯೋಜಕರ ವಿರುದ್ಧ, ಕರ್ನಾಟಕ ತೆರೆದ ಸ್ಥಳಗಳ (ವಿಕಾರ ತಡೆಗಟ್ಟುವಿಕೆ) ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮೇಖ್ರಿ ವೃತ್ತ ಮತ್ತು ಬಳ್ಳಾರಿ ರಸ್ತೆಯಲ್ಲಿ ಕಂಬಳ ಕಾರ್ಯಕ್ರಮಕ್ಕೆ ಶುಭಾಶಯ ಕೋರಿ ಅನಧಿಕೃತವಾಗಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲಾಗಿತ್ತು. ಈ ಮೂಲಕ ನಗರದ ಸೌಂದರ್ಯಕ್ಕೆ ಧಕ್ಕೆ ಉಂಟು ಮಾಡಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆಯೋಜಕರು ಯಾವುದೇ ಅನುಮತಿ ಪಡೆಯದೆ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಫ್ಲೆಕ್ಸ್ ಅಳವಡಿಸಿ ಹೈಕೋರ್ಟ್ ಆದೇಶ ಉಲ್ಲಂಘಿಸಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಮಂದಿರ ರಕ್ಷಣೆ ಅಧಿವೇಶನ 16ರಿಂದ

ಕಲಬುರಗಿ: ‘ಹಿಂದೂ ಜನ ಜಾಗೃತಿ ಸಮಿತಿಯಿಂದ ಡಿ.16, 17ರಂದು ಮಂದಿರ ರಕ್ಷಣೆಯ ಅಧಿವೇಶನ ಆಯೋಜಿಸಲಾಗುವುದು’ ಎಂದು ಸಮಿತಿಯ ರಾಜ್ಯ ಸಮನ್ವಯಕ ಗುರುಪ್ರಸಾದ ಗೌಡ ತಿಳಿಸಿದರು.

‘ಬೆಂಗಳೂರಿನ ಬಸವೇಶ್ವರ ನಗರದ ಗಂಗಯ್ಯ ತಿಮ್ಮಯ್ಯ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯುವ ಅಧಿವೇಶನದಲ್ಲಿ ವಕೀಲರು, ದೇವಸ್ಥಾನಗಳ ಮುಖಂಡರು ಪಾಲ್ಗೊಳ್ಳುವರು. ಸರ್ಕಾರದ ಹಿಡಿತದಲ್ಲಿ ಇರುವ ದೇವಸ್ಥಾನಗಳನ್ನು ಕಾನೂನಿನ ಚೌಕಟ್ಟಿನ ಮೂಲಕ ವಶಕ್ಕೆ ಪಡೆದು, ಮೂಲಸೌಕರ್ಯ ಕಲ್ಪಿಸಲು ಚರ್ಚಿಸಲಾಗುವುದು’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಬಿಬಿಎಂಪಿ, ಸಿ–40 ಸಿಟೀಸ್, ಡ್ಬ್ಲ್ಯುಆರ್‌ಐ ಇಂಡಿಯಾ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರು ಹವಾಮಾನ ಕ್ರಿಯಾ ಹಾಗೂ ಮರುಚೇತರಿಕೆ ಯೋಜನೆ ಪ್ರದರ್ಶನ ಫಲಕಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಬಿಬಿಎಂಪಿ ವಿಶೇಷ ಕಮಿಷನರ್ ಹರೀಶ್, ಬಿಬಿಎಂಪಿ ವಲಯ ಆಯುಕ್ತರಾದ ಸ್ನೇಹಲ್, ವಿನುತಾ, ದೀಪಕ್ ಹಾಗೂ ರಾಮನಾರಾಯಣ್, ಜಯಾ ಇದ್ದರು

ಪಟಾಕಿಗಳಲ್ಲಿ ಕುರ್‌ಆನ್ ಗ್ರಂಥದ ಹಾಳೆ ಬಳಕೆ: ದೂರು

ಕಲಬುರಗಿ: ಪಟಾಕಿಗಳಲ್ಲಿ ಇಸ್ಲಾಂ ಧರ್ಮ ಗ್ರಂಥ ಕುರ್‌ಆನ್ ಪುಸ್ತಕದ ಹಾಳೆಗಳ ಚೂರುಗಳನ್ನು ಬಳಸಲಾಗಿದೆ ಎಂದು ಆರೋಪಿಸಿ ಬ್ರಹ್ಮಪುರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಮೋಮಿನಪುರ ನಿವಾಸಿ ಆಟೊ ಚಾಲಕ ಮಹಮದ್ ಖಮಾರ್ ಹನೀಫ್ ಹಾಗೂ ಇತರರು ದೂರು ದಾಖಲಿಸಿದ್ದಾರೆ.

ನಗರದ ಬಟ್ಟೆ ಅಂಗಡಿಯೊಂದರ ಮಾಲೀಕರು ದೀಪಾವಳಿ ಪೂಜೆಯ ಬಳಿಕ ಅಂಗಡಿ ಮುಂದೆ ಪಟಾಕಿ ಸಿಡಿಸಿದ್ದರು. ಸಿಡಿದ ಪಟಾಕಿಯ ತುಣುಕುಗಳು ಎಲ್ಲೆಂದರಲ್ಲಿ ಬಿದ್ದಿದ್ದವು. ಮಹಮದ್ ಖಮಾರ್ ಅವರು ಪಟಾಕಿಯ ತುಣುಕುಗಳನ್ನು ಸೂಕ್ಷ್ಮವಾಗಿ ಗಮನಿಸಿದರು. ಇಸ್ಲಾಂ ಧರ್ಮ ಗ್ರಂಥ ಕುರ್‌ಆನ್ ಪುಸ್ತಕದ ಹಾಳೆಗಳ ಚೂರುಗಳನ್ನು ಪಟಾಕಿಯಲ್ಲಿ ಸೇರಿಸಲಾಗಿತ್ತು. ಚೂರುಗಳಲ್ಲಿ ಕುರ್‌ಆನ್ ಆಯಾತುಗಳು ಬರೆಯಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಖಮಾರ್ ಅವರು ತಕ್ಷಣವೇ ತಮ್ಮ ಸಮುದಾಯದ ಮುಖಂಡರಿಗೆ ಫೋನ್ ಕರೆ ಮಾಡಿದರು. ಮುಖಂಡರಾದ ಅಷ್ಪಾ ಅಹಮದ್, ವಸೀಮ್ ಶೇಖ್, ವಾಜೀದ್ ಶೇಖ್ ಮತ್ತು ಶೇಖ್ ಸೈಫಾನ್ ಅವರು ಸ್ಥಳಕ್ಕೆ ಬಂದು ಪರಿಶೀಲಿಸಿದರು. ಪಟಾಕಿಯಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಕಾಗದದ ಚೂರುಗಳನ್ನು ಬಳಸಲಾಗಿದೆ. ಇದರಿಂದ ನಮ್ಮ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದ್ದು, ತೀವ್ರ ನೋವು ತರಿಸಿದೆ. ಧರ್ಮದ ಪುಸ್ತಕವನ್ನು ಹರಿದು, ಅದರ ಹಾಳೆಗಳನ್ನು ಪಟಾಕಿಗಳಲ್ಲಿ ಬಳಸಿದ ಪಟಾಕಿ ತಯಾರಿಕಾ ಕಂಪನಿ ಹಾಗೂ ಮಾರಾಟಗಾರರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ದೂರು ನೀಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ರೌಡಿಶೀಟರ್ ಸೇರಿ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ನುಗ್ಗಿ ಹಣ ಸುಲಿಗೆ ಮಾಡಿದ್ದ ರೌಡಿಶೀಟರ್ ಸೇರಿದಂತೆ ನಾಲ್ವರು ಆರೋಪಿಗಳನ್ನು ಆರ್.ಟಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನೆಲಮಂಗಲದ ಅಲಿಯಾಸ್ ಬೊಡ್ಕೆ(29), ಕೆ.ಜಿ.ಹಳ್ಳಿ ಮೋಹಿತ್ ಅಲಿಯಾಸ್ ಮೋಹನ್ (24), ಅರಾಫತ್ ಅಹಮದ್(25), ಸೈಯದ್ ಮಾಜ್(23) ಬಂಧಿತರು.

ಬಂಧಿತರಿಂದ ₹ 12 ಸಾವಿರ ನಗದು ಹಾಗೂ ನಾಲ್ಕು ದ್ವಿಚಕ್ರ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಇಮ್ರಾನ್ ಜೆ.ಸಿ.ನಗರ ಠಾಣೆ ರೌಡಿಶೀಟರ್ ಆಗಿದ್ದು, ಈತ ತನ್ನ ರೌಡಿಪಡೆ ಕಟ್ಟಿಕೊಂಡು ಠಾಣೆ ವ್ಯಾಪ್ತಿಯಲ್ಲಿ ನ.21ರ ರಾತ್ರಿ 11.55ರ ಸುಮಾರಿಗೆ ದಿನ್ನೂರು ಮುಖ್ಯರಸ್ತೆಯ ನೇಚರ್ ಬಾರ್ ಆ್ಯಂಡ್ ರೆಸ್ಟೋರೆಂಟ್ ನುಗ್ಗಿ ಗಲಾಟೆ ನಡೆಸಿದ್ದ. ಕ್ಯಾಶಿಯರ್‌ಗೆ ಮಾರಕಾಸ್ತ್ರ ತೋರಿಸಿ ಹಣ ಸುಲಿಗೆ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳದ ಸಿ.ಸಿ ಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳ ಬಂಧನದಿಂದ ಆರ್.ಟಿ.ನಗರ ಸೇರಿ ನಗರ ಮತ್ತು ಗ್ರಾಮಾಂತರ ಠಾಣೆ ಹಾಗೂ ತಮಿಳುನಾಡಿನ ವಿವಿಧೆಡೆ ದಾಖಲಾಗಿದ್ದ 10 ಪ್ರಕರಣ ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಈವರೆಗೆ ಒಟ್ಟು ₹131.3 ಕೋಟಿ ಖರ್ಚು

ಅಧಿವೇಶನ; ವೆಚ್ಚ ತಗ್ಗಿಸಲು ಕ್ರಮ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನ ಸೌಧದಲ್ಲಿ ಡಿಸೆಂಬರ್ 4ರಿಂದ 11 ದಿನ ನಡೆಯುವ 12ನೇ ಚಳಿಗಾಲದ ಅಧಿವೇಶನದ ವೆಚ್ಚ ಕಡಿಮೆ ಮಾಡಲು ಜಿಲ್ಲಾಡಳಿತ ಕಸರತ್ತು ನಡೆಸಿದೆ. ಕಳೆದ ವರ್ಷ ₹17.50 ಕೋಟಿ ವೆಚ್ಚವಾಗಿತ್ತು. ಈ ಬಾರಿ ಅದಕ್ಕಿಂತ ಕಡಿಮೆ ಮಾಡುವ ಗುರಿ ನೀಡಲಾಗಿದೆ.

ಅಧಿವೇಶನದ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಇದೇ ಸೌಧದಲ್ಲಿ 2012ರಲ್ಲಿ ನಡೆದ ಮೊದಲ ಅಧಿವೇಶನಕ್ಕೆ ₹7.39 ಕೋಟಿ ವೆಚ್ಚವಾದರೆ, 2022ರ ಅಧಿವೇಶನಕ್ಕೆ ₹17.50 ಕೋಟಿಯಾಗಿದೆ.

ರಾಜ್ಯ ಸರ್ಕಾರವು ಜಿಲ್ಲಾಡಳಿತದ ಮೂಲಕ ₹ 20 ಕೋಟಿ ವೆಚ್ಚ ಮಾಡುತ್ತದೆ. ಲೋಕೋಪಯೋಗಿ, ಸಾರಿಗೆ, ಪೊಲೀಸ್, ಹೆಸ್ಕಾಂ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗಳೂ ತಮ್ಮ ಇಲಾಖೆಯ ಅನುದಾನ ಬಳಸಿಕೊಳ್ಳುತ್ತವೆ. ಆ ಎಲ್ಲ ಅನುದಾನ ವೆಚ್ಚ ಲೆಕ್ಕ ಹಾಕಿದರೆ, ₹ 25 ಕೋಟಿ ದಾಟುತ್ತದೆ.

ಊಟೋಪಚಾರ, ವಸತಿ, ಸಾರಿಗೆ, ಪ್ರತಿಭಟನೆ ಮತ್ತು ಆಲಂಕಾರಿಕ ವೆಚ್ಚಗಳನ್ನು ತಗ್ಗಿಸಲು ಉದ್ದೇಶಿಸಲಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ಊಟಕ್ಕೆಂದು ಪ್ರತಿದಿನ ₹ 5 ಲಕ್ಷಕ್ಕೂ ಹೆಚ್ಚು ಹಣ ಬೇಕು. ಇದರಲ್ಲಿ ಪ್ರತಿ ಬಾರಿ ಸೋರಿಕೆ ಆಗುತ್ತಿತ್ತು. ಅದನ್ನು ತಪ್ಪಿಸಲು ‘ಬಫೆ’ ಬದಲಾಗಿ ಕೂಪನ್ ವಿತರಿಸಲು ಯೋಜಿಸಲಾಗಿದೆ.

ಸುವರ್ಣ ಸೌಧದ ಒಳಗೆ– ಹೊರಗೆ ಊಟದ ವ್ಯವಸ್ಥೆಗೆ ಮಿತಿಯಿದೆ. ಶಾಮಿಯಾನದ ಗುತ್ತಿಗೆ, ಆಹಾರ ಸಾಮಗ್ರಿ ಗುತ್ತಿಗೆ ಮೊತ್ತ ಕಡಿತ, ಬಾಡಿಗೆ ವಾಹನ ಬಳಕೆ ತಡೆ, ಸಚಿವರು, ಶಾಸಕರು, ಅಧಿಕಾರಿಗಳ ಹೆಸರಿನಲ್ಲಿ ಬೇರೆಯವರು ಕೊಠಡಿ ಬಳಸುವುದನ್ನು ತಡೆಯುವುದು ಸೇರಿ ಅಗತ್ಯ ಇರುವ ಕಡೆಯಲ್ಲೆಲ್ಲ ವೆಚ್ಚವನ್ನು ಕಡಿತಗೊಳಿಸಲು ಉದ್ದೇಶಿಸಲಾಗಿದೆ.

₹131.3 ಕೋಟಿ ವೆಚ್ಚ: ಬೆಳಗಾವಿಯಲ್ಲಿ ಈವರೆಗೆ ನಡೆದಿರುವ 11 ಅಧಿವೇಶನಗಳಿಗೆ ಬರೋಬ್ಬರಿ 131.3 ಕೋಟಿ ವೆಚ್ಚವಾಗಿದೆ. ಮೊದಲ ಎರಡು ಬಾರಿ (2006, 2009) ‘ಜೀರಗೆ’ ಸಭಾಂಗಣದಲ್ಲಿ ನಡೆದರೆ, 2012ರಿಂದ ಈವರೆಗೆ 9 ಅಧಿವೇಶನಗಳು ‘ಸುವರ್ಣ ಸೌಧ’ದಲ್ಲಿ ನಡೆದಿವೆ.

ಎಲ್ಲಕ್ಕಿಂತ ಹೆಚ್ಚು ಹಣ ವಸತಿ ಸೌಲಭ್ಯಕ್ಕೆ ವ್ಯಯವಾಗುತ್ತದೆ. ಅಧಿವೇಶನಕ್ಕೆ ಬರುವ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ 3,000ಕ್ಕೂ ಹೆಚ್ಚು ಮಂದಿಯ ವಸತಿಗಾಗಿ ಪ್ರತಿವರ್ಷ ಅಂದಾಜು ₹ 7 ಕೋಟಿ ವೆಚ್ಚವಾಗುತ್ತದೆ. ಮುಖ್ಯಮಂತ್ರಿ, ಸಚಿವರು, ಶಾಸಕರು, ವಿಧಾನಸಭೆ ಮತ್ತು ವಿಧಾನ ಪರಿಷತ್ ಸಚಿವಾಲಯದ ಅಧಿಕಾರಿಗಳು, ಪತ್ರಕರ್ತರು, ಮಾರ್ಷಲ್‌ಗಳು, ವಾಹನಗಳ ಚಾಲಕರು ಸೇರಿ 3,000ಕ್ಕೂ ಹೆಚ್ಚು ವಸತಿ ವ್ಯವಸ್ಥೆ ಬೇಕು.

‘ಬಹುತೇಕ ಹೋಟೆಲ್, ಲಾಡ್ಜ್‌ಗಳನ್ನು ರಾಜಕೀಯ ವ್ಯಕ್ತಿಗಳು, ಅವರ ಬೆಂಬಲಿಗರು ತಿಂಗಳ ಮುಂಚೆಯೇ ಕಾಯ್ದಿರಿಸುತ್ತಾರೆ. ಹೀಗಾಗಿ, ಜಿಲ್ಲಾಡಳಿತ ಹೆಚ್ಚಿನ ಹಣ ಸುರಿದು ಉಳಿದವರ ವಸತಿ ನೋಡಿಕೊಳ್ಳುವುದು ಅನಿವಾರ್ಯ. ಇಲ್ಲಿ ಶಾಸಕರ ಭವನ ನಿರ್ಮಿಸಿದರೆ ಅಪಾರ ಹಣ ಉಳಿಸಬಹುದು’ ಎಂಬ ಒತ್ತಾಯ ಹಲವು ದಶಕಗಳಿಂದ ಇದೆ.



ಅಧಿವೇಶನಗಳ ವೆಚ್ಚ

ವರ್ಷ	ವೆಚ್ಚ(₹ ಕೋಟಿಗಳಲ್ಲಿ)
2006	5.00
2009	12.33
2012	7.39
2013	14.40
2014	10.09
2015	6.95
2016	7.20
2017	21.59
2018	13.85
2021	15.00
2022	17.50
ಒಟ್ಟು	131.30

ಪೋರ್ಟಲ್ ಮೂಲಕವೇ ₹ 1 ಕೋಟಿಗಿಂತ ಹೆಚ್ಚು ವೆಚ್ಚದ ಕಾಮಗಾರಿಗಳ ಗುತ್ತಿಗೆ ನಿರ್ವಹಣೆ

ಇ–ಸಂಗ್ರಹಣೆ ಪೋರ್ಟಲ್ 2.0ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಂಡರ್ ಪ್ರಕ್ರಿಯೆಯನ್ನು ಹೆಚ್ಚು ಸುರಕ್ಷಿತಗೊಳಿಸುವ ಮತ್ತು ಕಾಲಕಾಲಕ್ಕೆ ಕಾಮಗಾರಿಗಳ ಪ್ರಗತಿಯ ಚಿತ್ರಣವನ್ನು ಒದಗಿಸುವ ವಿಶೇಷ ಸೌಲಭ್ಯ ಒಳಗೊಂಡ ಇ-ಸಂಗ್ರಹಣಾ ಪೋರ್ಟಲ್ 2.0 ಬಳಕೆಯನ್ನು ರಾಜ್ಯ ಸರ್ಕಾರ ಆರಂಭಿಸಿದೆ.

ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೂತನ ಇ-ಸಂಗ್ರಹಣಾ ಪೋರ್ಟಲ್‌ಗೆ ಸೋಮವಾರ ಚಾಲನೆ ನೀಡಿದರು.

ಇನ್ನುಮುಂದೆ ₹1 ಕೋಟಿಗಿಂತ ಹೆಚ್ಚಿನ ವೆಚ್ಚದ ಕಾಮಗಾರಿಗಳ ಗುತ್ತಿಗೆ ನಿರ್ವಹಣೆಯನ್ನು ಇ-ಸಂಗ್ರಹಣಾ ಪೋರ್ಟಲ್ 2.0 ಮೂಲಕವೇ ಮಾಡಲಾಗುತ್ತದೆ. ಕಾಮಗಾರಿಗಳ ಪ್ರಗತಿಗೆ ಸಂಬಂಧಿಸಿದ ತಕ್ಷಣದ ಮಾಹಿತಿಯನ್ನು ಒದಗಿಸುವ ಪ್ರತ್ಯೇಕ 'ಡ್ಯಾಷ್ ಬೋರ್ಡ್' ಅನ್ನು ಪೋರ್ಟಲ್‌ನಲ್ಲಿ ರೂಪಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಲಸಂಪನ್ಮೂಲ ಇಲಾಖೆ, ಲೋಕೋಪಯೋಗಿ ಇಲಾಖೆ ಮತ್ತು ಈ ಇಲಾಖೆಗಳ ವ್ಯಾಪ್ತಿಯಲ್ಲಿರುವ ನಿಗಮ, ಮಂಡಳಿಗಳಲ್ಲಿ ನೀಡಲಾದ ₹50 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ವೆಚ್ಚದ ಕಾಮಗಾರಿಗಳನ್ನು ಮೂರು ತಿಂಗಳ ಅವಧಿಗೆ ಪ್ರಾಯೋಗಿಕವಾಗಿ ಗುತ್ತಿಗೆ ನಿರ್ವಹಣಾ ಯೋಜನೆಗೆ ಆಯ್ದುಕೊಳ್ಳಲಾಗಿದೆ.

ಈ ರೀತಿಯಲ್ಲಿ ಮೂರು ಇಲಾಖೆಗಳಲ್ಲಿ 40,000 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಅವುಗಳಲ್ಲಿ 3,165 ಕಾಮಗಾರಿಗಳನ್ನು ಗುತ್ತಿಗೆ ನಿರ್ವಹಣಾ ವ್ಯವಸ್ಥೆಯ ಯೋಜನೆಗೆ ಆಯ್ಕೆ ಮಾಡಲಾಗಿದೆ. ಈ ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಡ್ಯಾಷ್ ಬೋರ್ಡ್‌ನಲ್ಲಿ ಒದಗಿಸಲಾಗುತ್ತದೆ.

'ಇ-ಸಂಗ್ರಹಣಾ ಪೋರ್ಟಲ್ 2.0 ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ಒಳಗೊಂಡಿದೆ. ಡಿಜಿಟಲ್ ಕೀಲಿ ಹೊಂದಿರುವವರಷ್ಟೇ ಪೋರ್ಟಲ್ ಪ್ರವೇಶಿಸಬಹುದು. ದರ ಸಂಧಾನ, ಗುತ್ತಿಗೆ ಅನುಮೋದನೆ, ಕಾರ್ಯಾದೇಶ ವಿತರಣೆ, ಕಾಮಗಾರಿಗಳ ಮೇಲೆ ನಿಗಾ ಇರಿಸುವ ಕೆಲಸಗಳನ್ನು ಪೋರ್ಟಲ್ ಮೂಲಕವೇ ನಡೆಸಬಹುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಇ- ಆಡಳಿತ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ವರದಿಗೂ ತಂತ್ರಾಂಶ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ವರದಿ ಸಲ್ಲಿಸುವುದಕ್ಕೂ 'ಡಿಐಎಸ್' ತಂತ್ರಾಂಶ ರೂಪಿಸಲಾಗಿದೆ. ಜಿಲ್ಲೆಗಳಿಗೆ ಸಂಬಂಧಿಸಿದ 28 ವಿಷಯಗಳ ಕುರಿತು ಈ ತಂತ್ರಾಂಶದಲ್ಲೇ ವರದಿ ಒದಗಿಸಬೇಕಾಗುತ್ತದೆ.

https://districtincharge. karnataka.gov.in ಆನ್‌ಲೈನ್ ಪೋರ್ಟಲ್‌ನಲ್ಲಿ ತಂತ್ರಾಂಶವನ್ನು ಬಳಸಿಕೊಂಡು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ವರದಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೂಡ ತಂತ್ರಾಂಶ ಬಳಸಿಕೊಂಡೇ ಜಿಲ್ಲೆಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಬಹುದು.

ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇಲಾಖಾ ಕಾರ್ಯದರ್ಶಿ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಂತ್ರಾಂಶದ ಮೂಲಕವೇ ಕ್ರಮದ ಕುರಿತು ವರದಿ ಸಲ್ಲಿಸಬಹುದು. ವರದಿಗಳ ಆನ್‌ಲೈನ್ ಪರಿಶೀಲನೆಗೂ ಅವಕಾಶವಿದೆ.

ಐವರು ಆರೋಪಿಗಳು ವಶಕ್ಕೆ

ತುಮಕೂರಿನಲ್ಲಿ ನಡೆದಿದ್ದ ಸಾಮೂಹಿಕ ಆತ್ಮಹತ್ಯೆ ಪ್ರಕರಣ

ಪ್ರಜಾವಾಣಿ ವಾರ್ತೆ

ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಭೇಟಿ ನೀಡಿ ಮೃತರ ಕುಟುಂಬಸ್ಥರಿಂದ ಮಾಹಿತಿ ಪಡೆದುಕೊಂಡರು

ತುಮಕೂರು: ಇಲ್ಲಿಯ ಸದಾಶಿವ ನಗರದಲ್ಲಿ ಒಂದೇ ಕುಟುಂಬದ ಐವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಗರೀಬ್‌ಸಾಬ್ ಡೆತ್ ನೋಟ್‌ನಲ್ಲಿ ಉಲ್ಲೇಖಿಸಿದ್ದ ಐವರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ತಿಲಕ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗರೀಬ್ ಸಾಬ್ ಸಹೋದರ ಖಲಂದರ್ ಸಾಬ್ ನೀಡಿದ ದೂರಿನ ಮೇರೆಗೆ ಗರೀಬ್ ಸಾಬ್ ವಾಸವಿದ್ದ ಮನೆಯ ನೆಲ ಮಹಡಿಯಲ್ಲಿದ್ದ ಖಲಂದರ್ ಮತ್ತು ಇತರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ನನ್ನ ತಮ್ಮ ಗರೀಬ್ ಸಾಬ್ ಕಬಾಬ್ ಅಂಗಡಿ ಇಟ್ಟುಕೊಂಡು ಕುಟುಂಬ ನಡೆಸುತ್ತಿದ್ದ. ಆತನ ಮಕ್ಕಳು ತುಮಕೂರಿನಲ್ಲಿ ಶಾಲೆಗೆ ಹೋಗುತ್ತಿದ್ದರು. ತನ್ನ ವ್ಯವಹಾರಕ್ಕಾಗಿ ಆತನಿಗೆ ಗೊತ್ತಿರುವ ವ್ಯಕ್ತಿಗಳ ಬಳಿ ಹಾಗೂ ಸಂಘಗಳಿಂದ ಕೈ ಸಾಲ ಮಾಡಿದ್ದರು. ಹಣದ ಮುಗ್ಗಟ್ಟಿನಲ್ಲಿ ಇದ್ದ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಾಲ ಮರಳಿಸುವಂತೆ ಮತ್ತು ಬಡ್ಡಿ ಕಟ್ಟುವಂತೆ ಸಾಲಗಾರರು ಪೀಡಿಸುತ್ತಿದ್ದರು. ಸಂಸಾರ ನಡೆಸಲು, ಮಕ್ಕಳನ್ನು ಓದಿಸಲು, ಮನೆ ಬಾಡಿಗೆ ಕಟ್ಟಲು ಸಹ ಆಗುತ್ತಿರಲಿಲ್ಲ. ಎಲ್ಲಿಯಾದರೂ ನೆರವು ಪಡೆಯಲು ಯತ್ನಿಸಿದಾಗ ಗರೀಬ್ ಸಾಬ್ ಮನೆಯ ನೆಲ ಮಹಡಿ ಮತ್ತು ಮೇಲ್ಮಹಡಿಯಲ್ಲಿದ್ದವರು ತಡೆಯುತ್ತಿದ್ದರು.ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದೂ ಆರೋಪಿಸಿದ್ದಾರೆ.

'ಐವರು ನೀಡುತ್ತಿದ್ದ ಕಿರುಕುಳದಿಂದ ಬೇಸತ್ತು ನನ್ನ ತಮ್ಮ ಮತ್ತು ಆತನ ಹೆಂಡತಿ ಮೂವರು ಮಕ್ಕಳನ್ನು ಸಾಯಿಸಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಐವರ ಮೇಲೆ ಕಾನೂನು ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಬಡ್ಡಿ ವ್ಯವಹಾರ ನಿಯಂತ್ರಣ: ಸುದ್ದಿಗಾರರ ಜತೆ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, ತನಿಖೆಯ ನಂತರ ಆತ್ಮಹತ್ಯೆಗೆ ನಿಖರ ಕಾರಣ ಏನು ಎಂಬುವುದು ಸ್ಪಷ್ಟವಾಗಿ ತಿಳಿಯಲಿದೆ ಎಂದು ಸ್ಪಷ್ಟಪಡಿಸಿದರು.

ಆತ್ಮಹತ್ಯೆಯ ಹಿಂದೆ ಬಡ್ಡಿ ವ್ಯವಹಾರ ಇದೆ ಎಂದು ಜನರು ಮಾತನಾಡುತ್ತಿದ್ದಾರೆ. ಅದನ್ನು ಗಂಭೀರವಾಗಿ ತೆಗೆದುಕೊಂಡಿದ್ದು, ಬಡ್ಡಿ ವ್ಯವಹಾರವನ್ನು ನಿಯಂತ್ರಿಸಲಾಗುವುದು. ಬಡ್ಡಿ ವ್ಯವಹಾರ ಮಾಡುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಕರ್ನಾಟಕ ವಿ.ವಿ: ಮೂವರಿಗೆ 'ಅರಿವೇ ಗುರು' ಪ್ರಶಸ್ತಿ

ಅಜಿತ ಕೇಶವ ಕೆಂಬಾವಿ



ವೀರಣ್ಣ ರಾಜೂರ

ಆರ್. ಜಿ.ಅಕ್ಕಿಹಾಳ

ಧಾರವಾಡ: ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಕರ್ನಾಟಕ ವಿಶ್ವವಿದ್ಯಾಲಯವು ನೀಡುವ 'ಅರಿವೇ ಗುರು' ಪ್ರಶಸ್ತಿಗೆ ಪ್ರೊ.ವೀರಣ್ಣ ರಾಜೂರ (ಸಾಹಿತ್ಯ), ಪ್ರೊ.ಅಜಿತ ಕೇಶವ ಕೆಂಬಾವಿ (ಖಗೋಳ ವಿಜ್ಞಾನ) ಹಾಗೂ ಪ್ರೊ. ಆರ್.ಜಿ.ಅಕ್ಕಿಹಾಳ (ಸಮಾಜ ವಿಜ್ಞಾನ) ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹ 25,000 ನಗದು, ಫಲಕ ಒಳಗೊಂಡಿದೆ.ವಿಶ್ವವಿದ್ಯಾಲಯದ ಸುವರ್ಣಮಹೋತ್ಸವ ಸಭಾಭವನದಲ್ಲಿ ನವೆಂಬರ್ 29ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಡಿಸೆಂಬರ್‌ನಲ್ಲಿ ಸ್ಕೂಬಾ ಡೈವಿಂಗ್ ಆರಂಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಪಣಂಬೂರು ಸಮೀಪದ ಸಮುದ್ರದಲ್ಲಿ ಸ್ಕೂಬಾ ಡೈವಿಂಗ್ ಆರಂಭವಾಗಲಿದೆ. ನಗರದ ಭಂಡಾರಿ ಬಿಲ್ಡರ್ಸ್‌ನ ಕದಳಿ ಬೀಚ್ ಟೂರಿಸಂ ಡೆವಲಪ್‌ಮೆಂಟ್ ಸಂಸ್ಥೆ ಈ ಯೋಜನೆಗೆ ಮುಂದಾಗಿದ್ದು ಡಿಸೆಂಬರ್ 15ರ ಸಂದರ್ಭದಲ್ಲಿ ಡೈವಿಂಗ್ ಆರಂಭಿಸಲಿದೆ.

ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರ ಮತ್ತು ಉಡುಪಿಯ ಕಾಪು ಸಮುದ್ರದಲ್ಲಿ ಸದ್ಯ ಸ್ಕೂಬಾ ಡೈವಿಂಗ್ ತಾಣಗಳು ಇವೆ. ಮಂಗಳೂರು ಸುತ್ತಮುತ್ತ ಹಲವು ಬಗೆಯ ಜಲಸಾಹಸ ಕ್ರೀಡೆಗಳ ಕೇಂದ್ರಗಳು ಇದ್ದರೂ ಸ್ಕೂಬಾ ಡೈವಿಂಗ್ ಇರಲಿಲ್ಲ. ಪ್ಯಾರಾಸೇಲಿಂಗ್, ಡಿಸ್ಕೊ ರೈಡ್, ಬನಾನ ಬೋಟ್, ಡಾಲ್ಫಿನ್ ಸಫಾರಿ ಇತ್ಯಾದಿಗಳನ್ನು ನಡೆಸುತ್ತಿರುವ ಕದಳಿ ಸಂಸ್ಥೆ ತೇಲುವ ಜಟ್ಟಿ ಮತ್ತು ಸ್ಕೂಬಾ ಡೈವಿಂಗ್‌ಗೆ ಏಕಕಾಲದಲ್ಲಿ ಯೋಜನೆ ರೂಪಿಸಿದೆ.

ಹವಳ ಮತ್ತು ಸಾಗರದ ಜೀವವೈವಿಧ್ಯ ನೋಡಲು ಸಾಧ್ಯವಾಗುವ ಜಾಗಗಳಲ್ಲಿ ಸಾಮಾನ್ಯವಾಗಿ ಸ್ಕೂಬಾ ಡೈವಿಂಗ್ ಮಾಡಲಾಗುತ್ತದೆ. ಆಮ್ಲಜನಕ ಸಿಲಿಂಡರ್‌ಗಳನ್ನು ಕಟ್ಟಿಕೊಂಡು ಸಮುದ್ರದ ಆಳಕ್ಕೆ ಇಳಿದು ಅಲ್ಲಿನ ಜೀವಜಗತ್ತನ್ನು ನೋಡಲು ಇದರಲ್ಲಿ ಅವಕಾಶವಿದೆ.

'ಕೆಲವು ವರ್ಷಗಳ ಹಿಂದೆ ಬಾರ್ಜ್ ಮುಳುಗಿದ್ದ ಜಾಗವನ್ನು ಸ್ಕೂಬಾ ಡೈವಿಂಗ್‌ಗೆ ನಿಗದಿ ಮಾಡಲಾಗಿದೆ. ಡೈವಿಂಗ್‌ನಲ್ಲಿ ಪಳಗಿದವರು 30ರಿಂದ 40 ಮೀಟರ್ ಆಳದ ವರೆಗೆ ಸಾಗುತ್ತಾರೆ. ನಾವು ಸದ್ಯ 6ರಿಂದ 7 ಮೀಟರ್ ಆಳಕ್ಕೆ ಮಾತ್ರ ಇಳಿಸಲು ಸಾಧ್ಯ' ಎಂದು ಕದಳಿ ಸಂಸ್ಥೆಯ ಪಾಲುದಾರ ಲಕ್ಷ್ಮೀಶ ಭಂಡಾರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾಂತಾರದ ಮುನ್ನುಡಿ ಹೇಳುವೆ'

ಪ್ರಜಾವಾಣಿ ವಾರ್ತೆ

ಕುಂದಾಪುರ ಸಮೀಪದ ಕುಂಭಾಸಿಯ ಆನೆಗುಡ್ಡೆಯ ಶ್ರೀ ವಿನಾಯಕ ದೇವಸ್ಥಾನದಲ್ಲಿ ಸೋಮವಾರ ಕಾಂತಾರ ಅಧ್ಯಾಯ 1 ಚಲನಚಿತ್ರದ ಮುಹೂರ್ತ ಪೂಜೆ ನಡೆಯಿತು. ನಟ ಹಾಗೂ ನಿರ್ದೇಶಕ ರಿಷಬ್ ಶೆಟ್ಟಿ, ನಿರ್ಮಾಪಕರಾದ ವಿಜಯ್ ಕಿರಗಂದೂರು, ಚಲುವೇಗೌಡ ಇದ್ದರು

ಕುಂದಾಪುರ (ಉಡುಪಿ ಜಿಲ್ಲೆ): ತಾಲ್ಲೂಕಿನ ಕುಂಭಾಶಿಯ ಆನೆಗುಡ್ಡೆ ಮಹಾಗಣಪತಿ ದೇವಸ್ಥಾನದಲ್ಲಿ ಸೋಮವಾರ ಬಹುನಿರೀಕ್ಷಿತ 'ಕಾಂತಾರ ಅಧ್ಯಾಯ 1' ಸಿನಿಮಾ ಮುಹೂರ್ತ ನೆರವೇರಿತು.

ಸಿನಿಮಾದ ನಿರ್ದೇಶಕ ಹಾಗೂ ನಟ ರಿಷಬ್ ಶೆಟ್ಟಿ ದಂಪತಿ, ಹೊಂಬಾಳೆ ಫಿಲ್ಮ್ಸ್‌ನ ಮಾಲೀಕ ಹಾಗೂ ಸಿನಿಮಾ ನಿರ್ಮಾಪಕ ವಿಜಯ ಕಿರಂಗದೂರು ಸೇರಿದಂತೆ ಹಲವರು ಭಾಗವಹಿಸಿದ್ದರು.

ಈ ಸಂದರ್ಭ ಮಾತನಾಡಿದ ನಟ ರಿಷಬ್ ಶೆಟ್ಟಿ 'ಹಿಂದೆ, ಕಾಂತಾರ ಸಿನಿಮಾವನ್ನು ಪ್ರೇಕ್ಷಕರು ಅದ್ಭುತವಾಗಿ ಗೆಲ್ಲಿಸಿದ್ದಾರೆ. ಸಿನಿಮಾದ ಯಶಸ್ಸನ್ನು ಸಂಪೂರ್ಣವಾಗಿ ಕನ್ನಡಿಗರಿಗೆ ಅರ್ಪಿಸುತ್ತೇನೆ. ಈಗ ಕಾಂತಾರ ಮುಂದುವರಿದ ಪಯಣ ಶುರುವಾಗಿದೆ. ಕಾಂತಾರ ಅಧ್ಯಾಯ–1 ಆರಂಭಿಸಿದ್ದೇವೆ. ಕಾಂತಾರದ ಮುನ್ನುಡಿಯನ್ನು ಹೇಳಲು ಹೊರಟಿದ್ದೇವೆ. ಕಾಂತಾರಗೂ ಹಿಂದೆ ಏನು ನಡೆದಿತ್ತು ಎಂಬುದನ್ನು ತೆರೆಯ ಮೇಲೆ ತೋರಿಸಲಾಗುವುದು' ಎಂದರು.

ಬಹಳ ದೊಡ್ಡ ನಿರೀಕ್ಷೆಯೊಂದಿಗೆ ಕಾಂತಾರ ಅಧ್ಯಾಯ–1 ನಿರ್ಮಾಣ ಮಾಡುತ್ತಿದ್ದು ಪ್ರೇಕ್ಷಕರು ಹಿಂದಿನಂತೆಯೇ ಹರಸಬೇಕು. ಆನೆಗುಡ್ಡೆ ದೇವಸ್ಥಾನ ಸಿನಿಮಾಗೆ ಅದೃಷ್ಟದ ಜಾಗ. ನಿರ್ಮಾಪಕ ವಿಜಯ ಕಿರಂಗದೂರು ನಂಬಿದ ದೇವರೂ ಹೌದು. ಹಿಂದೆ ಕಾಂತಾರ ಸಿನಿಮಾದ ಮುಹೂರ್ತವೂ ಇಲ್ಲಿಯೇ ನಡೆದಿತ್ತು. ಮತ್ತೆ ಅದೇ ಹಾದಿಯಲ್ಲಿ ಸಾಗಿದ್ದು ಗಣಪತಿಯ ಆಶೀರ್ವಾದ ಪಡೆದು ಮುನ್ನಡೆಯುತ್ತಿದ್ದೇವೆ ಎಂದರು ರಿಷಬ್.

ಡಿಸೆಂಬರ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಕರಾವಳಿಗೆ ಸಂಬಂಧಿಸಿದ ಸಿನಿಮಾವಾಗಿರುವುದರಿಂದ ಇಲ್ಲಿಯೇ ಬಹುತೇಕ ಚಿತ್ರೀಕರಣ ನಡೆಯಲಿದೆ. ಹೊಸ ಪ್ರತಿಭೆಗಳ ಹುಡುಕಾಟ ನಡೆಯುತ್ತಿದೆ, ಕನ್ನಡದ ಕಲಾವಿದರಿಗೆ ಹಾಗೂ ರಂಗಭೂಮಿ ಹಿನ್ನೆಲೆಯ ನಟರಿಗೆ ಹೆಚ್ಚಿನ ಅವಕಾಶ ನೀಡಲಾಗುವುದು. ಹಳೆಯ ಕಲಾವಿದರ ಜತೆಗೆ ಹೊಸ ಕಲಾವಿದರೂ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂದರು.

ಹೊಂಬಾಳೆ ದೇಶದ ಪ್ರಮುಖ ಸಿನಿಮಾ ನಿರ್ಮಾಣ ಸಂಸ್ಥೆಯಾಗಿದ್ದು ಕಾಂತಾರ ಸಿನಿಮಾ ಜಾಗತಿಕ ಮಟ್ಟದಲ್ಲಿ ಯಶಸ್ಸು ಸಾಧಿಸಲು ಸಂಸ್ಥೆಯ ಶ್ರಮ, ಸಹಕಾರ ಅಪಾರ. ಹಿಂದೆ ಸಿನಿಮಾಗೆ ದುಡಿದಿದ್ದ ತಾಂತ್ರಿಕ ತಜ್ಞರ ತಂಡವನ್ನು ಮುಂದುವರಿಸಲಾಗಿದೆ. ಅಜನೀಶ್ ಲೋಕನಾಥ್ ಸಂಗೀತ, ಅರವಿಂದ್ ಕಶ್ಯಪ್ ಸಿನಿಮಾಟೊಗ್ರಫಿ ಇದೆ. ಈಗಾಗಲೇ ಕಥೆ ಬರೆದು ಮುಗಿಸಲಾಗಿದೆ, ಪ್ರೀಪ್ರೊಡಕ್ಷನ್ ಪ್ಲಾನಿಂಗ್ ನಡೆಯುತ್ತಿದೆ ಎಂದರು.

ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ

ಒಂದನೇ ಪುಟದಿಂದ....

ಬೆಂಗಳೂರಿನ ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಸ್ಥಳೀಯ ಪೊಲೀಸರ ಸಹಾಯದೊಂದಿಗೆ ತನಿಖೆ ನಡೆಸುತ್ತಿದ್ದು, ಈವರೆಗೆ 9 ಮಂದಿಯನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತನಾಗಿರುವ ಪ್ರಮುಖ ಆರೋಪಿ, ಆಲೆಮನೆ ಮಾಲೀಕನ ಸಂಬಂಧಿ ನವೀನ್ ಕುಮಾರ್ ಆಲೆಮನೆಯಲ್ಲಿ ನಡೆಯುತ್ತಿದ್ದ ಪರೀಕ್ಷೆ ವಿಚಾರ ಬಾಯಿ ಬಿಟ್ಟಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಸ್ಕ್ಯಾನಿಂಗ್ ಯಂತ್ರ ಜಪ್ತಿ ಮಾಡಿದ್ದಾರೆ.

ಮಂಡ್ಯ ತಾಲ್ಲೂಕು ವ್ಯಾಪ್ತಿಯ ಈ ಹಳ್ಳಿಗಳು ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿದ್ದು, ಸ್ಥಳೀಯರು ಪ್ರಕರಣದ ಬಗ್ಗೆ ಮಾತನಾಡಲು ಹಿಂಜರಿಯುತ್ತಾರೆ.

'ಪ್ರಜಾವಾಣಿ' ಸೋಮವಾರ ಗ್ರಾಮಕ್ಕೆ ಭೇಟಿ ನೀಡಿದಾಗ ಗ್ರಾಮಸ್ಥರು ಪ್ರಕರಣ ಕುರಿತು ಮಾತನಾಡಲು ನಿರಾಕರಿಸಿದರು. ಆಲೆಮನೆಯಲ್ಲಿದ್ದ ನಾಲ್ವರು ಯುವಕರು ಮಾತಿಗೂ ಸಿಗದೆ ತೆರಳಿದರು.

'ಪ್ರಕರಣವು ಮಂಡ್ಯ ಹಾಗೂ ಐತಿಹಾಸಿಕ ಮೇಲುಕೋಟೆ ಕ್ಷೇತ್ರಕ್ಕೂ ಕೆಟ್ಟ ಹೆಸರು ತಂದಿದೆ. ನಮ್ಮ ಹಳ್ಳಿಗಳಲ್ಲಿ ವಿದ್ಯಾವಂತರಿದ್ದಾರೆ, ಕಲಾವಿದರಿದ್ದಾರೆ. ಕೆಲವರು ಮಾಡಿದ ಅನಿಷ್ಠ ಕೆಲಸಕ್ಕೆ ನಾವೆಲ್ಲಾ ತಲೆತಗ್ಗಿಸುವಂತಾಗಿದೆ. ಆಲೆಮನೆಯಲ್ಲಿ ನಡೆಯುತ್ತಿರುವ ಪರೀಕ್ಷೆ ಗ್ರಾಮಸ್ಥರಿಗೆ ಗೊತ್ತಿರಲಿಲ್ಲ, ಪೊಲೀಸರು ಬಂದಾಗಲೇ ತಿಳಿಯಿತು' ಎಂದು ಮಂಡ್ಯದಲ್ಲಿ ನೆಲೆಸಿರುವ, ಹಾಡ್ಯ ಗ್ರಾಮದ ಉಪನ್ಯಾಸಕರೊಬ್ಬರು ಬೇಸರ ವ್ಯಕ್ತಪಡಿಸಿದರು.



ಆಲೆಮನೆಯಲ್ಲಿ ಸ್ಕ್ಯಾನಿಂಗ್‌ಗೆ ಬಳಸಲಾಗುತ್ತಿತ್ತು ಎನ್ನಲಾದ ಕೊಠಡಿ

ತಾಲ್ಲೂಕು ಮಟ್ಟದಲ್ಲಿ ಸಮಿತಿ: ಡಿ.ಸಿ

'ಮಂಡ್ಯ ಜಿಲ್ಲೆಯಲ್ಲಿ ಈಚೆಗೆ ಮೂರು ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಪತ್ತೆಯಾಗಿದ್ದು ಆರೋಪಿಗಳ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣಗಳ ಪತ್ತೆಗೆ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್, ತಾಲ್ಲೂಕು ಆರೋಗ್ಯಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು' ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದರು.

'ಗ್ರಾಮೀಣ ಮಟ್ಟದಲ್ಲಿ ಭ್ರೂಣ ಲಿಂಗ ಪತ್ತೆ ಪರೀಕ್ಷೆ ನಡೆಯುತ್ತಿದ್ದರೆ, ಅದನ್ನು ಪತ್ತೆ ಹಚ್ಚಲು ಗ್ರಾಮ ಲೆಕ್ಕಾಧಿಕಾರಿ, ಪಿಡಿಒ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸ್ಥಳೀಯ ಶಿಕ್ಷಕರು ನಿಗಾ ವಹಿಸುವಂತೆ ಸೂಚಿಸಲಾಗಿದೆ' ಎಂದರು.

ಮುಖ್ಯರಸ್ತೆಯಿಂದ ದೂರದಲ್ಲಿರುವ ಆಲೆಮನೆಯು ಸಾಕಷ್ಟು ಅನುಮಾನ ಹುಟ್ಟಿಸುತ್ತದೆ. ಎತ್ತಿನಗಾಡಿ, ಕಾರು ಚಲಿಸಬಹುದಾದ ಕಚ್ಚಾ ರಸ್ತೆಯಲ್ಲಿ ಜನ ಓಡಾಡುವುದು ಕಡಿಮೆ. ಅದೇ ರಸ್ತೆಯ ಅಂತ್ಯ. ಆಲೆಮನೆಯಲ್ಲಿ ನಾಲ್ಕು ಪ್ರತ್ಯೇಕ ಕೊಠಡಿ ಇರುವುದೇ ದೊಡ್ಡ ಅನುಮಾನ. ಇಡೀ ಆವರಣದ ನೆಲ ಮಣ್ಣಿನಿಂದ ಕೂಡಿದೆ. ಆದರೆ ಆ ಕೊಠಡಿಗೆ ಮಾತ್ರ ಸಿಮೆಂಟ್ ಹಾಕಲಾಗಿದೆ. ಕಚೇರಿಯಂತಿರುವ ಅಲ್ಲಿ ಯುಪಿಎಸ್, ಕೇರಂ ಬೋರ್ಡ್, ಟಿ.ವಿ ಕಂಡುಬಂದವು.

ಮಂಡ್ಯದಲ್ಲೇ ಹೆಚ್ಚು ಪರೀಕ್ಷೆ: 'ರಾಜ್ಯದ ಹಲವು ನಗರಗಳಲ್ಲಿ ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಕಂಡುಬಂದಿದ್ದರೂ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ಗರ್ಭಿಣಿಯರು ಭ್ರೂಣಲಿಂಗ ಪತ್ತೆ ಪರೀಕ್ಷೆಗೆ ಒಳಗಾಗುತ್ತಿದ್ದರು. ಆ ಕಾರಣಕ್ಕಾಗಿಯೇ ಆರೋಪಿಗಳು ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪರೀಕ್ಷೆ ಕೇಂದ್ರ ಸ್ಥಾಪಿಸಿದ್ದರು' ಎಂದು ಪೊಲೀಸರು ಹೇಳುತ್ತಾರೆ.

'ಇಡೀ ರಾಜ್ಯದಲ್ಲೇ ಹೆಚ್ಚು ಭ್ರೂಣ ಲಿಂಗ ಪತ್ತೆ ಪರೀಕ್ಷೆ ಮತ್ತು ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಜಿಲ್ಲೆಯಲ್ಲಿ ನಡೆಯುತ್ತಿವೆ. ಬೆಂಗಳೂರು ಪೊಲೀಸರ ಪ್ರಯತ್ನದಿಂದ ಪ್ರಕರಣ ಬಹಿರಂಗಗೊಂಡಿದೆ. ಈಗಲಾದರೂ ಆರೋಪಿಗಳನ್ನು ಪತ್ತೆ ಹಚ್ಚಿ, ಕಠಿಣ ಶಿಕ್ಷೆ ವಿಧಿಸಬೇಕು, ಜಿಲ್ಲೆಗೆ ಅಂಟಿರುವ ಕೊಳೆಯನ್ನು ತೊಳೆಯಬೇಕು' ಎಂದು ಅತ್ಯಾಚಾರ ವಿರೋಧಿ ಆಂದೋಲನ ಸಮಿತಿಯ ಜಿಲ್ಲಾ ಘಟಕದ ಸಂಚಾಲಕಿ ಡಿ.ಪೂರ್ಣಿಮಾ ಆಗ್ರಹಿಸಿದರು.

ಯಾರ ಮನಸ್ಸಿನಲ್ಲಿ ಏನಿದೆ ಎಂಬುದು ಗೊತ್ತಾಗಿದೆ: ಡಿಕೆಶಿ

ನವದೆಹಲಿ: 'ನನ್ನ ವಿರುದ್ಧದ ಪ್ರಕರಣದಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದ ನಂತರ ಅನೇಕರು ಮಾತನಾಡುತ್ತಿದ್ದಾರೆ. ಯಾರ ಮನಸ್ಸು ಮತ್ತು ನಾಲಿಗೆ ಮೇಲೆ ಏನೇನಿದೆ ಎಂಬುದು ಈಗ ತಿಳಿಯುತ್ತಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸಿಬಿಐ ತನಿಖೆಗೆ ಅನುಮತಿ ಹಿಂಪಡೆದಿರುವ ಬಗ್ಗೆ ಈಗ ಮಾತನಾಡಲು ಹೋಗುವುದಿಲ್ಲ. ಮುಂದೆ ಅದರ ಬಗ್ಗೆ ಖಂಡಿತವಾಗಿ ಮಾತನಾಡುತ್ತೇನೆ. ಎಲ್ಲದಕ್ಕೂ ಉತ್ತರ ಕೊಡುತ್ತೇನೆ' ಎಂದರು.

ಪರೀಕ್ಷಾರ್ಥಿಗಳ ಬಂಧನ: ವಿಜಯೇಂದ್ರ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ಹುದ್ದೆಗಳ ಮರುಪರೀಕ್ಷೆಗೆ ಅತ್ಯಂತ ಕಡಿಮೆ ಕಾಲಾವಕಾಶ ನಿಗದಿ ಮಾಡಿದ್ದನ್ನು ಪ್ರತಿಭಟಿಸಿ, ಸಮಯ ವಿಸ್ತರಣೆಗೆ ಜನತಾದರ್ಶನದಲ್ಲಿ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲು ಬಂದಿದ್ದ ಪರೀಕ್ಷಾರ್ಥಿಗಳನ್ನು ಪೊಲೀಸರು ಬಂಧಿಸಿರುವುದು ಖಂಡನಾರ್ಹ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ಪೊಲೀಸರ ಕ್ರಮವನ್ನು ಟೀಕಿಸಿರುವ ಅವರು, 545 ಪಿಎಸ್‌ಐ ಹುದ್ದೆಗಳ ಮರುಪರೀಕ್ಷೆಗೆ ತಯಾರಿಗಾಗಿ ಹೆಚ್ಚಿನ ಕಾಲಾವಕಾಶ ನೀಡಲೇಬೇಕು ಎಂದು ಒತ್ತಾಯಿಸಿದರು.

ಪರೀಕ್ಷಾ ಹಗರಣದಿಂದ ಈ ಮೊದಲೇ ಹೈರಾಣಾಗಿ ಹೋಗಿರುವ ಪಿಎಸ್‌ಐ ಹುದ್ದೆಗಳ ಆಕಾಂಕ್ಷಿಗಳ ಮನವಿ ಅತ್ಯಂತ ನ್ಯಾಯ ಸಮ್ಮತವಾಗಿದ್ದು, ಇದನ್ನು ಮುಖ್ಯಮಂತ್ರಿಯವರು ಸಹಾನುಭೂತಿಯಿಂದ ಪರಿಶೀಲಿಸಬೇಕಿತ್ತು. ಆದರೆ, ಪೊಲೀಸರನ್ನು ಬಿಟ್ಟು ಬಂಧಿಸಿದ ಕ್ರಮ ಕಾಂಗ್ರೆಸ್ ಸರ್ಕಾರಕ್ಕೆ, ಅಮಾಯಕ ನಿರುದ್ಯೋಗಿಗಳ ಮೇಲೆ ಇರುವ ತಾತ್ಸಾರ ಧೋರಣೆಯನ್ನು ಪ್ರತಿಬಿಂಬಿಸಿದೆ. ಪಿಎಸ್‌ಐ ಹುದ್ದೆ ಆಕಾಂಕ್ಷಿಗಳ ಬೇಡಿಕೆ ನ್ಯಾಯ ಸಮ್ಮತವಾಗಿದೆ. ಅವರ ನ್ಯಾಯಯುತ ಬೇಡಿಕೆಗಳನ್ನು ಬಿಜೆಪಿ ಬೆಂಬಲಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ವಿದೇಶ ಪ್ರಯಾಣ ಡಿಕೆಶಿಗೆ ಅನುಮತಿ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಯಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಅವರ ವಿದೇಶ ಪ್ರವಾಸಕ್ಕೆ ಇಲ್ಲಿನ ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ (ಇ.ಡಿ. ನ್ಯಾಯಾಲಯ) ಸೋಮವಾರ ಅನುಮತಿ ನೀಡಿದೆ. ದುಬೈನಲ್ಲಿ 29ರಿಂದ ನಡೆಯಲಿರುವ ಹವಾಮಾನ ಶೃಂಗದಲ್ಲಿ ಭಾಗವಹಿಸಲು ಶಿವಕುಮಾರ್ ಅನುಮತಿ ಕೋರಿದ್ದರು.

ಕಾರ್ಮಿಕರ ಜತೆ ಮನಃಶಾಸ್ತ್ರಜ್ಞರ ಮಾತುಕತೆ

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿಕೊಂಡಿರುವ 41 ಮಂದಿ ಕಾರ್ಮಿಕರ ಪೈಕಿ ಒಬ್ಬರಾದ ಸಬಾ ಅಹ್ಮದ್ ಅವರ ಜೊತೆ ಮಾತನಾಡುವಾಗ ಅವರ ಕುಟುಂಬದ ಸದಸ್ಯರು, 'ಹೆದರಬೇಡ, ರಕ್ಷಿಸುವ ಕೆಲಸ ನಡೆದಿದೆ' ಎಂದು ಮತ್ತೆ ಮತ್ತೆ ಹೇಳುತ್ತಿರುತ್ತಾರೆ.

ಕಾರ್ಮಿಕರಿಗೆ ಪೈಪ್ ಮೂಲಕ ಮೈಕ್ ಕಳುಹಿಸಲಾಗಿದ್ದು, ಸುರಂಗದ ಹೊರಗಡೆ ಇರುವ ಕುಟುಂಬದ ಸದಸ್ಯರ ಜೊತೆ ಸಂವಹನ ನಡೆಸಲು ಇದು ಕಾರ್ಮಿಕರಿಗೆ ನೆರವಾಗುತ್ತಿದೆ.

ರಕ್ಷಣಾ ಕಾರ್ಯವು ಒಂದಲ್ಲ ಒಂದು ಅಡ್ಡಿಯ ಕಾರಣದಿಂದಾಗಿ ವಿಳಂಬಗೊಂಡಿದ್ದು, ಸಬಾ ಅವರಲ್ಲಿನ ಜೀವನೋತ್ಸಾಹ ಬತ್ತದಂತೆ ನೋಡಿಕೊಳ್ಳಲು ಅವರ ಜೊತೆ ವೈದ್ಯರು ಮತ್ತು ಮನಃಶಾಸ್ತ್ರಜ್ಞರು ಮಾತುಕತೆ ನಡೆಸುತ್ತಿರುತ್ತಾರೆ ಎಂದು ಸಹೋದರ ನಯ್ಯಾರ್ ಅಹ್ಮದ್ ಹೇಳಿದರು.

ರಕ್ಷಣಾ ಕಾರ್ಯ ನಡೆಯುತ್ತಿರುವ ಸ್ಥಳದಲ್ಲಿ ವೈದ್ಯರ ಹಾಗೂ ಮನಃಶಾಸ್ತ್ರಜ್ಞರ ಒಂದು ತಂಡ ಕೂಡ ಇದೆ. ಸುರಂಗದ ಒಳಗಡೆ ಸಿಲುಕಿರುವ ಕಾರ್ಮಿಕರ ಜೊತೆ ವೈದ್ಯರು ದಿನಕ್ಕೆರಡು ಬಾರಿ ಮಾತನಾಡುತ್ತಾರೆ. ಅಲ್ಲದೆ, ಕುಟುಂಬದ ಸದಸ್ಯರಿಗೆ ಅವರೊಂದಿಗೆ ಯಾವಾಗ ಬೇಕಿದ್ದರೂ ಮಾತನಾಡಲು ಅವಕಾಶ ಇದೆ.

'ನಾವು ಅವರಲ್ಲಿನ ಜೀವನೋತ್ಸಾಹ ಕುಗ್ಗದಂತೆ ನೋಡಿಕೊಳ್ಳುತ್ತಿರುತ್ತೇವೆ. ಕಷ್ಟಗಳು ಹಾಗೂ ಅಡ್ಡಿಗಳ ಬಗ್ಗೆ ಅವರಿಗೆ ಹೇಳುವುದಿಲ್ಲ. ಬಹಳ ಬೇಗ ನೀವು ಹೊರಬರುತ್ತೀರಿ ಎಂದು ಹೇಳುತ್ತೇವೆ. ಅವರಿಗೆ ಅಲ್ಲಿ ಅಗತ್ಯವಿರುವ ಬಹುತೇಕ ಎಲ್ಲವೂ ಸಿಗುತ್ತಿವೆ' ಎಂದು ನಯ್ಯಾರ್ ಹೇಳಿದರು. ಕಾರ್ಮಿಕರು ಸುರಂಗದಲ್ಲಿ ಸಿಲುಕಿ 15 ದಿನಗಳು ಕಳೆದಿವೆ.

'ಕಾರ್ಮಿಕರಿಗೆ ಆರಂಭದಲ್ಲಿ ನಾವು ಹಣ್ಣಿನ ರಸ ಮತ್ತು ಶಕ್ತಿವರ್ಧಕ ಪಾನೀಯ ನೀಡಿದ್ದೆವು. ಈಗ ಅವರಿಗೆ ಊಟ ಸಿಗುತ್ತಿದೆ. ಬೆಳಿಗ್ಗೆ ಅವರಿಗೆ ಮೊಟ್ಟೆ, ಹಾಲು, ಚಹಾ ಮತ್ತು ದಲಿಯಾ ಕಳುಹಿಸಲಾಗುತ್ತದೆ. ಮಧ್ಯಾಹ್ನ ಹಾಗೂ ರಾತ್ರಿಯ ಊಟಕ್ಕೆ ಅವರಿಗೆ ದಾಲ್, ಅನ್ನ, ಚಪಾತಿ ಮತ್ತು ಪಲ್ಯ ನೀಡಲಾಗುತ್ತಿದೆ' ಎಂದು ಡಾ. ಪ್ರೇಮ್ ಪೋಖ್ರಿಯಾಲ್ ಹೇಳಿದರು.

ಅವರಿಗೆ ತಿನ್ನಲು ಡ್ರೈಫ್ರೂಟ್ಸ್ ಹಾಗೂ ಬಿಸ್ಕತ್ತುಗಳನ್ನು ಕೂಡ ಕೊಡಲಾಗಿದೆ ಎಂದು ತಿಳಿಸಿದರು. ಸಿನಿಮಾ ಮತ್ತು ವಿಡಿಯೊ ಗೇಮ್‌ಗಳು ಇರುವ ಸ್ಮಾರ್ಟ್‌ಫೋನ್‌ಗಳನ್ನು ಕೂಡ ಕಾರ್ಮಿಕರಿಗೆ ಕಳುಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಾರ್ಮಿಕರು ಸಿಲುಕಿಕೊಂಡಿರುವ ಸ್ಥಳದಲ್ಲಿ ಉಷ್ಣಾಂಶವು 22ರಿಂದ 24 ಡಿಗ್ರಿ ಸೆಲ್ಸಿಯಸ್‌ನಷ್ಟು ಇದೆ. ಹೀಗಾಗಿ ಅವರಿಗೆ ಉಲ್ಲನ್ ಬಟ್ಟೆಯ ಅಗತ್ಯ ಇಲ್ಲ. ವಿದ್ಯುತ್ ಪೂರೈಕೆ ವ್ಯವಸ್ಥೆಗೆ ಧಕ್ಕೆ ಆಗಿಲ್ಲ. ಹೀಗಾಗಿ, ಕಾರ್ಮಿಕರಿಗೆ ಸುರಂಗದ ಒಳಗಡೆ ನಿರಂತರವಾಗಿ ವಿದ್ಯುತ್ ಪೂರೈಕೆ ಆಗುತ್ತಿದೆ.

ಸುರಂಗ ಕೊರೆಯುವ ಯಂತ್ರದ ಕೆಲವು ಬಿಡಿಭಾಗಗಳನ್ನು ಸೋಮವಾರ ಬೆಳಿಗ್ಗೆ ಹೊರತೆಗೆಯಲಾಗಿದೆ. ಕಾರ್ಮಿಕರನ್ನು ರಕ್ಷಿಸಲು ಚಿಕ್ಕ ಸುರಂಗವೊಂದನ್ನು ಕೊರೆಯುತ್ತಿದ್ದ ಈ ಯಂತ್ರವು ಶುಕ್ರವಾರ, ಒಳಗಡೆಯೇ ಸಿಲುಕಿಕೊಂಡಿತ್ತು. ಇದರಿಂದಾಗಿ, ರಕ್ಷಣಾ ಸುರಂಗ ಕೊರೆಯುವ ಯತ್ನವನ್ನು ಅಧಿಕಾರಿಗಳು ಸ್ಥಗಿತಗೊಳಿಸಬೇಕಾಯಿತು.

ಅದಾನಿ ಸಮೂಹದ ಸ್ಪಷ್ಟನೆ

ನವದೆಹಲಿ (ಪಿಟಿಐ): ಸಿಲ್ಕ್ಯಾರಾ ಸುರಂಗದ ನಿರ್ಮಾಣಕ್ಕೂ ತನಗೂ ಯಾವ ಸಂಬಂಧವೂ ಇಲ್ಲ ಎಂದು ಅದಾನಿ ಸಮೂಹ ಹೇಳಿದೆ. ಈ ಸುರಂಗ ನಿರ್ಮಾಣದಲ್ಲಿ ತೊಡಗಿರುವ ಕಂಪನಿಯಲ್ಲಿ ಸಮೂಹವು ಷೇರುಪಾಲು ಹೊಂದಿಲ್ಲ ಎಂದು ಸ್ಪಷ್ಟಪಡಿಸಿದೆ.

ಸಿಲ್ಕ್ಯಾರಾ ಸುರಂಗವನ್ನು ಹೈದರಾಬಾದ್ ಮೂಲದ ನವಯುಗ ಎಂಜಿನಿಯರಿಂಗ್ ಕಂಪನಿ ನಿರ್ಮಿಸುತ್ತಿದೆ. ಸುರಂಗ ಕುಸಿದಿರುವುದಕ್ಕೂ ಸಮೂಹಕ್ಕೆ ಸಂಬಂಧ ಕಲ್ಪಿಸುವ ಕಿಡಿಗೇಡಿತನದ ಯಾವುದೇ ಕೃತ್ಯವನ್ನು ಖಂಡಿಸುವುದಾಗಿ ಅದಾನಿ ಸಮೂಹ ಹೇಳಿದೆ.

ಯಂತ್ರ ಬದಿಗಿಟ್ಟು ಕಾರ್ಯಾಚರಣೆ

ಒಂದನೇ ಪುಟದಿಂದ...

ಆರ್‌ವಿಎನ್‌ಎಲ್‌ನ ತಜ್ಞರು ಇನ್ನೊಂದೆಡೆ 75 ಮೀಟರ್‌ವರೆಗೆ ಪೈಪ್ ಅಳವಡಿಸಿದ್ದಾರೆ. ಈ ಪೈಪ್ ಮೂಲಕವೂ ಕಾರ್ಮಿಕರಿಗೆ ಅಗತ್ಯ ವಸ್ತುಗಳನ್ನು ರವಾನಿಸಬಹುದು' ಎಂದು ಹಸ್ನೈಯ್ ತಿಳಿಸಿದ್ದಾರೆ.

ಯಂತ್ರಗಳ ಸಹಾಯವಿಲ್ಲದೆ ಸುರಂಗ ಕೊರೆಯುವ ಕೆಲಸವು ಶುರುವಾದ ನಂತರದಲ್ಲಿ, ಕಾರ್ಮಿಕರನ್ನು ರಕ್ಷಿಸಲು ಎಷ್ಟು ಸಮಯ ಬೇಕಾಗಬಹುದು ಎನ್ನುವುದನ್ನು ಹೇಳಲು ಸಾಧ್ಯ ಎಂದು ಅವರು ತಿಳಿಸಿದರು. ಆದರೆ ಈ ಕೆಲಸದಲ್ಲಿ ಕೂಡ ಅಡ್ಡಿಗಳು ಎದುರಾಗಬಹುದು ಎಂದು ಅವರು ಹೇಳಿದರು.

ಪ್ರಧಾನ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರಾ, ಗೃಹ ಕಾರ್ಯದರ್ಶಿ ಅಜಯ್ ಕೆ. ಭಲ್ಲಾ ಮತ್ತು ಉತ್ತರಾಖಂಡದ ಮುಖ್ಯ ಕಾರ್ಯದರ್ಶಿ ಎಸ್.ಎಸ್. ಸಂಧು ಅವರು ರಕ್ಷಣಾ ಕಾರ್ಯಗಳನ್ನು ಪರಿಶೀಲಿಸಿದರು.

ಇಂದು ಉದ್ಘಾಟನೆ

ಆತಿಥ್ಯ ರಾಜ್ಯ

future cities
a 360 degree event on city development

MUNICIPALIKA SMART & SUSTAINABLE CITIES
CAPEX
ARCHITECTURE IN THE AGE OF MILLENNIALS

ಸುರಕ್ಷಿತ, ಸ್ಮಾರ್ಟ್ ಮತ್ತು ಸುಸ್ಥಿರ ನಗರ ಪರಿಹಾರಗಳ ಬಗ್ಗೆ
17ನೇ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಮತ್ತು ಸಮ್ಮೇಳನ

28, 29 ಮತ್ತು 30ನೇ ನವೆಂಬರ್ 2023
ಅರಮನೆ ಮೈದಾನ, ತ್ರಿಪುರವಾಸಿನಿ (ಮೇಖ್ರಿ ವೃತ್ತದ ಹತ್ತಿರ), ಬೆಂಗಳೂರು

ಉದ್ಘಾಟನಾ ಭಾಷಣ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಪರಿಕಲ್ಪನೆ ಭಾಷಣ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಬಿ.ಎಸ್. ಸುರೇಶ, ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಮತ್ತು ಶ್ರೀ ರಹೀಮ್ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು, ಇಂದಿರಾ ಕ್ಯಾಂಟೀನ್ ಪರಿಶೀಲಿಸುತ್ತಿರುವುದು.

MUNICIPALIKA SMART & SUSTAINABLE CITIES
ಸರ್ವರಿಗೂ ಆಹ್ವಾನ - ನಗರ ವ್ಯವಸ್ಥಾಪಕರು ಮತ್ತು ಇಂಜಿನೀಯರ್‌ಗಳು, ನೀರು ಮತ್ತು ತ್ಯಾಜ್ಯ ಉಪಯುಕ್ತತೆಗಳು, ವಸತಿ ಮಂಡಳಿಗಳು, ನಗರ ಯೋಜಕರು, ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು, ಮೇಯರ್‌ಗಳು, ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಮತ್ತು ಸ್ಮಾರ್ಟ್ ಸಿಟಿ ಸಿಇಓಗಳು.
ಪ್ರದರ್ಶನ ವಿಷಯಗಳು: ನೀರು ಮತ್ತು ತ್ಯಾಜ್ಯ ನೀರು ಬಳಕೆ, ನೈರ್ಮಲ್ಯ, ಘನತ್ಯಾಜ್ಯ ನಿರ್ವಹಣೆ ಮತ್ತು ಪುನರಾವರ್ತನೆ, ನಗರ ಸಾರಿಗೆ ಮತ್ತು ಸಂಚಾರ ದಟ್ಟಣೆ, ಸುರಕ್ಷತೆ ಮತ್ತು ಭದ್ರತೆ, ನಗರ ವಸತಿ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಪರಿಹಾರ ಉಪಾಯಗಳು.

CAPEX Construction Architecture Planning Engineering expo
ಸರ್ವರಿಗೂ ಆಹ್ವಾನ - ನಗರ ಯೋಜಕರು ಮತ್ತು ವಾಸ್ತುಶಿಲ್ಪಿಗಳು, ಸಿವಿಲ್ / ಎಂಇಪಿಎಫ್ / ವಿನ್ಯಾಸ ಇಂಜಿನೀಯರ್‌ಗಳು, ಡೆವಲಪರ್‌ಗಳು, ಬಿಲ್ಡರ್‌ಗಳು, ಯೋಜನಾ ವ್ಯವಸ್ಥಾಪಕರು, ಗುತ್ತಿಗೆದಾರರು, ಸಲಹೆಗಾರರು, ವಿನ್ಯಾಸ ಇಂಜಿನೀಯರ್‌ಗಳು ಮತ್ತು ವೃತ್ತಿನಿರತರು.
ಪ್ರದರ್ಶನ ವಿಷಯಗಳು: ಕಟ್ಟಡ ಸಾಮಗ್ರಿಗಳು, ಉಪಕರಣಗಳು ಮತ್ತು ತಂತ್ರಜ್ಞಾನಗಳು.

ARCHITECTURE IN THE AGE OF MILLENNIALS
ವಾಸ್ತುಶಿಲ್ಪಿಗಳು, ಒಳಾಂಗಣ ವಿನ್ಯಾಸಕರು, ಇಂಜಿನೀಯರ್‌ಗಳು, ನಗರ ವಿನ್ಯಾಸಕಾರರು, ಯೋಜನೆಕಾರರು, ನಿರ್ಮಾಣ ಸಲಹೆಗಾರರು ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳು ಸೇರಿದಂತೆ ಚಿಂತಕ ನಾಯಕರುಗಳ ಪರಿವೀಕ್ಷಣೆಗೆ ವಿಶೇಷವಾಗಿ ರೂಪಿಸಿರುವ ಕಾರ್ಯಕ್ರಮ.

ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಇಂಜಿನೀಯರ್‌ಗಳು, ವಾಸ್ತುಶಿಲ್ಪಿಗಳು, ನಗರ ಯೋಜಕರು, ಗುತ್ತಿಗೆದಾರರು, ಸಲಹೆಗಾರರು, ಡೆವಲಪರ್‌ಗಳು, ಬಿಲ್ಡರ್‌ಗಳು, ಸಿಸ್ಟಮ್ ಸಂಯೋಜಕರು, ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಸಂಬಂಧಪಟ್ಟ ನಾಗರಿಕರೆಲ್ಲರಿಗೂ **ಭವಿಷ್ಯದ ನಗರಗಳ** ಬಗ್ಗೆ ಮುನಿಸಿಪಾಲಿಕೆ, ಕೆಪೆಕ್ಸ್ ಮತ್ತು ಎಎಎಂನ ಸಹಸ್ರಮಾನ ಪರ್ವದ ವಾಸ್ತುಶಿಲ್ಪ 3-in-One ವಸ್ತುಪ್ರದರ್ಶನಕ್ಕೆ ಆಹ್ವಾನ

ಸಮಯ: ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ | ಪ್ರವೇಶ ಉಚಿತ

ಸಹಕಾರ : ಭಾರತ ಸರ್ಕಾರದ ಸಚಿವಾಲಯಗಳು
ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಭಾರತ ಸರ್ಕಾರ | ಗೃಹ ವ್ಯವಹಾರಗಳ ಸಚಿವಾಲಯ ಅಗ್ನಿಶಾಮಕ ಸಲಹೆಗಾರರ ಕಚೇರಿ ಭಾರತ ಸರ್ಕಾರ | ನೂತನ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಭಾರತ ಸರ್ಕಾರ

ಸಹಕಾರ : ಕರ್ನಾಟಕ ಸರ್ಕಾರ ಇಲಾಖೆಗಳು
ಪೌರಾಡಳಿತ ನಿರ್ದೇಶನಾಲಯ
ಆಯುಕ್ತರು, ನಗರ ಮತ್ತು ಗ್ರಾಮಾಂತರ ಯೋಜನಾ ಕಾರ್ಯಾಲಯ
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ನಗರ ಭೂ ಸಾರಿಗೆ ನಿರ್ದೇಶನಾಲಯ

ಆತಿಥ್ಯ ನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಮ್ಮೇಳನಕ್ಕೆ ಹಾಜರಾಗಲು, ವಸ್ತು ಪ್ರದರ್ಶನಕ್ಕೆ ಭೇಟಿ ನೀಡಲು - www.municipalika.com/attending/
ಎಲ್ಲಾ ಸಂದರ್ಶಕರಿಗೆ ಪ್ರವೇಶ ಉಚಿತ. 15 ವರ್ಷಕ್ಕಿಂತ ಕೆಳಪಟ್ಟ ಸಂದರ್ಶಕರಿಗೆ ಪ್ರವೇಶವಿರುವುದಿಲ್ಲ.
ಪ್ರಕಟಣೆ : ಪೌರಾಡಳಿತ ನಿರ್ದೇಶನಾಲಯ

ಜನಸ್ಪಂದನ: ಸಮಸ್ಯೆ ಇತ್ಯರ್ಥಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಹೊರದಬ್ಬಿದ ಮಗ; ನೆರವಿಗೆ ತಾಯಿ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಆಸ್ತಿ ತನ್ನ ಹೆಸರಿಗೆ ಬರೆಸಿಕೊಂಡು ಮಗ ನನ್ನನ್ನು ಹೊರ ಹಾಕಿದ್ದಾನೆ. ಎಸಿ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಮಹದೇವಮ್ಮ ಅಳಲು ತೋಡಿಕೊಂಡರು. ಆಗ ಅವರ ಕಣ್ಣುಗಳು ತೇವಗೊಂಡಿದ್ದವು.

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸೋಮವಾರ ನಡೆದ 'ಜನ ಸ್ಪಂದನ'ದಲ್ಲಿ ಮುಖ್ಯಮಂತ್ರಿಯನ್ನು ಭೇಟಿ ಮಾಡಿದ ಮಹದೇವಮ್ಮ, 'ವಿಭಾಗ ಪತ್ರ ಕೊಡಿಸಿ ರಕ್ಷಣೆ ನೀಡಬೇಕು' ಎಂದು ಮನವಿ ಮಾಡಿದರು. ತಕ್ಷಣವೇ ತುಮಕೂರು ಜಿಲ್ಲಾಧಿಕಾರಿಗೆ ಸೂಚನೆ ನೀಡಿದ ಮುಖ್ಯಮಂತ್ರಿ, ಮಹದೇವಪ್ಪ ಅವರಿಗೆ ನ್ಯಾಯ ಕೊಡಿಸುವಂತೆ ಸೂಚಿಸಿದರು.

'ರಾಮನಗರದ ಸುಗ್ಗನಹಳ್ಳಿಯ ರಾಜಮ್ಮ ಎಂಬವರು ತಮ್ಮ ಜಮೀನು ಒತ್ತುವರಿ ಮಾಡಲಾಗಿದೆ' ಎಂದು ನೀಡಿದ ದೂರಿಗೆ ಸ್ಪಂದಿಸಿದ ಮುಖ್ಯಮಂತ್ರಿ, ಒತ್ತುವರಿ ತೆರವು ಮಾಡುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದರು.

'ಮನೆ ಮಾಲೀಕರು ನಾಪತ್ತೆಯಾಗಿದ್ದು, ಬ್ಯಾಂಕಿನವರು ಮನೆ ಜಪ್ತಿಗೆ ಬಂದಿದ್ದಾರೆ. ನಾವು ಈ ಮನೆಗೆ ಲೀಸ್‌ಗೆ ಬಂದಿದ್ದೇವೆ. ಮನೆಯ ಮೇಲೆ ಮಾಲೀಕರು ಸಾಲ ಪಡೆದು, ಅದನ್ನು ಕಟ್ಟದೆ ಪರಾರಿ ಆಗಿದ್ದಾರೆ. ಹಾಕಿದ ಹಣ ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ. ಮಕ್ಕಳೊಂದಿಗೆ ಬೀದಿಗೆ ಬರುವ ಸ್ಥಿತಿ ಇದೆ' ಎಂದು ಮೈಸೂರು ರಸ್ತೆಯ ಬ್ಯಾಟರಾಯನಪುರದ ರಾಜೇಶ್ವರಿ ಮಲ್ಲೇಶ್ ಎಂಬುವರು ಗೋಳು ತೋಡಿಕೊಂಡರು. ತಕ್ಷಣ ನಗರ ಪೊಲೀಸ್ ಕಮಿಷನರ್ ದಯಾನಂದ್ ಅವರನ್ನು ಕರೆದ ಮುಖ್ಯಮಂತ್ರಿ, ಪ್ರಕರಣ ಪರಿಶೀಲಿಸುವಂತೆ ಸೂಚಿಸಿದರು.

ಹೀಗೆ ನೂರಾರು ಮನವಿ, ಬೇಡಿಕೆ, ಕುಂದುಕೊರತೆ, ಅಹವಾಲುಗಳಿಗೆ ಧ್ವನಿಯಾದ ಮುಖ್ಯಮಂತ್ರಿ, ಸಂಬಂಧಿಸಿದ ಅಧಿಕಾರಿಗಳಿಗೆ ಕರೆ ಮಾಡಿ ಸಮಸ್ಯೆಗಳನ್ನು ಇತ್ಯರ್ಥಪಡಿಸುವಂತೆ ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಕಿರುಕುಳ: 'ಬೀದಿ ಬದಿ ವ್ಯಾಪಾರಿಗಳಿಗೆ, ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುವವರಿಗೆ ಪೊಲೀಸರು ಮತ್ತು ಬಿಬಿಎಂಪಿ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ' ಎಂದು ನಿಂಗಮ್ಮ ಎಂಬವರು ದೂರಿದಾಗ, ಪೊಲೀಸ್ ಅಧಿಕಾರಿಗಳು ಮತ್ತು ಬಿಬಿಎಂಪಿ ಅಧಿಕಾರಿಗಳನ್ನು ಕರೆಸಿದ ಮುಖ್ಯಮಂತ್ರಿ, ಕಿರುಕುಳ ನೀಡದಂತೆ ತಿಳಿಸಿದರು.

'ಮನೆ ಕಂದಾಯ ಕಟ್ಟಿದ್ದರೂ ದುಪ್ಪಟ್ಟು ದಂಡ ಹಾಕಿದ್ದಾರೆ. ಕಂದಾಯ ಕಟ್ಟಿದ ರಶೀದಿ ಇಟ್ಟುಕೊಂಡು ಬಿಬಿಎಂಪಿಗೆ ಹೋದರೆ, ನಮಗೆ ಗೊತ್ತಿಲ್ಲ. ಸರ್ಕಾರಕ್ಕೆ ಕೇಳಿ' ಎಂದು ಸಿಬ್ಬಂದಿ ದರ್ಪ ತೋರಿಸುತ್ತಾರೆ ಎಂಬ ವೃದ್ಧೆಯೊಬ್ಬರ ದೂರಿಗೆ ಗರಂ ಆದ ಮುಖ್ಯಮಂತ್ರಿ, ಬಿಬಿಎಂಪಿ ಅಧಿಕಾರಿಯನ್ನು ಕರೆದು ಪ್ರಕರಣ ಇತ್ಯರ್ಥಪಡಿಸಿ ವರದಿ ನೀಡುವಂತೆ ತಿಳಿಸಿದರು.

ಹುಣಸೂರಿನ ಕಲ್ಲಹಳ್ಳಿ ಪಂಚಾಯಿತಿಯ ಲಕ್ಷ್ಮೀಬಾಯಿ ಎನ್ನುವವರು ಅಲೆಮಾರಿ ಡೋಂಗ್ರಿ ಗೆರೆಸಿಯಾ ಸಮುದಾಯದವರಿಗೆ 40 ಮನೆಗಳು ಮಂಜೂರಾಗಿದ್ದು, ಮನೆ ಕಟ್ಟಲು ಅನುಮತಿ ನೀಡುವಂತೆ ಮನವಿ ಮಾಡಿದರು. ತಕ್ಷಣ ಅಲೆಮಾರಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕರೆಸಿ, ಅರ್ಜಿಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಂಡು ವರದಿ ನೀಡುವಂತೆ ಸೂಚಿಸಿದರು.

ರಾಣೆಬೆನ್ನೂರಿನ ಜೀವ ಬೆಳಕು ಅಂಧ ಮಕ್ಕಳ ಶಾಲೆಗೆ ಸಿ.ಎ. ನಿವೇಶನ ಮಂಜೂರಾಗಿದ್ದು, ಇದಕ್ಕಾಗಿ ₹ 9 ಲಕ್ಷ ಪಾವತಿಸುವಂತೆ ಸೂಚಿಸಿದ್ದಾರೆ. ಇದನ್ನು ಪಾವತಿಸಲು ಶಕ್ತರಿಲ್ಲದ ಕಾರಣ ಹಣ ಪಾವತಿಯಿಂದ ವಿನಾಯಿತಿ ನೀಡುವಂತೆ ಮನವಿ ಮಾಡಿದರು. ಹಾವೇರಿ ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿದ ಮುಖ್ಯಮಂತ್ರಿ, ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸೂಚಿಸಿದರು.

ಜಮೀನು ಬಿಡಿಸಿಕೊಡಿ: 'ನನ್ನ ಜಮೀನನ್ನು ಮೈದುನ ಒತ್ತುವರಿ ಮಾಡಿಕೊಂಡಿದ್ದು, ಬಾವಿಯನ್ನೂ ಮುಚ್ಚಿದ್ದಾರೆ. ನನಗೆ ಗಂಡು ಮಕ್ಕಳಿಲ್ಲ. ಹೆಣ್ಣು ಮಕ್ಕಳು ಮದುವೆಯಾಗಿ, ಗಂಡನ ಮನೆಯಲ್ಲಿದ್ದಾರೆ. ಒಬ್ಬರೇ ಇರುವ ನನಗೆ ಜಮೀನು ಬಿಡಿಸಿ ಕೊಡಬೇಕು' ಎಂದು ರಾಮನಗರ ಜಿಲ್ಲೆಯ ರಾಜಮ್ಮ ಎಂಬ ವೃದ್ಧೆ ಮುಖ್ಯಮಂತ್ರಿಗೆ ಮನವಿ ಮಾಡಿದರು. ರಾಮನಗರ ಜಿಲ್ಲಾಧಿಕಾರಿ ಸಂಪರ್ಕಿಸಿದ ಮುಖ್ಯಮಂತ್ರಿ ಸ್ಥಳ ಪರಿಶೀಲಿಸಿ, ರಾಜಮ್ಮ ಅವರ ಜಮೀನು ಬಿಡಿಸಿಕೊಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

'ನಾಗಮಂಗಲದಿಂದ ತಾಳವಾಡಿಯ ಮಾರ್ಗ ಮಧ್ಯೆ ಇರುವ ವ್ಯವಸಾಯ ಮಾಡುವ ನನ್ನ ಜಮೀನನ್ನು ಬೈಪಾಸಿಗೆ ಒತ್ತುವರಿ ಮಾಡಿಕೊಳ್ಳಲಾಗಿದೆ' ಎಂದು ಮಂಡ್ಯ ಜಿಲ್ಲೆಯ 96 ವರ್ಷದ ಪರಂಧಾಮಯ್ಯ ದೂರು ನೀಡಿದರು. ಮಂಡ್ಯ ಜಿಲ್ಲಾಧಿಕಾರಿಗೆ ತಕ್ಷಣ ಮಾತನಾಡಿದ ಮುಖ್ಯಮಂತ್ರಿ, ಕ್ರಮ ವಹಿಸುವಂತೆ ಸೂಚಿಸಿದರು.

'ನನ್ನ ತಂದೆ ಜಲ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗಲೇ ಮೃತಪಟ್ಟಿದ್ದು, ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ಬಗ್ಗೆ ಮೊದಲಿಗೆ ಹುದ್ದೆ ಖಾಲಿ ಇಲ್ಲವೆಂದು ತಿಳಿಸಲಾಗಿತ್ತು. ನಂತರ ಅಪ್ರಾಪ್ತರಾದ್ದರಿಂದ ಉದ್ಯೋಗ ನೀಡಲು ಅವಕಾಶವಿಲ್ಲ ಎಂದು ತಿಳಿಸಲಾಗಿತ್ತು. ನಿಯಮಾನುಸಾರ ವಯಸ್ಕರಾದ ನಂತರ ಎರಡು ವರ್ಷಗಳೊಳಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದರಿಂದ ನನಗೆ ಉದ್ಯೋಗ ದೊರಕಿಸಬೇಕು' ಎಂದು ಬೆಳಗಾವಿಯ ಉಜ್ಮಾ ಬಾನು ಮನವಿ ಮಾಡಿದರು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮಂಡಳಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬನವತಿ ಗ್ರಾಮದಲ್ಲಿ 20 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, ಖಾತೆ ಮಾಡಿಕೊಟ್ಟಿಲ್ಲ' ಎಂದು ನರಸಿಂಹಮೂರ್ತಿ ಎಂಬವರು ಮನವಿ ಸಲ್ಲಿಸಿದರು. ಕೂಡಲೇ ಕ್ರಮ ವಹಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗೆ ಮುಖ್ಯಮಂತ್ರಿ ಸೂಚಿಸಿದರು. ಚನ್ನಪಟ್ಟಣ ತಾಲ್ಲೂಕು ಮಳೂರು ಗ್ರಾಮದಲ್ಲಿ ಜಮೀನಿಗೆ ಗಾಡಿ ಹೊಡೆಯಲು ರಸ್ತೆ ನಿರ್ಮಾಣ ಕಾರ್ಯವನ್ನು ಗ್ರಾಮ ಪಂಚಾಯಿತಿಯವರು ಅರ್ಧಕ್ಕೆ ಸ್ಥಗಿತಗೊಳಿಸಿರುವುದರಿಂದ ತೊಂದರೆಯಾಗಿದೆ ಎಂದು ಗ್ರಾಮಸ್ಥರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸ್ವ- ಉದ್ಯೋಗಕ್ಕೆ ಸಾಲ ಕೊಡಿಸಿ: 'ಮಗ ವೀರೇಶ್‌ಗೆ ಕೆಎಂಎಫ್‌ನಲ್ಲಿ ಕೆಲಸ ಕಾಯಂ ಆಗಬೇಕು ಮತ್ತು ಸ್ವಯಂ ಉದ್ಯೋಗ ಮಾಡಲು ಬ್ಯಾಂಕ್‌ನಿಂದ ಸಾಲ ಒದಗಿಸಿಕೊಡಬೇಕು' ಎಂದು ರಾಮನಗರದ ಅಂಧ ವೃದ್ಧ ಷಣ್ಮುಖಪ್ಪ ಬೇಡಿಕೆ ಮುಂದಿಟ್ಟರು. ಅಭಿವೃದ್ಧಿ ಆಯುಕ್ತರಾದ ಶಾಲಿನಿ ರಜನೀಶ್ ಅವರನ್ನು ಕರೆದು ಸಾಲ ಸೌಲಭ್ಯಕ್ಕೆ ವ್ಯವಸ್ಥೆ ಮಾಡಲು ಇರುವ ಮಾರ್ಗಗಳನ್ನು ಪರಿಶೀಲಿಸುವಂತೆ ಮುಖ್ಯಮಂತ್ರಿ ಸೂಚಿಸಿದರು. ಪುತ್ರನ ಕೆಲಸ ಕಾಯಂಗೂ ಸೂಚಿಸುವುದಾಗಿ ತಿಳಿಸಿದರು.

'40 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದು, ಸಾಗುವಳಿ ಚೀಟಿ ಒದಗಿಸಬೇಕು' ಎಂದು ಚಿಕ್ಕಮಗಳೂರು ಜಿಲ್ಲೆ ಕರ್ಕಿಪೇಟೆಯ ದಿನೇಶ್ ಎಂಬವವರ ಮನವಿಗೆ, ಸ್ಪಂದಿಸಿದ ಮುಖ್ಯಮಂತ್ರಿ, ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಸೂಚಿಸಿದರು.

ಜನಸ್ಪಂದನದಲ್ಲಿ ಮುಖ್ಯಮಂತ್ರಿಗೆ ಮನವಿ ಕೊಡಲು ಅರ್ಜಿ ತುಂಬಿದ ಜನರು, ಸರತಿ ಸಾಲಿನಲ್ಲಿ ಕೂತಿದ್ದ ಚಿತ್ರಣ

ಸರದಿ ಸಾಲಿನಲ್ಲಿ ನಿಂತಿದ್ದ ಜನರು

ಪ್ರಜಾವಾಣಿ ಚಿತ್ರಗಳು

'ಮಧ್ಯರಾತ್ರಿ ಬೆದರಿಸಿ ಓಡಿಸಲು ಯತ್ನಿಸಿದ ಆಸ್ಪತ್ರೆ ಸಿಬ್ಬಂದಿ'

'ಆರೋಗ್ಯ ಹದಗೆಟ್ಟು ವಿಕ್ಟೋರಿಯಾ ಆಸ್ಪತ್ರೆಗೆ ಅ. 20 ರಂದು ಹೋಗಿದ್ದೆ. ರಾತ್ರಿಯಿಡೀ ಬೇಧಿ ಆಗಿದ್ದರಿಂದ ಬಟ್ಟೆ ಗಲೀಜಾಗಿತ್ತು. ಆಸ್ಪತ್ರೆಯಿಂದ ತೆರಳುವಂತೆ ಆಸ್ಪತ್ರೆ ಸಿಬ್ಬಂದಿ ಮಧ್ಯರಾತ್ರಿಯಲ್ಲಿ ಬೆದರಿಸಿದರು. ಆಯಾಸಗೊಂಡಿದ್ದ ನನಗೆ ಗ್ಲೂಕೋಸ್ ಕೂಡ ಹಾಕದೆ ಕೆಟ್ಟದಾಗಿ ವರ್ತಿಸಿದರು' ಎಂದು ಸೀಗೇಹಳ್ಳಿಗೇಟ್ ನಿವಾಸಿ ಸುನೀತಾ ದೂರಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರನ್ನು ಕರೆದ ಮುಖ್ಯಮಂತ್ರಿ, ಸಂಬಂಧಪಟ್ಟವರಿಂದ ವಿವರಣೆ ಕೇಳುವಂತೆ ಸೂಚಿಸಿದರು. ಬಳಿಕ ತಮ್ಮ ಎರಡನೇ ದೂರು ಮುಂದಿಟ್ಟು, 'ಮನೆಯ ಮಾಲೀಕರು ಲೀಸ್ ಹಣ ವಾಪಸ್ ಕೊಡದೆ ಸತಾಯಿಸುತ್ತಿದ್ದಾರೆ' ಎಂದರು. ಮನೆ ಮಾಲೀಕರ ವಿವರ ಪಡೆದು ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಪೊಲೀಸ್ ಆಯುಕ್ತ ದಯಾನಂದ್‌ಗೆ ಮುಖ್ಯಮಂತ್ರಿ ಸಲಹೆ ನೀಡಿದರು.

'ಶಿಕ್ಷಕರ ಹುದ್ದೆ: ನ್ಯಾಯ ಕೊಡಿ'

'ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ತಂದೆಯ ಜಾತಿ ಹಾಗೂ ಆದಾಯ ಪ್ರಮಾಣಪತ್ರ ಸಲ್ಲಿಸಿದ ಕಾರಣಕ್ಕೆ ಸುಮಾರು 1,800 ವಿವಾಹಿತ ಮಹಿಳಾ ಅಭ್ಯರ್ಥಿಗಳು ಉದ್ಯೋಗ ವಂಚಿತರಾಗಿದ್ದೇವೆ. ನಮಗೆ ನ್ಯಾಯ ಒದಗಿಸಬೇಕು' ಎಂದು ಮುಖ್ಯಮಂತ್ರಿಗೆ ಕೆಲವು ಅಭ್ಯರ್ಥಿಗಳು ಮನವಿ ಮಾಡಿದರು.

'ನೇಮಕಾತಿ ಅಧಿಸೂಚನೆ ಅನ್ವಯ ಮಾಹಿತಿ ಭರ್ತಿ ಮಾಡಿದ್ದೇವೆ. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನಮ್ಮನ್ನು ಮೀಸಲಾತಿಯಿಂದ ಹೊರಗಿಟ್ಟು, ಸಾಮಾನ್ಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಇದನ್ನು ಸರಿಪಡಿಸಬೇಕು' ಎಂದೂ ಮನವಿ ಸಲ್ಲಿಸಿದರು. ಈ ಸಮಸ್ಯೆಯನ್ನು ಆದ್ಯತೆಯಲ್ಲಿ ಪರಿಶೀಲಿಸಿ, ಬಗೆಹರಿಸುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗೆ ಮುಖ್ಯಮಂತ್ರಿ ಸೂಚಿಸಿದರು.

ಅಹವಾಲುಗಳನ್ನು ನೋಂದಣಿ ಮಾಡಿಸಲು ನೂಕುನುಗ್ಗಲು

ರಾಹುಲ್ ಭೇಟಿ ಮಾಡಿಸಿ...!

'ರಾಹುಲ್ ಗಾಂಧಿ ಭೇಟಿ ಮಾಡಿಸಬೇಕು', 'ಮುಂದೆಯೂ ನೀವೇ ಸಿಎಂ ಆಗಬೇಕು', 'ನಿಗಮ- ಮಂಡಳಿಗೆ ನೇಮಿಸಬೇಕು'... ಹೀಗೆ ಸಿದ್ದರಾಮಯ್ಯ ಅವರಿಗೆ ಕೆಲವರು ಬೇಡಿಕೆ ಇಟ್ಟರು. ಅದಕ್ಕೆ ಅವರು, 'ಆಯ್ತಪ್ಪಾ ನೋಡೋಣ' ಎಂದು ಹೇಳಿ ಕಳುಹಿಸಿದರು.

ಬೆಳಗಾವಿಯ ಅಥಣಿಯ ಅಶೋಕ್ ತಲವಾರ ಎಂಬವರು, 'ಊರಲ್ಲಿ ಇಂದಿರಾ ಗಾಂಧಿಯ ಪ್ರತಿಮೆ ಮಾಡಿಸಿದ್ದೇನೆ. ಅದನ್ನು ತೋರಿಸಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿಸಿ' ಎಂದು ಮನವಿ ಮಾಡಿದರು. ಮೈಸೂರು ಜಿಲ್ಲೆಯ ಟಿ. ನರಸೀಪುರದ ಲಿಂಗಯ್ಯ ಎಂಬವರು, '2028ಕ್ಕೆ ನೀನೇ ಸಿಎಂ ಆಗಬೇಕು. ನಿಮ್ಮನ್ನು ಬಿಟ್ಟು ಬೇರೆ ಯಾರಿಗೂ ರಾಜ್ಯವನ್ನು ಆಳ್ವಿಕೆ ಮಾಡಲು ಆಗುವುದಿಲ್ಲ. ನಾನು 35 ವರ್ಷದಿಂದ ಕಾಂಗ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದು, ಎಡಗೈ ಸಮುದಾಯದವ. ಅಳಿಯ ಶಿವಣ್ಣನನ್ನು ಆಶ್ರಯ ಸಮಿತಿಗೆ ಸದಸ್ಯರನ್ನಾಗಿ ನೇಮಿಸಬೇಕು' ಎಂದು ಮನವಿ ಮಾಡಿದರು.

ಸಿಎಂ ನಿಧಿಯಿಂದ ಹಣ: ಆರೋಗ್ಯ ಸಮಸ್ಯೆ ಸಹಿತ ಬಂದ ಕೆಲವರು 'ಮುಖ್ಯಮಂತ್ರಿ ಪರಿಹಾರ ನಿಧಿ'ಯಿಂದ ನೆರವಿಗಾಗಿ ಮನವಿ ಸಲ್ಲಿಸಿದರು. ಗದಗದ ಅಂಜಲಿ ಕುಂಬಾರ ಎಂಬವರ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ, ಅವರ ಆರು ತಿಂಗಳ ಮಗು ಮೇಘಾಶ್ರೀಯ ತೆರೆದ ಹೃದಯ ಚಿಕಿತ್ಸೆಗೆ ₹ 2 ಲಕ್ಷ ಮಂಜೂರು ಮಾಡಿದರು.

ಕಿಡ್ನಿ ಕಾಯಿಲೆಯಿಂದ ಬಳಲುತ್ತಿರುವ ತಮ್ಮ ಸಹೋದರ ವೆಂಕಟರಾಜ್ ಎಂಬುವವರ ನೆರವಿಗೆ ಬರುವಂತೆ ಬಸವರಾಜು ಎಂಬವರು ಮಾಡಿದ ಮನವಿಗೆ ಮುಖ್ಯಮಂತ್ರಿ ₹ 1 ಲಕ್ಷ ನೆರವು ಮಂಜೂರು ಮಾಡಿದರು.

ಅಹವಾಲುಗಳ ಮಹಾಪೂರ

ಒಂದನೇ ಪುಟದಿಂದ...

ಅಲ್ಲದೆ, ಸೂಕ್ತ ಕ್ರಮಕ್ಕೆ ಬೆಳಗಾವಿ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದರು.

ಊಟಕ್ಕೆ ಹೋದವರ ಮೇಲೆ ಗರಂ: ಜನಸ್ಪಂದನ ನಡುವೆ ಊಟಕ್ಕೆ ತೆರಳಿದ ಅಧಿಕಾರಿಗಳ ಮೇಲೆ ಗರಂ ಆದ ಮುಖ್ಯಮಂತ್ರಿ, 'ನಾನೇ ಇಲ್ಲಿ ಹಸಿದುಕೊಂಡು ಕುಳಿತಿದ್ದೇನೆ. ಅವರು ಅಷ್ಟು ಬೇಗ ಊಟಕ್ಕೆ ಹೋಗಬೇಕೇ? ಯಾರು ಊಟಕ್ಕೆ ಹೋಗಿದ್ದಾರೋ ಅವರನ್ನು ತಕ್ಷಣ ಬರಲು ಹೇಳು' ಎಂದು ತಮ್ಮ ಆಪ್ತ ಸಿಬ್ಬಂದಿಗೆ ಸೂಚಿಸಿದರು. ಮಧ್ಯಾಹ್ನ ಊಟಕ್ಕೆಂದು ಮನೆಗೆ ತೆರಳಲು ಎದ್ದ ಮುಖ್ಯಮಂತ್ರಿ, ಅಹವಾಲು ಸಲ್ಲಿಸಲು ಬಂದಿರುವವರ ಸಂಖ್ಯೆ ಇನ್ನೂ ಬಹಳಷ್ಟಿದೆ ಎಂದು ಮಾಹಿತಿ ಲಭ್ಯವಾದ ಕೂಡಲೇ ಸ್ಥಳಕ್ಕೆ ಊಟ ತರಿಸಿಕೊಂಡರು.

ನಿವೇಶನಕ್ಕಾಗಿ ಅಲೆದಾಟ: ಹಿರಿಯ ನಾಗರಿಕ ಸುಬ್ರಮಣ್ಯಂ ಎಂಬವರು ವಿಶ್ವ ಭಾರತಿ ಸೊಸೈಟಿಯಲ್ಲಿ ನಿವೇಶನ ಹಂಚಿಕೆಯಾದರೂ ನಿವೇಶನ ಸಿಗದೇ ಅಲೆದಾಡುತ್ತಿರುವುದಾಗಿ ನೋವು ಹೇಳಿಕೊಂಡರು. '30 ವರ್ಷದಿಂದ ನಿವೇಶನಕ್ಕಾಗಿ ಅಲೆದಾಡುತ್ತಿದ್ದೇನೆ. ಕೋರ್ಟ್ ತೀರ್ಪು ನನ್ನ ಪರವಾಗಿ ಬಂದಿದ್ದರೂ ಇನ್ನೂ ನಿವೇಶನ ಸಿಕ್ಕಿಲ್ಲ. ಆ ನಿವೇಶನದಲ್ಲಿ ಬೇರೆಯವರು ಮನೆ ಕಟ್ಟಿದ್ದಾರೆ' ಎಂದು ದೂರು ನೀಡಿದರು. ಸಮಸ್ಯೆ ಬಗೆಹರಿಸುವಂತೆ ಬಿಡಿಎ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

ಹರಿಹರ ಶಾಸಕರ ವಿರುದ್ಧ ದೂರು: 'ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯನ್ನು ಬೇರೆ ಕಡೆ ಸ್ಥಳಾಂತರಿಸಲು ಕೆಲವು ಸಂಘಟನೆಗಳು ಬಿಇಒ ಮೇಲೆ ಒತ್ತಡ ಹಾಕುತ್ತಿವೆ. ಹರಿಹರ ಶಾಸಕ ಹರೀಶ್ ತೊಂದರೆ ಕೊಡುತ್ತಿದ್ದಾರೆ' ಎಂದು ಶಾಲಾಭಿವೃದ್ಧಿ ಸಮಿತಿ ಸದಸ್ಯರು ದೂರು ನೀಡಿದರು. ಕನ್ನಡ ಮತ್ತು ಉರ್ದು ಶಾಲೆ ಅದಾಗಿದ್ದು, ಕನ್ನಡ ಶಾಲೆಯಲ್ಲಿ 18 ವಿದ್ಯಾರ್ಥಿಗಳು ಇದ್ದರೆ, ಉರ್ದು ಶಾಲೆಯಲ್ಲಿ 16 ವಿದ್ಯಾರ್ಥಿಗಳು ಇದ್ದಾರೆ. ಶಾಸಕ ಹಾಗೂ ಬಿಇಒ ಅವರು ಉರ್ದು ಶಾಲೆಯನ್ನು ಸ್ಥಳಾಂತರಿಸಲು ಒತ್ತಡ ಹೇರುತ್ತಿದ್ದಾರೆ ಎಂದು ದೂರು ನೀಡಿದರು. ಈ ಮನವಿಗೆ ಸ್ಪಂದಿಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದರು.

'ನಿಮ್ಮ ಎಲ್ಲ ಯೋಜನೆಗಳು ನಮಗೆ ಇಷ್ಟವಾಗಿವೆ. 'ಶಕ್ತಿ' ಯೋಜನೆಗೆ ಬಸ್ಸುಗಳ ಸಂಖ್ಯೆ ಹೆಚ್ಚಿಸಬೇಕು' ಎಂದು ವೃದ್ಧೆಯೊಬ್ಬರು ಮನವಿ ಮಾಡಿದರು.

ಹೃದ್ರೋಗ ಚಿಕಿತ್ಸೆಗಾಗಿ ನೆರವು ನೀಡುವಂತೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಕಲಾವಿದ ಪುಟ್ಟಸ್ವಾಮಿ ಮನವಿ ಮಾಡಿದರು. ಪುಟ್ಟಸ್ವಾಮಿಗೆ ನೆರವು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಮುಖ್ಯಮಂತ್ರಿ ಸೂಚಿಸಿದರು. ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಮುಷ್ತಾಕ್ ಅವರು ತಮಗೆ ಮಂಜೂರಾಗಿರುವ ನಿವೇಶನವನ್ನು ಬೇರೆಯವರು ಒತ್ತುವರಿ ಮಾಡಿಕೊಂಡಿದ್ದಾರೆ. ಇದನ್ನು ಬಿಡಿಸಿಕೊಡುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ಕೊನೆ ಹಂತದಲ್ಲಿ, ಅಹವಾಲು ನೀಡಲು ಸರದಿ ಸಾಲಿನಲ್ಲಿ ನಿಂತಿದ್ದ ಜನರ ಬಳಿಗೇ ತೆರಳಿ ಮುಖ್ಯಮಂತ್ರಿ ಅರ್ಜಿಗಳನ್ನು ಪಡೆದು, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ನೀಡಿದರು. ಅದಕ್ಕೂ ಮೊದಲು ಅಂಗವಿಕಲರಿಂದ ಅಹವಾಲುಗಳನ್ನು ಸ್ವೀಕರಿಸಿ, ತ್ವರಿತವಾಗಿ ಪರಿಹರಿಸುವಂತೆ ಸೂಚಿಸಿದರು.

'ಅಹವಾಲುಗಳಿಗೆ ತಕ್ಷಣ ಸ್ಪಂದಿಸಿ'

ಒಂದನೇ ಪುಟದಿಂದ...

'ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದು. 15 ದಿನಗಳ ಒಳಗೆ ಅವುಗಳನ್ನು ವಿಲೇವಾರಿ ಮಾಡಬೇಕು. ಇತ್ಯರ್ಥಪಡಿಸಲು ನಿಯಮಾವಳಿಗಳಡಿ ಅವಕಾಶವಿಲ್ಲದೇ ಇದ್ದರೆ, ಹಿಂಬರಹ ನೀಡಬೇಕು. ತಳಹಂತದ ಅಧಿಕಾರಿಗಳು ಅರ್ಜಿಯನ್ನು ಇತ್ಯರ್ಥಪಡಿಸಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಮುಖ್ಯಮಂತ್ರಿ ಕಚೇರಿಗೆ ಮಾಹಿತಿ ನೀಡಬೇಕು' ಎಂದರು.

'ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಆಸ್ಪತ್ರೆ, ಪೊಲೀಸ್ ಠಾಣೆ, ಹಾಸ್ಟೆಲ್‌ಗಳಿಗೆ ಭೇಟಿ ನೀಡಬೇಕು. ಜನರ ಸಮಸ್ಯೆ ಬಗೆಹರಿಸಬೇಕು. ವಿಳಂಬ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ, ಜನರಿಗೆ ಕೂಡಲೇ ಸ್ಪಂದಿಸಬೇಕು' ಎಂದು ಸಲಹೆ ನೀಡಿದರು.

ರಾಕೇಶ್ ಸಿದ್ದರಾಮಯ್ಯ ಟ್ರಸ್ಟ್‌ಗೆ ಜಮೀನು

'ದಿವಂಗತ ರಾಕೇಶ್ ಸಿದ್ದರಾಮಯ್ಯ ಹೆಸರಿನ ಟ್ರಸ್ಟ್‌ಗೆ ಗದಗ ನಗರದಲ್ಲಿ ಈ ಹಿಂದೆ ಮಂಜೂರಾಗಿದ್ದ 22 ಗುಂಟೆ ಜಮೀನನ್ನು ಕಿತ್ತೂರು ಚೆನ್ನಮ್ಮ ಸಮುದಾಯ ಭವನಕ್ಕೆ ಹಸ್ತಾಂತರಿಸುವಂತೆ ಸಚಿವ ಎಚ್.ಕೆ. ಪಾಟೀಲ ಅವರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ. ಟ್ರಸ್ಟ್‌ಗೆ ನಿವೇಶನ ಮಂಜೂರು ಮಾಡಬೇಕು' ಎಂದು ಟ್ರಸ್ಟ್ ಮುಖ್ಯಸ್ಥ ರಾಮಕೃಷ್ಣ ರೊಳ್ಳಿ ಮನವಿ ಮಾಡಿದರು. ಗದಗ ಜಿಲ್ಲಾಧಿಕಾರಿಗೆ ಕರೆ ಮಾಡಿದ ಮುಖ್ಯಮಂತ್ರಿ, ಮಂಜೂರಾಗಿದ್ದ 22 ಗುಂಟೆ ನಿವೇಶನ ನೀಡುವಂತೆ ಸೂಚನೆ ನೀಡಿದರು.

ಕನಕಪುರದಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜು

ರಾಮನಗರ ಜಿಲ್ಲೆಗೆ 2 ಸರ್ಕಾರಿ ವೈದ್ಯಕೀಯ ಕಾಲೇಜು ಭಾಗ್ಯ; ಸಿಂಡಿಕೇಟ್‌ನಿಂದ ಅನುಮೋದನೆ

ಪ್ರಜಾವಾಣಿ ವಾರ್ತೆ

ರಾಮನಗರ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರದಲ್ಲಿ ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸಲು ನ. 24ರಂದು ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಸಿಂಡಿಕೇಟ್ ಸಭೆ ಅನುಮೋದನೆ ನೀಡಿದೆ.

ರಾಮನಗರದ ವಿ.ವಿ ಕ್ಯಾಂಪಸ್ ನಲ್ಲೊಂದು ಹಾಗೂ ಕನಕಪುರದಲ್ಲಿ ಮತ್ತೊಂದು ಹೀಗೆ ರಾಮನಗರ ಜಿಲ್ಲೆಯೊಂದರಲ್ಲಿಯೇ 2 ಸರ್ಕಾರಿ ವೈದ್ಯಕೀಯ ಕಾಲೇಜುಗಳು ತಲೆ ಎತ್ತಲಿವೆ.

ಇದರೊಂದಿಗೆ ರಾಮನಗರ ವೈದ್ಯಕೀಯ ಕಾಲೇಜು ಕನಕಪುರಕ್ಕೆ ಸ್ಥಳಾಂತರವಾಗಿದೆ ಎಂಬ ಗೊಂದಲಗಳಿಗೆ ತೆರೆ ಬಿದ್ದಿದೆ. ವೈದ್ಯಕೀಯ ಕಾಲೇಜು ಸ್ಥಳಾಂತರ ವಿವಾದ ತೀವ್ರ ರಾಜಕೀಯ ಬಣ್ಣ ಪಡೆದುಕೊಂಡಿತ್ತು. ಸ್ಥಳಾಂತರ ವಿರೋಧಿಸಿ ಬಿಜೆಪಿ, ಜೆಡಿಎಸ್ ಜಂಟಿ ನೇತೃತ್ವದಲ್ಲಿ ಹೋರಾಟ ನಡೆದು, ರಾಮನಗರ ಬಂದ್ ಕೂಡ ಮಾಡಲಾಗಿತ್ತು.

ಹೊಸ ವೈದ್ಯಕೀಯ ಕಾಲೇಜು ಆರಂಭಕ್ಕೆ ಆರ್‌ಜಿಯುಎಚ್‌ಎಸ್ ಇತ್ತೀಚೆಗೆ ತನ್ನ ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಿತ್ತು. ಈ ಹಿನ್ನೆಲೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿಯು ವಿ.ವಿ.ಯ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಭೇಟಿ ಮಾಡಿ ಕನಕಪುರದಲ್ಲಿ ವೈದ್ಯಕೀಯ ಕಾಲೇಜಿನ ಅಗತ್ಯ ಮತ್ತು ಕಾರ್ಯಸಾಧ್ಯತೆ ಕುರಿತು ವರದಿ ನೀಡಿತ್ತು. ಆ ಮೇರೆಗೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ವಿ.ವಿ ಮೂಲಗಳು ತಿಳಿಸಿವೆ.

150 ಸೀಟಿಗೆ ಕೋರಿಕೆ: ರಾಜ್ಯ ಸರ್ಕಾರವು ರಾಮನಗರ ಮತ್ತು ಕನಕಪುರ ವೈದ್ಯಕೀಯ ಕಾಲೇಜಿಗೆ ತಲಾ 150 ಸೀಟುಗಳನ್ನು ಕೋರಿ ಅರ್ಜಿ ಹಾಕಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಸದ್ಯ 10 ಲಕ್ಷ ಜನಸಂಖ್ಯೆಗೆ 100 ಸೀಟುಗಳ ಮಿತಿ ಹಾಕಿದೆ. ಸರ್ಕಾರ ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಹೆಚ್ಚುವರಿ ತಲಾ 50 ಸೀಟುಗಳ ಕುರಿತು ಆಯೋಗವೇ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ.

ಹದಿನಾರು ವರ್ಷಗಳಿಂದ ರಾಮನಗರದ ಆರ್‌ಜಿಯುಎಚ್‌ಎಸ್ ಕ್ಯಾಂಪಸ್ ಮತ್ತು ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ನಾಲ್ಕು ಸಲ ಭೂಮಿ ಪೂಜೆ ನಡೆದರೂ, ಕಾಮಗಾರಿ ಶುರುವಾಗದೆ ನನೆಗುದಿಗೆ ಬಿದ್ದಿತ್ತು. ಎರಡು ತಿಂಗಳ ಹಿಂದೆಯಷ್ಟೇ ಸ್ಥಳೀಯ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮತ್ತೇ ಐದನೇ ಸಲ ಭೂಮಿ ಪೂಜೆ ನೆರವೇರಿಸಿದ್ದರು. ಸದ್ಯ ಕಾಮಗಾರಿ ಪ್ರಗತಿಯಲ್ಲಿದೆ.

ವರದಿ ಶಿಫಾರಸಿನ ಮೇರೆಗೆ ಅನುಮೋದನೆ: ಕುಲಪತಿ

'ಕನಕಪುರದಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಕೋರಿ ಸರ್ಕಾರವು ವಿ.ವಿ.ಗೆ ಅರ್ಜಿ ಹಾಕಿತ್ತು. ಆ ಹಿನ್ನೆಲೆಯಲ್ಲಿ ತಜ್ಞರ ತಂಡವನ್ನು ಸ್ಥಳಕ್ಕೆ ಕಳಿಸಿ ಪರಿಶೀಲನೆ ನಡೆಸಲಾಗಿತ್ತು. ವಿವಿಧ ಮಾನದಂಡಗಳ ಮೇರೆಗೆ ತಂಡವು ನೀಡಿದ ವರದಿ ಮೇರೆಗೆ ಸಿಂಡಿಕೇಟ್ ಸಭೆಯಲ್ಲಿ ಕಾಲೇಜಿಗೆ ಅನುಮೋದನೆ ಕೊಟ್ಟಿದ್ದೇವೆ. ಮುಂದಿನ ಹಂತವಾಗಿ ಸರ್ಕಾರವು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ಅರ್ಜಿ ಹಾಕಬೇಕು. ಅಲ್ಲಿ ಅಂತಿಮ ಅನುಮತಿ ಸಿಗಬೇಕಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಕೆ. ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಅಭಿವೃದ್ಧಿಯ ಬದ್ಧತೆಗೆ ಸಾಕ್ಷಿ: ಶಾಸಕ

ಎಚ್.ಎ. ಇಕ್ಬಾಲ್

'ಜನರ ಗಮನ ತಮ್ಮತ್ತ ಸೆಳೆಯಲು ಕೆಲವರು ವೈದ್ಯಕೀಯ ಕಾಲೇಜು ಸ್ಥಳಾಂತರ ಕುರಿತು ಅನಗತ್ಯ ಗೊಂದಲ ಸೃಷ್ಟಿಸಿದ್ದರು. ಸ್ವಾರ್ಥ ರಾಜಕಾರಣಕ್ಕಾಗಿ ಕಾಲೇಜು ಹೋರಾಟದ ನೆಪದಲ್ಲಿ ಬಂದ್ ಕೂಡ ಮಾಡಿದ್ದರು. ಈಗ, ಅದಕ್ಕೆ ಉತ್ತರ ಸಿಕ್ಕಿದೆ. ರಾಮನಗರದ ಜೊತೆಗೆ ಕನಕಪುರದಲ್ಲೂ ಪ್ರತ್ಯೇಕ ವೈದ್ಯಕೀಯ ಕಾಲೇಜಿಗೆ ಅನುಮೋದನೆ ಸಿಕ್ಕಿದೆ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಪ್ರತಿಕ್ರಿಯಿಸಿದರು.

ಎಲ್‌.ಕೆ. ಅತೀಕ್ ಸಿ.ಎಂ ಎಸಿಎಸ್

ಎಲ್‌.ಕೆ. ಅತೀಕ್

ಬೆಂಗಳೂರು: ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಹಿರಿಯ ಐಎಎಸ್ ಅಧಿಕಾರಿ ಎಲ್.ಕೆ. ಅತೀಕ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯನ್ನಾಗಿ ಸೋಮವಾರ ನೇಮಕ ಮಾಡಲಾಗಿದೆ.

ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಹಿರಿಯ ಐಎಎಸ್ ಅಧಿಕಾರಿ ರಜನೀಶ್ ಗೋಯಲ್ ಅವರನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ. ಈ ಕಾರಣದಿಂದ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ಅವರನ್ನು ಮುಕ್ತಗೊಳಿಸಿ, ಆ ಹುದ್ದೆಗೆ ಅತೀಕ್ ಅವರನ್ನು ನೇಮಿಸಲಾಗಿದೆ.

ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಅತೀಕ್ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ಈ ಬಾರಿ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯ ಹೊಣೆಯನ್ನೂ ವಹಿಸಲಾಗಿದೆ.

'ಲೂಟಿ ಸರಿಯೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಟ್ಟ ಮಾತನ್ನು ಉಳಿಸಿಕೊಳ್ಳದೇ ಕನ್ನಡಿಗರ ಕಿವಿ ಮೇಲೆ ಹೂವಿಟ್ಟು ಈಗ ಜನರ ಆಕ್ರೋಶಕ್ಕೆ ಒಳಗಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ಮುಖ್ಯ ಪ್ರಶ್ನೆಗಳಿಗೆ ಉತ್ತರಿಸಬೇಕು' ಎಂದು ಬಿಜೆಪಿ 'ಎಕ್ಸ್' (ಟ್ವೀಟ್) ಮಾಡಿದೆ.

'ಮೋದಿ ಸರ್ಕಾರ ನೀಡುತ್ತಿರುವ 5 ಕೆ.ಜಿ ಅಕ್ಕಿಯನ್ನು ನೀವು ಏಕೆ ಕೊಡುತ್ತಿಲ್ಲ? ನೀವೇ ಹೇಳಿದ ಹತ್ತು ಕೆ.ಜಿ ಅಕ್ಕಿಯನ್ನು ಏಕೆ ಕೊಟ್ಟಿಲ್ಲ? ಗೃಹಲಕ್ಷ್ಮಿ ಹೆಸರಿನಲ್ಲಿ ಸ್ವಾಭಿಮಾನಿ ಮಹಿಳೆಯರನ್ನು ವಂಚಿಸಿದ್ದು ಸರಿಯೆ' ಎಂದು ಬಿಜೆಪಿ ಪ್ರಶ್ನಿಸಿದೆ.

'ಕನ್ನಡಿಗರ ಹಣವನ್ನು ಲೂಟಿ ಮಾಡಿ ಹೈಕಮಾಂಡ್ ಹೊಟ್ಟೆ ತುಂಬಿಸುತ್ತಿರುವುದು ಸರಿಯೇ? ಸರಿಯಾಗಿ ಬರ ನಿರ್ವಹಣೆಯನ್ನು ಮಾಡುತ್ತಿಲ್ಲ. ಪರಿಹಾರವೂ ಕೊಟ್ಟಿಲ್ಲ ಏಕೆ? ನಾಡಿನ ಜನತೆ ಸಂಕಷ್ಟದಲ್ಲಿರುವಾಗ ನಿಮಗೆ ಪಂಚರಾಜ್ಯ ಚುನಾವಣೆ ಮುಖ್ಯವೇ' ಎಂದೂ ಬಿಜೆಪಿ ಕೇಳಿದೆ.

ನಿಗಮ- ಮಂಡಳಿ ನೇಮಕ ಪಟ್ಟಿ ಇಂದೇ ಅಂತಿಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ- ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಎರಡನೇ ಸುತ್ತಿನ ಸಭೆ ನಡೆಸಲು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಮಂಗಳವಾರ (ನ. 28) ನಗರಕ್ಕೆ ಬರಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ಈ ಸಭೆಯಲ್ಲಿ ನಿಗಮ- ಮಂಡಳಿಗಳಿಗೆ ನೇಮಕ ಬಹುತೇಕ ಅಂತಿಮಗೊಳ್ಳಲಿದೆ. ಬಳಿಕ ಪಟ್ಟಿಯನ್ನು ಹೈಕಮಾಂಡ್‌ಗೆ ಸಲ್ಲಿಸಲು ಈ ಮೂವರು ನಾಯಕರು ನಿರ್ಧರಿಸಿದ್ದಾರೆ. ಡಿ. 4ರಿಂದ ಬೆಳಗಾವಿ ಅಧಿವೇಶನ ಆರಂಭವಾಗಲಿದ್ದು, ಅದಕ್ಕೂ ಮೊದಲು ಪಟ್ಟಿ ಬಿಡುಗಡೆಯಾಗುವ ಸಾಧ್ಯತೆಯಿದೆ.

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಇತ್ತೀಚೆಗೆ ಸಭೆ ಸೇರಿದ್ದ ಈ ಮೂವರು ನಾಯಕರು, ಶಾಸಕ ಬಸವರಾಜ ರಾಯರಡ್ಡಿ ಮತ್ತು ಗೃಹ ಸಚಿವ ಸಚಿವರನ್ನು ಕರೆಸಿಕೊಂಡು ಮಾತುಕತೆ ನಡೆಸಿದ್ದರು. ಅಲ್ಲದೆ, ಕೆಲವು ಶಾಸಕರಿಗೂ ಕರೆ ಮಾಡಿ ಅಭಿಪ್ರಾಯ ಪಡೆದುಕೊಂಡಿದ್ದರು.

ಮೊದಲ ಹಂತದಲ್ಲಿ ಶಾಸಕರಿಗೆ ಮಾತ್ರ ಅವಕಾಶ ನೀಡಿ, ನಂತರ ಕಾರ್ಯಕರ್ತರಿಗೆ ಸ್ಥಾನ ನೀಡಲು ಮುಖ್ಯಮಂತ್ರಿ ಒಲವು ವ್ಯಕ್ತಪಡಿಸಿದ್ದರು. ಆದರೆ, ಶಾಸಕರ ಜೊತೆಗೆ ಕೆಲವು ಕಾರ್ಯಕರ್ತರಿಗೂ ಅವಕಾಶ ನೀಡುವುದು ಒಳ್ಳೆಯದು ಎಂದು ಡಿ.ಕೆ. ಶಿವಕುಮಾರ್ ಸಲಹೆ ನೀಡಿದ್ದಾರೆ. ಹೀಗಾಗಿ, 20 ಶಾಸಕರು, ವಿಧಾನ ಪರಿಷತ್ತಿನ ನಾಲ್ವರು ಸದಸ್ಯರ ಜೊತೆಗೆ ಪಕ್ಷದ 10 ರಿಂದ 15 ಕಾರ್ಯಕರ್ತರಿಗೂ ಅವಕಾಶ ನೀಡುವ ಬಗ್ಗೆ ಚರ್ಚೆ ನಡೆದಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹೈಕೋರ್ಟ್‌ನಿಂದ ಕೆಪಿಟಿಸಿಎಲ್ ಮೇಲ್ಮನವಿ ತಿರಸ್ಕೃತ

ಅನಾಮಧೇಯನ ದೂರು: ಪಿಂಚಣಿಗೆ ಧಕ್ಕೆ ಸಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಾಮಧೇಯ ವ್ಯಕ್ತಿಯು, ಸರ್ಕಾರಿ ನೌಕರನ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ ಅಡಿಯಲ್ಲಿ ದೂರು ನೀಡಿದ್ದರೆ, ಆರೋಪಿ ನೌಕರನ ನಿವೃತ್ತಿ ನಂತರದ ಸೌಲಭ್ಯಗಳನ್ನು ತಡೆ ಹಿಡಿಯುವುದು ನ್ಯಾಯಾಂಗ ಪ್ರಕ್ರಿಯೆಗೆ ಒಳಪಟ್ಟಿರುತ್ತದೆ ಎಂದು ಅರ್ಥೈಸಲು ಆಗದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಕೆಪಿಟಿಸಿಎಲ್ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ) ಸಲ್ಲಿಸಿದ್ದ ಮೇಲ್ಮನವಿಯನ್ನು ಧಾರವಾಡ ಪೀಠದಲ್ಲಿ ವಿಚಾರಣೆ ನಡೆಸಿ ತಿರಸ್ಕರಿಸಿರುವ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಶೀಘ್ರವೇ ಪ್ರಕರಣದ ಪ್ರತಿವಾದಿಗೆ ನಿವೃತ್ತಿ ನಂತರದ ಎಲ್ಲ ಸೌಲಭ್ಯಗಳನ್ನೂ ನೀಡಿ' ಎಂದು ನಿರ್ದೇಶಿಸಿದೆ.

'ಪ್ರತಿವಾದಿಯು ನಿವೃತ್ತಿ ಹೊಂದಿದ ನಂತರದಲ್ಲಿ ವಿಚಾರಣಾ ನ್ಯಾಯಾಲಯವು ಅವರ ವಿರುದ್ಧದ ಆರೋಪಗಳನ್ನು ಸಂಜ್ಞೇಯ ಅಪರಾಧದ ಅಡಿಯಲ್ಲಿ ವಿಚಾರಣೆಗೆ ಪರಿಗಣಿಸಿದೆ. ಹೀಗಾಗಿ, ನಿವೃತ್ತಿ ನಂತರದ ಅವರ ಸೌಲಭ್ಯ ಮತ್ತು ಬಾಕಿ ವೇತನ ತಡೆಯಲು ಅವಕಾಶವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಪ್ರತಿವಾದಿ ಮಲ್ಲಿಕಾರ್ಜುನ ಪರ ಸಂತೋಷ ಬಿ.ಮಲ್ಲಿಗೆವಾಡ ವಾದ ಮಂಡಿಸಿದ್ದರು.

ಪ್ರಕರಣವೇನು?: ಅನಾಮಧೇಯ ವ್ಯಕ್ತಿಯೊಬ್ಬರು 2018ರ ಏ.9 ರಂದು ಮಲ್ಲಿಕಾರ್ಜುನ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಭ್ರಷ್ಟಾಚಾರ ಆರೋಪದಡಿ ದೂರು ಸಲ್ಲಿಸಿದ್ದರು. ಇದರನ್ವಯ ಎಸಿಬಿ ಪೊಲೀಸರು ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988 ರ ಕಲಂ 13 (1)(ಇ) ಮತ್ತು 13 (2)ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ತನಿಖೆ ನಡೆಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದೇ ಕಾರಣಕ್ಕಾಗಿ ಅವರನ್ನು ಅಮಾನತು ಮಾಡಲಾಗಿತ್ತು. ನಂತರ ಸೇವೆ ಮುಂದುವರೆಸಿದ್ದ ಅವರು 2022ರ ಮೇ 31ರಂದು ನಿವೃತ್ತಿ ಹೊಂದಿದ್ದರು.

ಮಲ್ಲಿಕಾರ್ಜುನ್ ತಮ್ಮ ನಿವೃತ್ತಿ ಬಳಿಕ ಪಿಂಚಣಿ ಮಂಜೂರು ಮಾಡುವಂತೆ ಕೆಪಿಟಿಸಿಎಲ್‌ಗೆ ಕೋರಿದ್ದರು. ಇದಕ್ಕೆ 2022ರ ಜೂನ್ 28ರಂದು ಹಿಂಬರಹ ನೀಡಿದ್ದ ಕೆಪಿಟಿಸಿಎಲ್, 'ನಿಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಕಾರಣ ಶೇ 50ರಷ್ಟು ನಿವೃತ್ತ ವೇತನ ಮತ್ತು ಪಿಂಚಣಿ ಸಿಗಲಿದೆ' ಎಂದು ತಿಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಹಿಂಬರಹ ರದ್ದುಪಡಿಸಿ, ಸಂಪೂರ್ಣ ಪಿಂಚಣಿ ಪಾವತಿಸುವಂತೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಕೆಪಿಟಿಸಿಎಲ್ ಮೇಲ್ಮನವಿ ಸಲ್ಲಿಸಿತ್ತು.

ಬಿಜೆಪಿಯವರು ಸಾಬೀತುಪಡಿಸಲಿ- ಸಿಎಂ ಸವಾಲು

ಬೆಂಗಳೂರು: 'ಬಿಜೆಪಿಯವರಿಗೆ ಸುಳ್ಳು ಹೇಳುವುದೇ ಬಂಡವಾಳ. ಸರ್ಕಾರದ 'ಗ್ಯಾರಂಟಿ' ಯೋಜನೆಗಳು ಜನರಿಗೆ ತಲುಪಿಲ್ಲವೆಂಬುದನ್ನು ಅವರು ಸಾಬೀತುಪಡಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

'ಗ್ಯಾರಂಟಿ ಯೋಜನೆಗಳು ರಾಜ್ಯದ ಎಲ್ಲ ಜನರನ್ನೂ ತಲುಪುತ್ತಿಲ್ಲ' ಎಂಬ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಇದುವರೆಗೆ 1.17 ಕೋಟಿ ಮಹಿಳೆಯರು ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದು, 1.14 ಲಕ್ಷ ಮಹಿಳೆಯರಿಗೆ ಸೌಲಭ್ಯ ತಲುಪಿದೆ. ಇನ್ನೂ 3 ಲಕ್ಷ ಮಹಿಳೆಯರಿಗೆ ಸೌಲಭ್ಯ ತಲುಪಿಸಲಾಗುವುದು. ಗೃಹಲಕ್ಷ್ಮಿ ನೋಂದಾಯಿಸಿಕೊಂಡಿರುವವರಿಗೆ ಆಗಿರುವ ತಾಂತ್ರಿಕ ಸಮಸ್ಯೆಗಳನ್ನು ನೀಗಿಸಿ, ಡಿಸೆಂಬರ್ ಅಂತ್ಯದೊಳಗೆ ಹಣ ಒದಗಿಸಲು ಸೂಚನೆ ನೀಡಲಾಗಿದೆ' ಎಂದರು.

ಗುಜರಾತ್: ಅಕಾಲಿಕ ಮಳೆಗೆ ಜನಜೀವನ ಅಸ್ತವ್ಯಸ್ತ

ಸಿಡಿಲಿಗೆ 27 ಮಂದಿ ಸಾವು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ವಿವಿಧೆಡೆ ಭಾನುವಾರ ಸುರಿದ ಅಕಾಲಿಕ ಮಳೆಯಿಂದಾಗಿ ಸಿಡಿಲು ಬಡಿದು 27 ಮಂದಿ ಮೃತಪಟ್ಟಿದ್ದಾರೆ.

ಹಲವು ಜಿಲ್ಲೆಗಳಲ್ಲಿ ಮಳೆ ಸಂಬಂಧಿತ ಅವಘಡಗಳಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟಕ್ಕೀಡಾಗಿದ್ದು, ರೈತರು ಕಂಗಾಲಾಗಿದ್ದಾರೆ.

ದಾಹೋದ್, ಭರೂಚ್, ತಾಪಿ, ಅಹಮದಾಬಾದ್, ಅಮ್ರೇಲಿ, ಬನಸ್ಕಾಂತ, ಬೋಟಡ್, ಖೇಡಾ, ಮೆಹಸಾನ, ಪಂಚಮಹಲ್, ಸಬರ ಕಾಂತ, ಸೂರತ್, ಸುರೇಂದ್ರನಗರ, ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿ ಸಿಡಿಲು ಬಡಿದು ಜನರು ಮೃತಪಟ್ಟಿದ್ದಾರೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ (ಎಸ್‌ಇಒಸಿ) ಮಾಹಿತಿ ನೀಡಿದೆ.

> **ಹವಾಮಾನ ವೈಪರೀತ್ಯ ಹಾಗೂ ಸಿಡಿಲು ಬಡಿದು ಸಾವುನೋವು ಸಂಭವಿಸಿರುವುದು ದುಃಖ ತಂದಿದೆ. ಸ್ಥಳೀಯ ಆಡಳಿತ ಪರಿಹಾರ ಕಾರ್ಯದಲ್ಲಿ ತೊಡಗಿವೆ**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ರಾಜ್‌ಕೋಟ್‌ನ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ. ರಾಜ್ಯದ 252 ತಾಲ್ಲೂಕುಗಳ ಪೈಕಿ 234ರಲ್ಲಿ ಭಾರೀ ಮಳೆ ಸುರಿದಿದೆ. ಸೂರತ್, ಸುರೇಂದ್ರನಗರ, ಖೇಡಾ, ತಾಪಿ, ಬರೂಚ್ ಹಾಗೂ ಅಮ್ರೇಲಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ 16 ಗಂಟೆಗಳ ಅವಧಿಯಲ್ಲಿ 50ರಿಂದ 117 ಮಿ.ಮೀ ಮಳೆ ಸುರಿದಿದೆ.

ಮೊರ್ಬಿ ಜಿಲ್ಲೆಯ ಸೌರಾಷ್ಟ್ರ ಭಾಗದಲ್ಲಿ ಸೆರಾಮಿಕ್ ಕೈಗಾರಿಕಾ ಚಟುವಟಿಕೆಗಳ ಮೇಲೆ ಮಳೆ ಪರಿಣಾಮ ಬೀರಿದೆ. ಹಲವು ಕಾರ್ಖಾನೆಗಳ ಕಾರ್ಯ ಸ್ಥಗಿತಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದಕ್ಷಿಣ ಗುಜರಾತ್ ಹಾಗೂ ಸೌರಾಷ್ಟ್ರ ಭಾಗದ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಸೋಮವಾರ ಮಳೆಯ ಪ್ರಮಾಣ ತಗ್ಗಿದೆ' ಎಂದು ಅಹಮದಾಬಾದ್‌ನ ಹವಾಮಾನ ಕೇಂದ್ರದ ನಿರ್ದೇಶಕರಾದ ಮನೋರಮಾ ಮೊಹಂತಿ ತಿಳಿಸಿದ್ದಾರೆ.

ಈಶಾನ್ಯ ಅರಬ್ಬಿ ಸಮುದ್ರದಲ್ಲಿ ಚಂಡಮಾರುತದ ಪರಿಚಲನೆಯಿಂದಾಗಿ ಸೌರಾಷ್ಟ್ರ ಹಾಗೂ ಕಚ್ ಪ್ರದೇಶದಲ್ಲಿ ಮಳೆ ಸಂಬಂಧಿತ ಅವಘಡಗಳು ಸಂಭವಿಸಿವೆ ಎಂದು ಹವಾಮಾನ ಇಲಾಖೆ ಹೇಳಿದೆ.

ಕೋವಿಡ್: ಔಷಧಿ ಪರಿಣಾಮಕ್ಕೂ ಭೌಗೋಳಿಕತೆಗೂ ನಂಟು– ಅಧ್ಯಯನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಚೆನ್ನೈ: ಯುರೋಪ್ ಹಾಗೂ ಭಾರತದಲ್ಲಿನ ಕೋವಿಡ್–19 ರೋಗಿಗಳಿಗೆ ಸ್ಟಿರಾಯ್ಡ್ ಔಷಧ 'ಡೆಕ್ಸಾಮಿಥಾಸೋನ್'ನ ಅಧಿಕ ಡೋಸ್ ನೀಡಲಾಗಿತ್ತು. ಭಾರತದ ರೋಗಿಗಳಲ್ಲಿ ಔಷಧವು ಕಡಿಮೆ ಪರಿಣಾಮ ಬೀರಿತ್ತು ಎಂದು ಅಧ್ಯಯನವೊಂದು ಹೇಳಿದೆ.

ರೋಗಿಯು ವಾಸವಾಗಿದ್ದ ಭೌಗೋಳಿಕತೆಗೂ, ಆತನಿಗೆ ನೀಡಿದ ಔಷಧಿಯ (ಸ್ಟಿರಾಯ್ಡ್) ಪರಿಣಾಮಕ್ಕೂ ನಂಟಿದೆ ಎಂಬುದು 'ಕೋವಿಡ್–ಸ್ಟಿರಾಯ್ಡ್–2' ಟ್ರಯಲ್‌ನ ವಿಶ್ಲೇಷಣೆಯಿಂದ ತಿಳಿದು ಬಂದಿದೆ.

ಜಾರ್ಜ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್ ಇಂಡಿಯಾದ ಡಾ.ಭರತ್ ಕುಮಾರ್ ತಿರುಪಾಕುಳಿ ವಿಜಯರಾಘವನ್ ಹಾಗೂ ಚೆನ್ನೈನ ಅಪೋಲೊ ಆಸ್ಪತ್ರೆ ನೇತೃತ್ವದಲ್ಲಿ ಈ ಕುರಿತು ಅಧ್ಯಯನ ನಡೆದಿದೆ. 'ಲ್ಯಾನ್ಸೆಟ್ ರೀಜನಲ್ ಹೆಲ್ತ್–ಸೌತ್ ಏಷ್ಯಾ' ನಿಯತಕಾಲಿಕದಲ್ಲಿ ಅಧ್ಯಯನ ವರದಿ ಪ್ರಕಟವಾಗಿದೆ.

ಯುರೋಪ್ ಮತ್ತು ಭಾರತದಲ್ಲಿ ಕೈಗೊಂಡಿದ್ದ ಈ ಅಧ್ಯಯನಕ್ಕೆ ಮುಂಬೈನ ಹೋಮಿ ಭಾಭಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಹಾಗೂ ಆಸ್ಟ್ರೇಲಿಯಾದ ನ್ಯೂಸೌತ್‌ವೇಲ್ಸ್ ವಿಶ್ವವಿದ್ಯಾಲಯದ ಸಂಶೋಧಕರು ಕೂಡ ಕೈಜೋಡಿಸಿದ್ದರು.

ಅಧ್ಯಯನದ ಭಾಗವಾಗಿದ್ದ ರೋಗಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿತ್ತು. ಒಂದು ಗುಂಪಿನವರಿಗೆ 10 ದಿನಗಳ ಕಾಲ ನಿತ್ಯವೂ ಇಂಜೆಕ್ಷನ್ ಮೂಲಕ 12 ಮಿಲಿ ಗ್ರಾಂ ಡೆಕ್ಸಾಮಿಥಾಸೋನ್ ನೀಡಲಾಗಿತ್ತು. ಇನ್ನೊಂದು ಗುಂಪಿನ ರೋಗಿಗಳಿಗೆ ಇದೇ ಅವಧಿಗೆ 6 ಮಿಲಿ ಗ್ರಾಂ ನೀಡಿ, ಔಷಧದ ಪರಿಣಾಮವನ್ನು ವಿಶ್ಲೇಷಿಸಲಾಗಿತ್ತು.

ಭಾರತದ ರೋಗಿಗಳ ತೂಕ ಕಡಿಮೆ ಇದ್ದು, ಅವರಿಗೆ ವೈರಾಣು ಪ್ರತಿಬಂಧಕ ಔಷಧಿಗಳ (ಆ್ಯಂಟಿವೈರಲ್) ಅಧಿಕ ಡೋಸ್ ನೀಡಲಾಗಿತ್ತು, ಇಷ್ಟಾಗಿಯೂ ಭಾರತದಲ್ಲಿ ಈ ಸ್ಟಿರಾಯ್ಡ್‌ನ ಪರಿಣಾಮ ಕಡಿಮೆ ಇತ್ತು ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ ಎಂದು ವಿವರಿಸಲಾಗಿದೆ.

ಭಾರತ ಮತ್ತು ಯುರೋಪ್‌ನ ರೋಗಿಗಳು ಡೆಕ್ಸಾಮಿಥಾಸೋನ್‌ನ ಅಧಿಕ ಡೋಸ್‌ಗೆ ಹೇಗೆ ಸ್ಪಂದಿಸಿದ್ದರು ಎಂಬುದು ಮಹತ್ವದ ಸಂಗತಿಯಾಗಿದೆ. ಕೋವಿಡ್–19 ವಿರುದ್ಧದ ಲಸಿಕೆ ಮತ್ತು ಔಷಧಗಳ ಕ್ಲಿನಿಕಲ್ ಟ್ರಯಲ್‌ಗೆ ವಿವಿಧ ದೇಶಗಳ ನಡುವೆ ವ್ಯಾಪಕ ಸಹಕಾರ ಅಗತ್ಯ ಎಂಬುದನ್ನು ಈ ಅಧ್ಯಯನ ಒತ್ತಿ ಹೇಳುತ್ತದೆ ಎಂದು ವೈದ್ಯರು ಹೇಳುತ್ತಾರೆ.

ಚಿಕಿತ್ಸೆಯ ವಿವಿಧ ಹಂತಗಳಲ್ಲಿ, ಮರಣ ಪ್ರಮಾಣ, ರೋಗಿಗಳಿಗೆ ಜೀವರಕ್ಷಕ ವ್ಯವಸ್ಥೆ ಇಲ್ಲದೆಯೇ ಬದುಕುಳಿಯುವ ದಿನಗಳಲ್ಲಿಯೂ ವ್ಯತ್ಯಾಸ ಕಂಡುಬಂದಿತ್ತು.

ವ್ಯತ್ಯಾಸಕ್ಕೆ ಕಾರಣಗಳು: ಸ್ಟಿರಾಯ್ಡ್‌ನ ಪರಿಣಾಮದಲ್ಲಿ ವ್ಯತ್ಯಾಸ ಕಂಡು ಬರಲು ಹಲವಾರು ಕಾರಣಗಳು ಇರುವ ಸಾಧ್ಯತೆಯನ್ನೂ ಅಧ್ಯಯನ ಗುರುತಿಸಿದೆ.

ಆರೋಗ್ಯ ಮೂಲಸೌಕರ್ಯಗಳು, ರೋಗಿಗಳು ಈ ಮೊದಲೇ ಹೊಂದಿರಬಹುದಾದ ಇತರ ಆರೋಗ್ಯ ಸಮಸ್ಯೆಗಳು (ಮಧುಮೇಹ, ಅಧಿಕ ರಕ್ತದೊತ್ತಡ), ಚಿಕಿತ್ಸೆಗೆ ಸಂಬಂಧಿಸಿದ ಇತರ ಸಂಪನ್ಮೂಲಗಳ ಲಭ್ಯತೆ ಈ ವ್ಯತ್ಯಾಸಕ್ಕೆ ಕಾರಣವಾಗಿರುವ ಸಾಧ್ಯತೆ ಇದೆ ಎಂದು ವೈದ್ಯರು ಹೇಳುತ್ತಾರೆ.

ಈ ವಿಚಾರವಾಗಿ ಇಂಥ ಒಂದು ಅಧ್ಯಯನ ನಡೆದಿದೆ. ಇಂತಹ ಮತ್ತಷ್ಟು ಸಂಶೋಧನೆಗಳ ಅಗತ್ಯ ಇದೆ ಎಂದೂ ಹೇಳುತ್ತಾರೆ.

ಮಲೇಷ್ಯಾ: ಭಾರತ, ಚೀನಾ ಪ್ರಜೆಗಳಿಗೆ ವೀಸಾಮುಕ್ತ ಪ್ರವೇಶ

ಕ್ವಾಲಾಲಂಪುರ (ಪಿಟಿಐ): ಭಾರತ ಮತ್ತು ಚೀನಾದ ಪ್ರಜೆಗಳಿಗೆ ಡಿಸೆಂಬರ್ 1ರಿಂದ 30 ದಿನಗಳವರೆಗೆ ವೀಸಾಮುಕ್ತ ಪ್ರವೇಶಕ್ಕೆ ಅನುಮತಿ ನೀಡುವುದಾಗಿ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಘೋಷಿಸಿದ್ದಾರೆ.

ಈಗಾಗಲೇ ಗಲ್ಫ್ ರಾಷ್ಟ್ರಗಳು, ಟರ್ಕಿ ಮತ್ತು ಜೋರ್ಡಾನ್ ಸೇರಿದಂತೆ ಇತರ ಪಶ್ಚಿಮ ಏಷ್ಯಾ ದೇಶಗಳು ಈ ವಿನಾಯಿತಿ ಪಡೆದಿವೆ ಎಂದು ಅವರು ತಿಳಿಸಿದರು.

ವೀಸಾ ವಿನಾಯಿತಿ ಘೋಷಿಸಿರುವುದರಿಂದ ಭದ್ರತಾ ಪರಿಶೀಲನೆಗೆ ಒಳಪಡಬೇಕಾಗುತ್ತದೆ. ಅಪರಾಧ ಹಿನ್ನೆಲೆ ಮತ್ತು ಭಯೋತ್ಪಾದನೆಯ ಅಪಾಯ ಇದ್ದಲ್ಲಿ ಅಂಥಹವರಿಗೆ ಪ್ರವೇಶ ನೀಡುವುದಿಲ್ಲ ಎಂದೂ ಅವರು ತಿಳಿಸಿದ್ದಾರೆ ಎಂದು ಬೆರ್ನಮಾ ನ್ಯೂಸ್ ಏಜನ್ಸಿ ವರದಿ ಮಾಡಿದೆ.

ಇತ್ತೀಚೆಗೆ ಥಾಯ್ಲೆಂಡ್ ಮತ್ತು ಶ್ರೀಲಂಕಾ ಸಹ ಪ್ರವಾಸೋದ್ಯಮ ಉತ್ತೇಜನಕ್ಕೆ ಇದೇ ರೀತಿಯ ಕ್ರಮ ಅನುಸರಿಸಿವೆ.

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 **NOTICE FOR PRIVATE SALE OF GOLD** 27/11/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2023 as shown below:

Br. Belthangadi: Suvarna Arcade, Belthangadi, Dakshina Kannada, Karnataka- 574 214, Ph no. 08256-232404 :- 19016400068487, 19016400078304,19016400066937,19016400076613,19016400077496,19016400073925,19016400021502,19016400077561,19016400069253,19016400030545.

Br. Bhatkal: Misbah Chambers, Ranginkatta, NH 17, Bhatkal, Uttar Kannada, Karnataka- 581 320 :- 19866400073360,19866400084177,19866400087717,19866400083179,19866400073352,19866400085737,19866400076926,19866400086115,19866400073360,19866400084805,19866400085232,19866400086123,19866400082817,19866400069624,19866400085299,19866400060623,19866400082247,19866400081397,19866400090893,19866400083047,19866400081645,19866400085109,19866400068063,19866400070812,19866400068337,19866400085141,19866400082734,19866400073618,19866400067776,19866400089093,19866400088723,19866400071745,19866400068337,19866400078757,19866400081496,19866400072305,19866400082973,19866400080647,19866400088731,19866400073907,19866400092212,19866400082932,19866400082494.

Br. Chikmagalur: P B No 157, Bm Buildings, Thogarihenkal Circle, K M Road, Chikmagaluru- 577 101, Ph no. 08262-233024 :- 13566400143892,13566400199555,13566400201237,13566400145236,13566400199563,13566400201245,13566400177296,13566400199688,13566400201773,13566400177957,13566400199696,13566400201799,13566400178039,13566400199704,13566400201823,13566400180274,13566400199803,13566400201849,13566400183898,13566400200114,13566400201922,13566400184003,13566400200239,13566400201963,13566400184433,13566400200502,13566400202193,13566400184748,13566400200866,13566400202243,13566400184763,13566400200890,13566400202276,13566400186420,13566400200940,13566400207754,13566400186826,13566400200981,13566400207788,13566400191701,13566400201039,13566400209057,13566400199332,13566400201047,13566400210493.

Br. Channarayapatna: Ground Floor, Madhu Complex, Mysore Road, Channarayapatna, Hassan- 573116 Ph No. 08176-252438 :- 19876400104495,19876400104552,19876400114148,19876400116952,19876400118040,19876400119600.

Br. Gonikopal: Sudharma Building,Near Masjid, Ponnampet Road Jn, Main Road, Gonikoppal, Kodagu- 571 213:- 19616400090272, 19616100048398,19616400103075,19616400090959,19616400104073,19616400104164,19616400077790,19616400104131,19616400110930,19616400104594,19616400104990,19616400105294,19616400105286,19616400089209,19616400086528,19616400105567,19616400094886,19616400089746,19616400101251.

Br. Hebri: Spatika Plaza, Kuchoor Road, Hebri, Karkala Taluk, Udupi- 576 112, Ph No. 08253-250045 :- 18966400020097,18966400020204,18966400020055,18966400019628,18966400020741,18966400014843,18966400021269,18966400020063,18966100006032.

Br. Hassan: Ground Floor, St. Antony's Church Complex, NR Circle, HN Pura Road, Hassan, Karnataka- 573 201 :- 13546400207608,13546400256399,13546400257454,13546400260896,13546400276892,13546400278294,13546400279722,13546400280019,13546400288582,13546400141179,13546400162662,13546400184823,13546400237670,13546400243082,13546400244429,13546400244502,13546400245384,13546400245426,13546400245467,13546400245509,13546400246440,13546400257207,13546400258775,13546400259187,13546400265168,13546400266372,13546400266604,13546400268956,13546400264203,13546400276249,13546400244882,13546400245350,13546400280878,13546400284904,13546400246382,13546400246390,13546400195134,13546400215486,13546400262512,13546400264351,13546400272297.

Br. Kadur: Dr Vishwanath Building, Maravanji Circle, BH Road, Kadur, Chikmagalur- 577 548 Ph no. 08267-221244 :- 18936400030339,18936400041690,18936400041286,18936400041617,18936400039801,18936400036724,18936400024720,18936400024035,18936400042334,18936400041237,18936400041401,18936400037391,18936400040544,18936400023383,18936400041583,18936400042060,18935500004350,18936400037318.

Br. Kadaba: Ground Floor, Anugraha Complex, Main Road, Kadaba, Dakshina Kannada District- 574 221 :- 20126400024575.

Br. Kundapura: Shivram Complex, Municipal Main Road, Kundapura, Udupi- 576201 Ph No. 08254 233144 :- 20146400097306,20146400095136,20146400095144,20146400095128,20146400098841,20146400098833,20146400098825,20146400097231.

Br. Kushalnagar: HRS Mansion, BM Road, Kushal Nagar, Kodagu District- 571 234, Ph No. 08276 274084 :- 19316400073077,19316400064456,19316400072616,19316400067061,19316400021936,19316400073952,19316400065354,19316400074562,19316400043112,19316400074810,19316400078050,19316400084629,19316100159416,19315500006730. **Br. Karkala: Opp Bundimatt Bus Stand, Karkala, Udupi District- 574104 :-**19636400031522,19636400033585,19636400031431,19636400032264,19636400032272,19636400032280,19636400032439.

Br. Moodabidri: Next to Hotel Pancharatna Buidling, Moodabidri, Dakshin Kannada Dist.- 574 227 :-19626400059458,19626400060753, 19626400062205,19626400063559,19626400061520,19626400060142,19626400061595,19626400060290,19626400061694,19626400060431, 19626400061702,19626400060555,19626400054921,19626400060605,19626400054962,19626400060738,19626400062015.

Br. Mangalore: P B No. 775, Near PVS Circle, Manasa Towers, M G Road, Kodialbail, Mangalore, Dakshin Kannada- 575 003, Ph No. 08242-497883 :- 11756400034231,11756400034801,11756400036269,11756400034793,11756400031757,11756400034819,11756400035253.

Br.Nellyadi: Elite Plaza, Nh 48, Near St.George P U College, Nellyadi, Dakshin Kannada, Karnataka-574 229, Ph No.08251-256100:- 16446400085285.

Br. Puttur: Meenar Complex, Main Road, Puttur, Dakshin Kannad- 574 201, Ph No. 08251-233544 :- 18946400076091,18946400076976,18946400077016,18946400079152,18946400079277,18946400079368,18946400083725,18946400079582.

Br. Shimoga: Haranahalli Manjappa Complex,, Park Extension Road, Durgigudi, Shimoga District- 577 201, Ph No. 08182-271998 :- 15906400070604,15906100025429,15906400072659,15906400072667,15906400062338,15906400072071,15906400065364,15906400076379,15906400076361,15906400072865,15906400076742,15906400078672. **Br. Sullia: Ganesh Complex, Main Road, Sullia, Dakshina Kannada- 574 239, Ph no. 08257 230818 :-** 19006400027658,19006400027609,19006400027088,19006400025884,19006400025884,19006400031304.

Br. Udupi: Mahalasa Towers, Court Road, Udupi, Karnataka- 576 101, Ph no. 08202521562 :- 15746400046331,15746400050085,15746400050093,15746400051075,15746400052438,15746400052487,15746400052495,15746400053105,15746400055134,15746400055795,15746400055803,15746400056157,15746400056165,15746400057874,15746400036043,15746400036761,15746400041274,15746400044229,15746400044633,15746400046604,15746400047602,15746400052651,15746400052669,15746400053097.

Br. Narasimharajapura : No.794, Dayasagar Complex, Near IOC Petrol Pump, Nagalapura, B H Kaimara, Chikmagalur- 577134, Ph: 08266-228055:- 18956400021989,18956400023589,18956400023597. **Br. Karwar : 451/G-1, Suprabha, Green Street, Karwar, Uttar Kannada- 581301, Ph:08382-222842:-** 16286400023823,16286400028178,16286400031594,16286400031586.

Bangalore 27-11-2023 Vice President & Zonal Head

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಮರು ಆಹ್ವಾನ / ಸೂಚನೆ

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority (under KPIDFE-IMA and other Scam), is issuing notice for e-auction of the immovable property through e-auction on 'as is where is and whatever there is basis'.

The intending bidders will be required to furnish Earnest Money Deposit (EMD) (as mentioned against each material lot/auction in the Karnataka Public Procurement Portal only).

Short description of the Immovable Property

Sl. No.	Details of the Property (Clear Title by Court in order No. MISC No. 558/2023)	Clear Title	Reserve Price (Rs)	EMD (Rs)	Bid Increase Value (Rs)
1	All the piece and parcel of land measuring 07-00 Acres in Sy.No.53/1 of Honnidibba Village, Kittur Taluk (Previously Bylahongala Taluk), Belagavi District. East: Land belonging to Ananda Balakrishna Appugol West: Land belonging to Ananda Balakrishna Appugol North: Land belonging to Ananda Balakrishna Appugol South: Land belonging to Channamallayya Guruvaiah Google map Link: https://maps.app.goo.gl/ewbhV6RBmEPSj2v18 Latitude and Longitude:15°38'31.7"N 74°44'58.7"E	**Assistant Commissioner & Competent Authority, M/s. The Krantiveera Sangolli Rayanna Urban Co- Operative Credit Society**	**Rs. 84,00,000/- (Rs. Eighty Four Lakhs only)**	Rs.8,40,000/- (Rs. Eight Lakh Forty Thousand only)	Rs.42,000/- (Rs. Forty Two Thousand only)
2	All the piece and parcel of land measuring 03 Acres 21 guntas in Sy.No.60/3 of Honnidibba Village, Kittur Taluk (Previously Bylahongala Taluk), Belagavi District. East: Land belonging to Ramappa Ba. Samapamganppa West: Land belonging to Rudrayya Guruvaiah North: Land belonging to Basayya Ra. Kerematta South: Land belonging to Shankrayya Cha. Guruvaiah Google Map link: https://maps.app.goo.gl/cgXoxaSziCgGLzZLA Latitude and Longitude: 15°38'46.4"N 74°44'54.6"E		**Rs. 42,30,000/- (Rs. Forty Two Laks Thirty Thousand only)**	Rs.4,23,000/- (Rs. Four Lakh Twenty Three Thousand only)	Rs. 21,000/- (Rs. Twenty One Thousand only)
3	All the piece and parcel of land measuring 06 Acres 24 guntas in Sy.No.54/1 of Honnidibba Village, Kittur Taluk (Previously Bylahongala Taluk), Belagavi District. East: Land belonging to Chambayya Guruvaiah West: Land belonging to Aravida Havala North: Land belonging to Basappa Dastikoppa South: Land belonging to Gayarana Google Map Link: https://maps.app.goo.gl/3EX1nEA7A5UwL9YK8 Latitude and Longitude: 15°38'27.7"N 74°44'55.0"E		**Rs. 79,20,000/- (Rs. Seventy Nine Lakhs Twenty Thousand only)**	Rs.7,92,000/- (Rs. Seven Lakh Ninety Two Thousand only)	Rs. 39,600/- (Rs. Thirty Nine Six Hundred only)
4	All the piece and parcel of land measuring 02 Acres 33 guntas in Sy.No.53/2 of Honnidibba Village, Kittur Taluk (Previously Bylahongala Taluk), Belagavi District. East: Land belonging to Basavayya Guruvaiah West: Land belonging to Nagavva Basavappa Kotagi North: Land belonging to Shivayya Guruvaiah South: Land belonging to Gayarana Google map Link: https://maps.app.goo.gl/ewbhV6RBmEPSj2v18 Latitude and Longitude: 15°38'31.7"N 74°44'58.7"E		**Rs. 33,90,000/- (Rs. Thirty Three Lakhs Ninety Thousand only)**	Rs.3,39,000/- (Rs. Three Lakh Thirty Nine Thousand only)	Rs. 17,000/- (Rs. Seventeen Thousand only)
5	All the piece and parcel of land measuring 04 Acres 32 guntas in Sy.No.51/2 of Honnidibba Village, Kittur Taluk (Previously Bylahongala Taluk), Belagavi District. East: Land belonging to Chanamalayya Guruvaiah West: Land belonging to Parvathevva Guruvaiah North: Land belonging to Errayya Cha. Guruvaiah South: Sarkari Maddi Google map Link: https://maps.app.goo.gl/RpprBHRSGqztFUL36 Latitude and Longitude:15°38'34.7"N 74°45'01.6"E		**Rs. 57,60,000/- (Rs. Fifty Seven Lakhs Sixty Thousand only)**	Rs.5,76,000/- (Rs. Five Lakh Seventy Six Thousand only)	Rs. 28,800/- (Rs. Twenty Eight Thousand Eight Hundred only)
6	All the piece and parcel of land measuring 14 Acres 38 guntas in Sy.No.974 of Sattigeri Village, Savadatti Taluk (New Taluk Yaragatti) Belagavi District. East: Land belonging to Rajeshaba Chikkodi West: Land belonging to Rachayya Hirematt North: Sarkari Pada South: Land belonging to Rachayya Hirematt Google map Link: https://maps.app.goo.gl/PEvtYbL1GEiGMVci8 Latitude and Longitude: 16°02'31.7"N 75°02'37.4"E		**Rs. 97,17,500/- (Rs. Ninety Seven Lakhs Seventeen Thousand Five Hundred only)**	Rs.9,72,000/- (Rs. Nine Lakh Seventy Two Thousand only)	Rs. 48,500/- (Rs. Forty Eight Thousand Five Hundred only)
7	All the piece and parcel of land measuring 01 Acres 20 guntas in Sy.No.170/A of Balekundri K.H Village, Bagevadi Hobli, Belagavi Taluk, Belagavi District. East: Remaining land of purchaser West: Land belonging to Kashappa Kulkarni North: Naala South: Remaining land of purchaser Google Map Link: https://maps.app.goo.gl/MRUNp8YKV68DkWji7 Latitude and Longitude: 15°51'10.0"N 74°37'11.2"E		**Rs.41,25,000/- (Rs. Forty One Lakh Twenty Five Thousand only)**	Rs.4,13,000/- (Rs. Four Lakh Thirteen Thousand only)	Rs.20,600/- (Twenty Thousand Six Hundred only)
8	All the piece and parcel of land measuring 2034 Sq.ft in plot No. 01 in Sy.No.188/A7 of Kangrall K.H Village, Belagavi Taluk, Belagavi District. East: Plot No. 02 in RS NO.188 of RSNO.188/A7 West: Land belonging to BUDA North: 30 ft Road South: Land of purchaser Google Map Link: https://maps.app.goo.gl/8f9WzX3G1nMqsS82A Latitude and Longitude: 15°52'42.5"N 74°29'16.1"E		**Rs.36,61,200/- (Rs. Thirty Six Lakhs Sixty One Thousand Two Hundred only)**	Rs.3,66,000/- (Rs. Three Lakh Sixty Six Thousand only)	Rs. 18,300/- (Eighteen Thousand Three Hundred only)
9	All the piece and parcel of land measuring 00 Acres 22 guntas in Sy.No.63 of Honnihala Village, Bagevadi Hobli, Belagavi Taluk, Belagavi District. East: Remaining property in Sy. No.63 West: Land belonging to Balappa Adiveppa Kengeri North: Agricultural land and then land belonging to Appa Saheb Jadav South: Kuccha Road Google Map Link: https://maps.app.goo.gl/oXPa3yVQtaMMp1Ku7 Latitude and Longitude: 15°52'06.2"N 74°37'59.7"E		**Rs. 15,12,500/- (Rs. Fifteen Lakh Twelve Thousand Five Hundred only)**	Rs.1,51,000/- (Rs. One Lakh Fifty One Thousand only)	Rs. 7,500/- (Rs. Seven Thousand Five Hundred only)
10	All the piece and parcel of land measuring 01 Acres 10 guntas in Sy.No.170/B, New Sy.No.170/3 (Phoded from Sy.No.170/A & a170/B) Balekundri K.H Village, Bagevadi Hobli, Belagavi Taluk, Belagavi District. East: Land belonging to Nagappa Pakirappa Kakati West: Land belonging to Kashappa Kulkarni North: Land belonging to Nagappa Pakirappa Kakati South: Remaining land Google Map link: https://maps.app.goo.gl/8uVrZzmsuf6EKuXKA Latitude and Longitude: 15.850844, 74.614785		**Rs.34,37,500/- (Rs. Thirty Four Lakh Thirty Seven Thousand Five Hundred only)**	Rs.3,44,000/- (Rs. Three Lakh Forty Four Thousand only)	Rs.17,000/- (Rs/ Seventeen Thousand only)
11	All the piece and parcel of land measuring 60*95= 5700 Sq.ft (including 1200 Sq.ft. cement Sheet out house), Grama Panchayat No. 95, Hindalaga Grama Panchayath, Belagavi Taluk, Belagavi District. East: Plot No.109 West: Plot No.94 North: Bhangimarga South: Road		**Rs. 3,05,84,610/- (Rs. Three Crore Five Lakh Eighty Four Thousand Six Hundred and Ten only)**	Rs.30,59,000/- (Rs. Thirty Lakh Fifty Nine Thousand only)	Rs. 1,53,000/- (Rs. One Lakh Fifty Three Thousand only)

ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	ಇ–ಹರಾಜಿನ ದಿನಾಂಕ ಮತ್ತು ಸಮಯ
28ನೇ ಡಿಸೆಂಬರ್ 2023, ಸಂಜೆ 5.00 ಗಂಟೆಯವರೆಗೆ.	21ನೇ ಡಿಸೆಂಬರ್ 2023, ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೆ.	22ನೇ ಡಿಸೆಂಬರ್ 2023, ಮಧ್ಯಾಹ್ನ 3 ರಿಂದ 4 ರವರೆಗೆ ಸ್ಥಳ: O/o SPLOCA, 3ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	30ನೇ ಡಿಸೆಂಬರ್ 2023 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ.

For Registration & Online Auction, you can login to: https://kppp.karnataka.gov.in (Helpdesk No: 080-46010000, 080-68948777) The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedi, Bengaluru-560001, e-mail ID: splocaeauction@gmail.com or Contact Mob. No 8217203930.

ಸ್ಥಳ: ಬೆಂಗಳೂರು, ದಿನಾಂಕ: 24.11.2023

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

DIPR/CP/2276/Zen/2023-24

ಕ್ಷೇಮ ಕುಶಲ

ಮಧುಮೇಹದಲ್ಲಿ ಆಹಾರಪದ್ಧತಿ



ಡಾ. ಕಿರಣ್ ವಿ. ಎಸ್.

ಭಾರತದಲ್ಲಿ ಹತ್ತು ಕೋಟಿಗೂ ಹೆಚ್ಚು ಮಂದಿ ಮಧುಮೇಹಿಗಳಿದ್ದಾರೆ. ಇವರ ಜೊತೆಗೆ ಸುಮಾರು ಹದಿಮೂರು ಕೋಟಿ ಮಂದಿ ಮಧುಮೇಹಿಗಳಾಗುವ ನಿಟ್ಟಿನಲ್ಲಿ ಮುನ್ನಡೆದಿದ್ದಾರೆ. ಜಗತ್ತಿನ ಶೇ17ರಷ್ಟು ಮಧುಮೇಹಿಗಳು ಭಾರತದಲ್ಲಿ ಇದ್ದಾರೆ ಎಂದು ಅಂದಾಜು. ಮಧುಮೇಹ ಒಬ್ಬರಿಂದ ಒಬ್ಬರಿಗೆ ಹರಡುವ ಸಾಂಕ್ರಾಮಿಕ ಕಾಯಿಲೆಯಲ್ಲ. ಅದು ಮೂಲತಃ 'ಇನ್ಸುಲಿನ್' ಎಂಬ ಹಾರ್ಮೋನಿನ ಕೊರತೆ. ನಾವು ಸೇವಿಸುವ ಆಹಾರದಲ್ಲಿನ ಪಿಷ್ಟಪದಾರ್ಥಗಳು ಜೀರ್ಣವಾದ ನಂತರ 'ಗ್ಲೂಕೋಸ್' ಎಂಬ ಸರಳ ಸಕ್ಕರೆಯ ರೂಪದಲ್ಲಿ ರಕ್ತವನ್ನು ಸೇರುತ್ತವೆ. ನಮ್ಮ ದೇಹದ ಬಹುತೇಕ ಜೀವಕೋಶಗಳು ಕೆಲಸ ನಿರ್ವಹಿಸಲು ಗ್ಲೂಕೋಸ್‌ನ ಅಗತ್ಯವಿದೆ. ರಕ್ತದಲ್ಲಿನ ಗ್ಲುಕೋಸನ್ನು ಜೀವಕೋಶಗಳ ಒಳಗೆ ಸೇರಿಸುವುದು ಇನ್ಸುಲಿನ್ ಹಾರ್ಮೋನಿನ ಕೆಲಸ. ಒಂದು ವೇಳೆ ಶರೀರದಲ್ಲಿ ಇನ್ಸುಲಿನ್ ಕೊರತೆಯಾದರೆ, ರಕ್ತದೊಳಗಿನ ಗ್ಲೂಕೋಸ್ ಅಂಶ ಅಂಗಾಂಗಗಳ ಜೀವಕೋಶಗಳ ಒಳಗೆ ಸೇರುವುದು ಕಡಿಮೆಯಾಗುತ್ತದೆ. ಆಗ ಜೀವಕೋಶಗಳಿಗೆ ಶಕ್ತಿಯ ಸಂಚಯ ಕಡಿಮೆಯಾಗಿ, ಅವು ಕಾರ್ಯವಿಮುಖವಾಗಿ, ಕಡೆಗೆ ನಶಿಸುತ್ತವೆ. ಹೀಗೆ ಇನ್ಸುಲಿನ್ ಕೊರತೆ ಉಂಟಾಗುವ ಶರೀರದ ಅವ್ಯವಸ್ಥೆಯೇ ಮಧುಮೇಹ. ನಾವು ಸೇವಿಸುವ ಆಹಾರದಲ್ಲಿನ ಸಕ್ಕರೆಯ ಅಂಶವನ್ನು ಕರುಳಿನ ಲೋಳೆಪದರದ ಕೋಶಗಳು ಹೀರುತ್ತಾ, ರಕ್ತದಲ್ಲಿನ ಗ್ಲೂಕೋಸ್ ಪ್ರಮಾಣವನ್ನು ಹೆಚ್ಚಿಸುತ್ತವೆ. ಮಧುಮೇಹಿಗಳಲ್ಲಿ ಇನ್ಸುಲಿನ್ ಕೊರತೆಯ ಕಾರಣದಿಂದ ರಕ್ತದಲ್ಲಿನ ಗ್ಲೂಕೋಸ್ ಜೀವಕೋಶಗಳ ಒಳಗೆ ಸೇರುವುದಿಲ್ಲ. ಜೀವಕೋಶಗಳು 'ನಾವು ಕೆಲಸ ಮಾಡಲು ನಮ್ಮಲ್ಲಿ ಗ್ಲೂಕೋಸ್ ದಾಸ್ತಾನು ಇಲ್ಲ' ಎಂದು ಮಿದುಳಿಗೆ ಸಂದೇಶವನ್ನು ರವಾನಿಸುತ್ತವೆ. ಮಿದುಳು ಇದನ್ನು 'ಜೀವಕೋಶಗಳಲ್ಲಿ ಗ್ಲೂಕೋಸ್ ಇಲ್ಲ ಎಂದರೆ ಶರೀರಕ್ಕೆ ಆಹಾರದ ಆವಶ್ಯಕತೆ ಇದೆ' ಎಂದು ಅರ್ಥೈಸುತ್ತದೆ; ಹೊಟ್ಟೆಗೆ ಹಸಿವಿನ ಸಂಕೇತಗಳನ್ನು ರವಾನಿಸುತ್ತದೆ. ಹೀಗಾಗಿ ಮಧುಮೇಹದ ರೋಗಿಗಳಿಗೆ ಹಸಿವು ಹೆಚ್ಚು; ಯಾವಾಗಲೂ ಏನನ್ನಾದರೂ ತಿನ್ನುತ್ತಲೇ ಇರಬೇಕು ಎಂಬ ಬಯಕೆ. ಹೀಗೆ ಹೆಚ್ಚಾಗಿ ತಿನ್ನುತ್ತಲೇ ಇರುವುದರಿಂದ ಮತ್ತಷ್ಟು ಗ್ಲೂಕೋಸ್ ರಕ್ತವನ್ನು ಸೇರಿ, ಅಲ್ಲಿಯೇ ಉಳಿದುಬಿಡುತ್ತದೆ. ಹೀಗಾಗಿ, ಮಧುಮೇಹದ ನಿಯಂತ್ರಣದಲ್ಲಿ ಔಷಧದಷ್ಟೇ ಮಹತ್ವ ಆಹಾರಸೇವನೆಯ ಶಿಸ್ತಿಗೂ ಇದೆ.

ಆಹಾರದಲ್ಲಿ ಮೂರು ಮುಖ್ಯ ಘಟಕಗಳಿವೆ - ಪಿಷ್ಟ ಪದಾರ್ಥಗಳು, ಪ್ರೊಟೀನ್, ಮತ್ತು ತೈಲ. ಪಿಷ್ಟ ಪದಾರ್ಥಗಳಲ್ಲಿ ಸಕ್ಕರೆಯ ಅಂಶ ಹೆಚ್ಚಾಗಿ ಇರುತ್ತದೆ. ಸರಳ ಸಕ್ಕರೆಯ ಅಂಶ ಅಧಿಕವಾಗಿರುವ ಹರಳುಸಕ್ಕರೆ, ಜೇನು, ಬೆಲ್ಲ, ಸಬ್ಬಕ್ಕಿ, ಮೈದಾ, ಹಣ್ಣಿನ ರಸ, ತಂಪು ಪಾನೀಯಗಳು ಇರುವ ಆಹಾರ ಬೇಗನೆ ಜೀರ್ಣವಾಗಿ, ಮಧುಮೇಹಿಗಳ ರಕ್ತದ ಸಕ್ಕರೆಯ ಅಂಶವನ್ನು ಬಹಳ ಶೀಘ್ರವಾಗಿ ಏರಿಸುತ್ತವೆ. ಇದಕ್ಕೆ ವಿರುದ್ಧವಾಗಿ ಧಾನ್ಯಗಳ ಹಿಟ್ಟಿನಲ್ಲಿ ಸಕ್ಕರೆಯ ಅಂಶ ಸಂಯುಕ್ತ ಅಣುಗಳ ರೂಪದಲ್ಲಿ ಬೆಸೆದುಕೊಂಡಿರುತ್ತದೆ. ಇದರ ಜೊತೆಗೆ ನಾರಿನ ಅಂಶವೂ ಇರುತ್ತದೆ. ಇದರಿಂದ ಸಕ್ಕರೆಯ ಅಂಶ ಬಿಡುಗಡೆಗೊಳ್ಳಲು ಸಮಯ ಹಿಡಿಯುತ್ತದೆ. ಹಿಟ್ಟಿನ ಆಹಾರ ಮಧುಮೇಹಿಗಳಲ್ಲಿ ಸಕ್ಕರೆಯ ಅಂಶವನ್ನು ಏಕಾಏಕಿ ಏರಿಸುವುದಿಲ್ಲ. ಹೀಗಾಗಿ, ಸರಳ ಸಕ್ಕರೆಗಿಂತಲೂ ನಾರಿನ ಅಂಶ ಅಧಿಕವಾಗಿರುವ, ಪಾಲಿಶ್-ರಹಿತ ಇಡೀ ಧಾನ್ಯದ ಹಿಟ್ಟಿನ ಸೇವನೆ ಮಧುಮೇಹಿಗಳಿಗೆ ಸೂಕ್ತ. ಆಹಾರದ ನಾರಿನ ಅಂಶವನ್ನು ಹೆಚ್ಚಿಸಲು ತರಕಾರಿಗಳ ಸೇವನೆ ಸಹಾಯಕ. ಇದರಿಂದ ಪಿಷ್ಟದಲ್ಲಿನ ಸಕ್ಕರೆಯ ಅಂಶ ಬಿಡುಗಡೆಯಾಗಲು ಇನ್ನಷ್ಟು ಕಾಲಾವಕಾಶ ದೊರೆಯುತ್ತದೆ. ಮಲಬದ್ಧತೆಯ ಸಮಸ್ಯೆ ಕಡಿಮೆಯಾಗುತ್ತದೆ. ಜೊತೆಗೆ ಶರೀರಕ್ಕೆ ಅಗತ್ಯವಾದ ವಿಟಮಿನ್ ಮತ್ತು ಖನಿಜಗಳು ಲಭಿಸುತ್ತವೆ.

ಮಧುಮೇಹಿಗಳಲ್ಲಿ ಪ್ರೊಟೀನ್ ಸೇವನೆ ತೀರಾ ಅಧಿಕವಾಗಬಾರದು. ಆದರೆ, ಶರೀರಕ್ಕೆ ಅಗತ್ಯವಾದಷ್ಟು ಒಳ್ಳೆಯ ಗುಣಮಟ್ಟದ ಪ್ರೊಟೀನ್ ಸೇವನೆ ಸೂಕ್ತ. ಮಾಂಸಾಹಾರಿಗಳು ಮೀನು, ಮೊಟ್ಟೆ, ಕಡಿಮೆ ಜಿಡ್ಡಿನ ಅಂಶದ ಮಾಂಸಗಳನ್ನು ಬಳಸಬಹುದು. ಸಸ್ಯಾಹಾರಿಗಳು ಬೇಳೆಕಾಳು, ಸೊಯಾಬೀನ್, ಮೊಳಕೆ ಕಟ್ಟಿದ ಕಾಳುಗಳಿಂದ ಪ್ರೊಟೀನ್ ಪಡೆಯಬಹುದು. ಆಹಾರದಲ್ಲಿ ಅನಗತ್ಯ ತೈಲದ ಪ್ರಮಾಣ ಕಡಿಮೆಯಾಗಬೇಕು. ಆದರೆ, ಅಗತ್ಯವಿದ್ದಷ್ಟು ಎಣ್ಣೆಯ ಬಳಕೆ ಒಳಿತು. ಅಡುಗೆ ಮಾಡಲು ಸಸ್ಯಮೂಲದ ತೈಲಗಳ ಬಳಕೆ ಸೂಕ್ತ. ಮೀನೆಣ್ಣೆಯಲ್ಲಿ ಹೃದಯದ ಆರೋಗ್ಯಕ್ಕೆ ನೆರವಾಗಬಲ್ಲ ಪೋಷಕಾಂಶಗಳಿರುತ್ತವೆ. ಅನಾರೋಗ್ಯಕರ ಕೊಲೆಸ್ಟ್ರಾಲ್ ಹೆಚ್ಚಿಸುವ ಎಣ್ಣೆಗಳ ಬಳಕೆ ಮಧುಮೇಹಿಗಳಿಗೆ ಒಳ್ಳೆಯದಲ್ಲ.

ಸಮತೋಲಿತ ಆಹಾರ ಮಧುಮೇಹಿಗಳ ಸೂತ್ರವಾಗಬೇಕು. ಸೇವಿಸುವ ಆಹಾರದ ಒಟ್ಟು ಕ್ಯಾಲರಿಗಳು ಆಯಾ ವ್ಯಕ್ತಿಯ ತೂಕ ಮತ್ತು ಕೆಲಸದ ಪ್ರಮಾಣಕ್ಕೆ ತಕ್ಕನಾಗಿರಬೇಕು. ಕ್ಯಾಲರಿಗಳು ಹೆಚ್ಚಾದರೆ ಮೈತೂಕದ ನಿಯಂತ್ರಣ ಏರುಪೇರಾಗುತ್ತದೆ. ಕ್ಯಾಲರಿಗಳು ತೀರಾ ಕಡಿಮೆಯಾದರೆ ಸುಸ್ತು, ಬವಳಿಕೆಗಳು ಕಾಡುತ್ತವೆ. ಹೀಗಾಗಿ, ತಮ್ಮ ವೈದ್ಯರ, ಆಹಾರತಜ್ಞರ ಜೊತೆಗೆ ಚರ್ಚಿಸಿ ತಮಗೆ ಅಗತ್ಯವಾದ ಕ್ಯಾಲರಿಗಳ ಮಟ್ಟವನ್ನು ನಿರ್ಧರಿಸಬೇಕು. ಮನಸ್ಸಿನ ಹಿಡಿತ ತಪ್ಪಿದರೆ ಐದು ನಿಮಿಷಗಳಲ್ಲಿ 500 ಕ್ಯಾಲರಿ ದೇಹ ಸೇರಿಬಿಡುತ್ತದೆ! ಆದರೆ ಅದನ್ನು ಕರಗಿಸಲು ಎರಡು ತಾಸು ವ್ಯಾಯಾಮ ಮಾಡಬೇಕಾಗುತ್ತದೆ. 'ನಾಳೆಯೋ, ಮುಂದಿನ ವಾರವೋ ಸಖತ್ ವ್ಯಾಯಾಮ ಮಾಡಿ ತಿಂದಿದ್ದನ್ನೆಲ್ಲಾ ಕರಗಿಸಿಬಿಡುತ್ತೇನೆ' ಎನ್ನುವ ಶಪಥ ಮಾಡಿ ಸಿಹಿ ತಿಂಡಿಗಳನ್ನು ಯಥೇಚ್ಛವಾಗಿ ಸೇವಿಸುವ ಬಹುತೇಕ ಮಂದಿ ಕ್ಯಾಲರಿಗಳ ಬದಲಿಗೆ ತಮ್ಮ ಮಧುಮೇಹ ನಿಯಂತ್ರಣವನ್ನು ಕರಗಿಸುತ್ತಾರೆ. ಇಂತಹ ಆಲೋಚನೆಯೇ ತಪ್ಪು. ಮಧುಮೇಹದ ನಿಯಂತ್ರಣ ಒಂದು ನಿರಂತರ ಪ್ರಕ್ರಿಯೆ. ಇದನ್ನು ಕಂತು ಕಂತಾಗಿ ನಿರ್ವಹಿಸುವುದು ಆರೋಗ್ಯಕರವಲ್ಲ. ತೂಕ ಕರಗಿಸಲು ಡಯಟ್ ಮಾಡುವ ಮಂದಿ 'ಚೀಟ್-ಡೇ' ಹೆಸರಿನಲ್ಲಿ ಅದನ್ನು ಸಡಲಿಸುವ ವಿಧಾನ ಮಧುಮೇಹಿಗಳಿಗೆ ಅನ್ವಯವಾಗುವುದಿಲ್ಲ.

ಔಷಧ, ಆಹಾರ, ವ್ಯಾಯಾಮ, ಮತ್ತು ಇವುಗಳ ಸಮನ್ವಯದಲ್ಲಿನ ಶಿಸ್ತು ಮಧುಮೇಹವನ್ನು ಸಹ್ಯವಾಗಿಸುತ್ತದೆ. ಆರೋಗ್ಯಕರ ಬಾಳ್ವೆಗೆ ಮಧುಮೇಹಿಗಳು ಈ ಸಮನ್ವಯವನ್ನು ತಪ್ಪದೇ ಸಾಧಿಸಬೇಕು.



ಆರೋಗ್ಯಕರ ಅಭ್ಯಾಸಗಳ ಅಭ್ಯಾಸ!

ಡಾ. ವಿನಯ ಶ್ರೀನಿವಾಸ್

ದೇಹ ಮತ್ತು ಮನಸ್ಸಿಗೆ ಚೈತನ್ಯವನ್ನು ಕೊಡುವ ಹಾಗೂ ಶಿಸ್ತುಬದ್ಧ ಬದುಕಿಗೆ ಪೂರಕವಾಗಿರುವ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದೆಂದರೆ ಪ್ರತಿಯೊಬ್ಬರಿಗೂ ಖುಷಿ. ಗೆಳೆಯರ ಬಳಗದಲ್ಲಿಯೋ, ಪರಿಚಿತರಲ್ಲೋ ಅಂತಹ ಅಭ್ಯಾಸಗಳನ್ನು ಕರಗತ ಮಾಡಿಕೊಂಡಿರುವುದನ್ನು ಕಂಡು ನಾವೂ ಅವುಗಳನ್ನೆಲ್ಲ ಅನುಸರಿಸಬೇಕು ಎಂದುಕೊಳ್ಳುತ್ತೇವೆ. ಒಂದು ದಿನ ಮನಸ್ಸಿನಲ್ಲಿ ಸಂಕಲ್ಪ ಮಾಡಿ ಹೊಸ ಅಭ್ಯಾಸವನ್ನು ಆರಂಭಿಸಿಯೂ ಬಿಡುತ್ತೇವೆ. ಅದು 'ಆರಂಭ ಶೂರತ್ವ' ಎನ್ನುವಂತೆ ಮೊದಮೊದಲು ಬಹಳ ಪರಿಪೂರ್ಣವಾಗಿ ಮತ್ತು ತೀವ್ರವಾಗಿಯೇ ಸಾಗುತ್ತಾ ಹೋಗುತ್ತದೆ. ಆದರೆ ನಾಲ್ಕು ದಿನಗಳಾದ ನಂತರ ಟುಸ್ ಪಟಾಕಿಯಂತೆ ಯಾವುದೋ ನೆಪದಿಂದ ನಿಂತು ಬಿಡುತ್ತದೆ. ಮತ್ತೆ ಬೇಸರ, ಮತ್ತೆ ಪುನರಾರಂಭ, ಹೀಗೆಯೇ ನಡೆಯುತ್ತದೆ. ಇದು ಬಹುತೇಕ ಎಲ್ಲರ ಅನುಭವಕ್ಕೂ ಬಂದಿರಲು ಸಾಧ್ಯ.

ಅಭ್ಯಾಸಗಳು ಇಂತಹದ್ದೇ ಆಗಿರಬೇಕೆಂದಿಲ್ಲ. ಅದು ಮನೆ, ಕಚೇರಿ, ಉದ್ಯಮ, ಹವ್ಯಾಸ – ಹೀಗೆ ಎಲ್ಲಿಯೂ ಆಗಿರಬಹುದು, ಅಥವಾ ಸಣ್ಣ ಪುಟ್ಟ ಆರೋಗ್ಯಕರ ದಿನಚರಿಗಳೂ ಆಗಿರಬಹುದು. ಬೆಳಿಗ್ಗೆ ಬೇಗನೆ ಏಳುವ, ನಿತ್ಯವೂ ವ್ಯಾಯಾಮ ಮಾಡುವ, ಹಿತಮಿತ ಆಹಾರವನ್ನು ಸೇವಿಸುವ, ಮಕ್ಕಳಿಗೆ ಸ್ತೋತ್ರಗಳನ್ನು ಹೇಳಿಕೊಡುವ, ಎಲ್ಲರೊಡನೆ ಆತ್ಮೀಯತೆಯಿಂದ ಮಾತನಾಡುವ, ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳುವ ಮೊದಲಾದವು ಮನಸ್ಸಿಗೆ ಹಿತ ನೀಡುವ ರೂಢಿಗಳು. ಈ ಎಲ್ಲ ಉತ್ತಮ ಅಭ್ಯಾಸಗಳ ಪ್ರಾಮುಖ್ಯ ನಮಗೆ ತಿಳಿದೇ ಇರುತ್ತದೆ. ಅವುಗಳಿಂದಾಗುವ ಪ್ರಯೋಜನಗಳನ್ನೂ ಅರಿತಿರುತ್ತೇವೆ. ಆದರೆ ಯಾವುದೋ ಉದಾಸೀನತೆ ಅಥವಾ ಕೆಲವೊಮ್ಮೆ ಸೋಮಾರಿತನ ಅಥವಾ ಶುರುವಿನಲ್ಲಿ ಅನುಭವಕ್ಕೆ ಬರುವ ಅನನುಕೂಲತೆಗಳು ನಮ್ಮನ್ನು ಮುಂದುವರೆಯದಂತೆ ತಡೆಯುತ್ತವೆ. ಆದರೆ, ನಾವು ಹೊಸದನ್ನು ಪ್ರಾರಂಭಿಸುವಾಗ ಕಾಣಿಸಿಕೊಳ್ಳುವ ಆ ಕ್ಷಣದ ಅನನುಕೂಲತೆಗಳಿಗೆ ಹೆಚ್ಚು ಮಹತ್ವ ಕೊಡಬಾರದು. ಬದಲಾಗಿ, ಅದರ ದೀರ್ಘಕಾಲಿಕ ಒಳ್ಳೆಯ ಪರಿಣಾಮಗಳ ಬಗ್ಗೆ ಯೋಚಿಸಬೇಕು. ವ್ಯಾಯಾಮದ ಉದಾಹರಣೆಯನ್ನೇ ತೆಗೆದುಕೊಳ್ಳಿ. ಪ್ರತಿಯೊಬ್ಬರಿಗೂ ಅದರ ಆರೋಗ್ಯಕರ ಪ್ರಯೋಜನಗಳು ಗೊತ್ತಿರುವುದೇ. ಆದರೆ ಎಷ್ಟು ಜನರು ಅದನ್ನು ನಿಯಮಿತವಾಗಿ ದಿನಚರಿಯಲ್ಲಿ ಅಳವಡಿಸಿಕೊಳ್ಳುತ್ತಾರೆ – ಎಂದು ವಿಚಾರ ಮಾಡಿದರೆ ಆಶಾದಾಯಕ ಉತ್ತರ ಸಿಗದು. ಕುಂಟುನೆಪಗಳನ್ನು ಹೇಳುತ್ತ, ವ್ಯಾಯಾಮವಿಲ್ಲದೆ ದಿನಗಳನ್ನು ತಳ್ಳುವವರೇ ಹೆಚ್ಚು. ಹಿತಮಿತ ಆಹಾರಾಭ್ಯಾಸದ ಕಥೆಯೂ ಅಷ್ಟೆ. ಒಂದೆರಡು ದಿನ ಕಟ್ಟುನಿಟ್ಟಾಗಿ ಆಹಾರತಜ್ಞರು ಸೂಚಿಸಿದ ಪೌಷ್ಟಿಕ ಆಹಾರ ಪದಾರ್ಥಗಳನ್ನೇ ತಟ್ಟೆಯಲ್ಲಿ ಬಡಿಸಿಕೊಳ್ಳುತ್ತೇವೆ. ನಾಲ್ಕು ದಿನಗಳಾದ ನಂತರ ಮತ್ತೆ ಪುನಃ ಮೊದಲಿನಂತೆ ಸಿಕ್ಕಿದ್ದನ್ನೆಲ್ಲಾ ತಿನ್ನುವ ಚಾಳಿಗೆ ಮರಳುತ್ತೇವೆ.

ಮನೆಯಲ್ಲಿ ವಸ್ತುಗಳನ್ನು ಸರಿಯಾದ ಸ್ಥಾನಗಳಲ್ಲಿರಿಸಿ ಕ್ರಮಬದ್ಧವಾಗಿಡಬೇಕೆಂಬ ಅಭ್ಯಾಸವೂ ಒಂದೆರಡು ದಿನಗಳಿಗೇ ನಿಂತು ಹೋಗಿರುತ್ತದೆ. ಮತ್ತೆ ಅಡ್ಡಾದಿಡ್ಡಿಯಾಗಿ ಮನಸ್ಸಿಗೆ ಬಂದಲ್ಲೆಲ್ಲಾ ವಸ್ತುಗಳನ್ನು ಹರಡಿರುತ್ತೇವೆ. ಹವ್ಯಾಸಗಳನ್ನು ಪೊರೆಯುವಲ್ಲಿಯೂ ಉದಾಸೀನತೆಯನ್ನು ತೋರುವವರೇ ಹೆಚ್ಚು. ಸಂಗೀತ, ಸಾಹಿತ್ಯ, ನೃತ್ಯ, ಚಿತ್ರಕಲೆ – ಹೀಗೆ ಯಾವುದೇ ಕಲೆ ನಮ್ಮ ವಶವಾಗಬೇಕಾದರೆ ಪರಿಶ್ರಮ ಮತ್ತು ನಿರಂತರತೆ ಅತ್ಯಗತ್ಯ. ಈ ಗುಣಗಳಿಲ್ಲದಿದ್ದಾಗ ಪ್ರತಿಭೆಯಿದ್ದರೂ ಅದು ಬೆಳಕಿಗೆ ಬರದಂತಾಗುತ್ತದೆ.

ಒಳ್ಳೆಯ ಅಭ್ಯಾಸಗಳನ್ನು ನಿತ್ಯಬದುಕಿನಲ್ಲಿ ಅಳವಡಿಸಿಕೊಳ್ಳುವುದು ಹೇಗೆ?

ಕೆಲವು ದೃಢ ಮನಸ್ಸಿನ ಗಟ್ಟಿ ವ್ಯಕ್ತಿತ್ವದವರು ಸದಭ್ಯಾಸಗಳನ್ನು ನಿರಂತರವಾಗಿ ಪೋಷಿಸಿ, ಅವನ್ನು ದಿನಚರಿಯ ಭಾಗವನ್ನಾಗಿಸಿಕೊಳ್ಳುತ್ತಾರೆ; ಉತ್ತಮ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಇದನ್ನು ಕಾರ್ಯರೂಪಕ್ಕೆ ತರಲು ಅಧ್ಯಯನಗಳು ಹೊಸದೊಂದು ಸೂತ್ರವನ್ನು ತಿಳಿಸುತ್ತವೆ. ಇದರಲ್ಲಿ ತಿಳಿಸುವಂತೆ ಯಾವುದೇ ಅಭ್ಯಾಸವನ್ನು ಸತತವಾಗಿ ಕನಿಷ್ಠ ಒಂದು ತಿಂಗಳ ಕಾಲ ಬಿಡದಂತೆ ರೂಢಿಸಿಕೊಂಡಿದ್ದಾದರೆ, ಅದು ನಿಮ್ಮ ನಿತ್ಯದ ದಿನಚರಿಯ ಭಾಗವಾಗುತ್ತದೆ. ಆದರೆ ಆರಂಭದ ದಿನಗಳಲ್ಲಿ ಎದುರಾಗುವ ಸಣ್ಣ ಪುಟ್ಟ ತೊಡಕುಗಳನ್ನು ಜಯಿಸಿ ಮುಂದೆ ಸಾಗಬೇಕಷ್ಟೆ. ನಮ್ಮನ್ನು ಹಿಂದಕ್ಕೆ ಜಗ್ಗುವ ಸೋಮಾರಿತನವನ್ನು ಹೊಡೆದೋಡಿಸಬೇಕು; ಉದಾಸೀನತೆಯನ್ನು ಮನಸ್ಸಿನಿಂದ ಕಿತ್ತೊಗೆಯಬೇಕು. ಗಟ್ಟಿ ಮನಸ್ಸು ಮಾಡಿ 'ಇದನ್ನು ಮಾಡಿಯೇ ತೀರುತ್ತೇನೆ' ಎನ್ನುವ ಅಚಲ ನಿರ್ಧಾರದಿಂದ ಮುನ್ನಡಿಯಿಟ್ಟರೆ ಖಂಡಿತ ಯಶಸ್ಸು ನಿಮ್ಮದು. ಒಮ್ಮೆ ನಿಮ್ಮ ಮನಸ್ಸು ದೇಹ ಆ ಅಭ್ಯಾಸಕ್ಕೆ ಹೊಂದಿಕೊಂಡರೆ, ಅಷ್ಟು ಸುಲಭವಾಗಿ ನೀವು ಅದನ್ನು ಬಿಡಲಾರಿರಿ.ಇವೇ ರೂಢಿಗಳನ್ನು ಮುಂದುವರೆಸಿ ಸುಮಾರು ಮೂರು ತಿಂಗಳು ಬಿಡದೆ ನಿರಂತರವಾಗಿ ನಡೆಸಿಕೊಂಡು ಬಂದಿರಾದರೆ ಅದು ನಿಮ್ಮ ಬದುಕಿನ ಭಾಗವಾಗಿ ಜೀವನ ಶೈಲಿಯಾಗುತ್ತದೆ ಎನ್ನುತ್ತಾರೆ ಅನುಭವಸ್ಥರು. ಆದರೆ ಆ ನಿರಂತರತೆಯನ್ನು ಕಾಪಾಡಿಕೊಳ್ಳುವ ಮನಸ್ಸಿರಬೇಕಷ್ಟೆ. ಯಾವುದೇ ಸಾಧನೆಗೆ ನಿರಂತರ ಅಭ್ಯಾಸ ಮುಖ್ಯ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

22) ಮಹಾ ಹಿಮಾಲಯ (ಹಿಮಾದ್ರಿ) ಕುರಿತು ಬರೆಯಿರಿ

ಉತ್ತರ: ಇದು ಹಿಮಾಲಯ ಪರ್ವತಗಳಲ್ಲಿ ಅತಿ ಎತ್ತರವಾದ ಹಾಗೂ ಮೊದಲು ನಿರ್ಮಿತಗೊಂಡಿರುವ ಸರಣಿಯಾಗಿದೆ. ಇದು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿದೆ. ಆದುದರಿಂದ ಇದನ್ನು ಹಿಮಾದ್ರಿ ಎಂದು ಕರೆಯುತ್ತಾರೆ. ಸಮುದ್ರ ಮಟ್ಟದಿಂದ ಈ ಶ್ರೇಣಿಯು 6000 ಮೀಟರ್‌ದಿಂದ 8000 ಮೀಟರ್‌ಗಿಂತಲೂ ಹೆಚ್ಚು ಎತ್ತರವಾಗಿದೆ. ಹಿಮಾಲಯದಲ್ಲಿ ಅತ್ಯಂತ ಎತ್ತರವಾದ ಶಿಖರಗಳು ಇವೆ. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ (8848 ಮೀ) ನೇಪಾಳ ಮತ್ತು ಟಿಬೆಟ್ ಮಧ್ಯದಲ್ಲಿದೆ.

ಈ ಸರಣಿಯಲ್ಲಿರುವ ಇತರೆ ಮುಖ್ಯ ಶಿಖರಗಳೆಂದರೆ ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ.

ಇವು ಅನೇಕ ಹಿಮನದಿಗಳನ್ನು ಹೊಂದಿವೆ. ಅವುಗಳಲ್ಲಿ ಗಂಗೋತ್ರಿ ಪ್ರಸಿದ್ಧವಾಗಿದ್ದು ಗಂಗಾನದಿಯ ಉಗಮ ಸ್ಥಾನವಾಗಿದೆ. ಕಾಶ್ಮೀರದ ಬುರ್ಜಿಲ್, ಜೋಜಿಲಾ, ಹಿಮಾಚಲ ಪ್ರದೇಶದ ಬಾರಾಲಾಫ್‌ಚ, ಮುಂತಾದ ಕಣಿವೆ ಮಾರ್ಗಗಳು ಉತ್ತಮ ಸಂಚಾರ ಸೌಲಭ್ಯವನ್ನು ಒದಗಿಸಿರುವುದಲ್ಲದೆ, ಪ್ರವಾಸಿಗರಿಗೆ ಆಕರ್ಷಣೀಯ ಕೇಂದ್ರಗಳಾಗಿವೆ.

ಇಲ್ಲಿ ಕಾರಾಕೋರಮ್ ಪರ್ವತ ಶ್ರೇಣಿ ಹಾಗೂ ಕೈಲಾಸ ಪರ್ವತಗಳಿವೆ. ಗಾಡ್ವಿನ್‌ಆಸ್ಟಿನ್ ಅಥವಾ K2 ಎಂಬುದು ಭಾರತದಲ್ಲಿ ಅತಿ ಎತ್ತರವಾದ (8,611ಮೀ) ಶಿಖರವಾಗಿದೆ. 'ಲಡಾಖ್'' ಪ್ರಸ್ಥಭೂಮಿಯೂ ಇದೇ ಪ್ರದೇಶದಲ್ಲಿ ಕಂಡು ಬರುತ್ತದೆ

23) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ಯಾವುದು?

ಉತ್ತರ:– ಪರ್ಯಾಯ ಪ್ರಸ್ಥಭೂಮಿ

24) ಭಾರತದ ಭೂಸ್ವರೂಪಗಳಲ್ಲಿ ಅತಿಪುರಾತನವಾದದ್ದು ಯಾವುದು?

ಉತ್ತರ:– ಪರ್ಯಾಯ ಪ್ರಸ್ಥಭೂಮಿ

25) ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರ ಎಷ್ಟು?

ಉತ್ತರ:– ಸುಮಾರು 16 ಲಕ್ಷ ಚ.ಕಿ.ಮೀ.

26) ದಖನ್ ಪ್ರಸ್ಥಭೂಮಿಯ ಉತ್ತರದಲ್ಲಿರುವ ಬೆಟ್ಟಗಳನ್ನು ಹೆಸರಿಸಿ

ಉತ್ತರ:– ಮಹಾದೇವ, ಮೈಕಲ್ ಶ್ರೇಣಿ, ಅಮರ ಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು

27) ದಕ್ಷಿಣ ಭಾರತದಲ್ಲಿ ಅತ್ಯುನ್ನದ ಪ್ರದೇಶ/ಅತ್ಯುನ್ನತ ಶಿಖರ ಯಾವುದು?

ಉತ್ತರ:– ಅಣ್ಣಾಮಲೈ ಶ್ರೇಣಿಯಲ್ಲಿರುವ ಆನೈಮುಡಿ ಶಿಖರ

28) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?

ಉತ್ತರ:– ನೀಲಗಿರಿ ಬೆಟ್ಟ

29) ಯಾವ ಮೈದಾನಗಳನ್ನು ಡೂನ್‌ಗಳೆಂದು ಕರೆಯುತ್ತಾರೆ?

ಉತ್ತರ:– ಹಿಮಾಲಯದಲ್ಲಿ ಸಮತಟ್ಟಾದ ಕಿರಿದಾದ ಸಮ್ಮತಟ್ಟಾದ ಮೈದಾನಗಳಿವೆ ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು.

30) ಹಿಮಾಚಲ/ಮಧ್ಯ ಹಿಮಾಲಯದಲ್ಲಿರುವ ಕಣಿವೆಗಳನ್ನು ಹೆಸರಿಸಿ

ಉತ್ತರ:– ಹಿಮಾಚಲ/ಮಧ್ಯ ಹಿಮಾಲಯದಲ್ಲಿರುವ ಕಣಿವೆಗಳೆಂದರೆ ಕಂಗ್ರಾ, ಕುಲು ಕಣಿವೆಗಳಾಗಿವೆ.

31) ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಗಿರಿಧಾಮಗಳನ್ನು ಹೆಸರಿಸಿ

ಉತ್ತರ:– ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಮೊದಲಾದ ಗಿರಿಧಾಮಗಳಿವೆ.

32) ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ ಹಿಮಾಲಯದ ಎಲ್ಲಿದೆ?

ಉತ್ತರ:– ಮಹಾಹಿಮಾಲಯ ಹಿಮಾದ್ರಿ

33) ಮೌಂಟ್ ಎವೆರೆಸ್ಟ್‌ನ ಎತ್ತರ ಎಷ್ಟು?

ಉತ್ತರ:– 8848 ಮೀಟರ್

34) ಮಹಾ ಹಿಮಾಲಯದಲ್ಲಿರುವ ಪ್ರಮುಖ ಶಿಖರಗಳನ್ನು ಹೆಸರಿಸಿ

ಉತ್ತರ:– ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ.

35) ಭಾರತದಲ್ಲಿರುವ ಅತಿಎತ್ತರವಾದ ಶಿಖರ ಯಾವುದು?

ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ K2

36) ಗಾಡ್ವಿನ್‌ಆಸ್ಟಿನ್ ಅಥವಾ K2 ಶಿಖರದ ಎತ್ತರ ಎಷ್ಟು?

ಉತ್ತರ:– 8,611 ಮೀಟರ್

37) ಬಬರ್ ಮಣ್ಣು ಎಲ್ಲಿ ನೋಡಬಹುದಾದಿದೆ?

ಉತ್ತರ:– ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ ಬಬರ್ ಎಂದು ಕರೆಯುವರು. ಹೀಗಾಗಿ ಇಲ್ಲಿಯೇ ಬಬರ್ ಮಣ್ಣನ್ನು ನೋಡಬಹುದಾಗಿದೆ.

38) ಯಾವುದನ್ನು ಭಂಗರ್ ಮಣ್ಣು ಎಂದು ಕರೆಯುವರು?

ಉತ್ತರ:– ಪುರಾತನ ಕಾಲದಲ್ಲಿ ಸಂಚಯಿತವಾಗಿರುವ ಮೆಕ್ಕಲು ಮಣ್ಣಿನ ವಲಯವನ್ನು ಭಂಗರ್ ಎಂದು ಕರೆಯುವರು.

39) ಖದರ್ ಮಣ್ಣು ಯಾವುದನ್ನು ಎಂದು ಕರೆಯುವರು?

ಉತ್ತರ:– ಇತ್ತೀಚಿನ ಅವಧಿಯಲ್ಲಿ ಸಂಚಯಿತಗೊಂಡು ನಿರ್ಮಿತವಾಗಿರುವ ಮೆಕ್ಕಲು ಮಣ್ಣನ್ನು ಖದರ್ ಎಂದು ಕರೆಯುವರು

40) ರಾಧಾನಾಥ್ ಸಿಕ್ದರ್ ಯಾರು?

ಉತ್ತರ:– ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ.

41) ಯಾಕೆ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ?

ಉತ್ತರ:– ಪರ್ಯಾಯ ಪ್ರಸ್ಥಭೂಮಿ ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

42) ಭಾರತದ ಕರಾವಳಿಗಳನ್ನು ಎಷ್ಟು ಭಾಗಗಳಾಗಿ ವಿಗಂಡಿಸಿದೆ? ಅವುಗಳನ್ನು ಹೆಸರಿಸಿ

ಉತ್ತರ:– ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ

43) ಭಾರತದಲ್ಲಿರುವ ಲಗೂನ್ ಅಥವಾ ಉಪ್ಪು ನೀರಿನ ಸರೋವರಗಳು ಯಾವುವು?

ಉತ್ತರ:– ಒಡಿಶಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು

41) ಉತ್ತರದ ಮಹಾ ಮೈದಾನ ಬಗ್ಗೆ ಬರೆಯಿರಿ.

ಉತ್ತರ : ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡು ಬರುವುದು. ಇದು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯವರೆಗೂ ಹಬ್ಬಿದೆ. ಇದು ಪೂರ್ವ ಮತ್ತು ಪಶ್ಚಿಮವಾಗಿ ಸುಮಾರು 2400 ಕಿ. ಮೀ ಉದ್ದವಾಗಿದೆ. ಈ ಮೈದಾನವು 70 ರಿಂದ 500 ಕಿ. ಮೀ. ಅಗಲವಾಗಿದೆ. ಈ ಮೈದಾನವು ಬಹುತೇಕವಾಗಿ ಸಮತಟ್ಟಾಗಿದೆ. ಉತ್ತರ ಭಾರತದ ಮೈದಾನವು, ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ ಸಂಚಯನ ಮೈದಾನವಾಗಿದೆ.

42) ಪರ್ಯಾಯ ಪ್ರಸ್ಥಭೂಮಿ ಕುರಿತು ಬರೆಯಿರಿ

(ಮುಂದುವರಿಯುವುದು.......)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC PHYSICS

Chapter – 1

ELECTRIC CHARGES AND FIELDS

Problem:-

(.......Contd)

Again, $q = \sigma \times 4\pi R^2$,

where, σ = surface charge density of the charge on the shell.

Substituting for q as above in the eqn (i) we get

$$E = \frac{1}{4\pi\epsilon_0}\frac{\sigma \times 4\pi R^2}{R^2}$$

$$(or)\ E = \frac{\sigma}{\epsilon_0} \quad ....(ii)$$

Hence, the electric field intensity E is maximum at the surface of the uniformly charged thin spherical shell.

Electric Field Intensity due to a uniformly charged thin spherical shell (hollow sphere)

(c) At a point inside the shell.



Let P be the point inside the shell at a distance r' (r' < R) from the centre of the shell.

Draw a Gaussian sphere of radius r' with O as the centre.

According to Gauss' theorem,

$$\oint_S \vec{E}.d\vec{S} = \frac{q}{\epsilon_0}$$

Here, Gaussian surface encloses no charge i.e.,

$$q = 0$$

$$\therefore \oint_S \vec{E}.d\vec{S} = 0 \quad (or) \quad E = 0$$

Hence, there is no electric field inside a uniformly charged thin spherical shell.

Variation of Electric field intensity(E) with distance(r) from the centre (O) of the charged spherical shell.



i) When $r < R$, then $E = 0$

ii) When, $r = R$,

$$E = \frac{1}{4\pi\epsilon_0}\frac{q}{R^2} = \frac{\sigma}{\epsilon_0} \text{(i.e. maximum value)}$$

iii) When $r > R$, $E = \frac{1}{4\pi\epsilon_0}\frac{q}{R^2}$ (or) $E \alpha \frac{1}{r^2}$

Thus, electric field intensity is zero inside the charged sphere. It is maximum at the surface of the sphere and then varies inversely with (distance) beyond the surface of the charged sphere.

Electric Field Intensity due to a uniformly charged solid sphere

Consider a non-conducting solid sphere of radius R on which positive charge q is uniformly distributed. Let ρ be the volume charged density (i.e., charge per unit volume) of the solid sphere.

$$\text{i.e., } \rho = \frac{\text{Charge on the solid sphere}}{\text{Volume of the solid sphere}} = \frac{q}{\frac{4}{3}\pi R^3}$$

a) At a point outside the solid sphere

Let P be a point outside the sphere at a distance r (r > R) from the centre of the sphere.

Draw a **Gaussian surface** in the form of a sphere of radius r with O as the centre. The electric field intensity $\vec{E}$ is directed radially outwards (due to + ve charge).

According to Gauss' theorem,

$$\oint_S \vec{E}.d\vec{S} = \frac{q}{\epsilon_0} \quad (or) \quad \oint_S ES\cos\theta = \frac{q}{\epsilon_0}$$

Since $\vec{E}$ and $d\vec{S}$ are along the same direction, so $\theta = 0^0$

$$\therefore \oint_S E\,dS\cos 0^0 = \frac{q}{\epsilon_0} \quad (or) \quad \oint_S E\,dS = \frac{q}{\epsilon_0}.$$

Since E is same at all the points on the surface of Gaussian surface,

$$\therefore E\oint_S dS = \frac{q}{\epsilon_0} \quad ...(i)$$

Now, $\oint_S dS$ = Surface area of the Gaussian sphere

$$= 4\pi r^2$$

$$\therefore E \times 4\pi r^2 = \frac{q}{\epsilon_0} \quad (or) \quad E = \frac{1}{4\pi\epsilon_0}\frac{q}{r^2}$$

Thus, electric field intensity due to a charged solid sphere is such, as if whole of the charge were concentrated at the centre of the solid sphere.

b) At a point on the surface of the solid sphere

Here radius of Gaussian surface, r = R (i.e. radius of sphere)

$\therefore$ The eqn $E = \frac{1}{4\pi\epsilon_0}\frac{q}{r^2}$ becomes $E = \frac{1}{4\pi\epsilon_0}\frac{q}{R^2}$

c) At a point inside a solid sphere

Let P be the point inside a solid sphere at a distance r (r < R) from the centre O.

ಇಸ್ರೇಲ್–ಹಮಾಸ್ ಬಂಡುಕೋರರಿಂದ ಸಕಾರಾತ್ಮಕ ನಿಲುವು

ಕದನ ವಿರಾಮ 2 ದಿನ ವಿಸ್ತರಣೆ

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಗಾಜಾ ಪಟ್ಟಿಗೆ ಭೇಟಿ ನೀಡಿ ಯೋಧರಿಗೆ ಆತ್ಮಸ್ಥೈರ್ಯ ತುಂಬಿದರು

—ಎಎಫ್‌ಪಿ ಚಿತ್ರ

ಗಾಜಾ / ಜೆರುಸಲೇಂ / ದೋಹಾ (ರಾಯಿಟರ್ಸ್/ ಎಎಫ್‌ಪಿ): ಗಾಜಾ ಪಟ್ಟಿಯಲ್ಲಿ ಮಾನವೀಯ ದೃಷ್ಟಿಯಿಂದ ಇಸ್ರೇಲ್ ನಾಯಕರು ಹಾಗೂ ಹಮಾಸ್ ಬಂಡುಕೋರರು ಇನ್ನೂ ಎರಡು ದಿನ ಕದನ ವಿರಾಮ ವಿಸ್ತರಣೆಗೆ ಸೋಮವಾರ ಒಪ್ಪಿಗೆ ನೀಡಿದ್ದಾರೆ.

ನಾಲ್ಕು ದಿನಗಳ ತಾತ್ಕಾಲಿಕ ಕದನ ವಿರಾಮ ಅಂತ್ಯಗೊಂಡ ಬೆನ್ನಲ್ಲೇ ಮಧ್ಯಸ್ಥಿಕೆಯ ಹೊಣೆ ಹೊತ್ತಿರುವ ರಾಷ್ಟ್ರಗಳಿಂದ ನಡೆದ ರಾಜತಾಂತ್ರಿಕ ಸಮಾಲೋಚನೆ ಫಲಪ್ರದವಾಗಿದ್ದು, ಕದನ ವಿರಾಮ ವಿಸ್ತರಣೆಯಾಗಿದೆ ಎಂದು ಕತಾರ್ ಹೇಳಿದೆ.

ಹಮಾಸ್ ಬಂಡುಕೋರರು ಮತ್ತೆ ನಾಲ್ಕು ದಿನ ಕದನ ವಿರಾಮ ವಿಸ್ತರಣೆಗೆ ಇಂಗಿತ ವ್ಯಕ್ತಪಡಿಸಿದ್ದರು. ಆದರೆ, ದಿನ ಬಿಟ್ಟು ದಿನ ವಿಸ್ತರಣೆ ಮಾಡುವುದಾಗಿ ಇಸ್ರೇಲ್ ಹೇಳಿತ್ತು ಎಂದು ಈಜಿಪ್ಟ್‌ನ ಭದ್ರತಾ ಪಡೆಯ ಮೂಲಗಳು ತಿಳಿಸಿವೆ.

ಕದನ ವಿರಾಮದ ವೇಳೆ ದಿನವೊಂದಕ್ಕೆ 10 ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕು. ಇದಕ್ಕೆ ಪ್ರತಿಯಾಗಿ ಮೂರರಷ್ಟು ಪ್ಯಾಲೆಸ್ಟೀನ್ ಪ್ರಜೆಗಳನ್ನು ಬಿಡುಗಡೆ ಮಾಡುವುದಾಗಿ ಇಸ್ರೇಲ್ ಪುನರುಚ್ಚರಿಸಿದೆ.

ಬಿಡುಗಡೆ ವಿಳಂಬ: ಒಪ್ಪಂದದ ಅನ್ವಯ ಕೊನೆಯ ದಿನದಂದು ಇಸ್ರೇಲ್‌ನ 11 ಪ್ರಜೆಗಳನ್ನು ಹಮಾಸ್ ಬಿಡುಗಡೆ ಮಾಡಬೇಕಿತ್ತು. ಆದರೆ, ಎರಡೂ ಕಡೆಯಿಂದ ಬಿಡುಗಡೆಯಾಗುವವರ ಪಟ್ಟಿ ಬಗ್ಗೆ ಇಸ್ರೇಲ್ ಮತ್ತು ಹಮಾಸ್‌ನಿಂದ ಸಹಮತ ವ್ಯಕ್ತವಾಗಿಲ್ಲ ಎಂದು ಹೇಳಲಾಗಿದೆ.

‘ಸೋಮವಾರ ಬಿಡುಗಡೆಯಾಗಬೇಕಿದ್ದ ಒತ್ತೆಯಾಳುಗಳ ಪಟ್ಟಿ ಬಗ್ಗೆ ಸಮಸ್ಯೆ ತಲೆದೋರಿತ್ತು. ಯಾವುದೇ ವಿಳಂಬವಾಗದಂತೆ ಸಮಸ್ಯೆ ಬಗೆಹರಿಸಲು ಮಾತುಕತೆ ನಡೆದಿದೆ’ ಎಂದು ಪ್ಯಾಲೆಸ್ಟೀನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕಾರಾಗೃಹದಲ್ಲಿರುವ ಪ್ಯಾಲೆಸ್ಟೀನ್ ಪ್ರಜೆಗಳ ಬಿಡುಗಡೆ ಸಂಬಂಧ ಹಮಾಸ್ ಪಟ್ಟಿ ನೀಡಿದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಕಚೇರಿ ಹೇಳಿದೆ.

ಮಸ್ಕ್–ನೆತನ್ಯಾಹು ಮಾತುಕತೆ: ‘ಎಕ್ಸ್’ನಲ್ಲಿ ಯೆಹೂದಿ ಜನಾಂಗದ ವಿರುದ್ಧದ್ವೇಷ ಬಿತ್ತುವ ಕಾರ್ಯ ನಡೆದಿದೆ ಎಂಬ ಆರೋಪದ ನಡುವೆಯೇ ಟೆಸ್ಲಾ ಕಂಪನಿಯ ಮುಖ್ಯಸ್ಥ ಇಲಾನ್ ಮಸ್ಕ್ ಅವರು, ಸೋಮವಾರ ಇಸ್ರೇಲ್‌ಗೆ ಭೇಟಿ ನೀಡಿ, ಪ್ರಧಾನಿ ನೆತನ್ಯಾಹು ಸೇರಿದಂತೆ ಪ್ರಮುಖ ನಾಯಕರ ಜೊತೆ ಚರ್ಚಿಸಿದರು.

ಹಮಾಸ್ ಬಂಡುಕೋರರು ಅಕ್ಟೋಬರ್ 7ರಂದು ದಾಳಿ ನಡೆಸಿದ ಇಸ್ರೇಲ್‌ನ ಸಾಮುದಾಯಿಕ ವ್ಯವಸಾಯ ಕೇಂದ್ರದ ಸ್ಥಳಕ್ಕೆ ಭೇಟಿ ನೀಡಿದ ಮಸ್ಕ್ ಜೊತೆಯಲ್ಲಿ, ನೆತನ್ಯಾಹು ಕೂಡ ಇದ್ದರು. ಅಲ್ಲಿನ ಸಂತ್ರಸ್ತರ ಮನೆಗಳಿಗೆ ಇಬ್ಬರೂ ಭೇಟಿ ನೀಡಿದರು.

‘ಜನರ ಹತ್ಯಾಕಾಂಡದ ವಿಡಿಯೊ, ಛಾಯಾಚಿತ್ರಗಳನ್ನು ನೆತನ್ಯಾಹು ತೋರಿದರು. ಈ ದೃಶ್ಯಗಳನ್ನು ನೋಡಿದರೆ ಜೀವನದಲ್ಲಿ ಜಿಗುಪ್ಸೆ ಹುಟ್ಟುತ್ತದೆ’ ಎಂದು ‘ಎಕ್ಸ್’ನಲ್ಲಿ ಮಸ್ಕ್ ಹೇಳಿದ್ದಾರೆ.

ಗಾಜಾದಲ್ಲಿ 184 ಒತ್ತೆಯಾಳು

ಕದನ ವಿರಾಮ ಒಪ್ಪಂದದ ವೇಳೆ ಇಸ್ರೇಲ್‌ನ 50 ಮಹಿಳೆಯರು ಮತ್ತು ಮಕ್ಕಳನ್ನು ಬಿಡುಗಡೆ ಮಾಡುವುದಾಗಿ ಹಮಾಸ್ ಹೇಳಿತ್ತು. ಆದರೆ, ಒತ್ತೆಯಾಳುಗಳಾಗಿರುವ ವಿದೇಶಿ ಪ್ರಜೆಗಳ ಬಿಡುಗಡೆಗೆ ಒಪ್ಪಂದದ ಅನ್ವಯ ಯಾವುದೇ ಮಿತಿ ನಿಗದಿಪಡಿಸಿರಲಿಲ್ಲ.

ಭಾನುವಾರದವರೆಗೆ ಬಂಡುಕೋರರು, ವಿದೇಶಿಯರು ಸೇರಿದಂತೆ 58 ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಪ್ಯಾಲೆಸ್ಟೀನ್‌ನ 117 ನಾಗರಿಕರನ್ನು ಇಸ್ರೇಲ್ ಬಿಡುಗಡೆಗೊಳಿಸಿದೆ.

‘14 ವಿದೇಶಿಯರು ಸೇರಿದಂತೆ 184 ಜನರು ಗಾಜಾದಲ್ಲಿ ಒತ್ತೆಯಾಳುಗಳಾಗಿ ಇದ್ದಾರೆ’ ಎಂದು ಇಸ್ರೇಲ್ ಸರ್ಕಾರದ ವಕ್ತಾರ ಹೇಳಿದ್ದಾರೆ.

ನೆತನ್ಯಾಹು ಭೇಟಿ

ಜೆರುಸಲೇಂ (ಪಿಟಿಐ): ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ಸೇನೆಯು ಸಂಪೂರ್ಣ ಹಿಡಿತ ಸಾಧಿಸಿದ ಬೆನ್ನಲ್ಲೇ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, ಭಾನುವಾರ ಗಾಜಾಕ್ಕೆ ಭೇಟಿ ನೀಡಿ ಯೋಧರಿಗೆ ಆತ್ಮಸ್ಥೈರ್ಯ ತುಂಬಿದ್ದಾರೆ.

ಹಮಾಸ್ ಬಂಡುಕೋರರ ಸುರಂಗದ ಬಗ್ಗೆ ಸೇನೆಯ ಕಮಾಂಡರ್‌ಗಳು ಮತ್ತು ಯೋಧರು, ನೆತನ್ಯಾಹು ಅವರಿಗೆ ವಿವರಿಸಿದರು.

ಪೌಲ್ ಲಿಂಚ್‌ಗೆ ಬೂಕರ್ ಪ್ರಶಸ್ತಿ

ಪೌಲ್ ಲಿಂಚ್

ಲಂಡನ್: ಐರಿಶ್ ಲೇಖಕ, ಕಾದಂಬರಿಕಾರ ಪೌಲ್ ಲಿಂಚ್ ಅವರು ಪ್ರಸಕ್ತ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

‘ಪ್ರಾಫೆಟ್ ಸಾಂಗ್’ ಕೃತಿಗಾಗಿ ಲಿಂಚ್ ಅವರಿಗೆ ಈ ಪ್ರಶಸ್ತಿ ಲಭಿಸಿದೆ. ಇದು ಅವರ ಐದನೇ ಕಾದಂಬರಿ. 46 ವರ್ಷದ ಲಿಂಚ್ ಚಲನಚಿತ್ರಗಳ ವಿಮರ್ಶೆ ಮೂಲಕ ಸಾಹಿತ್ಯ ಕೃಷಿ ಆರಂಭಿಸಿದ್ದು, ‘ರೆಡ್ ಸ್ಕೈ ಇನ್ ಮಾರ್ನಿಂಗ್’ ಅವರ ಮೊದಲ ಕೃತಿ.

ಪ್ರಶಸ್ತಿಯು ₹ 52 ಲಕ್ಷ (50 ಸಾವಿರ ಪೌಂಡ್) ನಗದು ಒಳಗೊಂಡಿದೆ.

ಸಿರಿಯಾದಲ್ಲಿ ಹಲವು ವರ್ಷಗಳಿಂದ ನಡೆಯುತ್ತಿರುವ ಯುದ್ಧ ಹಾಗೂ ಕದನದಿಂದಾಗಿ ನೆಲೆ ಕಳೆದುಕೊಂಡ ಜನರ ಕುರಿತಾಗಿ ಪಶ್ಚಿಮ ರಾಷ್ಟ್ರಗಳು ತಳೆದ ನಿಲುವುಗಳು ಲಿಂಚ್ ಅವರನ್ನು ಬಹುವಾಗಿ ಕಾಡಿದವು. ಈ ಹಿನ್ನೆಲೆಯಲ್ಲಿ ಮೂಡಿಬಂದ ಕೃತಿಯೇ ‘ಪ್ರಾಫೆಟ್ ಸಾಂಗ್’ ಎಂದು ಕಾದಂಬರಿಕಾರ ಎಸಿ ಎಡುಗ್ಯಾನ್ ನೇತೃತ್ವದ ಆಯ್ಕೆ ಸಮಿತಿ ಹೇಳಿದೆ.

ಐರ್ಲೆಂಡ್ ದೇಶವು ಕ್ರಮೇಣ ಸರ್ವಾಧಿಕಾರ ಆಳ್ವಿಕೆಯತ್ತ ಹೊರಳುತ್ತಿರುವುದನ್ನು ಲಿಂಚ್ ಅವರು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಐರ್ಲೆಂಡ್‌ನ ಆಡಳಿತ ವ್ಯವಸ್ಥೆಯಲ್ಲಿನ ಈ ಬದಲಾವಣೆ ಆಂತರಿಕ ಕಲಹಕ್ಕೆ ಕಾರಣವಾಗುವುದು, ಇದರಿಂದ ಸಂಕಷ್ಟಕ್ಕೀಡಾಗುವ ಜನರು ದೇಶ ತೊರೆಯುವ ಚಿತ್ರಣವನ್ನು ‘ಪ್ರಾಫೆಟ್ ಸಾಂಗ್’ ಕೃತಿಯಲ್ಲಿ ಲಿಂಚ್ ಕಟ್ಟಿಕೊಟ್ಟಿದ್ದಾರೆ. ‘ಪ್ರಾಫೆಟ್ ಸಾಂಗ್’ ಕೃತಿಯು ಕಾಲ್ಪನಿಕ ಕಥಾವಸ್ತು ಹೊಂದಿದ್ದರೂ, ಇಸ್ರೇಲ್–ಹಮಾಸ್ ಸಂಘರ್ಷ ಸೇರಿದಂತೆ ಸಮಕಾಲೀನ ಸಂಕಷ್ಟಗಳನ್ನು ಈ ಕಾದಂಬರಿ ಪ್ರತಿಧ್ವನಿಸುತ್ತದೆ.

ಖಾಲಿಸ್ತಾನ ಬೆಂಬಲಿಗರಿಂದ ರಾಯಭಾರಿಗೆ ಅಡ್ಡಿ

ತರಂಜಿತ್ ಸಿಂಗ್ ಸಂಧು

ನ್ಯೂಯಾರ್ಕ್ (ಪಿಟಿಐ): ಗುರುನಾನಕ್ ಜಯಂತಿ ಅಂಗವಾಗಿ ಪ್ರಾರ್ಥನೆ ಸಲ್ಲಿಸುವುದಕ್ಕಾಗಿ ನ್ಯೂಯಾರ್ಕ್‌ನಲ್ಲಿರುವ ಗುರುದ್ವಾರಕ್ಕೆ ತೆರಳಿದ್ದ ಅಮೆರಿಕದಲ್ಲಿನ ಭಾರತದ ರಾಯಭಾರಿ ತರಂಜಿತ್ ಸಿಂಗ್ ಸಂಧು ಅವರಿಗೆ ಖಾಲಿಸ್ತಾನ ಬೆಂಬಲಿಗರ ಗುಂಪೊಂದು ಅಡ್ಡಿಪಡಿಸಿದೆ.

ಇಲ್ಲಿನ ಲಾಂಗ್ ಐಲ್ಯಾಂಡ್‌ನ ಹಿಕ್ಸ್‌ವಿಲ್ಲೆದಲ್ಲಿರುವ ಗುರುದ್ವಾರದಲ್ಲಿ ಭಾನುವಾರ ಈ ಘಟನೆ ನಡೆದಿದೆ. ಘಟನೆಗೆ ಸಂಬಂಧಿಸಿದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಸಂಧು ಅವರು ಗುರುದ್ವಾರಕ್ಕೆ ಭೇಟಿ ನೀಡಿದ್ದ ವೇಳೆ, ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಆದರೆ, ಕೆಲ ಖಾಲಿಸ್ತಾನ ಬೆಂಬಲಿಗರು ಅವರನ್ನು ಸುತ್ತುವರಿದರಲ್ಲದೇ, ಕೆನಡಾದಲ್ಲಿ ನಡೆದ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ಕುರಿತು ಪ್ರಶ್ನೆಗಳನ್ನು ಕೂಗುತ್ತಿದ್ದ ದೃಶ್ಯಗಳು ವಿಡಿಯೊದಲ್ಲಿವೆ.

ನಂತರ, ಸಿಖ್ ಸಮುದಾಯದ ಕೆಲವರ ಬೆಂಗಾವಲಿನಲ್ಲಿ ಸಂಧು ಅವರು ಗುರುದ್ವಾರದಿಂದ ನಿರ್ಗಮಿಸಿ ದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಮೆರಿಕದಲ್ಲಿ ನೆಲೆಸಿರುವ ಸಿಖ್ ಸಮುದಾಯಕ್ಕೆ ಭಾರತೀಯ ರಾಜತಾಂತ್ರಿಕರು ಎಲ್ಲ ರೀತಿಯ ನೆರವು ಒದಗಿಸುವರು ಎಂದು ಹೇಳಿದರು.

ಇಮ್ರಾನ್ ಖಾನ್‌ಗೆ ನ್ಯಾಯಾಂಗ ಬಂಧನ

ಇಸ್ಲಾಮಾಬಾದ್ (ಪಿಟಿಐ): ‘ಅಲ್–ಖಾದಿರ್ ಟ್ರಸ್ಟ್’ ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ನ್ಯಾಯಾಲಯವೊಂದು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸೋಮವಾರ ಈ ಕುರಿತು ವಿಚಾರಣೆ ನಡೆಸಿದ ನ್ಯಾಯಾಲಯವು, ಭ್ರಷ್ಟಾಚಾರ ಪ್ರಕರಣದಲ್ಲಿ ಖಾನ್ ಅವರನ್ನು ತನ್ನ ವಶಕ್ಕೆ ನೀಡಬೇಕು ಎಂಬ ಭ್ರಷ್ಟಾಚಾರ ನಿಗ್ರಹ ದಳದ ಕೋರಿಕೆಯನ್ನು ತಿರಸ್ಕರಿಸಿತು.

ಆಸ್ಟ್ರೇಲಿಯಾ ಸೆನೆಟ್‌ಗೆ ಆಯ್ಕೆ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ ಸಂಸತ್ತಿಗೆ 2019ರಲ್ಲಿ ಆಯ್ಕೆಯಾದ ಮೊದಲ ಭಾರತೀಯ ಸಂಜಾತ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದೇವ ಶರ್ಮಾ ಅವರು ಈಗ ನ್ಯೂ ಸೌತ್ ವೇಲ್ಸ್ ಲಿಬರಲ್ ಕ್ಷೇತ್ರದಿಂದ ಸೆನೆಟ್‌ಗೆ ಆಯ್ಕೆಯಾಗಿದ್ದಾರೆ. ಈ ಮೂಲಕ ಅವರು ರಾಜಕೀಯಕ್ಕೆ ಮರು ಪ್ರವೇಶ ಮಾಡಿದಂತಾಗಿದೆ.

ನ್ಯೂ ಸೌತ್ ವೇಲ್ಸ್ ಲಿಬರಲ್ ಸೆನೆಟ್ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಶರ್ಮಾ ಅವರು 251 ಮತ ಪಡೆದು ಜಯಗಳಿಸಿದ್ದಾರೆ.

ಕರ್ನಾಟಕ ಸರ್ಕಾರ ಸಹಕಾರ ಇಲಾಖೆ

ಮಾರಾಟಾಧಿಕಾರಿ, ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿವಮೊಗ್ಗ.

ಕ್ರ.ಸಂ.(2)ಕ್ಕೆ “ತಿದ್ದುಪಡಿ ಪ್ರಕಟಣೆ”

ದಿನಾಂಕ: 06.12.2023 ರಂದು ನಡೆಯಬೇಕಾದ ಆಸ್ತಿ ಬಹಿರಂಗ ಹರಾಜು ಸಮಯ ಬೆಳಿಗ್ಗೆ 03:00 ಘಂಟೆಗೆ ಎಂದು ದಿನಾಂಕ: 27.11.2023ರ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಇದನ್ನು ಮಧ್ಯಾಹ್ನ 03:00 ಘಂಟೆಗೆ ಎಂದು ಓದಿಕೊಳ್ಳುವುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕರು, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್ ನಿ., ಶಿವಮೊಗ್ಗ.

ಸಹಿ/– ಮಾರಾಟಾಧಿಕಾರಿ, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್ ನಿ., ಶಿವಮೊಗ್ಗ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ

ಇ–ಮೇಲ್: eerdwsd.bngr1@gmail.com; ದೂ: 080–29787463 (ಮೋ): 9448367736

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 6/2023–24/849 ದಿನಾಂಕ: 27.11.2023

(ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರರವರಿಂದ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಕೊಳವೆ ಬಾವಿ ಕೊರೆಯಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ ಟೆಂಡರ್ ಬಿಡ್ ಡಾಕ್ಯೂಮೆಂಟ್ KW-4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್ ಮುಖಾಂತರ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

(1) ಟೆಂಡರ್ ದಾಸ್ತಾವೇಜುಗಳನ್ನು https://kppp.karnataka.gov.in ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **28.11.2023 ರ ಸಂಜೆ 4.00 ಗಂಟೆಯ ನಂತರ** (2) ಪ್ರೀಬಿಡ್ ಮೀಟಿಂಗ್ ಸ್ಥಳ/ದಿನಾಂಕ: ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾ.ಕು.ನೀ&ನೈ.ವಿಭಾಗ, ಬೆಂಗಳೂರು ಗ್ರಾಮಾಂತರ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ದಿನಾಂಕ: **02.12.2023 ರ ಬೆಳಿಗ್ಗೆ 11.00 ಗಂಟೆಗೆ** (3) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.12.2023 ಸಂಜೆ 4.05 ಗಂಟೆಯವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.12.2023 ಬೆಳಿಗ್ಗೆ 11.00 ಗಂಟೆಗೆ** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **08.12.2023 ಬೆಳಿಗ್ಗೆ 11.00 ಗಂಟೆಗೆ.**

ಸಹಿ/–
(ಎಸ್.ಎಂ.ಸುಭಾನ್ ಸಾಹೇಬ್)
ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ಗ್ರಾಮಾಂತರ

DIPR/CP/2288/SPAN/2023-24

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560009.
ದೂರವಾಣಿ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–03/28/2023–24/1217 ದಿನಾಂಕ: 24–11–2023

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ)

ಶ್ರೀಮತಿ ಯಶೋಧಮ್ಮ. ಬಿ.ಟಿ ಕೋಂ ಲೇಟ್ ಜಿ.ಎಸ್. ಜಯರಾಮಯ್ಯ, ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೆಜ್ಜಲಗೆರೆ ಗ್ರಾಮದ ಸರ್ವೆ ಸಂಖ್ಯೆ: 224/1 ರ 0ಎ– 24ಗು, 224/2 ರ 01ಎ – 17ಗು, 224/3 ರ 0ಎ – 35ಗು, 223/1 ರ 0ಎ – 28ಗು ಒಟ್ಟು 03ಎ – 24ಗು ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ **“ವ್ಯವಸಾಯ”** ವಲಯದಿಂದ **“ಕೈಗಾರಿಕೆ (ಸರ್ವೀಸ್ ಇಂಡಸ್ಟ್ರೀಸ್)”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1) ಈ ಜಮೀನುಗಳಲ್ಲಿ ಕೈಗಾರಿಕೆ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಕೆಲಸ ದೊರೆಯುತ್ತದೆ.
2) ಈ ಜಮೀನಿನಲ್ಲಿ ಕೈಗಾರಿಕೆ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ಕೈಗಾರಿಕಾ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ.
4) ಈ ಜಮೀನಿನಲ್ಲಿ ಕೈಗಾರಿಕೆ ಸ್ಥಾಪಿಸುವುದರಿಂದ, ಸರ್ಕಾರಕ್ಕೆ ಹೆಚ್ಚಿನ ರೀತಿಯ ತೆರಿಗೆ ಸಂಗ್ರಹವಾಗುತ್ತದೆ. ಈ ತೆರಿಗೆ ಹಣದಲ್ಲಿ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸಹಾಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು** ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾ.ಪ್ರ/2283/ಅಡ್ವಟೋರ್/2023–24

ಕರ್ನಾಟಕ ಸರ್ಕಾರ GOVERNMENT OF KARNATAKA

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

KOPPAL INSTITUTE OF MEDICAL SCIENCES (R), KOPPAL

ನೊಂದಣಿ ಸಂಖ್ಯೆ:KOL-S243–2012–13 ದಿನಾಂಕ:15–03–2013
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
Website : www.kimskoppal.com
email :directorkimskoppal@gmail.com
Office : 08539 225522 Office : 08539-225523

No:KIMS/KOPPAL/SCP-TSP/UG-MEDICAL & NURSING/ BOOKS/06/2023-24.

DATE: 27.11.2023

ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ 2023–24ನೇ ಸಾಲಿಗೆ ಅವಶ್ಯವಿರುವ ಪುಸ್ತಕಗಳನ್ನು ಮತ್ತು ರೆಫರೆನ್ಸ್ ಪುಸ್ತಕಗಳನ್ನು ಖರೀದಿಸಿ ಪೂರೈಸಿಕೊಳ್ಳಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ನಿಗದಿಪಡಿಸಿದ ಟೆಂಡರ್ ಫಾರ್ಮಗಳನ್ನು http://kppp.karnataka.gov.in ಹಾಗೂ ಈ ಸಂಸ್ಥೆಯ ವೆಬ್‌ಸೈಟ್ www.kimskoppal.kar.nic.inನಲ್ಲಿ ಪಡೆಯಬಹುದು. ಟೆಂಡರ್ ಪ್ರಾರಂಭದ ದಿನಾಂಕ: **29/11/2023**, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13/12/2023**, ಟೆಂಡರ್‌ನ ಅಂದಾಜು ಮೊತ್ತ **ರೂ. 40.04 ಲಕ್ಷಗಳು**. ಟೆಂಡರ್‌ನ ವಿವರವಾದ ವೇಳಾಪಟ್ಟಿ, ಷರತ್ತು ಹಾಗೂ ನಿಬಂಧನೆಗಳನ್ನು ಟೆಂಡರ್ ದಾಖಲೆಯಲ್ಲಿ ಕಾಣಬಹುದಾಗಿದೆ.

ಸಹಿ/– ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಕೊಪ್ಪಳ.

ವಾ.ಸಾ.ಇ./ಕೊಪ್ಪಳ/255/2023–24/ದೇಶಪಾಂಡೆ ಪಬ್ಲಿಸಿಟಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560 001.
ಫೋನ್: 080–22215601, 22215801, ಫ್ಯಾಕ್ಸ್: 080–22215602

ಸಂ: ಡಿವೈಇಎಸ್/ಎಸ್‌ಎಸ್‌ಹೆಚ್/81/2023–24 ದಿನಾಂಕ: 27.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯಗಳಲ್ಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳ ದೈನಂದಿನ ಕ್ರೀಡಾ ತರಬೇತಿಗೆ ಅಗತ್ಯವಾದ ಕ್ರೀಡಾ ಸಮವಸ್ತ್ರಗಳನ್ನು ಖರೀದಿಸಲು ಇ–ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್ ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಕ್ರೀಡಾ ಸಮವಸ್ತ್ರಗಳ ಸರಬರಾಜು	ರೂ.3,43,07,500/–	ರೂ.5,14,613/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ ತಮ್ಮ ಬಿಡ್ ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆ ದಿನಾಂಕ: 07.12.2023 ಸಮಯ 16.00 ಗಂಟೆ

2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 08.12.2023 ಸಮಯ 16.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ವಾ.ಸಾ.ಸಂ.ಇ/ವಾಪ್ರ/2296/ಆಕಾರ್/2023–24

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಗದಗ ವಿಭಾಗ, ಗದಗ

ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:1666/2023 ದಿ: 27–11–2023

ಇ–ಟೆಂಡರ್ ಪ್ರಕಟಣೆ ಸಂಖ್ಯೆ : 04/2023

(ಇ–ಪ್ರಕ್ಯೂರಮೆಂಟ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆದಾರರನ್ನು ಹಾಗೂ ಬಸ್ ನಿಲ್ದಾಣದ ಆವರಣ, ಶೌಚಾಲಯ, ಮೂತ್ರಾಲಯಗಳಿಗೆ ಸ್ವಚ್ಛತಾಗುತ್ತಿಗೆದಾರರನ್ನು ಆಯ್ಕೆ ಮಾಡಲು (ಕೊಟೇಷನ್) ಇ–ಪ್ರಕ್ಯೂರಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಸ್ತಾವೇಜಗಳನ್ನು ಇ–ಪ್ರಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: **http/www.eproc.karnataka.gov.in** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ : **15–12–2023** ರಂದು **17:00** ಗಂಟೆಯವರೆಗೆ ಆನ್‌ಲೈನ ಅರ್ಜಿಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ–ಪ್ರಕ್ಯೂರಮೆಂಟ್ ಸೆಲ್‌ನಿಂದ DSC(Digital Signature Certificate) ಪಡೆದಿರುವ ಅಧೀಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ದಿನಾಂಕ : **18–12–2023** ರಂದು ಬೆಳಿಗ್ಗೆ 11.00AM ಗಂಟೆಗೆ ಟೆಂಡರ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ: 080–22371090, 080–22340060 ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಛೇರಿ, ವಾ.ಕ.ರ.ಸಾ ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760991802 (ವಿಭಾಗೀಯ ಸಂಚಲನಾಧಿಕಾರಿಗಳು), 9611684924 (ವಿಷಯ ನಿರ್ವಾಹಕ) ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಇ–ಟೆಂಡರ್‌ನಲ್ಲಿ ಭಾಗವಹಿಸುವವರು ಇ–ಟೆಂಡರ್ ಪ್ರಕಟಣೆ ಸಂಖ್ಯೆ : 04/ 2023 ರ ಮತ್ತು ಇ–ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ–ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ–ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ. ಸಂಸ್ಥೆ ಗದಗ ವಿಭಾಗ ಗದಗ.

ವಾಸಾಸಂಇ/ಗದಗ/ಕೆಎಸ್‌ಎಂಸಿಎ/321/23–24

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/2023–24/41643–46 ದಿನಾಂಕ:27.11.2023

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಗು.ವಿ.ಸ.ಕಂ.ನಿ ಯ ತಾಂತ್ರಿಕ ನಿರ್ದಿಷ್ಟತೆಯಂತೆ ಕೆಳಗಿನ ವಿದ್ಯುತ್ ವಾಹಕಗಳನ್ನು ತಯಾರಿಕೆ ಮತ್ತು ಪೂರೈಕೆ ಮಾಡುವುದು **ಪಿಸಿ–1295** : ರ್‍ಯಾಬಿಟ್ (ಪರಿಮಾಣ: 3000 ಕಿಮಿ), ಮತ್ತು ಪಿಸಿ–1296 : ವೀಸೆಲ್ (ಪರಿಮಾಣ: 5000 ಕಿಮಿ).

ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **28.11.2023** ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **28.12.2023 @ 17:30** ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30.12.2023 @ 11:00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **01.01.2024 @ 11:00 ಗಂಟೆಗೆ,** ಟೆಂಡರ್ ಮೊತ್ತ: **ರೂ. 1352.64 ಲಕ್ಷಗಳು** (ರ್‍ಯಾಬಿಟ್) ಮತ್ತು **ರೂ. 1360.37 ಲಕ್ಷಗಳು** (ವೀಸೆಲ್).

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: https://kppp.karnataka.gov.in.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/512/ಕೆ.ಎಸ್.ಎಂ.ಸಿ.&ಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಹೆಬ್ಬಾಳ ವಿಭಾಗ, 2ನೇ ಮಹಡಿ, ಬೃ.ಬೆಂ.ಮ.ಪಾ ಕಟ್ಟಡ, ಜೆ.ಸಿ. ನಗರ ಮುಖ್ಯರಸ್ತೆ, ಮುನಿರೆಡ್ಡಿ ಪಾಳ್ಯ, ಬೆಂಗಳೂರು–560 032.

ಸಂಖ್ಯೆ: ಕಾಪಾಅ/ಹೆಬ್ಬಾಳ/ಟೆಂಡರ್/05/2023–24 ದಿನಾಂಕ: 27.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ) (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ–1 & ಕೆಡಬ್ಲ್ಯೂ–2)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ ಸಾವಿರಗಳಲ್ಲಿ
1	ವಾರ್ಡ್ ಸಂಖ್ಯೆ–71 ಚಾಮುಂಡಿನಗರದ ಸೀತಪ್ಪ ಬಡಾವಣೆ, ವೆಂಕಟಸ್ವಾಮಪ್ಪ ಬಡಾವಣೆ, ಅವಲಪ್ಪ ಬ್ಲಾಕ್, ಅಕ್ಕಮ್ಮ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿ ಮತ್ತು ಕಳೆದು ಹೋಗಿರುವ ಕವರಿಂಗ್ ಸ್ಲ್ಯಾಬ್‌ಗಳನ್ನು ಒದಗಿಸುವುದು. (2ನೇ ಕರೆ)	85.00	ರೂ.1,70,000/–(1.00 ಲಕ್ಷ ಇ–ಪಾವತಿ ಮೂಲಕ ಉಳಿಕೆ ರೂ.70,000/– ಬಿ.ಜಿ ಮೂಲಕ, ಬಿ.ಜಿ.ಯನ್ನು ತಾಂತ್ರಿಕ ಬಿಡ್ ತೆರೆಯುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು)
2	ವಾರ್ಡ್ ಸಂಖ್ಯೆ–71 ಚಾಮುಂಡಿನಗರದ ಆರ್.ಟಿ ನಗರ 1ನೇ ಬ್ಲಾಕ್, ಎಕ್ಸ್ ಸರ್ವೀಸ್‌ಮೆನ್ ಕಾಲೋನಿ, ಪಿ & ಟಿ ಕಾಲೋನಿ, ದಿಣ್ಣೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿ ಮತ್ತು ಕಳೆದು ಹೋಗಿರುವ ಕವರಿಂಗ್ ಸ್ಲ್ಯಾಬ್‌ಗಳನ್ನು ಒದಗಿಸುವುದು.(2ನೇ ಕರೆ)	85.00	ರೂ.1,70,000/–(1.00 ಲಕ್ಷ ಇ–ಪಾವತಿ ಮೂಲಕ ಉಳಿಕೆ ರೂ.70,000/– ಬಿ.ಜಿ ಮೂಲಕ, ಬಿ.ಜಿ.ಯನ್ನು ತಾಂತ್ರಿಕ ಬಿಡ್ ತೆರೆಯುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು)
3	ವಾರ್ಡ್ ಸಂಖ್ಯೆ–71 ಚಾಮುಂಡಿನಗರದ ಚಾಮುಂಡಿ–ನಗರ, ರಹಮತ್‌ನಗರ ಮತ್ತು ಸುತ್ತಮುತ್ತಲ ಪ್ರದೇಶ–ಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿ ಮತ್ತು ಕಳೆದು ಹೋಗಿರುವ ಕವರಿಂಗ್ ಸ್ಲ್ಯಾಬ್‌ಗಳನ್ನು ಒದಗಿಸುವುದು. (2ನೇ ಕರೆ)	67.00	ರೂ.1,34,000/–(1.00 ಲಕ್ಷ ಇ–ಪಾವತಿ ಮೂಲಕ ಉಳಿಕೆ ರೂ.34,000/– ಬಿ.ಜಿ ಮೂಲಕ, ಬಿ.ಜಿ.ಯನ್ನು ತಾಂತ್ರಿಕ ಬಿಡ್ ತೆರೆಯುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ **28.11.2023**ರಿಂದ ಅಪ್‌ಲೋಡ್ ಮಾಡಲಾಗುವುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **11.12.2023**ರ ಸಂಜೆ **4.00** ಗಂಟೆಯವರೆಗೆ. (3) ಆರ್ಥಿಕ ಬಿಡ್ಡನ್ನು ದಿನಾಂಕ **12.12.2023**ರ ಬೆಳಿಗ್ಗೆ **11:00** ಗಂಟೆಯ ನಂತರ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೆಬ್ಬಾಳ ವಿಭಾಗ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.49, 4 ಮತ್ತು 5ನೇ ಮಹಡಿ, ‘ಈಸ್ಟ್‌ವಿಂಗ್’, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001
ದೂರವಾಣಿ ಸಂ: 080–22265383 ಇಮೇಲ್: ceoem@kiadb.in

ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/ಹಂಚಿಕೆ/15045/2023–24 ದಿನಾಂಕ:27.11.2023

ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಈ ಕೆಳಕಂಡ ಕೈಗಾರಿಕಾ ಪ್ರದೇಶಗಳಲ್ಲಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ–1 ಮತ್ತು 2–ಎ), ವಿಕಲಚೇತನ ಹಾಗೂ ಮಾಜಿ ಸೈನಿಕ ಉದ್ದಿಮೆದಾರರಿಂದ ಕೈಗಾರಿಕೆ ಸ್ಥಾಪನೆಗಾಗಿ ಜಮೀನು ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

ಕ್ರ. ಸಂ.	ಜಿಲ್ಲೆ	ಕೈಗಾರಿಕಾ ಪ್ರದೇಶ	ಹಂಚಿಕೆ ವಿಸ್ತೀರ್ಣ (ಎಕರೆ ಗಳಲ್ಲಿ)	ಪ.ಜಾತಿ/ ಪ.ಪಂಗಡ ವರ್ಗದ ಉದ್ದಿಮೆ ದಾರರಿಗೆ ಮೀಸಲಿಟ್ಟ ವಿಸ್ತೀರ್ಣ (ಎಕರೆಗಳಲ್ಲಿ) (ಶೇ.24.10)	ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ–1 ಮತ್ತು 2–ಎ), ವಿಕಲಚೇತನ ಹಾಗೂ ಮಾಜಿ ಸೈನಿಕ ವರ್ಗದ ಉದ್ದಿಮೆದಾರರಿಗೆ ಮೀಸಲಿಟ್ಟ ವಿಸ್ತೀರ್ಣ (ಎಕರೆಗಳಲ್ಲಿ) (ಶೇ.10))	ತಾತ್ಕಾಲಿಕ ಹಂಚಿಕೆ ದರ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ಗ್ರಾಮಾಂತರ	ಓಬಳಾಪುರ (ಡಾಬಸ್‌ಪೇಟೆ 6ನೇ ಹಂತ)	254.19	61.25	25.41	249.00
2	ತುಮಕೂರು	ಜಪಾನೀಸ್ ಇಂಡಸ್ಟ್ರಿಯಲ್ ಟೌನ್‌ಶಿಪ್, ವಸಂತನರಸಾಪುರ 3ನೇ ಹಂತ	180.00	43.38	18.00	109.00
3	ಚಿಕ್ಕಬಳ್ಳಾಪುರ	ಗೌರಿಬಿದನೂರು 3ನೇ ಹಂತ	530.40	127.82	53.00	119.00
4	ದಾವಣಗೆರೆ	ಸಾರಥಿ ಕುರುಬರಹಳ್ಳಿ 1ನೇ ಹಂತ	189.87	45.75	18.98	83.50
5	ಕಲಬುರ್ಗಿ	ಕಪನೂರ್ 3ನೇ ಹಂತ (ದಾಲ್ ಪಾರ್ಕ್ ಏರಿಯಾ)	69.51	16.75	6.95	70.50
6	ಬಳ್ಳಾರಿ	ಕುಡುತಿನಿ 1ನೇ ಹಂತ	391.00	94.23	39.10	52.00

ಅರ್ಜಿದಾರರು, ತಮ್ಮ ಯೋಜನೆಗಳ ಮೇಲೆ ಹೂಡುವ ಬಂಡವಾಳದ ಆಧಾರದ ಮೇಲೆ ಈ ಕೆಳಕಂಡ ಸಂಬಂಧಪಟ್ಟ ಹೂಡಿಕೆ ಅನುಮೋದನೆ ಸಮಿತಿಗಳಿಂದ ತಮ್ಮ ಉದ್ದೇಶಿತ ಯೋಜನೆಗಳಿಗೆ ಅನುಮೋದನೆ ಪಡೆದು ನಂತರ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಅ)	ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (ರೂ.15.00 ಕೋಟಿಗಳ ಮೇಲ್ಪಟ್ಟು ಮತ್ತು ರೂ.500.00 ಕೋಟಿಗಳ ವರೆಗೆ)	ಕರ್ನಾಟಕ ಉದ್ಯೋಗ ಮಿತ್ರ, ನಂ.49, 3ನೇ ಮಹಡಿ, ಈಸ್ಟ್ ವಿಂಗ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001 ಇವರನ್ನು ಸಂಪರ್ಕಿಸುವುದು, www.kum.karnataka.gov.in ರಲ್ಲಿ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವುದು.
ಆ)	ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (ರೂ. 15.00 ಕೋಟಿಗಳ ವರೆಗೆ)	ಆಯಾ ಕೆ.ಐ.ಎ.ಡಿ.ಬಿ ವಲಯ ಕಛೇರಿ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿಗಳನ್ನು ಸಲ್ಲಿಸುವುದು.

ಹಂಚಿಕೆಗಾಗಿ ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಮಂಡಳಿಯ ಕೇಂದ್ರ ಕಚೇರಿ ಮತ್ತು ವಲಯ ಕಚೇರಿಗಳ ವಿಳಾಸಗಳು ಮಂಡಳಿಯ ಜಾಲತಾಣ www.kiadb.in. ರಲ್ಲಿ ಲಭ್ಯವಿರುತ್ತದೆ. ಅರ್ಜಿದಾರರು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಮಂಡಳಿ ಕಛೇರಿಗಳಲ್ಲಿಯೂ ಸಹ ಸಂಪರ್ಕಿಸಬಹುದಾಗಿರುತ್ತದೆ.

ಕೆ.ಐ.ಎ.ಡಿ.ಬಿ. ಕಛೇರಿ	ದೂರವಾಣಿ ಸಂ:
ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ, ನಂ.49, 4ನೇ ಮಹಡಿ, “ಈಸ್ಟ್ ವಿಂಗ್’, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001.	080–22265383
ಕಾರ್ಯಪಾಲಕ ಅಭಿಯಂತರರು–1, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ನಂ.14/1, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001.	080–22117372 / 22117686
ಕಾರ್ಯಪಾಲಕ ಅಭಿಯಂತರರು–2, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ನಂ.14/1, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001.	080–22485068 / 22233641 / 22223222
ಕಾರ್ಯಪಾಲಕ ಅಭಿಯಂತರರು, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಮಾರುತಿ ಗ್ರೂಪ್ಸ್ ಬಿಲ್ಡಿಂಗ್, 2ನೇ ಮಹಡಿ, ಎಸ್.ಐ.ಟಿ. ಮುಖ್ಯದ್ವಾರದ ಹತ್ತಿರ, ಬಿ.ಹೆಚ್. ರಸ್ತೆ, ತುಮಕೂರು–572103	0816–2282282 / 2282288
ಕಾರ್ಯಪಾಲಕ ಅಭಿಯಂತರರು, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಸಿಎ (1–ಬಿ), ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ–577006.	0819–2262788/261055
ಕಾರ್ಯಪಾಲಕ ಅಭಿಯಂತರರು, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಕಪನೂರ್ ಕೈಗಾರಿಕಾ ಪ್ರದೇಶ, ಹುಮ್ನಾಬಾದ್ ರಸ್ತೆ, ಕಲಬುರ್ಗಿ–585102	08472–257557/258048
ಕಾರ್ಯಪಾಲಕ ಅಭಿಯಂತರರು, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಸಿಎ–1, ಮುಂಡರಗಿ ಕೈಗಾರಿಕಾ ಪ್ರದೇಶ, 1ನೇ ಹಂತ, ಬೆಂಗಳೂರು ರಸ್ತೆ, ಬಳ್ಳಾರಿ–583102.	08392–251517/ 251518

ಸರ್ಕಾರಿ ಆದೇಶ ಸಂ:ಸಿಐ 76 ಸಪ್ರಕೈ 2019, ಬೆಂಗಳೂರು ದಿನಾಂಕ:16–02–2021 ರಲ್ಲಿನ ನಿಬಂಧನೆಗಳಿಗೆ ಒಳಪಟ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಉದ್ದಿಮೆದಾರರಿಗೆ ತಾತ್ಕಾಲಿಕ ಹಂಚಿಕೆ ಮೌಲ್ಯದಲ್ಲಿ ಶೇ.75 ರಷ್ಟು ರಿಯಾಯಿತಿ ನೀಡಲಾಗುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳನ್ನು ಮಂಡಳಿಯ ಜಾಲತಾಣ www.kiadb.in ರಲ್ಲಿ ಪಡೆಯಬಹುದಾಗಿರುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ–1 ಮತ್ತು 2–ಎ), ವಿಕಲಚೇತನ ಹಾಗೂ ಮಾಜಿ ಸೈನಿಕ ಉದ್ದಿಮೆದಾರರಿಗೆ ಜಮೀನು ಹಂಚಿಕೆ ಮಾಡುವ ಸಂಬಂಧ ಇರುವ ಸರ್ಕಾರಿ ಆದೇಶಗಳನ್ನು ಮಂಡಳಿಯ ಜಾಲತಾಣದಲ್ಲಿ (www.kiadb.in) ರಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸದಸ್ಯರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ–ಮೇಲ್ : editpage@prajavani.co.in



ಸುಭಾಷಿತ

ಹೊಗಳಿಕೆಯ ಮಾಲಿನ್ಯವನ್ನು ತೊಡೆದುಹಾಕಲು ಏಕಮಾತ್ರ ಉಪಾಯ: ಕೆಲಸ ಮತ್ತು ಇನ್ನಷ್ಟು ಕೆಲಸ.

-ಆಲ್ಬರ್ಟ್ ಐನ್‌ಸ್ಟೀನ್

ಶಿವಕುಮಾರ್ ವಿರುದ್ಧದ ತನಿಖೆ ರಾಜಕೀಯ ಲೆಕ್ಕಾಚಾರ, ಕಾನೂನಿನ ಪ್ರಶ್ನೆ

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದಿಸಿದ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ತನಿಖೆ ನಡೆಸಲು ಸಿಬಿಐಗೆ ನೀಡಿದ್ದ ಅನುಮತಿಯನ್ನು ರಾಜ್ಯ ಸಚಿವ ಸಂಪುಟವು ಹಿಂಪಡೆಯುವ ತೀರ್ಮಾನ ಕೈಗೊಂಡಿರುವುದು 'ಕಾನೂನಿನ ಪ್ರಕ್ರಿಯೆ'ಗೆ ಸಂಬಂಧಿಸಿದ್ದು. ಕಾನೂನಿನ ಅಡಿಯಲ್ಲಿ ಇದು ಎಷ್ಟರಮಟ್ಟಿಗೆ ಸರಿ ಎಂಬುದು ಪರೀಕ್ಷೆಗೆ ಒಳಗಾಗಬೇಕು. 2019ರಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ನೀಡಿದ್ದ ಅನುಮತಿಯೇ ಕಾನೂನುಬದ್ಧವಾಗಿ ಇರಲಿಲ್ಲ ಎಂದು ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರ ಹೇಳಿದೆ. 2019ರಲ್ಲಿ ಅಡ್ವೊಕೇಟ್ ಜನರಲ್ ತಮ್ಮ ಅಭಿಪ್ರಾಯ ನೀಡುವ ಮೊದಲೇ ಅನುಮತಿ ನೀಡಲಾಗಿತ್ತು, ಸ್ಪೀಕರ್ ಅನುಮತಿ ಪಡೆಯದೆಯೇ ಸಂಪುಟವು ಅನುಮತಿ ನೀಡಿತ್ತು ಎಂದು ಸರ್ಕಾರ ಹೇಳಿದೆ. ಸ್ಪೀಕರ್ ಅವರು ಮೌಖಿಕವಾಗಿ ಅನುಮತಿ ನೀಡಿದ್ದರು ಎನ್ನಲಾಗಿದೆ. ಆದರೆ ಇವೆಲ್ಲವೂ ಚರ್ಚಾಸ್ಪದ ಸಂಗತಿಗಳು. ಕಾಂಗ್ರೆಸ್ ನೇತೃತ್ವದ ಸರ್ಕಾರ ಹೇಳುತ್ತಿರುವುದನ್ನು ಬಿಜೆಪಿ ಹಾಗೂ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅಲ್ಲಗಳೆದಿದ್ದಾರೆ. ತನಿಖೆಗೆ ಅನುಮತಿ ನೀಡಿದ್ದನ್ನು ಶಿವಕುಮಾರ್ ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಅವರ ಅರ್ಜಿಗೆ ಸಂಬಂಧಿಸಿದಂತೆ ಏಕಸದಸ್ಯ ಪೀಠ ನೀಡಿದ್ದ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ಕುರಿತ ಆದೇಶವು ಈ ವಾರದಲ್ಲಿ ಪ್ರಕಟವಾಗಬಹುದು ಎಂಬ ನಿರೀಕ್ಷೆ ಇದೆ. ಏಕಸದಸ್ಯ ಪೀಠವು ತನಿಖೆಗೆ ಅನುಮತಿ ನೀಡಿದ್ದನ್ನು ಎತ್ತಿಹಿಡಿದಿತ್ತು. ಈಗ ಸರ್ಕಾರವು ಅನುಮತಿಯನ್ನು ಹಿಂದಕ್ಕೆ ಪಡೆದಿದೆ. ಸಿಬಿಐ ತನಿಖೆಯು ಬಹಳ ಮುಂದೆ ಸಾಗಿರುವ ಹೊತ್ತಿನಲ್ಲಿ ಸರ್ಕಾರವು ಅನುಮತಿಯನ್ನು ಹಿಂಪಡೆಯಬಹುದೇ ಎಂಬ ಪ್ರಶ್ನೆ ಇದೆ. ತನಿಖೆಯ ಬಹುಭಾಗ ಪೂರ್ಣಗೊಂಡಿದೆ ಎಂದು ಕೋರ್ಟ್‌ಗೆ ಸಿಬಿಐ ತಿಳಿಸಿದೆ.

ಈ ಪ್ರಕರಣದ ಕಾನೂನಿನ ಪ್ರಶ್ನೆಗಳು ಇನ್ನಷ್ಟೇ ಇತ್ಯರ್ಥ ಆಗಬೇಕಿವೆ. ಆದರೆ, ಇಲ್ಲಿರುವ ನಿಜವಾದ ವಿಚಾರ ರಾಜಕಾರಣಕ್ಕೆ ಸಂಬಂಧಿಸಿದೆ

ಕಾನೂನಿನ ಪ್ರಶ್ನೆಗಳು ಇನ್ನಷ್ಟೇ ಇತ್ಯರ್ಥ ಆಗಬೇಕಿವೆ. ಆದರೆ, ಇಲ್ಲಿರುವ ನಿಜವಾದ ವಿಚಾರ ರಾಜಕಾರಣಕ್ಕೆ ಸಂಬಂಧಿಸಿದೆ. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ತೀರ್ಮಾನವು ಎಷ್ಟರ ಮಟ್ಟಿಗೆ ರಾಜಕೀಯ ಲೆಕ್ಕಾಚಾರಗಳಿಂದ ಕೂಡಿತ್ತೋ, ಕಾಂಗ್ರೆಸ್ ನೇತೃತ್ವದ ಇಂದಿನ ಸರ್ಕಾರದ ತೀರ್ಮಾನ ಕೂಡ ರಾಜಕೀಯ ಲೆಕ್ಕಾಚಾರಗಳಿಂದಲೇ ಪ್ರಭಾವಿತವಾಗಿದೆ. ಈಗ ಸರ್ಕಾರವು ಶಿವಕುಮಾರ್ ಅವರಿಗೆ ಕಾನೂನು ಪ್ರಕ್ರಿಯೆಯ ದೃಷ್ಟಿಯಿಂದ ಒಂದು ಗುರಾಣಿಯನ್ನು ಕಲ್ಪಿಸಿಕೊಟ್ಟಿದೆ. ಹಿಂದಿನ ಸರ್ಕಾರ ನೀಡಿದ್ದ ಅನುಮತಿಯು ಕಾನೂನುಬಾಹಿರವಾಗಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಗೃಹ ಸಚಿವ ಜಿ. ಪರಮೇಶ್ವರ ಅವರು, ಸಿಬಿಐ ತನಿಖೆಗೆ ಅನುಮತಿ ನೀಡುವ ಮುನ್ನ ಶಿವಕುಮಾರ್ ವಿರುದ್ಧದ ಪ್ರಕರಣದ ಸತ್ಯಾಸತ್ಯತೆಯನ್ನು ಸರ್ಕಾರ ಪರಿಶೀಲಿಸಿರಲಿಲ್ಲ ಎಂದು ಹೇಳಿದ್ದಾರೆ. ಕೆಲವು ಸಂದರ್ಭಗಳಲ್ಲಿ ರಾಜಕಾರಣವೇ ಕಾನೂನು ಪ್ರಕ್ರಿಯೆಗಳ ಚಾಲಕನ ಸ್ಥಾನದಲ್ಲಿ ಕುಳಿತಿರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ರಾಜಕಾರಣವು ಕಾನೂನು ಪ್ರಕ್ರಿಯೆಗಳನ್ನು ಮೀರುವ ಕೆಲಸವನ್ನು ಕೂಡ ಮಾಡುತ್ತದೆ. ರಾಜಕಾರಣವು ಈ ಎರಡೂ ಕೆಲಸಗಳನ್ನು ತನ್ನ ಅನುಕೂಲಕ್ಕಾಗಿ ಹಾಗೂ ತನ್ನ ಉದ್ದೇಶ ಸಾಧನೆಗಾಗಿ ಮಾಡುತ್ತದೆ. ಶಿವಕುಮಾರ್ ವಿರುದ್ಧದ ಆರೋಪಗಳು ಗಂಭೀರವಾಗಿವೆ. ಅವುಗಳ ಬಗ್ಗೆ ತನಿಖೆ ಆಗಬೇಕಿದೆ. ಆದರೆ ರಾಜ್ಯ ಪೊಲೀಸರು ಶಿವಕುಮಾರ್ ವಿರುದ್ಧದ ಆರೋಪಗಳ ಬಗ್ಗೆ ವಿಶ್ವಾಸಾರ್ಹ ತನಿಖೆ ನಡೆಸಲು ಸಾಧ್ಯವಿಲ್ಲ ಎಂಬುದು ನಿಜ. ತನಿಖೆಯನ್ನು ತಟಸ್ಥ, ನಿಷ್ಪಕ್ಷಪಾತ ಸಂಸ್ಥೆಯೊಂದು ನಡೆಸಿದರೆ ಚೆನ್ನ. ಆದರೆ ನಿಷ್ಪಕ್ಷಪಾತ ತನಿಖಾ ಸಂಸ್ಥೆ ಎಂಬ ಹಿರಿಮೆಯನ್ನು ಸಿಬಿಐ ಉಳಿಸಿಕೊಂಡಿದೆಯೇ?

ವಿರೋಧ ಪಕ್ಷಗಳ ನಾಯಕರು, ಸರ್ಕಾರದ ಟೀಕಾಕಾರರು ಮತ್ತು ಭಿನ್ನ ದನಿಗಳನ್ನು ವ್ಯಕ್ತಪಡಿಸುವವರ ವಿರುದ್ಧ ಕೇಂದ್ರ ಸರ್ಕಾರವು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ನಿರಂತರವಾಗಿ ಬಳಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿಯೇ ಶಿವಕುಮಾರ್ ಪ್ರಕರಣವನ್ನು ಗಮನಿಸಬೇಕು. ಜಾರಿ ನಿರ್ದೇಶನಾಲಯ (ಇ.ಡಿ.) ಮತ್ತು ಸಿಬಿಐ ಅಧಿಕಾರಿಗಳು ವರ್ಷಗಳಿಂದ ಶಿವಕುಮಾರ್ ಬೆನ್ನಿಗೆ ಬಿದ್ದಿದ್ದಾರೆ. ಅವರ ವಿರುದ್ಧದ ತನಿಖೆಗಳು ಮುಂದುವರಿದಿವೆ. ಆದರೆ, ಬಿಜೆಪಿ ನಾಯಕರ ವಿರುದ್ಧದ ಪ್ರಕರಣಗಳು ಅಥವಾ ಬಿಜೆಪಿ ಸೇರುವ ಇತರ ಪಕ್ಷಗಳ ನಾಯಕರ ವಿರುದ್ಧದ ಪ್ರಕರಣಗಳು ಶೈತ್ಯಾಗಾರವನ್ನು ಸೇರಿವೆ. ಈ ಕಾರಣಕ್ಕಾಗಿಯೇ, ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ಆಡಳಿತ ಇರುವ ರಾಜ್ಯಗಳು ಸಿಬಿಐಗೆ ತನಿಖೆ ನಡೆಸಲು ಅನುಮತಿ ನಿರಾಕರಿಸಿವೆ. ಇದೊಂದು ಸಾಂಸ್ಥಿಕ ರಕ್ಷಣಾ ಕಾರ್ಯ. ಈ ಕಾರ್ಯದಲ್ಲಿ ಕಾನೂನು, ನೈತಿಕತೆ, ರಾಜಕಾರಣ ಪರಸ್ಪರ ಬೆರೆತು, ಕಲಸುಮೇಲೋಗರದಂತೆ ಆಗಿವೆ.

ದಿನದ ಟ್ವೀಟ್

ನಾವು ಶಿಲಾಯುಗದತ್ತ...

'ನಾವು ಶಿಲಾಯುಗಕ್ಕೆ ಮರಳಿದೆವು'. ದಿಗ್ಬಂಧನದಲ್ಲಿ ಇರುವ ಗಾಜಾದ ಜನಜೀವನವು ಆಹಾರ ಮತ್ತು ನೀರು ಅರಸುವ ನಿತ್ಯದ ಹೋರಾಟದ ಸುತ್ತ ಸುತ್ತುತ್ತಿದೆ. ಅಲ್ಲಿ ಕಲ್ಲಿದ್ದಲು ಅಥವಾ ಯಾವುದೇ ಇಂಧನ ಇಲ್ಲವಾದ ಕಾರಣ, ಕುಟುಂಬದ ಸದಸ್ಯರು ತಾವು ಬೇಡಿ ತಂದಿದ್ದನ್ನು ಬೇಯಿಸಿಕೊಳ್ಳಲು ಮನೆಯ ಬಾಗಿಲು, ಕಿಟಕಿಗಳ ಚೌಕಟ್ಟುಗಳನ್ನೇ ಉರುವಲಾಗಿ ಬಳಸುತ್ತಿದ್ದಾರೆ.

ರಾಣಾ ಅಯೂಬ್, ಪತ್ರಕರ್ತೆ

ಕಿಡಿನುಡಿ

ಬಿಆರ್‌ಎಸ್ ಹಿಡಿತದಿಂದ ತೆಲಂಗಾಣವನ್ನು ಹೊರತರುವುದು ತನ್ನ ಜವಾಬ್ದಾರಿ ಎಂದು ಬಿಜೆಪಿ ಭಾವಿಸಿದೆ. ತೆಲಂಗಾಣದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾದರೆ, ಕೆಸಿಆರ್ ಅವರು ಭಾಗಿಯಾದ ಹಗರಣಗಳ ಬಗ್ಗೆ ತನಿಖೆ ನಡೆಸಲಾಗುತ್ತದೆ. ತೆಲಂಗಾಣದ ಬಡವರು ಮತ್ತು ಯುವಕರಿಗೆ ದ್ರೋಹ ಬಗೆದವರನ್ನು ಸುಮ್ಮನೆ ಬಿಡುವುದಿಲ್ಲ. ಬಿಆರ್‌ಎಸ್‌ನ ಭ್ರಷ್ಟರನ್ನು ಜೈಲಿಗೆ ಕಳಿಸಲಾಗುತ್ತದೆ.

ನರೇಂದ್ರ ಮೋದಿ, ಪ್ರಧಾನಿ

25 ವರ್ಷಗಳ ಹಿಂದೆ

ಶನಿವಾರ, 28-11-1998

• ಮೈಸೂರು ಅರಮನೆ ಸ್ವಾಧೀನ ಮಸೂದೆ ಕೊನೆಗೂ ಕೇಂದ್ರ ಸರ್ಕಾರದ ಒಪ್ಪಿಗೆ

ನವದೆಹಲಿ, ನ.27– ರಾಷ್ಟ್ರಪತಿ ಅವರ ಒಪ್ಪಿಗೆ ಸಿಕ್ಕಿದ ನಂತರವೂ ಕಳೆದ ಮೂರು ತಿಂಗಳಿಂದ ಕೇಂದ್ರ ಸರ್ಕಾರ ತಡೆಹಿಡಿದಿದ್ದ ಮೈಸೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಮಸೂದೆ-1998 ಅನ್ನು ಕೊನೆಗೂ ಒಪ್ಪಿ ರಾಜ್ಯ ಸರ್ಕಾರಕ್ಕೆ ಇಂದು ಕಳುಹಿಸಿತು.

ಇದರಿಂದಾಗಿ ಇದುವರೆಗೂ ಇದ್ದ ಈ ವಿವಾದಕ್ಕೆ ತೆರೆಬಿದ್ದು, ಕರ್ನಾಟಕ ಸರ್ಕಾರ ನಿಟ್ಟುಸಿರು ಬಿಡುವಂತಾಯಿತು. ಕರ್ನಾಟಕ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಮತ್ತು ಕಾನೂನು ಸಚಿವ ಎಂ.ಸಿ.ನಾಣಯ್ಯ ಅವರು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರನ್ನು ಇಂದು ಸಂಜೆ ಐದೂವರೆಗೆ ಭೇಟಿಯಾದ ಸ್ವಲ್ಪ ಸಮಯದಲ್ಲೇ ಕೇಂದ್ರ ಸರ್ಕಾರ ಈ ಮಸೂದೆಯನ್ನು ಯಥಾವತ್ತಾಗಿ ಒಪ್ಪಿ ಕರ್ನಾಟಕ ಸರ್ಕಾರಕ್ಕೆ ಅಧಿಕೃತವಾಗಿ ತಿಳಿಸಿತು.

• ಅಕ್ರಮ ದಾಸ್ತಾನುಗಾರರ ವಿರುದ್ಧ ಕಠಿಣ ಕ್ರಮ: ಪ್ರಧಾನಿ ಎಚ್ಚರಿಕೆ

ನವದೆಹಲಿ, ನ.27– 'ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುವುದಕ್ಕೆ ಮಧ್ಯವರ್ತಿಗಳು ಕಾರಣ' ಎಂದು ಹೇಳಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅಕ್ರಮ ದಾಸ್ತಾನು ಮತ್ತು ಅವ್ಯವಹಾರಗಳಲ್ಲಿ ತೊಡಗಿರುವವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದರು.

ಬೆಲೆ ಏರಿಕೆ ಕುರಿತ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಒಂದು ದಿವಸದ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಅಕ್ರಮ ದಾಸ್ತಾನುಗಾರರ ವಿರುದ್ಧ ಕ್ರಮಕ್ಕೆ ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಸಲುವಾಗಿ ಅವಶ್ಯಕ ಸಾಮಗ್ರಿಗಳ ಕಾಯ್ದೆಯನ್ನು ಮತ್ತಷ್ಟು ಬಿಗಿಗೊಳಿಸುವುದಾಗಿ ಹೇಳಿದರು.

50 ವರ್ಷಗಳ ಹಿಂದೆ

ಬುಧವಾರ, 28-11-1973

• ಭಾರತಕ್ಕೆ ಸಂಕಷ್ಟ ಒದಗಿದಾಗ ಸರ್ವ ನೆರವು: ಬ್ರೆಜ್ನೇವ್

ನವದೆಹಲಿ, ನ.27– ಭಾರತದ ಜತೆ ಎಂದೆಂದಿಗೂ ಅದರಲ್ಲೂ ವಿಶೇಷವಾಗಿ ಸಂಕಷ್ಟಗಳು ಎದುರಾದಾಗ ಭುಜಕ್ಕೆ ಭುಜ ಕೊಟ್ಟು ನಿಲ್ಲುವ ಭರವಸೆಯನ್ನು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ನಾಯಕ ಬ್ರೆಜ್ನೇವ್ ಅವರು ಇಂದು ಇಲ್ಲಿ ನೀಡಿದರು.

ಕೆಂಪುಕೋಟೆಯಲ್ಲಿ ಇಂದು ದೆಹಲಿ ಪೌರರು ನೀಡಿದ ಸನ್ಮಾನ ಸಮಾರಂಭದಲ್ಲಿ ಭಾಷಣ ಮಾಡುತ್ತಾ, ಭಾರತ ಮತ್ತು ರಷ್ಯಾ ನಡುವಣ ಸ್ನೇಹವು ಇಂದು ಭಿಲಾಯ್‌ನಲ್ಲಿ ಉತ್ಪಾದಿಸುವ ಉಕ್ಕಿನಷ್ಟೇ ಗಟ್ಟಿಮುಟ್ಟಾಗಿ ಇರುವುದೆಂದು ಹೇಳಿದರು.

ವಿಶ್ವಶಾಂತಿ ಅದರಲ್ಲೂ ವಿಶೇಷವಾಗಿ ಉಭಯ ರಾಷ್ಟ್ರಗಳ ಭದ್ರತೆ ಹಿತದೃಷ್ಟಿಯಿಂದ ಭಾರತ–ರಷ್ಯಾ ಸ್ನೇಹಕ್ಕೆ ಹೆಚ್ಚಿನ ಮಹತ್ವ ಇರುವುದೆಂದರು.

• ಕಾಳಿ ಯೋಜನೆ: 79ರ ಕೊನೆಗೆ ನಿರ್ಮಾಣ ಕಾರ್ಯ ಪೂರ್ಣ

ನವದೆಹಲಿ, ನ.27– ದೇಶದಲ್ಲೇ ಅತ್ಯಂತ ಅಗ್ಗದ ವಿದ್ಯುತ್ ಉತ್ಪಾದನಾ ಕೇಂದ್ರವಾಗುವ ನಿರೀಕ್ಷೆ ಇರುವ ಕಾಳಿ ನದಿ ಜಲವಿದ್ಯುತ್ ಯೋಜನೆಯು 1979 ಅಂತ್ಯದ ವೇಳೆಗೆ ಪೂರ್ಣಗೊಳ್ಳುತ್ತದೆ ಎಂದು ನೀರಾವರಿ ಮತ್ತು ವಿದ್ಯುತ್ ಖಾತೆ ಸಹಾಯಕ ಸಚಿವ ಸಿದ್ದೇಶ್ವರ ಪ್ರಸಾದ್ ಇಂದು ಲೋಕಸಭೆಗೆ ತಿಳಿಸಿದರು.

ಕಾಳಿ ನದಿ ಯೋಜನೆ ಮೊದಲನೇ ಮತ್ತು ಎರಡನೇ ಹಂತದ ನಿರ್ಮಾಣ ವೆಚ್ಚ ₹81.52 ಕೋಟಿ ಎಂದು ಅಂದಾಜು ಮಾಡಲಾಗಿದೆ ಎಂದರು.

ಲಿಂಗತಾರತಮ್ಯದ ಹಲವು ಚಹರೆಗಳನ್ನು ಭಾಷೆಯು ಕನ್ನಡಿಯಂತೆ ಪ್ರತಿಬಿಂಬಿಸುತ್ತಿರುತ್ತದೆ

ನುಡಿಯ ನಡೆಯೊಳಗಿನ ಹೆಣ್ಣುಬಿಂಬ

ವಿಶ್ಲೇಷಣೆ

ಸಬಿತಾ ಬನ್ನಾಡಿ

ಅಕ್ಕಮಹಾದೇವಿ, ಸಂಸಾರದಲ್ಲಿ ಹೆಣ್ಣಿನ ಸ್ಥಿತಿಯನ್ನು 'ಒಲೆಹೊಕ್ಕು ಉರಿ ಮರೆತಂತೆ' ಎನ್ನುತ್ತಾಳೆ. ಅಬ್ಬಾ! ಅನುಭವವನ್ನು ಹೀಗೂ ದಾಟಿಸಬಹುದಲ್ಲವೇ? ನುಡಿಯ ಈ ಅಸೀಮ ಶಕ್ತಿಯ ಬಗೆಗೆ ಎರಡು ಮಾತಿಲ್ಲ. ಅಂತಹ ನುಡಿಗಳನ್ನೂ ಈ ವ್ಯವಸ್ಥೆಯು ಇನ್ನಿಚ್ಛೆಯಂತೆ ನುಡಿಸಲು ಸದಾ ಸನ್ನದ್ಧವಾಗಿರುತ್ತದೆ.

ನುಡಿ ಎಂದರೇನು? ಅದು ನಮ್ಮ ಸುತ್ತಲಿನ ಜಗತ್ತನ್ನು ನಾವು ವಿವರಿಸಿಕೊಳ್ಳಲು ನಮಗೆ ಮಾತ್ರ, ಅಂದರೆ ಮನುಷ್ಯರಿಗೆ ಮಾತ್ರ ಇರುವ ಒಂದು ಸವಲತ್ತು. ಬರೀ ವಿವರಿಸಿಕೊಳ್ಳುವುದಿಲ್ಲ, ಬೇರೆಯವರಿಗೂ ಅದನ್ನು ಅರ್ಥ ಮಾಡಿಸಲು ಪ್ರಯತ್ನಿಸುತ್ತಲೇ ಇರುತ್ತೇವೆ. ಆದರೆ ನುಡಿಯನ್ನು ಇಷ್ಟಕ್ಕೇ ಮಿತಗೊಳಿಸಿಕೊಳ್ಳುತ್ತೇವೆಯೇ? ಇದನ್ನು ಎಷ್ಟೋ ಸಲ 'ನಮಗೆ ಬೇಕಾದಂತೆ ಜಗತ್ತನ್ನು ರೂಪಿಸಿಕೊಳ್ಳಲೂ' ಬಳಸುತ್ತೇವಲ್ಲವೇ? ಭಾರತದ ಪ್ರಜೆಗಳಾದ ನಾವೆಲ್ಲರೂ ಒಂದೇ ಎಂದು ಹೇಳುವ ನಾವು ಅದನ್ನು ಹಾಗೆಯೇ ಪ್ರಯೋಗಕ್ಕೆ ತರುತ್ತೇವೆಯೇ? ಕೊನೆಯಪಕ್ಷ ನಾವು ಬಳಸುವ ಭಾಷೆಯಲ್ಲಿ? ಕನ್ನಡ ನುಡಿಯೆಂದರೆ ಒಂದೇ ಎನ್ನುವ ನಾವು ಅದರಲ್ಲಿ ಪುರುಷನನ್ನೂ, ಮಹಿಳೆಯನ್ನೂ ಒಂದೇ ರೀತಿ ವಿವರಿಸಿದ್ದೇವೆಯೇ? ಸರಿಯಾಗಿ ಗಮನಿಸಿದರೆ ಹೆಣ್ಣಿನ ಅನುಭವಗಳನ್ನು ವಿವರಿಸಲು ತಕ್ಕ ಪದಗಳು ಸಿಗದೇ ಚಡಪಡಿಸುವುದಕ್ಕೂ ಈಗಾಗಲೇ ಬಳಕೆಯಲ್ಲಿರುವ ಪದಗಳು ಗಂಡು ಅನುಭವಗಳನ್ನೇ ಆವಾಹಿಸಿಕೊಂಡಿರುವುದಕ್ಕೂ ಸಂಬಂಧ ಇಲ್ಲ ಎನ್ನಬಹುದೇ?

ವಕೀಲರಾದ ಗೆಳತಿ ಅಖಿಲಾ ವಿದ್ಯಾಸಂದ್ರ ಈಚೆಗೆ ಶಬ್ದಕೋಶದಲ್ಲಿ ಪತಿ ಮತ್ತು ಪತ್ನಿ ಎಂಬ ಪದಕ್ಕೆ ಏನೇನು ಅರ್ಥಗಳನ್ನು ಕೊಡಲಾಗಿದೆ ಎನ್ನುವುದನ್ನು ಹುಡುಕಿ ಎಂದು ವಿದ್ಯಾರ್ಥಿಗಳಿಗೆ ಹೇಳಿದಾಗ ಅವರು ಆಶ್ಚರ್ಯಕ್ಕೆ ಒಳಗಾದರು. ಪತಿ ಅಂದರೆ ಒಡೆಯ, ದೊರೆ, ಗಂಡ ಎಂಬ ಅರ್ಥ ಇದೆ. ಗಂಡ ಅಂದರೆ ಶೂರ ಎಂಬ ಅರ್ಥ ಇದೆ. ಪತ್ನಿ ಎಂಬ ಪದಕ್ಕೆ ಹೆಂಡತಿ ಎಂಬ ಅರ್ಥ ಇದೆ. ಹೆಂಡತಿ ಎಂಬ ಪದಕ್ಕೆ ಮದುವೆಯಲ್ಲಿ ಸ್ವೀಕರಿಸಿದ ಹೆಂಗಸು, ಮಡದಿ ಎಂಬ ಅರ್ಥ ಇದೆ! ಮಡದಿ ಎಂದರೆ ಹೆಂಗಸು ಎಂಬರ್ಥವಿದೆ. ಇಲ್ಲಿ ನೀಡಿದ ಅರ್ಥಗಳು ದಾಟಿಸುತ್ತಿರುವ ಸಂದೇಶಗಳೇನು? ಪತ್ನಿ ಸ್ವೀಕರಿಸಿದ ಹೆಂಗಸು ಎಂಬಲ್ಲಿನ ಕೇವಲತೆಯನ್ನೂ, ಗಂಡಸು ಶೂರನೂ ಒಡೆಯನೂ ಆಗುವ ದೊಡ್ಡಸ್ತಿಕೆಯನ್ನೂ ಗಮನಿಸಿದಾಗ ಪದವು ಹೊಂದಿದ ಅರ್ಥದಲ್ಲೇ ಅವಳನ್ನು ನಿಯಂತ್ರಿಸುವ, ಅವಳೊಬ್ಬಳು ಅವಲಂಬಿತಳು ಎಂದು ಬಿಂಬಿಸಿ ಅಸಹಾಯಕತೆ ಹುಟ್ಟಿಸುವ, ಅವಳಿಗೊಬ್ಬ ಒಡೆಯನು ದೊರಕಿ ಅವಳನ್ನು ಹೇಗೆ ಬೇಕಾದರೂ ನಡೆಸಿಕೊಳ್ಳಲು ಅಧಿಕಾರವನ್ನು ನೀಡುವ, ಅವನು ಹೇಗಿದ್ದರೂ ಅವಳಿಗವನು ದೊರೆಯೇ ಆಗಿರುತ್ತಾನೆ ಎಂದು ಸೂಚಿಸುವ ಅಸಂಖ್ಯ ಸಂಕೇತಗಳು ಹೊಮ್ಮಿಬಿಡುತ್ತವೆ. ಇದಕ್ಕೂ ಕೌಟುಂಬಿಕ ದೌರ್ಜನ್ಯಕ್ಕೂ ನೇರ ನಂಟು ಕಾಣಿಸುತ್ತದೆ. ನುಡಿಯು ಕನ್ನಡಿಯಾಗಿ ಈ ಸಮಾಜದ ಮೌಲ್ಯವ್ಯವಸ್ಥೆಯನ್ನು ಹೇಗೆಲ್ಲಾ ದಾಟಿಸಬಲ್ಲದು ಮತ್ತು ಹೇಗೆಲ್ಲಾ ನಮಗೆ ಕಾಣಿಸಬಲ್ಲದು ಎನ್ನುವುದೂ ಇಲ್ಲಿ ಗೊತ್ತಾಗುತ್ತದೆ. ಕಾಣುವುದು, ಕಂಡು ಸರಿಪಡಿಸಿಕೊಳ್ಳುವುದು ಮಾತ್ರ ಇನ್ನೂ ಆಗುತ್ತಿಲ್ಲ.

'ನಮ್ಮ ಮಿದುಳು ಸಂಕೇತಗಳಲ್ಲಿ ವ್ಯವಹರಿಸುತ್ತದೆಯೇ ಹೊರತು ಅದಕ್ಕೆ ಎಂದಿಗೂ 'ವಾಸ್ತವ'ದ ಅರಿವಿರುವುದಿಲ್ಲ. ಈ ಸಂಕೇತಗಳನ್ನು ಎನ್‌ಕೋಡ್ (ಮಾಹಿತಿಯನ್ನು ಸೂಚನೆಯನ್ನಾಗಿಸುವುದು) ಮತ್ತು ಡಿಕೋಡ್ (ಸೂಚನೆಯನ್ನು ಮಾಹಿತಿಯನ್ನಾಗಿಸುವುದು) ಮಾಡುವ ವ್ಯವಸ್ಥೆಯನ್ನು ಭಾಷೆಗಳು ಹೊಂದಿರುತ್ತವೆ. ಹೀಗೆ ಎನ್‌ಕೋಡ್ ಮಾಡುವಾಗ ಹೆಚ್ಚಾಗಿ ನಾವು ನಮ್ಮ ಸುತ್ತಲಿನ ಪ್ರಪಂಚದಲ್ಲಿ ಏನನ್ನು 'ನೋಡಿರುತ್ತೇವೋ' ಅದೇ ತತ್ವಗಳನ್ನು ನಮ್ಮ ಭಾಷೆಯು ಅವಲಂಬಿಸಿರುತ್ತದೆ' ಎಂಬುದಾಗಿ ಡೇಲ್ ಸ್ಪೆಂಡರ್ ಹೇಳುತ್ತಾರೆ.

ಭಾಷೆಯಲ್ಲಿ ಹೇಗೆ ಎನ್‌ಕೋಡ್ ಮಾಡಲಾಗುತ್ತದೆ ಎಂಬುದನ್ನು ಗಮನಿಸೋಣ. ಹೆಣ್ಣು ಅಂದರೆ ಮೊಗ್ಗು, ಹೂವು, ಬಳ್ಳಿ ಅಂತೆಲ್ಲಾ ಹೋಲಿಸುತ್ತಾರೆ ಅಂದುಕೊಳ್ಳೋಣ. ಅದನ್ನು ಡಿಕೋಡ್ ಮಾಡಿದಾಗ ಅದು ಇನ್ನೊಬ್ಬರಿಗೆ ಒಪ್ಪಿಸುವುದಕ್ಕಿರುವ, ಉಪಭೋಗದ, ಅವಲಂಬನೆಯ, ಪಡೆದವರ ಸೌಂದರ್ಯ– ಸುಖ ಹೆಚ್ಚಿಸುವ, ಆಲಂಕಾರಿಕವಾದ, ದುರ್ಬಲವಾದ 'ವಸ್ತು'ವಾಗಿ ಪರಿಗಣಿತವಾಗುತ್ತದೆ. ಅದೇ ಪುರುಷನನ್ನು ಮರ ಎಂದಾಗ ಅದು ಬೇರು ಬಿಟ್ಟಿರುವ ಸ್ವತಂತ್ರವೂ ಬಲಿಷ್ಠವೂ ಆದ, ನೆರಳು ನೀಡುವ ಆಶ್ರಯತಾಣವಾಗುವ, ಹೂ ಹಣ್ಣು ನೀಡಿ ಆಹಾರವೂ ಆಧಾರವೂ ಆಗುವ ಅರ್ಥಗಳು ಸ್ಫುರಿಸುತ್ತವೆ. ಹೀಗಾಗಿ ಹೆಣ್ಣನ್ನು ನಿರಂತರವಾಗಿ ಮರವನ್ನು ತಬ್ಬಿರುವ ಬಳ್ಳಿ ಎಂದೇ ವಿವರಿಸಿಕೊಳ್ಳಲಾಗಿದೆ.

ಸರಿ, ಬದಲಾದ ಕಾಲದಲ್ಲಿ ನಾವೀಗ ಬದಲಾದ ಹೋಲಿಕೆ ಮಾಡಿಕೊಳ್ಳೋಣ ಎಂದು ಹೊರಟಾಗಲೂ ಎದುರಾಗುವ ತೊಡಕು ನೋಡಿ. ನದಿ, ನೆಲ ಎಂದೆಲ್ಲಾ ಹೋಲಿಸಿಕೊಳ್ಳಹೊರಟರೆ ಇವುಗಳನ್ನೂ ಗಂಡುಭಾಷೆ ತನ್ನಂತೆ ವಿವರಿಸಿಕೊಂಡಾಗಿದೆ. ನೆಲವನ್ನು ಆಳುವವನು ರಾಜ, ನದಿಯ ದಡದಲ್ಲಿ ನಾಗರಿಕತೆ ಕಟ್ಟಿಕೊಂಡವನು ಗಂಡಸು, ಸಮುದ್ರ ಗಂಡಾಗಿರುವುದರಿಂದ ಎಲ್ಲ ನದಿ ಹೆಣ್ಣುಗಳೂ ಓಡೋಡಿ ಹೋಗಿ ಸೇರುವುದು ಅವನನ್ನೇ. ಆ ಮೂಲಕ ಹಲವು ಹೆಂಡಿರ ಗಂಡನೆನಿಸುವುದನ್ನೂ ಸಹಜೀಕರಿಸಬಹುದು... ಅಬ್ಬಬ್ಬಾ ಎಲ್ಲವೂ ಕಾಲಿಗೆ ತೊಡಕುವ ಮುಳ್ಳುಗಳೇ.

ಆದ್ದರಿಂದಲೇ ಡೇಲ್ ಸ್ಪೆಂಡರ್ ಭಾಷೆ ಎಂಬುದು ಪುರುಷನಿರ್ಮಿತ ಎನ್ನುತ್ತಾರೆ. ಆಕೆ ಬರೆದ ಪುಸ್ತಕದ ಹೆಸರು 'ಮ್ಯಾನ್ ಮೇಡ್ ಲ್ಯಾಂಗ್ವೇಜ್'. ಇಂಗ್ಲಿಷ್‌ನಲ್ಲಿ ಇದರ ಆರಂಭವನ್ನು ಅವರು ತಾಮಸ್ ವಿಲ್ಸನ್ ಬರೆದ 'ದ ಆರ್ಟ್ ಆಫ್ ರೆಟರಿಕ್'ನಲ್ಲಿ ಗುರುತಿಸುತ್ತಾರೆ. ಆತ ಗಂಡಸನ್ನು ಹೆಂಗಸಿಗಿಂತ ಮೊದಲು ಗುರುತಿಸಿ ಹೇಳುವುದು ಅತ್ಯಂತ ಸಹಜ ಮಾತ್ರವಲ್ಲ ಹೀಗೇ ಮಾಡಬೇಕು ಎಂದೂ ಒತ್ತಾಯಿಸುತ್ತಾನೆ. ಉದಾ: ಗಂಡ- ಹೆಂಡತಿ, ಸಹೋದರ- ಸಹೋದರಿ, ಮಗ– ಮಗಳು ಇತ್ಯಾದಿ. ನಾವೇನಾದರೂ ಹೆಂಡತಿ–ಗಂಡ ಎಂದು ಹೇಳಿದರೆ ನಕ್ಕುಬಿಡುತ್ತೇವಲ್ಲವೇ? ಹಾಗೆ ನಗುವುದಕ್ಕೂ ಗಂಡಸು ಎಂದೂ ಹೆಂಗಸಿಗೆ ಅಧೀನನಾಗಬಾರದು ಎಂದು ನಾವು ಮೌಲ್ಯ ವ್ಯವಸ್ಥೆ ಮಾಡಿಕೊಂಡಿರುವುದಕ್ಕೂ ಸಂಬಂಧ ಇದೆ. ಹೆಣ್ಣಾಗಲೀ ಗಂಡಾಗಲೀ ಯಾರು ಯಾರಿಗೆ ಯಾಕೆ ಅಧೀನರಾಗಬೇಕು? ಇಬ್ಬರೂ ಸಮಾನ ಮೌಲ್ಯವುಳ್ಳವರು ಎಂದು ನಾವು ಭಾವಿಸಿದ್ದಲ್ಲಿ, ನುಡಿಗಳಲ್ಲಿ ಅದನ್ನು ಸೂಚಿಸುವ ಪದಗಳೇ ಹುಟ್ಟುತ್ತಿದ್ದವು. ಅದು ನಮ್ಮ ಪ್ರಜ್ಞೆಯೊಳಗೇ ಇನ್ನೂ ಪ್ರವೇಶ ಪಡೆದಿಲ್ಲ ಎನಿಸುತ್ತದೆ.

ತೀರಾ ಈಚಿನ ಕೆಲವು ಪದಪ್ರಯೋಗಗಳನ್ನು ಗಮನಿಸಿದರೂ ಇದು ಅರಿವಿಗೆ ಬರುತ್ತದೆ. ಪ್ರಸಿದ್ಧರು ವಿಚ್ಛೇದನ ಪಡೆದರೆ ಅದು ಸುದ್ದಿಯಾಗುತ್ತದೆ. ಆ ಸುದ್ದಿಗಳ ತಲೆಬರಹ ಹೆಚ್ಚಾಗಿ, 'ಪತ್ನಿಗೆ ವಿಚ್ಛೇದನ ನೀಡಿದ...' ಎಂದೇ ಆರಂಭವಾಗುತ್ತದೆ. ಅವರು ಪರಸ್ಪರ ಒಪ್ಪಿಗೆಯ ಮೇರೆಗೆ ದೂರವಾದಾಗಲೂ ಹೀಗೇ ಶೀರ್ಷಿಕೆ ಇರುತ್ತದೆ. ಪ್ರಸಿದ್ಧ ಮಹಿಳೆ ವಿಚ್ಛೇದನ ಪಡೆದಾಗ 'ಪತಿಗೆ ವಿಚ್ಛೇದನ ನೀಡಿದ...' ಎಂದು ತಲೆಬರಹ ಆರಂಭವಾಗುವುದಿಲ್ಲ. ಇದು ಸಣ್ಣ ಸಂಗತಿಯಂತೆ ಕಾಣಬಹುದಾದರೂ ಇದು ಕೂಡ ಹೆಣ್ಣಿನ ಬದುಕಿನ ಮೇಲೆ ಗಂಡಿಗೇ ನಿಯಂತ್ರಣ ಇರಬೇಕು ಎಂದು ಬಯಸುವ ಮನಃಸ್ಥಿತಿಯ ದ್ಯೋತಕವೇ ಆಗಿದೆ.

ಇದಲ್ಲದೆ, ಬಾಯಿ ಬಿಟ್ಟರೆ ಹುಟ್ಟುವ ಬೈಗುಳ ಪದಗಳೆಲ್ಲವೂ ಹೆಣ್ಣನ್ನು ತುಚ್ಛೀಕರಿಸುವಂತಹವೇ ಆಗಿರುವುದಕ್ಕೂ ನಮ್ಮ ಬದುಕಿನ ಕ್ರಮದಲ್ಲಿ ಹೆಣ್ಣನ್ನು ಹಾಗೆ ನಡೆಸಿಕೊಂಡಿರುವುದಕ್ಕೂ ಸಂಬಂಧ ಇರುತ್ತದಲ್ಲವೇ? ತಾವೇ ಹುಟ್ಟುಹಾಕಿದ ಅನೈತಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಪಾತ್ರವಾಗಿಸಿ, ಆ ನಂತರದಲ್ಲಿ 'ಅವಳಿಗೆ ಹುಟ್ಟಿದವರು' ಎಂದು ನಿಂದಿಸುವುದು ಕೇವಲ ವೈರುಧ್ಯವಲ್ಲ. ಈ ವ್ಯವಸ್ಥೆಯಲ್ಲಿ ಹೆಣ್ಣಿನ ಲೈಂಗಿಕತೆಯನ್ನು ತಮಗೆ ಬೇಕಾದಂತೆ ನಿಯಂತ್ರಿಸಿದ, ಅದನ್ನು ಅವಳ ಮೇಲೆ ಹೇರಿದ ಚಿಂತನಾ ಕ್ರಮ ಮತ್ತು ಅದಕ್ಕಿರುವ ಸಮ್ಮತಿಯ ವ್ಯಕ್ತ ರೂಪವಿದು.

ಸ್ಥಾಪಿತ ಸಾಮಾಜಿಕ ಮೌಲ್ಯವ್ಯವಸ್ಥೆಯನ್ನು ಧಿಕ್ಕರಿಸಬಲ್ಲ ಅಕ್ಕಮಹಾದೇವಿ ಕೃತಕ ನಂಟುಗಳಿಗೆ 'ಉರದಲ್ಲಿ ಮುಳ್ಳುಂಟೆಂದು ಅಪ್ಪಲಮ್ಮೆ' ಎಂಬ ಹೆಣ್ಣುಭಾಷೆಯ ರೂಪಕ ಟಂಕಿಸಬಲ್ಲಳು. ಇರುವುದಕ್ಕೇ ತೇಪೆ ಹಚ್ಚಹೊರಡುವ ಆಧುನಿಕರಿಗೆ ಅದು ಸಿದ್ಧಿಸುವುದು ಕಠಿಣ. ಲಿಂಗ ತರತಮವನ್ನು ನುಡಿ ಕನ್ನಡಿಯು ಕಾಣಿಸುತ್ತಿದೆ. ನೀವು ಕಾಣಿರೇ? ನೀವು ಕಾಣಿರೇ?

ಚುರುಮುರಿ

ಬಿವೈಸಿ ಮತ್ತು ಟೋಪಿ

• ಲಿಂಗರಾಜು ಡಿ.ಎಸ್.

ಯಂಟಪ್ಪಣ್ಣ ಮನೆ ಮುಂದೆ ನಿಂತುಗಂಡು 'ಕುರೊ ಕುರೋ...' ಅಂತ ಕೂಗ್ತಿತ್ತು.

'ಅದೇನು ಯಂಟಪ್ಪಣ್ಣ ಕೊರಗುಡ್ತಿತಿದ್ದೀರಿ!' ಅಂತ ಕೇಳಿದೆ.

'ಮೊಮ್ಮಗ ಎರಡಕ್ಕೋಗವ್ನೆ. ತೊಳಿಯದ್ಕಾಕೆ ಅಂತ ಬೀದಿನಾಯಿ ಕೂಗ್ತಾ ಇವ್ನಿ' ಅಂತು ಯಂಟಪ್ಪಣ್ಣ.

ನಾವು ಸಣ್ಣ ಹುಡ್ಲಾಗಿದ್ದಾಗ ನಮ್ಮವ್ವದೀರು ಕುರೊ ಕುರೊ ಅಂತ ನಾಯಿ ಕರೆದೇಟಗೇ ಅದು ಪಟ್ಟಂತ ಬಂದು ಎಲ್ಲಾ ಸುದ್ದ ಮಾಡಿ ಹೊಂಟೋಯ್ತಿತ್ತು.

'ಬೀದಿನಾಯಿಗಳು ಬಿಸ್ಕೆಟ್ ತಿಂದು ಸ್ಟ್ಯಾಂಡರ್ಡ್ ಆಗ್ಯವೆ ಯಂಟಪ್ಪಣ್ಣ. ಕುರೋ ಕುರೋ ಅಂದ್ರೆ ಅವುಕ್ಕೆ ಅರ್ಥಾಗಕುಲ್ಲ. ಮುದ್ದೆ-ಅನ್ನ ಹಾಕಿದ್ರೆ ಮೂಸಿ ಸೈತ ನೋಡಕುಲ್ಲ ಅಂತೀನಿ!' ಅಂತಂದೆ.

'ನಾಯಿಗಳೇನಾ ಮನುಸ್ರೂ ಈಗ ಬಿಸ್ಕೆಟ್ಟಿಗೆ ಪಾಠಾಗ್ಯವ್ರೆ. ರಾಜಕೀಯದೋರು ನಮ್ಮ ದುಡ್ಡಲ್ಲಿ ನಮಗೇ ಆಶ್ವಾಸನೆಗಳ ಬಿಸ್ಕೆಟ್ಟಾಕಿ ಚಾಲುಗಲಿಸಿ ಬುಟ್ಟವ್ರೆ ಕಲಾ' ತುರೇಮಣೆ ತಮ್ಮ ಕಡತ ಬಿಚ್ಚಿದರು.

'ನಮ್ಮದೆಂಗೋ ಇರಲಿ! ನಿಗಮ, ಮಂಡಲಿ, ಮಂತ್ರಿ ಭಾಗ್ಯದ ಬಿಸ್ಕೆಟ್ಟಗೋಸ್ಕರ ಶಾಸಕರು, ನಾಯಕರೇ ಕ್ಯಾಣ ತಗೀತರಂತೆ! 'ನಾವೇನು ಬೂವಕ್ಕೋಸ್ಕರ ನಿಮ್ಮ ಬಡ್ಡೆಗೆ ಬಂದಿದೀವಾ? ಪಕ್ಷಕ್ಕೋಸ್ಕರ ರಕ್ತ ಬಸಿದಿಲ್ವಾ. ಬಿಸ್ಕೆಟ್ಟಾಕದಾದ್ರೆ ಸರಿಯಾಗಿ ಹಾಕ್ರೀ!' ಅಂತ ಸಿಟ್ಟುಗತರೆ!' ಅಂತು ಯಂಟಪ್ಪಣ್ಣ.

'ಅತೃಪ್ತರ ಯೇಗ್ತೆಗೆ ತಕ್ಕಂಗೆ ಬಿಸ್ಕೆಟ್ಟು ಹಾಕಲೇಬೇಕು! ಶಾಸಕರು 'ನಾವೂ ನಾಕೈದು ಸಾರಿ ಗೆದ್ದುದವಿ. ನನ್ನೆಡ್ತಿಗೊಂದು ನನ್ನ ಮಗನಿಗೊಂದು ಲೋಕಸಭೆ ಬಿಸ್ಕೆಟ್ ಕೊಡಿ' ಅಂತ ಮೂರೂ ಬುಟ್ಟು ಕೇಳ್ತರೆ. ಕಾರ್ಯಕರ್ತರಿಗೇನು ಸಿಕ್ತದೆ?' ಚಂದ್ರು ಸಿಟ್ವಾದ.

'ಅಧಿಕಾರಿಗಳು ಬಿಸ್ಕೆಟ್ ಹಾಕೋಗಂಟ ಫೈಲೇ ಮುಟ್ಟಕುಲ್ಲ' ಅಂತ ನಾನು ಬೆಂಕಿಗೆ ತುಪ್ಪ ಹಾಕಿದೆ.

'ರಾಜಕಾರಣಿಗಳು 'ನಾವು ಅಧಿಕಾರಕ್ಕೆ ಬಂದ್ರೆ ಭಾಳ ಕಿಸಿತೀವಿ, ನಮಗೇ ವೋಟಾಕಿ!' ಅಂತ ಬಿಸ್ಕೆಟ್ ಹಿಡಕಂದು ಬಿಸ್ಕೆಟ್ ಯುವರ್ ಕಸ್ಟಮರ್ ಅಂದ್ರೆ ಬಿವೈಸಿ ಪಾಲೋ ಮಾಡ್ಕಂದು ನಮಗೆ ಟೋಪಿ ಹಾಕದೇ ಕಸುಬು ಮಾಡಿಕ್ಯಂದವರೆ!' ಯಂಟಪ್ಪಣ್ಣ ತಲೆ ಚಚ್ಚಿಕ್ಯತ್ತು.

ಸಂಗತ

ಕೃಷಿ ಕ್ಷೇತ್ರದ ನಿರ್ಲಕ್ಷ್ಯ: ನಿತ್ಯ-ನಿರಂತರ

ರಾಜ್ಯದಲ್ಲಿ ಬರ ಆವರಿಸಿದೆ; ಪರಿಹಾರ ಮಾತ್ರ ಮರೀಚಿಕೆಯಾಗಿದೆ

• ಸತ್ಯನಾರಾಯಣ ಬಿ.ಆರ್.

ರಾಜ್ಯ ಮತ್ತು ದೇಶದಲ್ಲಿರುವ ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಪರಸ್ಪರ ಕೆಸರೆರಚಾಟಕ್ಕೆ ಕಾರಣವಾಗಿರುವ 'ರೈತರ ಆದಾಯ ದ್ವಿಗುಣ' ಎಂಬ ಮಾತನ್ನು ಮೊದಲು ಕೇಳಿದಾಗ ರೈತ ಸಮುದಾಯ ರೋಮಾಂಚನಗೊಂಡಿದ್ದು ಸುಳ್ಳಲ್ಲ. ಆದರೆ ಈಗ ಅದೇ ಮಾತು ರೈತರಿಗೆ ಕಿರಿಕಿರಿಯನ್ನು ಉಂಟುಮಾಡುತ್ತಿರುವುದೂ ಸುಳ್ಳಲ್ಲ! ದ್ವಿಗುಣವಿರಲಿ, ಬರುತ್ತಿದ್ದ ವಾರ್ಷಿಕ ಆದಾಯದಲ್ಲಿ ಸರಾಸರಿ ಶೇಕಡ 50ರಿಂದ 60ರಷ್ಟನ್ನು ಕಳೆದುಕೊಳ್ಳುತ್ತಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಸರ್ಕಾರಗಳ ಕಣ್ಣಿಗೆ ಅದು ಕಾಣುತ್ತಲೇ ಇಲ್ಲ.

ರಾಜ್ಯದ ಬಹುತೇಕ ಎಲ್ಲ ತಾಲ್ಲೂಕುಗಳು ಬರಪೀಡಿತವಾಗಿವೆ. ಬರಪೀಡಿತ ತಾಲ್ಲೂಕುಗಳನ್ನು ಘೋಷಿಸುವುದೇ ಒಂದು ಮಹಾಸಾಧನೆ ಎಂಬಂತೆ ಘೋಷಿಸಿ ರಾಜ್ಯ ಸರ್ಕಾರ ಕೈತೊಳೆದುಕೊಂಡಿದೆ. ಕೇಂದ್ರದಿಂದ ಬರ ಸಮೀಕ್ಷೆ ನಡೆದು ತಿಂಗಳುಗಳೇ ಕಳೆದರೂ ಪರಿಹಾರ ಮಾತ್ರ ಬಂದಿಲ್ಲ. ರಾಜ್ಯ ಸರ್ಕಾರವು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಅಷ್ಟು ಕೋಟಿಯಿದೆ, ಇಷ್ಟು ಕೋಟಿಯಿದೆ ಎಂದು ಹೇಳುತ್ತಾ ರೈತರ ಮೂಗಿಗೆ ತುಪ್ಪ ಸವರುವ ಕೆಲಸದಲ್ಲಿ ನಿರತವಾಗಿದೆ. ಬೆಳೆವಿಮೆ ಸಮರ್ಪಕ ಜಾರಿಯಂತೂ ಈ ಶತಮಾನದಲ್ಲಾದರೂ ಸಾಧ್ಯವಾದೀತೆ? ಗೊತ್ತಿಲ್ಲ. ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾಗಿ ಬೆಂಬಲ ಬೆಲೆ ಘೋಷಿಸುವ ಮಾತಂತೂ ದೂರವೇ ಉಳಿದಿದೆ. ದೇಶದಲ್ಲಿ ಇಂದು ಅತ್ಯಂತ ನಿರ್ಲಕ್ಷಿತ ಕ್ಷೇತ್ರ ಯಾವುದಾದರೂ ಇದ್ದರೆ ಅದು, ಕೃಷಿ ವಲಯ ಎಂದು ಖಚಿತವಾಗಿ ಹೇಳಬಹುದು. ಆದರೆ ಪ್ರಶ್ನಿಸಿದರೆ, ಪ್ರಶ್ನಿಸಿದವರನ್ನೇ ಅಪರಾಧಿ ಎನ್ನುವ ಕಾಲ ನಿರ್ಮಾಣವಾಗಿರುವುದು ಮಾತ್ರ ಸತ್ಯ.

ಆದಾಯ ಕುಸಿತಕ್ಕೆ ಒಂದು ನಿರ್ದಿಷ್ಟ ಉದಾಹರಣೆಯೆಂದರೆ ಪಾತಾಳಕ್ಕಿಳಿದಿರುವ ಕೊಬ್ಬರಿ ಬೆಲೆ. 15 ತಿಂಗಳ ಹಿಂದೆ ಕ್ವಿಂಟಲ್‌ಗೆ ₹18 ಸಾವಿರದ ಆಸುಪಾಸಿನಲ್ಲಿದ್ದ ಕೊಬ್ಬರಿ ಬೆಲೆ, ಸುಮಾರು 10 ವರ್ಷಗಳ ಕನಿಷ್ಠಕ್ಕೆ ಕುಸಿದಿದೆ. ದರ ಈಗ ₹ 7,500ರ ಆಸುಪಾಸಿನಲ್ಲಿ ತೊನೆದಾಡುತ್ತಿದೆ. ₹18 ಸಾವಿರವಿದ್ದಾಗ ಏರಿಕೆಯಾಗಿದ್ದ ಉತ್ಪಾದನೆ, ಸಾಗಾಟ ಮತ್ತು ಮಾರಾಟ ವೆಚ್ಚಗಳಲ್ಲಿ ಮಾತ್ರ ಒಂದು ಪೈಸೆಯೂ ಕಡಿಮೆಯಾಗಿಲ್ಲ. ಕ್ವಿಂಟಲ್‌ಗೆ ₹ 11,750 ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿಸುತ್ತಿದ್ದ ನಬಾರ್ಡ್ ಕೇಂದ್ರಗಳು ಬಾಗಿಲು ತೆರೆದಷ್ಟೇ ವೇಗದಲ್ಲಿ ಮುಚ್ಚಿ ತಿಂಗಳುಗಳೇ ಕಳೆದಿವೆ. 12-15 ತಿಂಗಳಾಗಿದ್ದರೂ ಕೊಬ್ಬರಿ ಇಟ್ಟುಕೊಂಡು ಕಾಯುವ ಪರಿಸ್ಥಿತಿ ರೈತರದ್ದಾಗಿದೆ. ಇದು ಕೇವಲ ತೆಂಗು ಬೆಳೆಗಾರರ ಸಮಸ್ಯೆ ಮಾತ್ರ ಅಲ್ಲ ಎಂಬುದು ಕೃಷಿಯ ಬಗ್ಗೆ ಪ್ರಾಥಮಿಕ ಅರಿವಿರುವ ಯಾರಿಗಾದರೂ ಅರ್ಥವಾಗುತ್ತದೆ. ಕೆ.ಜಿಗೆ 200ರ ಗಡಿ ದಾಟಿದ್ದ ಟೊಮೆಟೊ ಬೆಲೆ ತಿಂಗಳೊಪ್ಪತ್ತಿನಲ್ಲಿ ₹5ಕ್ಕೆ ಇಳಿದದ್ದು ನಮ್ಮ ಕಣ್ಣಮುಂದಿದೆ.

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ಬಾಧಿತವಾಗಿರುವುದರಿಂದ ಕೃಷಿ-ಕೂಲಿ ಕಾರ್ಮಿಕರು ಕೂಲಿಗಾಗಿ ಪಟ್ಟಣಗಳಿಗೆ ವಲಸೆ ಹೋಗುತ್ತಿರುವುದು ನಿತ್ಯವೂ ಹೆಚ್ಚುತ್ತಿದೆ. ಬೆಂಗಳೂರಿನ ಹಲವಾರು ಬಡಾವಣೆಗಳಲ್ಲಿ ನಿತ್ಯ ಬೆಳಿಗ್ಗೆ, 'ಕೂಲಿಗಳ ಸಂತೆ' ನಡೆಯುತ್ತಿದೆ. 'ಯಾರಾದರೂ ಕೆಲಸಕ್ಕೆ ಕರೆಯುತ್ತಾರಾ' ಎಂದು, ಒಂದು ಕೈಯಲ್ಲಿ ಮಕ್ಕಳನ್ನು ಹಿಡಿದು, ಇನ್ನೊಂದು ಕೈಯಲ್ಲಿ ಊಟದ ಬ್ಯಾಗ್ ಹಿಡಿದು ಮಹಿಳೆಯರು, ವಯಸ್ಕರು, ವೃದ್ಧರು ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಅತ್ಯಂತ ನೋವಿನ ಸಂಗತಿ. ದಶಕಗಳ ಹಿಂದೆ ಬೇರೆ ರಾಜ್ಯಗಳ ಜನರೇ ಹೆಚ್ಚು ಇರುತ್ತಿದ್ದ ಜಾಗದಲ್ಲಿ ಇಂದು ಕರ್ನಾಟಕದ ಗ್ರಾಮೀಣ ಜನರೇ ತುಂಬಿಹೋಗಿದ್ದಾರೆ. ಆದರೂ ನೀತಿನಿರೂಪಣೆ ಮಾಡಬೇಕಾದ ಸರ್ಕಾರಗಳು ಏನೂ ಮಾಡುತ್ತಿಲ್ಲ.

ಸರ್ಕಾರಗಳನ್ನು ಎಚ್ಚರಿಸಬೇಕಿದ್ದ ರೈತ ಸಂಘಟನೆಗಳು, ಕರ್ನಾಟಕದ ಮಟ್ಟಿಗಂತೂ ಸ್ವಹಿತಾಸಕ್ತಿ ಗುಂಪುಗಳಾಗಿ ಚದುರಿಹೋಗಿವೆ. ಒಂದೊಂದು ಗುಂಪೂ ತನ್ನ ಅನುಕೂಲಕ್ಕೆ ತಕ್ಕಂತೆ ಆಳುವ ವರ್ಗದ ಕೃಪಾಕಟಾಕ್ಷಕ್ಕೆ ಒಳಗಾಗುವುದರಿಂದ ಪ್ರಬಲವಾದ ಪ್ರತಿರೋಧದ 'ಏಕಧ್ವನಿ' ಹೊಮ್ಮುತ್ತಲೇ ಇಲ್ಲ. ಕೇಂದ್ರ ಸರ್ಕಾರ ರೂಪಿಸಿದ್ದ ಮೂರು ಕಾನೂನುಗಳನ್ನು ವಿರೋಧಿಸಿ ಸಂಘಟಿತವಾಗಿದ್ದ ಹಾಗೂ ಒಂದು ವರ್ಷಕ್ಕೂ ಹೆಚ್ಚು ಕಾಲ ಹೋರಾಟ ನಡೆಸಿ ಯಶಸ್ವಿಯಾದ ಮಹಾರೈತ ಹೋರಾಟದ ಮಾದರಿಯಲ್ಲಿ ಸಂಘಟಿತ ಹೋರಾಟ ರೂಪುಗೊಳ್ಳದೇ ಇದ್ದರೆ, ರೈತ ಸಮುದಾಯಕ್ಕೆ ನ್ಯಾಯ ಸಿಗುವ ಸಂಭವವಿಲ್ಲ. ಆದರೆ, ಅಂತಹ ಮಹಾನ್ ಹೋರಾಟವನ್ನು, ಅದರ ಯಶಸ್ಸನ್ನು ಕೃಷಿ ಕ್ಷೇತ್ರದ ಬೆಲೆ ಕುಸಿತದ ಬಿಕ್ಕಟ್ಟಿಗೆ ಕಾರಣವನ್ನಾಗಿಸುವ ದುಷ್ಟ ಪ್ರಯತ್ನವೂ ಸರ್ಕಾರದ ಸಮರ್ಥಕರಿಂದ ನಡೆಯುತ್ತಿದೆ. 'ಕೇಂದ್ರ ಸರ್ಕಾರ ರೂಪಿಸಿದ್ದ ಮೂರು ಕೃಷಿ ಕಾನೂನುಗಳನ್ನು ಒಪ್ಪಿಕೊಂಡಿದ್ದರೆ ಇಷ್ಟೊತ್ತಿಗೆ ರೈತರ ಆದಾಯ ದ್ವಿಗುಣವಾಗಿ ಹೋಗುತ್ತಿತ್ತು' ಎಂಬ ಕುಹಕದ ನುಡಿಗಳು ಕೇಳಿ ಬರುತ್ತಿರುವುದೇ ಆಳುವವರ ವೈಫಲ್ಯವನ್ನು ಹೇಳುತ್ತಿದೆ ಎನ್ನಬಹುದು.

ಮಾಧ್ಯಮಗಳಲ್ಲಿ ರೈತರ ಆದಾಯ ದ್ವಿಗುಣ ಮಾಡಿದ್ದೇವೆ, ಮಾಡುತ್ತೇವೆ, ಆಗಿಲ್ಲ, ಆಗಿದೆ ಎಂಬ ರಾಜಕೀಯ ಪುಡಿನಾಯಕರ ನಿತ್ಯಕಲರವ ರೈತರ ಕಿರಿಕಿರಿಗೆ ಕಾರಣವಾಗುತ್ತಿದೆ. ಎಂಥ ಬರಗಾಲ ಬಂದರೂ ರಾಜಕಾರಣಿಗಳ ಆದಾಯ ಮಾತ್ರ ದ್ವಿಗುಣ-ತ್ರಿಗುಣ-ಬಹುಗುಣವಾಗುತ್ತಲೇ ಹೋಗುತ್ತಿರುವುದು ಸೋಜಿಗದ ವಿಷಯ! ಇಂತಹ ದುರಿತಕಾಲದಲ್ಲಿ, ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರೆ ದೇಶದ್ರೋಹಿಯಾಗುವ, ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರೆ ಕೋಮುವಾದಿಯಾಗುವ ಅಪಾಯದಲ್ಲಿ ರೈತರು ಬದುಕಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ.

ವಾಚಕರ ವಾಣಿ

ವೈದ್ಯರ ಚೀಟಿ ಮತ್ತು ಅಸ್ಪಷ್ಟತೆ

ವೈದ್ಯರು ರೋಗಿಗಳಿಗೆ ಔಷಧ ಚೀಟಿಯನ್ನು ಎಲ್ಲರಿಗೂ ಅರ್ಥವಾಗುವ ಹಾಗೆ ಸ್ಪಷ್ಟವಾಗಿ ಬರೆದು ಕೊಡಬೇಕಾದುದು ಅವರ ನೈತಿಕ ಜವಾಬ್ದಾರಿ. ಆದರೆ ಬಹುಪಾಲು ವೈದ್ಯರು ಇದನ್ನು ಪಾಲಿಸುತ್ತಿಲ್ಲ. ಅಕ್ಷರಗಳನ್ನು ಒಂದಕ್ಕೊಂದು ಜೋಡಿಸಿ ಔಷಧ ವ್ಯಾಪಾರಿಗಳಿಗೆ ಅರ್ಧಂಬರ್ಧ ಅರ್ಥವಾಗುವ ರೀತಿಯಲ್ಲಿಯೇ ಬರೆದುಕೊಡುತ್ತಿದ್ದಾರೆ. ಸ್ಪಷ್ಟವಾಗಿ, ಎಲ್ಲರಿಗೂ ತಿಳಿಯುವಂತೆ ಬರೆಯುವುದಕ್ಕೆ ಏನು ತೊಂದರೆ? ಅಮೂಲ್ಯ ಜೀವದ ವಿಚಾರದಲ್ಲಿ ಸಣ್ಣ ಲೋಪ ಕೂಡ ಆಗದಂತೆ ಎಚ್ಚರ ವಹಿಸುವುದು ಅಗತ್ಯ. ಸ್ಪಷ್ಟವಾಗಿ ಬರೆದುಕೊಡುವಂತೆ ರೋಗಿಗಳಿಂದಲೂ ಆಗ್ರಹ ಬರಬೇಕಾಗಿದೆ.

ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಸಂವಿಧಾನ ಅರಿವಿನಯಾನ ಸ್ತುತ್ಯರ್ಹ

'ಸಂವಿಧಾನದಲ್ಲಿ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಅಂತ ಇದೆಯಲ್ಲ ಇದು ಕಾರ್ಯಗತವಾಗಿದೆಯೇ?', 'ಮೀಸಲಾತಿ ಬರೀ ಎಸ್‌ಸಿ, ಎಸ್‌ಟಿಗಳಿಗೇಕೆ? ಮಿಕ್ಕವರಿಗೆ ಏಕಿಲ್ಲ?' 'ಆತ್ಮಸಾಕ್ಷಿಗೆ ಹೆದರಬೇಕೋ? ಕಾನೂನಿಗೆ ಹೆದರಬೇಕೋ?' 'ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು ಬಹಳ ಮಂದಿ ಇದ್ದಾರೆ, ನೋಟಿನಲ್ಲಿ ಗಾಂಧೀಜಿ ಒಬ್ಬರ ಚಿತ್ರ ಏಕೆ?' 'ಶಾಲೆಗೆ ಸೇರುವಾಗ ಜಾತಿ ನಮೂದು ಬೇಕಾಗಿದೆಯೇ?' ಇಂತಹ ಹತ್ತಾರು ಪ್ರಶ್ನೆಗಳು ಕೇಳಿಬಂದದ್ದು ದಾವಣಗೆರೆಯಲ್ಲಿ ಜರುಗಿದ 'ಪ್ರೌಢಶಾಲಾ ಮಕ್ಕಳತ್ತ ಸಂವಿಧಾನ ಅರಿವಿನಯಾನ' ಕಾರ್ಯಕ್ರಮದಲ್ಲಿ.

ಮಕ್ಕಳ ಪ್ರಶ್ನೆಗಳು ಸಾವಿರಾರು ವರ್ಷಗಳಿಂದ ಭಾರತೀಯ ಸಮಾಜದಲ್ಲಿ ಅವ್ಯಾಹತವಾಗಿ ಹರಿದುಬಂದ ಸಾಮಾಜಿಕ, ಧಾರ್ಮಿಕತೆಯ ಮೇಲು–ಕೀಳಿನ ಅಸಮಾನತೆಯ ಒಳಹರಿವಿನ ಬುಗ್ಗೆಗಳೆಂದೇ ಪರಿಭಾವಿಸಬೇಕಾಗಿದೆ. ಸಂವಿಧಾನ ರಚನೆಯಾಗಿ ಏಳು ದಶಕಗಳು ಗತಿಸಿದರೂ ಮಕ್ಕಳಲ್ಲಿ ಮೂಡಿಬಂದ ಈ ಪ್ರಶ್ನೆಗಳು ಮರುಹುಟ್ಟು ಪಡೆಯುತ್ತಲೇ ಇವೆ. ಇದಕ್ಕೆ ಕಾರಣ ಭಾರತದ ಪ್ರಜೆಗಳಾದ ನಾವು, ನಮಗೆ ನಾವೇ ಅರ್ಪಿಸಿಕೊಂಡು ಅಂಗೀಕರಿಸಿದ ಸಂವಿಧಾನದ ಆಶಯಗಳನ್ನು ಅಂತರ್ಗತ ಮಾಡಿಕೊಳ್ಳದೇ ಇರುವುದು, ಅರ್ಥಮಾಡಿಕೊಳ್ಳದೇ ಇರುವುದು. ಇಂತಹ ಹೊತ್ತಲ್ಲಿ ಎಳೆಯ ಮನಸ್ಸುಗಳಲ್ಲಿ, ಯುವ ಸಮುದಾಯದಲ್ಲಿ ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳು ನಿರಂತರವಾಗಿ ಜರುಗಬೇಕಾಗಿದೆ.

ಪ್ರೊ. ಮಲ್ಲಿಕಾರ್ಜುನ ಕಲಮರಹಳ್ಳಿ, ದಾವಣಗೆರೆ

'ಕನ್ನಡ ಕಣ್ವ'ರ ಪ್ರಾರ್ಥನೆ

ರಘುನಾಥ ಚ.ಹ. ಅವರ 'ಕನ್ನಡದ ಕಣ್ವರ ಮರೆಯಬಹುದೇ' ಲೇಖನಕ್ಕೆ (ಪ್ರ.ವಾ., ನ. 11) ಪೂರಕವಾಗಿ ಕೆಲವು ಮಾತು. 1963ರ ಸಂದರ್ಭ. ಕೊಪ್ಪಳದಲ್ಲಿ ಡಾ.ಎಂ.ಸಿ. ಮೋದಿ ಅವರ ಉಚಿತ ನೇತ್ರ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದ ಕೊನೆಯ ದಿನ ಸಾಯಂಕಾಲ ಸರ್ಕಾರಿ ಪ್ರೌಢಶಾಲೆಯ ಮುಂಭಾಗದಲ್ಲಿ ಮೋದಿ ಅವರಿಗೆ ಸನ್ಮಾನ ಸಮಾರಂಭ ವ್ಯವಸ್ಥೆಗೊಳಿಸಲಾಗಿತ್ತು. ಸನ್ಮಾನಕ್ಕೆ ಉತ್ತರರೂಪವಾಗಿ ಮೋದಿಯವರ ಭಾಷಣದ ತರುವಾಯ ಸಭಿಕರೊಬ್ಬರು ಪ್ರಶ್ನೆ ಕೇಳಿದರು, 'ಡಾ. ಮೋದಿಯವರೇ, ದೇವರಲ್ಲಿ ನಿಮ್ಮ ಪ್ರಾರ್ಥನೆ ಏನು?'

ಮೋದಿಯವರು ಥಟ್ಟನೆ ಉತ್ತರಿಸಿದರು: 'ಮುಪ್ಪು ಯಾರಿಗೂ ತಪ್ಪಿದ್ದಲ್ಲ. ನಾನೂ ಅದಕ್ಕೆ ಹೊರತಲ್ಲ. ಆದರೆ ದೇವರಲ್ಲಿ ನನ್ನ ಪ್ರಾರ್ಥನೆ ಇಷ್ಟೇ– ದೇವರೇ, ನನ್ನ ಮುಪ್ಪಿನ ದಿನಗಳಲ್ಲಿ ನನ್ನ ಪಾಲಿನ ಆರಾಧ್ಯ ದೈವವಾದ ಅಂಧರೋಗಿಗಳಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡುವಾಗ ಮಾತ್ರ ನನ್ನ ಕೈ ನಡುಗದ ವರ ಕರುಣಿಸಿದರೆ ಸಾಕು'. ಮೋದಿಯವರ ಈ ಪ್ರಾರ್ಥನೆ ಕೇಳಿದಾಗ ಸಭಿಕರಿಂದ ಭಾರಿ ಕರತಾಡನದ ಪ್ರತಿಕ್ರಿಯೆ ವ್ಯಕ್ತವಾಯಿತು.

ಅಂಧರನ್ನೇ ತಮ್ಮ ಪಾಲಿನ ದೇವರನ್ನಾಗಿಸಿಕೊಂಡು ಅಂಧತ್ವದ ವಿರುದ್ಧ ಬದುಕಿನುದ್ದಕ್ಕೂ ಅವಿರತ ಶ್ರಮಿಸಿದ ಎಂ.ಸಿ. ಮೋದಿಯವರು ವೈದ್ಯಲೋಕದ ಅಪರೂಪದ ವ್ಯಕ್ತಿ.

ಟಿ.ವಿ. ಮಾಗಳದ, ಗದಗ

ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು

ಮಂಡ್ಯದ ಮೇಲುಕೋಟೆ ರಸ್ತೆಯಲ್ಲಿರುವ ಆಲೆಮನೆ ಒಂದರಲ್ಲಿ ಸ್ಕ್ಯಾನಿಂಗ್‌ಗೆ ಯಂತ್ರೋಪಕರಣ ಅಳವಡಿಸಿ, ಎರಡು ವರ್ಷಗಳಿಂದ ಭ್ರೂಣ ಲಿಂಗ ಪರೀಕ್ಷೆ ನಡೆಸಿ, ಹೆಣ್ಣುಭ್ರೂಣ ಹತ್ಯೆ ಮಾಡಿರುವುದು ಅಕ್ಷಮ್ಯ ಅಪರಾಧ. 900ಕ್ಕೂ ಹೆಚ್ಚು ಹೆಣ್ಣುಭ್ರೂಣ ಹತ್ಯೆ ನಡೆಸಿದ್ದಾರೆ ಎನ್ನಲಾದ ಆರೋಪಿಗಳಿಗೆ ಎಂತಹ ಶಿಕ್ಷೆ ನೀಡಬೇಕು? ಕಾನೂನುಬಾಹಿರವಾದ ಈ ಕ್ರಿಯೆ ಎರಡು ವರ್ಷಗಳಿಂದ ನಡೆಯುತ್ತಿದ್ದರೂ ಅದನ್ನು ಪತ್ತೆಹಚ್ಚಿ, ತಡೆಯುವಲ್ಲಿ ವಿಫಲರಾದ ಅಧಿಕಾರಿಗಳು ಕೂಡ ಆರೋಪಿಗಳೇ ಎಂದರೆ ತಪ್ಪಾಗಲಾರದು. ಅವರಿಗೂ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಬೇಕು. ನಾಗರಿಕ ಸಮಾಜ ತಲೆತಗ್ಗಿಸುವಂತಹ ಕೆಲಸ ಇದು. ಇದನ್ನು ಮೂಲೋತ್ಪಾಟನೆ ಮಾಡಲು ಇನ್ನಾದರೂ ಕಠಿಣ ಕ್ರಮ ಆಗಬೇಕು.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಶಿಥಿಲ ಕಟ್ಟಡಗಳು: ತಕ್ಷಣ ದುರಸ್ತಿ ಆಗಲಿ

ಬೆಂಗಳೂರಿನ ಶಿವಾಜಿನಗರದ ಸರ್ಕಾರಿ ನರ್ಸರಿ ಶಾಲಾ ಕಟ್ಟಡ ಸೋಮವಾರ ನಸುಕಿನ ಜಾವದಲ್ಲಿ ಕುಸಿದುಬಿದ್ದಿದೆ. ಅದೃಷ್ಟವಶಾತ್ ಬೆಳಿಗ್ಗೆ ಮಕ್ಕಳು ಬರುವ ಮೊದಲೇ ಕಟ್ಟಡವು ಕುಸಿದ ಕಾರಣ ಜೀವಹಾನಿ ಸಂಭವಿಸಿಲ್ಲ. ರಾಜ್ಯದಾದ್ಯಂತ ತುಂಬಾ ಹಳೆಯದಾದ, ಶಿಥಿಲಗೊಂಡ ಶಾಲಾ ಕಟ್ಟಡಗಳು ಸಾವಿರಾರು ಇವೆ. ಅವುಗಳನ್ನು ಗುರುತಿಸುವ ಕೆಲಸವು ಕಾಲಮಿತಿಯಲ್ಲಿ ಆಗಬೇಕು. ಅದರೊಂದಿಗೆ ದುರಸ್ತಿ ಕಾರ್ಯವನ್ನೂ ತ್ವರಿತ ಗತಿಯಲ್ಲಿ ಪೂರ್ಣಗೊಳಿಸಬೇಕು. ದುರಸ್ತಿಗೆ ಯೋಗ್ಯವಲ್ಲದ ಕಟ್ಟಡಗಳನ್ನು ಉರುಳಿಸಿ ಅಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಬೇಕು. ಅಲ್ಲಿಯವರೆಗೂ ಶಾಲೆಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು. ಇದು ತುರ್ತಾಗಿ ಆಗಬೇಕಾದ ಕೆಲಸ. ಸರ್ಕಾರ ಈ ದಿಸೆಯಲ್ಲಿ ತಕ್ಷಣ ಸ್ಪಂದಿಸಬೇಕು. ಮಕ್ಕಳ ಜೀವ ಅಮೂಲ್ಯವಾದುದು.

ಲಕ್ಷ್ಮಿಕಾಂತ್, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾರ್ಮಿಕರ ರಕ್ಷಣೆಗೆ ಹತ್ತುಹಲವು ತಡೆ

ಸಿಲ್ಕ್ಯಾರಾ–ಬಡಕೋಟ್ ಸುರಂಗ ಮಾರ್ಗ

● ಜಯಸಿಂಹ ಆರ್., ಸುಕೃತ ಎಸ್.

ಉತ್ತರಕಾಶಿಯ ಸಮೀಪದ ಸಿಲ್ಕ್ಯಾರಾ ತಿರುವು ಮತ್ತು ಬಡಕೋಟ್ ನಡುವಣ ಸುರಂಗ ಮಾರ್ಗದಲ್ಲಿ ಸಿಲುಕಿರುವ 41 ಕಾರ್ಮಿಕರ ರಕ್ಷಣಾ ಕಾರ್ಯಕ್ಕೆ ಪ್ರತಿದಿನವೂ ಒಂದಿಲ್ಲೊಂದು ಅಡೆತಡೆ ಎದುರಾಗುತ್ತಲೇ ಇದೆ. ಅತ್ಯಂತ ಸೂಕ್ಷ್ಮ ಮತ್ತು ಸಡಿಲ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದ್ದ ಈ ಸುರಂಗದಲ್ಲಿ ರಕ್ಷಣಾ ಕಾರ್ಯಾಚರಣೆಗೆ, ಇಲ್ಲಿನ ಭೂಲಕ್ಷಣವೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕಾಮಗಾರಿ ನಡೆಸುತ್ತಿದ್ದ ಕಂಪನಿಗಳು, ಸಮುದ್ರದಲ್ಲಿ ಲಂಬ ಸುರಂಗ ಕೊರೆಯುವದರಲ್ಲಿ ಪರಿಣತಿ ಹೊಂದಿರುವ ಒಎನ್‌ಜಿಸಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಈಗ ಭಾರತೀಯ ಸೇನೆಯೂ ಕಾರ್ಯಾಚರಣೆಗೆ ಕೈಜೋಡಿಸಿವೆ.

ಇಲ್ಲಿ ಒಟ್ಟು 4.5 ಕಿ.ಮೀ.ನಷ್ಟು ಉದ್ದದ ಸುರಂಗವನ್ನು ನಿರ್ಮಿಸಬೇಕಿತ್ತು. ಸಿಲ್ಕ್ಯಾರಾ ತುದಿಯಿಂದ ಒಟ್ಟು 1.5 ಕಿ.ಮೀ.ನಷ್ಟು ಸುರಂಗ ನಿರ್ಮಾಣ ಕಾಮಗಾರಿ ಮುಗಿದಿದೆ. ಸುರಂಗ ಕೊರೆದು, ಅದರಲ್ಲಿ ಅರ್ಧಬಳೆಯಾಕಾರಾದ ಆರ್‌ಸಿಸಿ ಸ್ಲ್ಯಾಬ್‌ಗಳನ್ನು ಅಳವಡಿಸಲಾಗಿದೆ. ಅದೇ ರೀತಿ ಬಡಕೋಟ್ ತುದಿಯಿಂದಲೂ 1.7 ಕಿ.ಮೀ.ನಷ್ಟು ಉದ್ದದ ಸುರಂಗವನ್ನು ಕೊರೆದು, ಆರ್‌ಸಿಸಿ ಸ್ಲ್ಯಾಬ್‌ಗಳನ್ನು ಅಳವಡಿಸಲಾಗಿದೆ. ಇದರ ಮಧ್ಯೆ ಇನ್ನೂ 477 ಮೀಟರ್‌ನಷ್ಟು ಸುರಂಗವನ್ನು ಕೊರೆಯುವ ಕಾರ್ಯ ಉಳಿದಿತ್ತು.

ಸುರಂಗ ಕೊರೆಯುವ ಮತ್ತು ಆರ್‌ಸಿಸಿ ಸ್ಲ್ಯಾಬ್ ಅಳವಡಿಸುವ ಕಾರ್ಯವನ್ನು ದಿನದ 24 ಗಂಟೆಯೂ ಮೂರು ಪಾಳಿಯಲ್ಲಿ ನಡೆಸಲಾಗುತ್ತಿತ್ತು. ಅದೇ ರೀತಿ ನವೆಂಬರ್ 12ರ ನಸುಕಿನಲ್ಲಿ ಸಿಲ್ಕ್ಯಾರಾ ಬೆಂಡ್ ಕಡೆಯಿಂದ ಸುರಂಗ ಕೊರೆಯಲು 50ಕ್ಕೂ ಹೆಚ್ಚು ಕಾರ್ಮಿಕರು ಸುರಂಗದೊಳಗೆ ತೆರಳಿದ್ದರು. ಇದರಲ್ಲಿ 41 ಮಂದಿ ಸಿಲ್ಕ್ಯಾರಾ ಪ್ರವೇಶದ್ವಾರದಿಂದ 2,300 ಮೀಟರ್ ದೂರದಲ್ಲಿ ಸುರಂಗ ಕೊರೆಯುತ್ತಿದ್ದರು. ಇನ್ನು 9 ಮಂದಿ ಸುರಂಗದ ಪ್ರವೇಶದ್ವಾರದಲ್ಲೇ ಬೇರೆ ಕಾಮಗಾರಿಯಲ್ಲಿ ತೊಡಗಿದ್ದರು. ಪ್ರವೇಶದ್ವಾರದಿಂದ 200 ಮೀಟರ್ ದೂರದಲ್ಲಿ ಸುರಂಗದ ಸ್ಲ್ಯಾಬ್‌ಗಳು ಒಡೆದುಹೋಗಿವೆ. ಜತೆಗೆ ಪರ್ವತದ ಮಣ್ಣು ಮತ್ತು ಬಂಡೆಗಲ್ಲುಗಳು ಸುರಂಗದೊಳಗೆ ಕುಸಿದುಬಿದ್ದಿವೆ. ಹೀಗೆ ಅಂದಾಜು 60 ಮೀಟರ್ ಉದ್ದದಷ್ಟು ಸುರಂಗವು ಮಣ್ಣು–ಕಲ್ಲುಗಳಿಂದ ಮುಚ್ಚಿಹೋಗಿದೆ. ಅದರ ಹಿಂದೆ ಸಿಲುಕಿರುವ ಕಾರ್ಮಿಕರನ್ನು ರಕ್ಷಿಸಬೇಕಿದೆ.

ಆರಂಭದಲ್ಲಿ ಅರ್ಥ್‌ಮೂವರ್ ಯಂತ್ರಗಳನ್ನು ಬಳಸಿ ಈ ಮಣ್ಣು ಮತ್ತು ಕಲ್ಲುಗಳನ್ನು ತೆರವು ಮಾಡುವ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ ಕೆಲವೇ ಮೀಟರ್‌ನಷ್ಟು ಮಣ್ಣನ್ನು ತೆರವು ಮಾಡಿದ ಬೆನ್ನಲ್ಲೇ, ಪರ್ವತದ ಆ ಭಾಗವು ಮತ್ತೆ ಕುಸಿದಿತ್ತು. ಈ ಕಾರಣದಿಂದ ಆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಯಿತು. ಸಣ್ಣ ಸುರಂಗವನ್ನು ಕೊರೆದು, ಕೊಳವೆಯನ್ನು ಅಳವಡಿಸಲಾಯಿತು. ಅದರ ಕೊಳವೆಯ ಮೂಲಕ ಆಮ್ಲಜನಕ, ಆಹಾರ, ನೀರು, ಔಷಧ ಮತ್ತಿತರ ಅಗತ್ಯ ವಸ್ತುಗಳನ್ನು ಕಳುಹಿಸಲಾಗುತ್ತಿದೆ. ಜತೆಗೆ ಕ್ಯಾಮೆರಾ, ಮೊಬೈಲ್, ಔಷಧಗಳನ್ನೂ ಕಳುಹಿಸಲಾಗುತ್ತಿದೆ.

ಎರಡನೇ ಹಂತದ ಕಾರ್ಯಾಚರಣೆಯ ಭಾಗವಾಗಿ ಈ 60 ಮೀಟರ್‌ನಷ್ಟು ಉದ್ದವಿರುವ ಅವಶೇಷದಲ್ಲಿ 900 ಮಿಲಿಮೀಟರ್ ವ್ಯಾಸದ ಸುರಂಗ ಕೊರೆದು, ಅದರೊಳಗೆ ದೊಡ್ಡ ಕೊಳವೆಗಳನ್ನು ಅಳವಡಿಸಬೇಕಿತ್ತು. ಈ ಕಾಮಗಾರಿ ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಹಲವು ದಿನಗಳ ಕಾಲ ನಡೆದ ಈ ಕಾಮಗಾರಿಯು ಈಗಾಗಲೇ 10ಕ್ಕೂ ಹೆಚ್ಚು ಬಾರಿ ಸ್ಥಗಿತಗೊಂಡಿದೆ. ಈ ಕಾಮಗಾರಿಗೆ ಬಳಸಿದ ನಾಲ್ಕು ಯಂತ್ರಗಳು ಜಖಂ ಆಗಿವೆ. ಈ ಯಂತ್ರಗಳ ಮೂಲಕ ಈವರೆಗೆ 46.8 ಮೀಟರ್‌ನಷ್ಟು ದೂರದವರೆಗೆ ಅವಶೇಷವನ್ನು ಕೊರೆದು, ಕೊಳವೆಗಳನ್ನು ಅಳವಡಿಸಲಾಗಿದೆ. ಯಂತ್ರಗಳ ಮೂಲಕ ಕಾರ್ಯಾಚರಣೆ ಸ್ಥಗಿತಗೊಳಿಸಿದಾಗ ಇನ್ನೂ 13–14 ಮೀಟರ್‌ನಷ್ಟು ಉದ್ದದ ಸುರಂಗ ಕೊರೆಯಬೇಕಿತ್ತು. ಈಗ ಹಾರೆ–ಪಿಕಾಸಿ–ಗುದ್ದಲಿಗಳನ್ನು ಬಳಸಿ ಸುರಂಗ ಕೊರೆಯುವ ಕಾರ್ಯವನ್ನು ಸೈನಿಕರು, ರಕ್ಷಣಾ ಸಿಬ್ಬಂದಿ ಮಾಡುತ್ತಿದ್ದಾರೆ.

ಹೀಗೆ ಸುರಂಗದ ತಳಭಾಗಕ್ಕೆ ಸಮಾನಾಂತರವಾಗಿ ಸುರಂಗ ಕೊರೆಯುವ ಕಾರ್ಯಾಚರಣೆ ನಡೆಯುತ್ತಿದ್ದ ವೇಳೆಯಲ್ಲೇ, ಸುರಂಗದ ಮೇಲ್ಭಾಗದಿಂದ ಮತ್ತೊಂದು ಲಂಬ ಸುರಂಗವನ್ನು ಕೊರೆಯುವ ಕಾಮಗಾರಿ ಆರಂಭಿಸಲಾಗಿತ್ತು. ಸುರಂಗದ ಸೂರಿನಿಂದ 83 ಮೀಟರ್‌ಗಳಷ್ಟು ಎತ್ತರದಲ್ಲಿರುವ ಪರ್ವತದ ಒಂದು ಭಾಗದಿಂದ ಲಂಬ ಸುರಂಗ ಕೊರೆಯುವ ಕಾಮಗಾರಿ ಅದಾಗಿತ್ತು. ಆದರೆ ಆ ಭಾಗವು ಸಡಿಲ ಮಣ್ಣಿನಿಂದ ಕೂಡಿರುವುದರಿಂದ, ಮಣ್ಣು ಕುಸಿದು ಕಾಮಗಾರಿ ವಿಳಂಬವಾಗುತ್ತಿದೆ. ಹೀಗಾಗಿ ಬಂಡೆಗಳಿಂದ ಕೂಡಿದ ಗಟ್ಟಿ ಜಾಗದಲ್ಲಿ ಮತ್ತೊಂದು ಲಂಬ ಸುರಂಗ ಕೊರೆಯುವ ಕಾಮಗಾರಿಯನ್ನೂ ಆರಂಭಿಸಲಾಗಿದೆ. ಇದು ಸುರಂಗದ ಸೂರಿನಿಂದ 325 ಮೀಟರ್‌ಗಳಷ್ಟು ಎತ್ತರದಲ್ಲಿದೆ. ಈ ಕಾಮಗಾರಿ ಪೂರ್ಣಗೊಳ್ಳಲು ಹಲವು ವಾರಗಳು ಬೇಕಾಗುತ್ತವೆ.

ಇವೆಲ್ಲವುದರ ಜತೆಗೆ ಬಡಕೋಟ್ ಕಡೆಯಿಂದ ಕಾಮಗಾರಿ ಬಾಕಿ ಇರುವ 477 ಮೀಟರ್‌ಗಳಷ್ಟು ಸುರಂಗವನ್ನು ಕೊರೆಯುವ ಕಾಮಗಾರಿಯನ್ನೂ ನಡೆಸಲಾಗುತ್ತಿದೆ. ಅಲ್ಲಿ ಪೂರ್ಣ ಪ್ರಮಾಣದ ಸುರಂಗದ ಬದಲಿಗೆ 2.5 ಮೀಟರ್ ವ್ಯಾಸದ ಸುರಂಗವನ್ನು ಕೊರೆದು, ಕಾಂಕ್ರೀಟ್ ಹಾಕಲಾಗುತ್ತಿದೆ. ಹೀಗೆ ನಾಲ್ಕು ಕಡೆಯಿಂದ ರಕ್ಷಣಾ ಸುರಂಗಗಳನ್ನು ನಿರ್ಮಿಸುವ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಆದರೆ, ಸುರಂಗ ಹೆದ್ದಾರಿ ನಿರ್ಮಾಣ ಕಾರ್ಯದ ವೇಳೆ ಹಲವು ಸುರಕ್ಷತಾ ಅಗತ್ಯಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗುತ್ತಿದೆ. ಸುರಂಗ ನಿರ್ಮಾಣದ ಬಗ್ಗೆ ಸುಪ್ರೀಂ ಕೋರ್ಟ್ ನೇಮಿಸಿದ್ದ ಉನ್ನತ ಅಧ್ಯಯನ ಸಮಿತಿಯೂ, ಅತ್ಯಂತ ದುರ್ಬಲ ಮತ್ತು ಸಡಿಲ ಪ್ರದೇಶದಲ್ಲಿ ಸುರಂಗ ನಿರ್ಮಾಣದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿತ್ತು. ಈಗ ಅವಘಡ ಸಂಭವಿಸಿರುವ ಕಾರಣ ಈ ಎಲ್ಲಾ ವಿಚಾರಗಳ ಬಗ್ಗೆ ಮತ್ತೆ ಪ್ರಶ್ನೆ ಎದ್ದಿದೆ. ಈ ಬಗ್ಗೆ ತನಿಖೆ ನಡೆಸಲಾಗುತ್ತದೆ, ಆದರೆ ಈಗ ಕಾರ್ಮಿಕರ ರಕ್ಷಣೆಯೇ ನಮ್ಮ ಆದ್ಯತೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೇಳಿದೆ.

‘ಉಲ್ಲಂಘನೆ’

ಸಿಲ್ಕ್ಯಾರಾ–ಬಡಕೋಟ್ ಸುರಂಗದಲ್ಲಿ ಎಲ್ಲಿಯೂ ತುರ್ತು ನಿರ್ಗಮನ ಸುರಂಗ ಮಾರ್ಗವನ್ನು ನಿರ್ಮಾಣ ಮಾಡಲಾಗಿಲ್ಲ. ಇದೇ ಕಾರಣಕ್ಕಾಗಿ ಕಾರ್ಮಿಕರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಈ ಸುರಂಗ ಕಾಮಗಾರಿಯ ನೀಲಿನಕ್ಷೆಯಲ್ಲಿ ತುರ್ತು ನಿರ್ಗಮನ ಸುರಂಗ ಮಾರ್ಗವನ್ನು ಎಂದು ತೋರಿಸಲಾಗಿತ್ತು. ಆದರೆ, ಸುರಂಗ ನಿರ್ಮಾಣ ಹಂತದಲ್ಲಿ ಈ ಮಾರ್ಗವನ್ನು ನಿರ್ಮಾಣ ಮಾಡದಿರುವುದು ದೊಡ್ಡ ಲೋಪವಾಗಿದೆ. ಸುರಂಗ ನಿರ್ಮಾಣಕ್ಕೆ ಸರ್ಕಾರ ನೀಡಿರುವ ಮಾರ್ಗಸೂಚಿಯನ್ನು ಇಲ್ಲಿ ಪಾಲಿಸಲಾಗಿಲ್ಲ ಎನ್ನುವ ಆರೋಪಗಳೂ ಕೇಳಿಬರುತ್ತಿದೆ.

ಕಾರ್ಮಿಕರು ಸಿಲುಕಿಕೊಂಡಿರುವುದಕ್ಕೆ ಕಾರಣಗಳು ಹಾಗೂ ಕಾಮಗಾರಿಯನ್ನು ಯಾವ ರೀತಿಯಲ್ಲಿ ಕೈಗೊಳ್ಳಲಾಗಿದೆ ಎನ್ನುವ ಕುರಿತು ತನಿಖೆ ನಡೆಸುತ್ತಿರುವ ತಜ್ಞರ ತಂಡದ ಸದಸ್ಯರೊಬ್ಬರ ಅಭಿಪ್ರಾಯವೂ ಇದೇ ಆಗಿದೆ. ‘ಸುರಂಗ ನಿರ್ಮಾಣ ಮಾಡಲಾಗುತ್ತಿರುವ ಭೂಲಕ್ಷಣದ ಕಾರಣದಿಂದಾಗಿಯೂ ತುರ್ತು ನಿರ್ಗಮನ ಸುರಂಗ ಮಾರ್ಗ ನಿರ್ಮಾಣ ಮಾಡದ ಕಾರಣದಿಂದಾಗಿಯೂ ಇಂಥದ್ದೊಂದು ತುರ್ತುಸ್ಥಿತಿ ಉದ್ಭವಿಸಿದೆ’ ಎನ್ನುತ್ತಾರೆ ಅವರು.

‘1.5 ಕಿ.ಮೀಕ್ಕಿಂತಲೂ ಉದ್ದ ಇರುವ ಸುರಂಗಗಳಲ್ಲಿ ತುರ್ತು ನಿರ್ಗಮನ ಸುರಂಗ ಮಾರ್ಗವನ್ನು ನಿರ್ಮಿಸಬೇಕು ಎಂದು ಸರ್ಕಾರ ಮಾರ್ಗಸೂಚಿ ನೀಡಿದೆ. ಆದರೆ, ಇಲ್ಲಿ ಈ ಮಾರ್ಗಸೂಚಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎನ್ನುವುದು ಮೇಲುನೋಟಕ್ಕೆ ತೋರುತ್ತಿದೆ. ರಕ್ಷಣಾ ಕಾರ್ಯ ಮುಗಿದ ಕೂಡಲೇ ಕಾಮಗಾರಿಯಲ್ಲಿನ ಲೋಪಗಳ ಕುರಿತು ವಿಸ್ತೃತ ತನಿಖೆ ನಡೆಸಲಾಗುವುದು’ ಎಂದರು.

ತುರ್ತು ಮಾರ್ಗ ಯಾಕೆ ಬೇಕು: ಒಂದೊಮ್ಮೆ ಕಾಮಗಾರಿ ನಡೆಯುವ ವೇಳೆಯಲ್ಲಿ ಕಾರ್ಮಿಕರು ಸಿಲುಕಿಕೊಂಡರೆ, ಅವಘಡಗಳು ಸಂಭವಿಸಿದರೆ, ತುರ್ತು ನಿರ್ಗಮನ ಸುರಂಗ ಮಾರ್ಗದ ಮೂಲಕ ಜನರನ್ನು ರಕ್ಷಿಸಬಹುದು. ಕಾಮಗಾರಿ ಮುಗಿದ ಬಳಿಕವೂ, ಸಾರ್ವಜನಿಕರ ರಕ್ಷಣೆಗಾಗಿಯೂ ಇಂಥದ್ದೊಂದು ಮಾರ್ಗದ ಅಗತ್ಯ ಇದೆ.



ಸರ್ಕಾರ ರಚಿಸಿರುವ ತಜ್ಞರ ತಂಡವು, ಅವಘಡದ ನಿರ್ವಹಣೆಗೆ ಕೈಗೊಂಡ ಕ್ರಮಗಳು, ಸುರಂಗ ಕಾಮಗಾರಿ, ಸುರಂಗದ ವಿನ್ಯಾಸದ ಕುರಿತಷ್ಟೇ ತನಿಖೆ ನಡೆಸಬಾರದು. ಸುರಂಗ ಕೊರೆಯುವಾಗ ಸ್ಫೋಟಿಸಲು ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆಯೂ ತನಿಖೆ ನಡೆಸಬೇಕು

ಹೇಮಂತ್ ಧ್ಯಾನಿ, ಪರಿಸರ ಕಾರ್ಯಕರ್ತ

ಆಧಾರ: ರಾಯಿಟರ್ಸ್, ಪಿಟಿಐ, ಸುಪ್ರೀಂ ಕೋರ್ಟ್ ನೇಮಿಸಿದ್ದ ಉನ್ನತ ಅಧ್ಯಯನ ಸಮಿತಿಯ ವರದಿ ಮತ್ತು ತೀರ್ಪು

ತಾಳ್ಮೆ ಬೇಡುವ ಹೆಣಿಗೆ

ನಾವು ನೋಡಿದ ಸಿನಿಮಾ

ಸ್ವಾತಿ ಮುತ್ತಿನ ಮಳೆ ಹನಿಯೇ

- **ರಚನೆ ಮತ್ತು ನಿರ್ದೇಶನ:** ರಾಜ್ ಬಿ.ಶೆಟ್ಟಿ
- **ನಿರ್ಮಾಪಕಿ:** ರಮ್ಯಾ
- **ತಾರಾಗಣ:** ಸಿರಿ ರವಿಕುಮಾರ್, ರಾಜ್ ಬಿ.ಶೆಟ್ಟಿ, ಬಾಲಾಜಿ ಮನೋಹರ್, ಜೆ.ಪಿ. ತುಮ್ಮಿನಾಡು ಮತ್ತಿತರರು

ಮಾಸ್ ಸಿನಿಮಾಗಳ ಭರಾಟೆಯ ನಡುವೆ ತಿಳಿ ನೀರ ನದಿಯಲ್ಲಿ ‘ನಂದಿ ಬಟ್ಟಲು’ ಎಂಬ ನೌಕೆ ಹಿಡಿದು ತಮ್ಮಷ್ಟಕ್ಕೇ ಹುಟ್ಟು ಹಾಕುತ್ತಾ ಸಾಗಿದಂತೆ ರಾಜ್ ಈ ಸಿನಿಮಾದಲ್ಲಿ ಭಾಸವಾಗುತ್ತಾರೆ. ‘ಗರುಡ ಗಮನ ವೃಷಭ ವಾಹನ’ ಸಿನಿಮಾ ಬಳಿಕ ರಾಜ್ ಬರೆದ ಕಥೆಯಿದು. ರಾಜ್‌ಗೆ ಒಂದು ಹೊಸ ತವಕವಿದ್ದಂತೆ ಈ ಸಿನಿಮಾದ ಧಾಟಿಯಿದೆ. ತನ್ನೊಳಗಿರುವ ಒಂದು ಸರಳ, ಅಷ್ಟೇ ಗಾಢವಾದ ಕಥೆಯೊಂದನ್ನು ಹೇಳಬೇಕು ಎನ್ನುವ ತುಡಿತದಿಂದಲೇ ‘ಪ್ರೇರಣಾ’ ಎಂಬ ಪಾತ್ರ ಸೃಷ್ಟಿಸಿ, ಅದಕ್ಕೆ ಜೀವ ತುಂಬಿ ಜೀವಿಸಿದ್ದಾರೆ ರಾಜ್. ಹೀಗಾಗಿ ಯಾವುದೇ ಆರ್ಭಟಗಳು ಇಲ್ಲಿಲ್ಲ. ಎಲ್ಲವೂ ಮೌನ; ಗಡಿಯಾರದ ಮುಳ್ಳಿನ ಶಬ್ದವೂ ಕೇಳುವಷ್ಟು.

ಮದುವೆಯಾಗಿರುವ ‘ಪ್ರೇರಣಾ’(ಸಿರಿ ರವಿಕುಮಾರ್) ‘ಆಸರೆ’ ಎಂಬ ಹಾಸ್‌ಪಿಸ್(ಗುಣ ಆಗದಂಥ ಕಾಯಿಲೆ ಇರುವವರು ತಂಗಿರುವ ಕೇಂದ್ರ)ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೌನ್ಸಿಲರ್. ಅಲ್ಲಿ ದಾಖಲಾಗಿರುವವರು ಬದುಕುವುದಿಲ್ಲ ಎಂದು ತಿಳಿದಿದ್ದರೂ ಅವರಲ್ಲಿ ಸ್ಥೈರ್ಯ ತುಂಬುವ ಕಾಯಕ ಆಕೆಯದ್ದು. ಒಂದು ರೀತಿ ಅವರನ್ನು ಸಾಯುವುದಕ್ಕೆ ಸಿದ್ಧಪಡಿಸುವ ಕೆಲಸ. ತನ್ನ ಭಾವನೆಗಳನ್ನು ತೋರ್ಪಡಿಸದೆ ಕೃತಕವಾಗಿ ಇರಬೇಕಾದ ಸ್ಥಿತಿ. ಇಂತಹ ಒಂದು ಕೇಂದ್ರಕ್ಕೆ ಕ್ಯಾನ್ಸರ್‌ನ ಕೊನೆಯ ಹಂತ ತಲುಪಿರುವ ‘ಅನಿಕೇತ್’(ರಾಜ್ ಬಿ.ಶೆಟ್ಟಿ) ಬಂದ ನಂತರ ‘ಪ್ರೇರಣಾ’ಳಲ್ಲಿ ಆಗುವ ಬದಲಾವಣೆಗಳೇ ಚಿತ್ರದ ಮುಂದಿನ ಕಥೆ.

ರೂಪಕಗಳನ್ನು ಬಳಸಿಕೊಂಡು ರಾಜ್ ಇಲ್ಲಿ ಹಲವು ಕಥೆಗಳನ್ನು ನೇಯ್ದಿದ್ದಾರೆ. ‘ಸಾವು’, ‘ನಂದಿ ಬಟ್ಟಲು’, ‘ಕೊಳ’, ‘ಬೀದಿ ನಾಯಿ’, ‘ವಾಷಿಂಗ್ ಮಷಿನ್’ ಹೀಗೆ ಬಗೆಬಗೆಯ ರೂಪಕಗಳಲ್ಲಿ ಬದುಕನ್ನು ಹಲವು ರೀತಿಯಲ್ಲಿ ವಿಶ್ಲೇಷಿಸುತ್ತಾ, ಸಾವಿನ ವೇದಿಕೆ ಸೃಷ್ಟಿಸಿದ್ದಾರೆ. ಯುವಜನತೆ ಅರಿತುಕೊಳ್ಳಬೇಕಾದ ವಿಷಯವೊಂದನ್ನೂ ಸೂಕ್ಷ್ಮವಾಗಿ ಹೇಳಿದ್ದಾರೆ. ‘ನಂದಿ ಬಟ್ಟಲು’ ನಾಯಕನ ಇಷ್ಟದ ಹೂವು. ಆತ ಬದುಕನ್ನು ನೋಡುವುದೂ ಈ ಹೂವಿನ ಮೂಲಕವೇ. ಹೀಗಾಗಿ ಇಡೀ ಸಿನಿಮಾ ಸ್ವಚ್ಛ; ಶುಭ್ರ. ಸಂಭಾಷಣೆಯ ಗಾಢತೆಯೇ ಈ ಸಿನಿಮಾದ ಆಸ್ತಿ. ಒಂದು ಪ್ರಬುದ್ಧ ಪಯಣವನ್ನು ಇಲ್ಲಿ ರಾಜ್ ಕಟ್ಟಿದ್ದಾರೆ. ಯಾವುದಕ್ಕೂ ಧಾವಂತ ಇಲ್ಲಿಲ್ಲ.

ಸಿರಿ ರವಿಕುಮಾರ್ ಇಡೀ ಸಿನಿಮಾದ ಜೀವಾಳ. ಅವರ ಪಾತ್ರವನ್ನು ರಾಜ್ ಆ ರೀತಿಯಲ್ಲಿ ಬರೆದಿದ್ದಾರೆ, ಹೆಣೆದಿದ್ದಾರೆ. ನಟನೆಯಲ್ಲಿ ಸಿರಿಗೆ ಪೂರ್ಣ ಅಂಕ. ಭಾವನೆಗಳ ಹಲವು ರೂಪಗಳನ್ನು ಸಿರಿ ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರೇ ಸಿನಿಮಾದ ಹೀರೊ ಎಂದರೆ ತಪ್ಪಲ್ಲ. ರಾಜ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಸಿನಿಮಾದಿಂದ ಸಿನಿಮಾಗೆ ಜೆ.ಪಿ. ತುಮ್ಮಿನಾಡು ಪಳಗುತ್ತಿದ್ದಾರೆ.

ಊಟಿಯನ್ನು ಪ್ರವೀಣ್ ಶ್ರೀಯಾನ್ ಸೆಳೆಯುವಂತೆ ಸೆರೆಹಿಡಿದಿದ್ದರೆ, ಮಿಥುನ್ ಮುಕುಂದನ್ ಸಂಗೀತ ಉಕ್ಕುವ ಭಾವನೆಗಳಿಗೆ ಇಂಬುನೀಡಿದೆ. ಈ ಸಿನಿಮಾ ಮನರಂಜನೆಗಾಗಿ ಖಂಡಿತ ಇಲ್ಲ. ಒಂದಿಷ್ಟು ಆಲೋಚನೆಗಳು, ಪ್ರಶ್ನೆಗಳನ್ನು ಕೆದಕುತ್ತ ಸಾಗುವ ಪಯಣವಿದು. ಒಂದರ್ಥದಲ್ಲಿ ರಾಜ್ ಚಂದನವನದ ‘ನಂದಿ ಬಟ್ಟಲು’ ಎನ್ನಬಹುದು. ಸಿನಿಮಾ ಕೇವಲ 101 ನಿಮಿಷದ್ದಾದರೂ, ಈ ಅವಧಿಯಲ್ಲೂ ಸೂಕ್ಷ್ಮದೃಷ್ಟಿಯ ತಾಳ್ಮೆ ಅಗತ್ಯ.

-ಅಭಿಲಾಷ್ ಪಿ.ಎಸ್.

ಸಿರಿ ಮತ್ತು ರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವ್ಯಕ್ತಿಯೊಬ್ಬನನ್ನು ವಿದ್ಯಾರ್ಥಿನಿಯರು ಸೇರಿ ಕೋಲಿನಿಂದ ಥಳಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಧೈರ್ಯಶಾಲಿ ಹಿಂದೂ ಹುಡುಗಿಯರು, ಶಾಲೆಗೆ ನುಗ್ಗಿ ಹುಡುಗಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ‘ವಿಶೇಷ ಸಮುದಾಯದ’ ಕಿರುಕುಳಗಾರನನ್ನು ಅಟ್ಟಾಡಿಸಿಕೊಂಡು ಹೊಡೆಯುತ್ತಿದ್ದಾರೆ. ಹೆದರುಪುಕ್ಕನಂತೆ ವ್ಯಕ್ತಿಯು ಓಡಿಹೋಗುತ್ತಿದ್ದಾನೆ. ಈ ಘಟನೆ ನಡೆದಿದ್ದು ಎಲ್ಲಿ ಮತ್ತು ಯಾವಾಗ ಎಂದು ತಿಳಿದಿಲ್ಲ’ ಎಂದು ಎಕ್ಸ್ ಪೋಸ್ಟ್‌ಗಳನ್ನು ಈ ವಿಡಿಯೊದೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ವಿಶೇಷ ಸಮುದಾಯ ಎಂದರೆ ಮುಸ್ಲಿಂ ಸಮುದಾಯ ಎಂದು ಈ ಪೋಸ್ಟ್‌ಗಳಲ್ಲಿ ಹೇಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಈ ವಿಡಿಯೊಗಳಲ್ಲಿ ಕೆಲವು ದೃಶ್ಯಗಳನ್ನು ರಿವರ್ಸ್ ಇಮೇಜ್‌ನಲ್ಲಿ ಗಮನಿಸಿದಾಗ ‘ದಿ ಕ್ವಿಂಟ್’, ‘ಟೈಮ್ಸ್ ಆಫ್ ಇಂಡಿಯಾ’ ಪತ್ರಿಕೆಯ ವರದಿಗಳು ಕಂಡುಬಂದವು. ಇವು 2018ರ ಡಿಸೆಂಬರ್‌ನಲ್ಲಿ ಪ್ರಕಟಗೊಂಡ ವರದಿಗಳು. ಇದು ನಡೆದದ್ದು ಉತ್ತರ ಪ್ರದೇಶದ ಭಾಗಪತ್‌ನ ಬಾಲಕಿಯರ ಶಾಲೆಯೊಂದರಲ್ಲಿ. ಥಳಿತಕ್ಕೆ ಒಳಗಾಗುತ್ತಿರುವ ವ್ಯಕ್ತಿಯ ಹೆಸರು ಕಪಿಲ್ ಚೌಹಾಣ್. ಈತ ಈ ಶಾಲೆಯ ಬಳಿ ಬಂದು ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಮತ್ತು ಈ ಬಗ್ಗೆ ವಿದ್ಯಾರ್ಥಿಗಳು ಶಾಲಾ ಆಡಳಿತಕ್ಕೆ ದೂರನ್ನೂ ನೀಡಿದ್ದರು. ಆದರೂ, ಯಾವುದೇ ಕ್ರಮವನ್ನು ಮಂಡಳಿ ತೆಗೆದುಕೊಂಡಿರಲಿಲ್ಲ. ನಂತರ ಆದ್ದರಿಂದ, ಬಾಲಕಿಯರೇ ಬುದ್ಧಿಕಲಿಸಲು ಮುಂದಾದರು. ವ್ಯಕ್ತಿಯನ್ನು ಬಂಧಿಸಲಾಗಿದೆ. ಈ ಘಟನೆಯನ್ನು ಭಾಗಪತ್ ಪೊಲೀಸರೂ ಖಚಿತಪಡಿಸಿದ್ದಾರೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದೇವರು

ನುಡಿ ಬೆಳಗು

ಪಿ. ಚಂದ್ರಿಕಾ

ಸಂತ ಪರಮಹಂಸರನ್ನು ಇಳಿಗಾಲದಲ್ಲಿ ಯಾರೋ ಒಬ್ಬರು ಒಂದು ಪ್ರಶ್ನೆಯನ್ನು ಕೇಳುತ್ತಾರೆ: ‘ದೇವರು ಎಂದರೆ ಏನು?’ ಪರಮಹಂಸರು ನಕ್ಕರು. ಜೀವಮಾನವಿಡೀ ಧ್ಯಾನ, ತಪಸ್ಸುಗಳಲ್ಲಿ ಕಾಲ ಕಳೆದ ಪರಮಹಂಸರನ್ನು ಕೇಳುವ ಪ್ರಶ್ನೆಯಾ ಇದು ಎಂದು ಅವರ ಶಿಷ್ಯರೆಲ್ಲರೂ ಭಾವಿಸಿದರು. ಪರಮಹಂಸರು ನಕ್ಕರು. ಅವರು ಏನು ಹೇಳುತ್ತಾರೆ ಎನ್ನುವ ಕುತೂಹಲ ಎಲ್ಲರಿಗೂ.

ಪ್ರಶ್ನೆ ಕೇಳಿದ ವ್ಯಕ್ತಿಗೆ ಪರಮಹಂಸರು, ‘ಹೇಳು ನಿನ್ನ ಕಲ್ಪನೆಯಲ್ಲಿ ದೇವರು ಎಂದರೆ ಏನು?’ ಎಂದು ಕೇಳಿದರು. ಉತ್ತರ ನಿರೀಕ್ಷಿಸುತ್ತಿದ್ದ ಆ ವ್ಯಕ್ತಿ ಪರಮಹಂಸರು ತನ್ನನ್ನು ಹೀಗೆ ಪ್ರತಿಪ್ರಶ್ನೆ ಕೇಳಬಹುದೆಂದು ಊಹಿಸಿರಲಿಲ್ಲ. ಅವನು ತಕ್ಷಣಕ್ಕೆ ಹೊಳೆದಂತೆ, ‘ದೇವರು ಎಂದರೆ ಅತೀಂದ್ರಿಯನಾದವನು, ನಮ್ಮ ಇರುವಿಕೆಗೆ ಕಾರಣನಾದವನು. ನಮ್ಮನ್ನೆಲ್ಲಾ ನಿರ್ದೇಶಿಸುವವನು’ ಎಂದ.

ಪರಮಹಂಸರು ನಕ್ಕರು. ವ್ಯಕ್ತಿಗೆ ತನ್ನ ಉತ್ತರ ಸರಿಯಿಲ್ಲ ಎನ್ನುತ್ತಿದ್ದಾರೆ ಎಂದು ಖೇದವೆನ್ನಿಸಿತು. ಆಗ ಪರಮಹಂಸರು, ‘ತಾಯಿ ತನ್ನ ಮಗುವನ್ನು ಮಲಗಿಸುತ್ತಾಳೆ. ಮಗುವಿಗೆ ಅಮ್ಮ ಪಕ್ಕದಲ್ಲೇ ಇದ್ದಾಳೆ ಎನ್ನುವ ನಂಬಿಕೆ. ಅವಳ ಸೆರಗನ್ನು ಹಿಡಿದು ಮಲಗುತ್ತದೆ. ತಾಯಿಗೋ ಕೆಲಸ. ಮಗು ಮಲಗುವುದನ್ನೇ ಕಾದ ಅವಳು ಎದ್ದು ನಿಧಾನಕ್ಕೆ ಸೆರಗನ್ನು ಬಿಡಿಸಿಕೊಂಡು ತನ್ನ ಕೆಲಸಗಳಲ್ಲಿ ತೊಡಗಲು ಹೊರಡುತ್ತಾಳೆ. ಮಗು ತನ್ನ ತಾಯಿ ಪಕ್ಕದಲ್ಲಿದ್ದಾಳೆ, ತಾನು ಅವಳ ಸೆರಗನ್ನು ಹಿಡಿದಿದ್ದೇನೆ ಎನ್ನುವ ಬೆಚ್ಚನೆಯ ಭಾವದಲ್ಲಿ ಮುಷ್ಟಿಗಟ್ಟಿ ಮಲಗಿರುತ್ತದೆ. ಮತ್ತೆ ಎಚ್ಚರವಾದಾಗ ಪಕ್ಕದಲ್ಲಿ ಅಮ್ಮ ಇಲ್ಲ ಎನ್ನುವುದು ಅರಿವಾಗಿ ಅಳಲಿಕ್ಕೆ ಆರಂಭಿಸುತ್ತದೆ. ಮತ್ತೆ ತಾಯಿಯ ಹುಡುಕಾಟ ಆರಂಭಿಸುತ್ತದೆ. ಅತ್ತರೆ ಅಮ್ಮ ಓಡಿಬರುತ್ತಾಳೆ ಎಂದು ಅಳುತ್ತದೆ. ತಾಯಿ ಬಂದು ತಬ್ಬುತ್ತಾಳೆ. ಆ ಬೆಚ್ಚನೆಯ ಸ್ಪರ್ಶ ಮಗುವಿಗೆ ಹರ್ಷದಾಯಕವಾಗಿರುತ್ತದೆ. ದೇವರು ಎಂದರೆ ಹೀಗೆ ಬೆಚ್ಚಗಿನ ಭಾವ’ ಎಂದರು. ಎಲ್ಲರಿಗೂ ಅಚ್ಚರಿಯಾಗುತ್ತದೆ. ‘ದೇವರು ನಂಬಿಕೆಯಾದರೆ ನಂಬಿ ಸುಮ್ಮನಿರಬಹುದಲ್ಲವೇ? ಅದು ಇದೆಯಾ ಇಲ್ಲವಾ ಎನ್ನುವ ಹುಡುಕಾಟ ಯಾಕೆ?’ ಎನ್ನುವ ಪ್ರಶ್ನೆಯನ್ನು ಆ ವ್ಯಕ್ತಿ ಮತ್ತೆ ಕೇಳುತ್ತಾನೆ. ನಕ್ಕ ಪರಮಹಂಸರು, ‘ದೇವರು ಎನ್ನುವುದು ಒಂದು ಭಾವ. ಅದು ಇದೆ ಇಲ್ಲ ಎನ್ನುವುದು ನಮ್ಮ ಕುತೂಹಲ. ಅದನ್ನು ನಾನೂ ಹೇಳಲಾರೆ. ನೀವೂ ವಿವರಿಸಲಾರಿರಿ. ಅನುಭವಕ್ಕೆ ಮಾತು ಕಷ್ಟ. ಆದರೆ ಒಂದು ಅತ್ಯುನ್ನತ ಶಕ್ತಿಯ ಜೊತೆ ಒಡನಾಡುತ್ತೇವೆ ಎನ್ನುವುದು ನಮ್ಮ ಮನಸ್ಸಿನ ಚೈತನ್ಯವನ್ನು ವೃದ್ಧಿಸುತ್ತದೆ. ಅದಕ್ಕಾಗಿ ಎಲ್ಲವೂ ಬೇಕು’ ಎಂದರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ನವೆಂಬರ್ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಪ್ರತಿಪದ್ ಗಂ. 14-06 ನಕ್ಷತ್ರ: ರೋಹಿಣಿ ಗಂ. 13-32 ಯೋಗ: ಸಿದ್ಧ ಗಂ 22-03
ಕರಣ: ಕೌಲವ ಗಂ 14-06, ವೃಶ್ಚಿಕ ಮಾಸದ 12 ನೇ ದಿನ, ಮಳೆನಕ್ಷತ್ರ: ಅನುರಾಧ 3.
ರಾಹುಕಾಲ : ಮಧ್ಯಾಹ್ನ 03-00 - 04-30
ಸೂರ್ಯೋದಯ : 06-40 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 13
ಜುಮಾದುಲ್ಲಾವಲ್ ಅದೃಷ್ಟ ಸಂಖ್ಯೆ : 7, 1

ಮೇಷ: ಕೆಲವು ನಿಮ್ಮ ಸ್ವಂತ ವಿಚಾರವನ್ನು ಮುಚ್ಚಿಟ್ಟ ಪರಿಣಾಮ ಹಿನ್ನಡೆ ಅನುಭವಿಸಬೇಕಾಗಲಿದೆ. ಪರರ ಟೀಕೆ ಟಿಪ್ಪಣಿಗೆ ಕಿವಿಗೊಡುವ ಮನಸ್ಥಿತಿ ಬದಲಿಸಿಕೊಳ್ಳಬೇಕು. ಸ್ವ ಉದ್ಯೋಗಿಗಳಿಗೆ ಉತ್ತಮ ಅವಕಾಶಗಳು ಇವೆ.

ವೃಷಭ: ನಿಮ್ಮ ಹಿರಿಯರ ಅನುಭವದ ಸಲಹೆಗಳನ್ನು ನಿರ್ಲಕ್ಷಿಸುವುದು ಸರಿಯಲ್ಲ. ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳ ಮೆಲುಗೈಯಿಂದ ಸಂತೋಷ ಸಿಗುವುದು. ವಿದ್ಯಾರ್ಥಿಗಳಿಗೆ ಇಷ್ಟಾರ್ಥ ನೆರವೇರುವುದು.

ಮಿಥುನ: ಜವಾಬ್ದಾರಿಯುತ ನಡುವಳಿಕೆ ಹೊಂದಿದ ನಿಮಗೆ ಮೇಲಧಿಕಾರಿಗಳಿಂದ ಪ್ರಶಂಸೆ ಜೊತೆ ಗೋಪ್ಯವಾದ ವಿಚಾರದ ಸುಳಿವು ದೊರಕುವುದು. ಅಕ್ಕಪಕ್ಕದವರು ನಿಮ್ಮ ಪ್ರಗತಿ ಕಂಡು ಅಸೂಯೆ ಪಡುವರು.

ಕರ್ಕಾಟಕ: ಕುಟುಂಬ ನಿರ್ವಹಣೆಯಲ್ಲಿ ಒಡಹುಟ್ಟಿದವರ ತಪ್ಪು ಕಲ್ಪನೆಗಳಿಗೆ ನಿಮ್ಮ ಆತ್ಮವಿಶ್ವಾಸದ ಮಾತುಗಳು ನಿಜವನ್ನು ತೋರಿಸಿಕೊಡುತ್ತದೆ. ಮುಖ್ಯವಾಗಿ ಸಂಗಾತಿಯ ಮನಸ್ಥಿತಿ ಎದುರಿಸುವುದು ಕಷ್ಟವಾಗುವುದು.

ಸಿಂಹ: ಸತ್ಕಾರ್ಯ ನೆರವೇರಿಸುವ ಬಗ್ಗೆ ಪೂರ್ವಭಾವಿಯಾಗಿ ಕುಟುಂಬದವರೊಡನೆ ದೀರ್ಘ ಸಮಾಲೋಚನೆ ನಡೆಸಿಕೊಳ್ಳಬೇಕು. ದೇವತಾ ದರ್ಶನ ಭಾಗ್ಯ ಒದಗಿ ಬರಲಿದೆ. ಜಗನ್ಮಾತೆ ರಾಜರಾಜೇಶ್ವರಿಯನ್ನು ಪ್ರಾರ್ಥಿಸಿ.

ಕನ್ಯಾ: ಚಿನ್ನಾಭರಣದ ಮೇಲಿನ ಅಥವಾ ಭೂಮಿ ಮೇಲಿನ ಹೂಡಿಕೆಯು ಲಾಭ ತಂದುಕೊಡಲಿದೆ. ಸರ್ಕಾರಿ ಕೆಲಸ ಕಾರ್ಯ ಲಕ್ಷ್ಮಿವೆಂಕಟರಮಣನ ಅನುಗ್ರಹ ಮತ್ತು ಅಧಿಕಾರಿಗಳ ಸಹಕಾರದಿಂದ ಫಲಪ್ರದವಾಗಿ ನೆಡೆಯುವುದು.

ತುಲಾ: ವೃತ್ತಿಯಲ್ಲಿ ಸ್ವಲ್ಪ ಸವಾಲುಗಳು ಎದುರಾಗಲಿವೆ. ಮಾಡದಿರುವ ತಪ್ಪಿನ ಹೊಣೆಗಾರಿಕೆಯನ್ನು ನೀವು ಹೊರಬೇಕಾಗಬಹುದು. ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ಪಡೆಯುವಿರಿ. ಸತ್ಯ ಮಾರ್ಗದಲ್ಲಿ ನಡೆಯಿರಿ.

ವೃಶ್ಚಿಕ: ನಾನಾ ರೀತಿಯಲ್ಲಿ ಅಭಿವೃದ್ಧಿ, ಉನ್ನತಿ ಗೋಚರಕ್ಕೆ ಬಂದರೂ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ರಾಸಾಯನಿಕ ವಸ್ತುಗಳ ಬಳಕೆಯಲ್ಲಿ ಹೆಚ್ಚಿನ ಜಾಗ್ರತೆ ಇರಲಿ. ಹಿರಿಯರ ಆರೋಗ್ಯದಲ್ಲಿ ಪ್ರಗತಿ ಉಂಟಾಗುತ್ತದೆ.

ಧನು: ಬಂಧುಗಳ ಅವಹೇಳನದ ಮಾತುಗಳು ಸ್ವಂತ ವಾಹನ ಖರೀದಿಸುವ ಸನ್ನಿವೇಶಕ್ಕೆ ನಾಂದಿಯಾಗಲಿದೆ. ಒತ್ತಡದಿಂದಾಗಿ ಕರ್ತವ್ಯ ನಿರ್ವಹಣೆಯಲ್ಲಿ ವಿಳಂಬವಾಗಲಿದೆ. ಗೃಹಿಣಿಯರಿಗೆ ಇಷ್ಟಾರ್ಥಗಳು ಸಿದ್ಧಿಯಾಗುವುದು.

ಮಕರ: ಕೈಗೊಂಡ ಕೆಲಸಗಳು ಭಾಗಶಃ ಆರ್ಥಿಕ ದುಸ್ಥಿತಿಯಿಂದಾಗಿ ವಿಳಂಬವಾಗಲಿವೆ. ನೀತಿ, ನಿಯಮಗಳನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವುದು ಸರಿಯಲ್ಲ. ಹೊಸ ಜನರ ಪರಿಚಯವಾಗಲಿದೆ.

ಕುಂಭ: ಕುಟುಂಬದಲ್ಲಿನ ಕಲಹ, ಮಾನಸಿಕ ಕ್ಷೋಭೆ, ಸಮಸ್ಯೆಗಳು ಹಂತ ಹಂತವಾಗಿ ದೂರವಾಗಲಿವೆ. ಎಲ್ಲರ ಪ್ರೀತಿ ವಿಶ್ವಾಸ ಗೆಲ್ಲುವಂತಾಗಲಿದೆ. ಸರ್ಕಾರಿ ಕೆಲಸದ ಗುತ್ತಿಗೆದಾರರಿಗೆ ಕಾಮಗಾರಿಗಳು ಸಿಗಲಿವೆ.

ಮೀನ: ವೃತ್ತಿರಂಗದಲ್ಲಿ ಹಿರಿಯ ಅಧಿಕಾರಿಗಳ ಒತ್ತಡದ ಮೇರೆಗೆ ಅನಿವಾರ್ಯವಾಗಿ ಗ್ರಾಹಕರಿಗೆ ಮೋಸ ಮಾಡಬೇಕಾದ ಸಂದರ್ಭ ಎದುರಾಗಲಿದೆ. ಯಾವುದೇ ಪರಿಸ್ಥಿತಿಯಲ್ಲೂ ಅವಸರದ ತೀರ್ಮಾನ ಬೇಡ.

ಪದಬಂಧ 5513

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮುನಿಯಿದ್ದಾಗ ತೋರಿದ ಸುಳ್ಳು ಕೋಪ! (5)
3. ಘಟನೆಯನ್ನು ಹೀಗೆನ್ನಿ (3)
5. ಮನಸ್ಸನ್ನು ಹತೋಟಿಯಲ್ಲಿ ಇಡುವುದು (5)
7. ಗುರುಗುಟ್ಟುತ್ತಿರುವ ಗಂಡುಕುರಿ(3)
9. ರಾಜಿಗೆ ಪರ್ಯಾಯ ಪದ (3)
11. ಹೂವು ಇಲ್ಲಿದೆ (3)
13. ಬೆಳಗಿನ ಕೆಂಪು (5)
15. ಕ್ರಿಸ್ತಶಕದ ಒಂದು ವರ್ಷ (3)
16. ಅಲ್ಪನಾದ ಮನುಷ್ಯ ಇಲ್ಲಿದ್ದಾನೆ (5)

ಮೇಲಿನಿಂದ ಕೆಳಕ್ಕೆ

1. ಬಾಲ್ಯದ ಚೇಷ್ಟೆ (4)
2. ಕೊನೆಗೆ ಯಮನಿದ್ದಾಗ ಕಾಣಿಸಿದ ಸೂತ್ರ (3)
4. ಅನುಮಾನ ಹೀಗೆ ಬಂದಿದೆ (3)
6. ಸಾವಕಾಶ ಎಂದು ಹೀಗೆ ಹೇಳಿ (3)
8. ಗದ್ದದ ಮೇಲಿನ ಕೂದಲು (2)
9. ಸಲ್ಲಿಸುವುದು ಅಥವಾ ಪಾವತಿ (3)
10. ಇದಿನ್ನೂ ಎಳೆ ಮಗು (2)
12. ಚಕ್ರವರ್ತಿ ಇಲ್ಲಿದ್ದಾನೆ (4)
13. ಸಂತೋಷ ಹೀಗೆ ಬಂದಿದೆ (3)
14. ಉತ್ಸವಾದಿಗಳಲ್ಲಿ ಹಾರಿಸುವ ಸಿಡಿಮದ್ದು ತುಂಬಿದ ಗೋಲಿ (3)



5512ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ಪರಂಧಾಮ 3.ಪಡುವಣ 5.ನೀರವ 6.ಪರಕಾಯ 8.ಶನಿವಾರ 10.ನಾಗರೀಕ 12.ದಸಕತ್ತು 13.ಲಶುನ 16.ಅನುಭವ 17.ಹಿಸ್ಸೆದಾರ

ಮೇಲಿಂದ ಕೆಳಕ್ಕೆ

1. ಪತ್ತೆ 2.ಮಹನೀಯ 3.ಪರವಶ 4.ರೆಪ್ಪೆ 7.ರಟಾಗ 9.ವಾದಕ 11.ಕಲರವ 12.ದನಗಾಹಿ 14.ತ್ತೆಅ 15.ತೀರ

ಸುಡೊಕು 5899

	5		7		2		8	6
6						3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5898 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

‘ಓವೈಸಿ ಪಕ್ಷನಾ? ಏಳು ಸೀಟು ಪಕ್ಕಾ...’

ಚುನಾವಣಾ ಯಾತ್ರೆ
ತೆಲಂಗಾಣ
ಸುದೇಶ ದೊಡ್ಡಪಾಳ್ಯ

ಹೈದರಾಬಾದ್: ಚಾರ್‌ಮಿನಾರ್ ಪ್ರದೇಶದ ಗಲ್ಲಿಗಳಲ್ಲಿ ಮೆಲ್ಲನೆ ನಡೆದು ಸಾಗುತ್ತಿದ್ದೆ. ಇಲ್ಲಿನ ಇಕ್ಕಟ್ಟಾದ ರಸ್ತೆಯ ಎರಡೂ ಕಡೆ ಮತ್ತು, ಬಟ್ಟೆ ಮತ್ತು ಬಳೆಯ ಅಂಗಡಿಗಳು, ಎಲ್ಲಿಂದಲೋ ತೇಲಿ ಬರುತ್ತಿದ್ದ ಅತ್ತರ್‌ನ ಘಮಲು ಮತ್ತು ದೂರದಿಂದ ಕೇಳಿ ಬರುತ್ತಿದ್ದ ಗಜಲ್. ಅವು ನನ್ನನ್ನು ಯಾವುದೋ ಒಂದು ಕಾಲಘಟ್ಟಕ್ಕೆ ಕರೆದುಕೊಂಡು ಹೋಗಿದ್ದವು. ಸೋಮವಾರ ಶುರುವಾಯಿತು. ಅಲ್ಲೇ ಇದ್ದ ಇರಾನಿ ಚಹಾ ಅಂಗಡಿಯ ಒಳಹೊಕ್ಕೆ, ಚಹಾ ಹೀರುತ್ತಾ, ಅಲ್ಲಿದ್ದ ನಾಲ್ಕು ಮಂದಿಯೊಂದಿಗೆ ನಾವು ಸೇರಿಕೊಂಡೆವು. ಅವರು ಆತ್ಮೀಯವಾಗಿಯೇ ಮಾತನಾಡಲು ಶುರು ಮಾಡಿದರು. ಅವರ ಹೈದರಾಬಾದಿ ಉರ್ದು ಅರ್ಥವಾಗುವುದು ಸ್ವಲ್ಪ ಕಷ್ಟವಾಗುತ್ತಿತ್ತು, ಅದರ ನೆರವಿಗೆ ಜಾವೇದ್ ಇದ್ದರು. ಸ್ವಲ್ಪ ಹೊತ್ತಿನ ಬಳಿಕ ಮೆಲ್ಲಗೆ ರಾಜಕೀಯ ವಿಷಯಕ್ಕೆ ಮುನ್ನುಡಿ ಬರೆದೆ. ನಾಲ್ಕು ಮಂದಿಯೂ ಬೇರೆ ಬೇರೆ ಕಾರಣಗಳನ್ನು ಕೊಡುತ್ತಾ ಎದ್ದು ಹೋದರು. ಆನಂತರ ಅಂಗಡಿಯಿಂದ ಹೊರಗೆ ಮುತ್ತುಗಳನ್ನು ಪೋಣಿಸುತ್ತಿದ್ದ ವೃದ್ಧರೊಬ್ಬರು ಕಾಣಿಸಿದರು. ಅವರನ್ನು ಉದ್ದೇಶಿಸಿ, ‘ಈ ಬಾರಿ ಎಲೆಕ್ಷನ್ ಹೇಗಿದೆ?’ ಎಂದು ಕೇಳಿದೆ. ಅವರು ತಲೆ ಮೇಲೆತ್ತದೇ, ‘ನನಗೆ ಯಾವುದು ಸರಿ ಅನಿಸುತ್ತದೆಯೋ ಅದನ್ನೇ ಮಾಡುತ್ತೇನೆ’ ಎಂದು ಮಾತುಗಳನ್ನೂ ಮುತ್ತಿನಂತೆಯೇ ಪೋಣಿಸಿದರು!

ನಾವು ಹೊರಗಿನವರು ಎನ್ನುವುದು ತಿಳಿದ ಮೇಲೆ ತುಟಿಬಿಚ್ಚಲು ಹೆಚ್ಚಿನವರು ಒಪ್ಪಲಿಲ್ಲ. ‘ನಮಗೆ ಎಲೆಕ್ಷನ್ ಬಗ್ಗೆ ಏನೂ ಗೊತ್ತಿಲ್ಲ, ನಮ್ಮ ಪಾಡಿಗೆ ಹೊಟ್ಟೆ ತುಂಬಿಸಿಕೊಳ್ಳುವುದೇ ದೊಡ್ಡದು’ ಎಂದು ಮುಗುಮ್ಮಾಗಿ ಹೇಳಿ ವಿಷಯಾಂತರ ಮಾಡುತ್ತಿದ್ದರು. ಪಾನ್‌ಶಾಪ್‌ನ ಮಾಲೀಕ, ಮರ ಕೆತ್ತನೆ ಮಾಡುವ ವ್ಯಕ್ತಿಯೂ ಹಾಗೆಯೇ ನಡೆದುಕೊಂಡರು. ‘ನಾವು ಸ್ಥಳೀಯರಲ್ಲ ಎನ್ನುವುದು ಅವರಿಗೆ ಗೊತ್ತಾಗಿದೆ. ನಾವು ಯಾವುದೋ ಪಕ್ಷದ ಪರವಾಗಿ ಗುಪ್ತವಾಗಿ ಮಾಹಿತಿ ಕಲೆ ಹಾಕಲು ಬಂದಿದ್ದೇವೆ ಅಂದುಕೊಳ್ಳುತ್ತಾರೆ. ಅವರನ್ನು ಒತ್ತಾಯಿಸುವುದು ಬೇಡ’ ಎಂದು ಜಾವೇದ್ ನನ್ನನ್ನು ಬೇರೆ ಕಡೆಗೆ ಕರೆದುಕೊಂಡು ಹೋದರು.

ರಸ್ತೆಬದಿಯಲ್ಲಿ ಬಾಳೆಹಣ್ಣು ವ್ಯಾಪಾರ ಮಾಡುತ್ತಿದ್ದ ಮುಸ್ಲಿಂ ಯುವಕ ಮೊದಲಿಗೆ ಮಾತನಾಡಲು ನಿರಾಕರಿಸಿದ. ಬಳಿಕ ಅಕ್ಕಪಕ್ಕ ಯಾರೂ ಇಲ್ಲದಿರುವುದನ್ನು ಖಾತ್ರಿ ಪಡಿಸಿಕೊಂಡು ಕಣ್ಸನ್ನೆ ಮಾಡಿದ. ಅದನ್ನು ಜಾವೇದ್ ಥಟ್ಟನೆ ಗ್ರಹಿಸಿ ‘ಓವೈಸಿಯ ಎಐಎಂಐಎಂ ಪಕ್ಷ’ ಎಂದು ನನಗೆ ತಿಳಿಸಿದರು. ನಾನು ಸೋಜಿಗದಿಂದ ಅದು ಹೇಗೆ ನಿಮಗೆ ಗೊತ್ತಾಯಿತು’ ಎಂದು ಕೇಳಿದೆ. ‘ನಮ್ಮ ಎದುರು ಇರುವುದು ದರುಸಲಂ ಕಟ್ಟಡ, ಅಲ್ಲಿ ಎಐಎಂಐಎಂ ಪಕ್ಷದ ಕಚೇರಿ ಇದೆ’ ಎಂದು ನಗುತ್ತಾ ಹೇಳಿದರು.

ಅಸಾದುದ್ದೀನ್ ಓವೈಸಿ ಹೈದರಾಬಾದ್ ಲೋಕಸಭಾ ಕ್ಷೇತ್ರದ ಆಲ್ ಇಂಡಿಯಾ ಮಜ್ಲಿಸ್-ಇ-ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷದ ಸಂಸದ. ಈ ಕ್ಷೇತ್ರದ ವ್ಯಾಪ್ತಿಯ ಏಳು ವಿಧಾನಸಭಾ ಕ್ಷೇತ್ರ-ಗಳಲ್ಲಿದ್ದು ಆರರಲ್ಲಿ ಎಐಎಂಐಎಂ ಗೆದ್ದಿದೆ. ಗೋಶಾಮಹಲ್‌ನಲ್ಲಿ ಬಿಜೆಪಿಯ ಟಿ.ರಾಜಾಸಿಂಗ್ ಶಾಸಕ.

ಓವೈಸಿ ಪ್ರತಿನಿಧಿಸುವ ಕ್ಷೇತ್ರದಲ್ಲಿ ಮುಸ್ಲಿಮರ ಬಾಹುಳ್ಯವಿದೆ. ಮುಸ್ಲಿಮರು ಮತ್ತು ಹಿಂದೂಗಳ ನಡುವೆ ಏನೋ ಸಂಶಯ, ಅಪನಂಬಿಕೆ ಮತ್ತು ಅಭದ್ರತೆ ಭಾವ. ಈ ಭಾವಗಳೇ ಎಐಎಂಐಎಂ ಪಕ್ಷ ಮತ್ತು ಬಿಜೆಪಿಯ ಬಂಡವಾಳ.

‘ಎಐಎಂಐಎಂ ನಮ್ಮ ಮನೆ ಪಕ್ಷವಿದ್ದಂತೆ. ಪಕ್ಷದ ಶಾಸಕರು ನಮ್ಮ ಕಷ್ಟ-ಸುಖಗಳಿಗೆ ತಕ್ಷಣವೇ ಧಾವಿಸಿ ಬರುತ್ತಾರೆ. ಮಗುವಿಗೆ ನಾಯಿ ಕಚ್ಚಿದಾಗ ಅವರೇ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ, ಕಾಳಜಿ ಮಾಡುತ್ತಾರೆ’ ಎಂದು ಮಹಮ್ಮದ್ ಖಾಜಾ ಪಾಷ ಹೆಮ್ಮೆಯಿಂದಲೇ ಹೇಳಿದರು. ಗೋಶಾಮಹಲ್ ಸಮೀಪದಲ್ಲಿ ಗ್ಯಾರೇಜ್ ಬಳಿ ಭೇಟಿಯಾದ ಮಹಮ್ಮದ್ ಮುಜಾಯಿದ್ದೀನ್ ‘ನಮ್ಮ ಪಕ್ಷದ ಶಾಸಕರು ಕಚೇರಿಯಲ್ಲಿ ಜನರಿಗೆ ಸುಲಭವಾಗಿ ಸಿಗುತ್ತಾರೆ. ಚಿಕ್ಕ ಮಗು ಹೋದರೂ ಸಮಸ್ಯೆಯನ್ನು ಕೇಳುತ್ತಾರೆ. ಬೇರೆ ಯಾವ ಪಕ್ಷದ ಶಾಸಕರು ಹೀಗೆ ಮಾಡುತ್ತಾರೆ ಹೇಳಿ? ನಮಗೆ ಓವೈಸಿಯವರ ರಕ್ಷಣೆ ಸಿಕ್ಕಿದೆ. ಅದು ಮುಖ್ಯ ಅಲ್ಲವೇ’ ಎಂದು ನನ್ನನ್ನು ಕೇಳಿದರು.

ಓವೈಸಿ ಸಹೋದರರ (ಅಸಾದುದ್ದೀನ್ ಓವೈಸಿ ಮತ್ತು ಅಕ್ಬರುದ್ದೀನ್ ಓವೈಸಿ) ಪ್ರಚೋದನಕಾರಿ ಭಾಷಣಕ್ಕೆ ಯುವಕರು ಹುಚ್ಚೆದ್ದು ಕುಣಿಯುತ್ತಾರೆ. ಓವೈಸಿ ತಮ್ಮ ರ ಕ್ಷ ಕ ಎನ್ನುವ ಭಾವನೆ

ಅಸಾದುದ್ದೀನ್ ಓವೈಸಿ

ಅಕ್ಬರುದ್ದೀನ್ ಓವೈಸಿ

‘ಗೋಶಾಮಹಲ್ ಕೂಡ ಪಕ್ಕಾ!’

ಟಿ.ರಾಜಾಸಿಂಗ್, ‘ಗೋಶಾಮಹಲ್’ ಕ್ಷೇತ್ರದ ಬಿಜೆಪಿ ಶಾಸಕ. ರಾಜ್ಯದಲ್ಲಿರುವ ಬಿಜೆಪಿಯ ಏಕೈಕ ಶಾಸಕ. ದ್ವೇಷ ಭಾಷಣದಲ್ಲಿ ಓವೈಸಿ ಸಹೋದರರಿಗೆ ಸರಿಸಾಟಿ. ಇವರ ಮೇಲೆ ಹತ್ತಾರು ಕ್ರಿಮಿನಲ್ ಪ್ರಕರಣಗಳಿವೆ. ದ್ವೇಷ ಭಾಷಣದ ವಿಡಿಯೊ ಅನ್ನು ಪೋಸ್ಟ್ ಮಾಡಿದ್ದಕ್ಕಾಗಿ ಫೇಸ್‌ಬುಕ್‌ನಿಂದ ನಿಷೇಧಕ್ಕೆ ಒಳಗಾಗಿದ್ದರು. ಪ್ರವಾದಿ ಮೊಹಮ್ಮದ್‌ಗೆ ಅವಮಾನ ಮಾಡಿ ಜೈಲು ಸೇರಿದ್ದರು. ಬಿಜೆಪಿ ಇವರನ್ನು ಪಕ್ಷದಿಂದ ಅಮಾನತು ಮಾಡಿತ್ತು. ಆದರೆ, ಈ ಚುನಾವಣೆಯಲ್ಲಿ ಮೊದಲ ಪಟ್ಟಿಯಲ್ಲೇ ಅವರಿಗೆ ಟಿಕೆಟ್ ಘೋಷಿಸಿತು.

ಗೋಶಾಮಹಲ್‌ನಲ್ಲಿ ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಿಂದ ವಲಸೆ ಬಂದ ಉದ್ಯಮಿಗಳು, ವ್ಯಾಪಾರಿಗಳು ಹೆಚ್ಚು ಇದ್ದಾರೆ. ಇಲ್ಲಿ ವ್ಯಾಪಾರ-ವಹಿವಾಟು ಜೋರಾಗಿದೆ. ಈ ಕ್ಷೇತ್ರದಲ್ಲಿ ಲೋಧ ಸಮುದಾಯದವರು ಗಣನೀಯ ಸಂಖ್ಯೆಯಲ್ಲಿದ್ದಾರೆ. ರಾಜಾಸಿಂಗ್ ಇದೇ ಸಮುದಾಯದವರು.

ಹಾರ್ಡ್‌ವೇರ್ ಅಂಗಡಿ ಮಾಲೀಕ ಶರತ್‌ಚಂದ್ರ ಮಂಡಲ್ ಪಶ್ಚಿಮ ಬಂಗಾಳದಿಂದ 18 ವರ್ಷಗಳ ಹಿಂದೆಯೇ ಇಲ್ಲಿಗೆ ಬಂದು ನೆಲೆಸಿದ್ದಾರೆ. ಅವರನ್ನು ಮಾತಿಗೆ ಎಳೆಯುವುದು ಕಷ್ಟವಾಯಿತು. ನಿಧಾನವಾಗಿ ಮಾತಿಗೆ ಇಳಿದ ಅವರು, ‘ನಮಗೆ ರಾಜಾಸಿಂಗ್ ಬೇಕು. ಅವರಿಂದಾಗಿ ನಾವು ಯಾವುದೇ ಭಯವಿಲ್ಲದೇ ವ್ಯಾಪಾರ ಮಾಡಿಕೊಂಡಿದ್ದೇವೆ’ ಎಂದು ಹೇಳಿದರು.

ಸ್ವೀಟ್‌ಸ್ಟಾಲ್‌ನ ಮಾಲೀಕ ವಿದ್ಯಾವಂತ. ಆದರೆ, ಚುನಾವಣೆ ಕುರಿತು ಏನೇನೂ ತಿಳಿಯದವರಂತೆ ನಟಿಸಿದರು. ಅಲ್ಲಿ ಮಿಠಾಯಿ ಸವಿಯುತ್ತಿದ್ದ ವ್ಯಕ್ತಿಯೊಬ್ಬರು, ‘ನೀವು ಏನು ಕೇಳುತ್ತಿದ್ದೀರಿ ಎನ್ನುವುದು ಅರ್ಥವಾಯಿತು. ನಾವೆಲ್ಲ ರಾಜಾಸಿಂಗ್‌ಗೆ ವೋಟು ಹಾಕುವುದು. ಏಕೆಂದರೆ, ನಾವು ಹಿಂದೂಗಳು’ ಎಂದು ಗಟ್ಟಿಧ್ವನಿಯಲ್ಲಿ ಸಾರಿದರು.

ಟಿ.ರಾಜಾಸಿಂಗ್

ಪ್ರಬಲವಾಗಿದೆ. ಹೀಗಾಗಿಯೇ ಎಐಎಂಐಎಂ ಪಕ್ಷವು 2014 ಹಾಗೂ 2019 ರ ವಿಧಾನಸಭೆ ಚುನಾವಣೆಯಲ್ಲಿ ಏಳು ಸ್ಥಾನಗಳನ್ನು ಗೆದ್ದುಕೊಂಡಿತು. ಓವೈಸಿ ಈ ಎರಡೂ ಚುನಾವಣೆಯಲ್ಲಿ ಏಳು ಸ್ಥಾನಗಳಿಗೆ ಮಾತ್ರ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರು. ಆದ್ದರಿಂದಲೇ ತೆಲಂಗಾಣದಲ್ಲಿ ಎಲ್ಲಿಯೇ ಹೋಗಿ ಕೇಳಿದರೂ ‘ಓವೈಸಿ ಪಾರ್ಟಿಗೆ ಏಳು ಸೀಟು ಪಕ್ಕಾ’ ಎಂದು ಜನ ಹೇಳುತ್ತಾರೆ. ಈ ಬಾರಿ ಒಂಬತ್ತು ಸ್ಥಾನಗಳಲ್ಲಿ ಎಐಎಂಐಎಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ನಾಂಪಲ್ಲಿ ಕ್ಷೇತ್ರದಲ್ಲಿ ಕಳೆದ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಯುವ ಅಭ್ಯರ್ಥಿ ಮಹಮ್ಮದ್ ಫಿರೋಜ್ ಖಾನ್, ಎಐಎಂಐಎಂ ವಿರುದ್ಧ ಕಡಿಮೆ ಅಂತರದಿಂದ ಪರಾಭವಗೊಂಡಿದ್ದರು. ಈ ಬಾರಿ ಮತ್ತೆ ತೀವ್ರ ಪೈಪೋಟಿ ನೀಡುತ್ತಿದ್ದು, ಸಕಾರಾತ್ಮಕ ಫಲಿತಾಂಶದ ಬಗ್ಗೆ ಯವಜನಾಂಗ ಆಶಾಭಾವನೆ ವ್ಯಕ್ತಪಡಿಸಿತು.

‘ಓವೈಸಿ ಸ್ವಹಿತಕ್ಕಾಗಿ ಬಿಆರ್‌ಎಸ್ ಪಕ್ಷದೊಂದಿಗೆ ಬಹಿರಂಗವಾಗಿಯೂ, ಬಿಜೆಪಿ ಜೊತೆ ಗುಟ್ಟಾಗಿಯೂ ಒಳಒಪ್ಪಂದ ಮಾಡಿಕೊಂಡಿದ್ದಾರೆ. ಆದ್ದರಿಂದಲೇ ಅವರ ಮೇಲೆ ಇ.ಡಿ ದಾಳಿ ನಡೆಯುವುದಿಲ್ಲ. ಮುಸ್ಲಿಮರ ಮತಗಳು ಕಾಂಗ್ರೆಸ್‌ಗೆ ಹೋಗುವುದನ್ನು ತಡೆಯುವುದೇ ಅವರ ಉದ್ದೇಶ’ ಎಂದು ತಮ್ಮ ಗುರುತು ಬಹಿರಂಗಪಡಿಸಬಾರದು ಎನ್ನುವ ಷರತ್ತಿನೊಂದಿಗೆ ಹಲವು ವಿದ್ಯಾವಂತ ಮುಸ್ಲಿಮರು ಸುತ್ತಿಬಳಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ❖

ತೆಲಂಗಾಣ: ಅಪರಾಧ ಹಿನ್ನೆಲೆ, ಕೋಟ್ಯಧಿಪತಿಗಳ ಸುತ್ತ

119 ಒಟ್ಟು ಕ್ಷೇತ್ರಗಳು

2,290 (1821) ಅಭ್ಯರ್ಥಿಗಳು

222 (136) ಮಹಿಳೆಯರು

ಮತದಾನ ದಿನ 30 ನವೆಂಬರ್

(ಆವರಣದಲ್ಲಿರುವುದು 2018ರ ವಿಧಾನಸಭಾ ಚುನಾವಣೆ ಅಂಕಿಅಂಶಗಳು)

ಅಪರಾಧ ಮತ್ತು ಅಭ್ಯರ್ಥಿಗಳು

ಗಂಭೀರ ಪ್ರಕರಣಗಳು	353 (231)
ಕಾಂಗ್ರೆಸ್	60
ಬಿಜೆಪಿ	54
ಬಿಆರ್‌ಎಸ್	34
ಬಿಎಸ್ಪಿ	28
ಫಾರ್ವರ್ಡ್ ಬ್ಲಾಕ್	7
ಸಿಪಿಎಂ	6

ರೆಡ್ ಅಲರ್ಟ್ ಕ್ಷೇತ್ರಗಳು
(ಅಪರಾಧ ಪ್ರಕರಣಗಳನ್ನು ಹೊಂದಿರುವ 3 ಅಥವಾ ಹೆಚ್ಚಿನ ಅಭ್ಯರ್ಥಿಗಳು ಇರುವ ಕ್ಷೇತ್ರಗಳು): 96 (78)

ಮಹಿಳೆಯನ್ನು ಗುರಿಯಾಗಿಸಿ ಕೊಂಡಿರುವ ಅಪರಾಧಗಳು	45
ಅತ್ಯಾಚಾರ	3
ಕೊಲೆ	7
ಕೊಲೆ ಯತ್ನ	27

ಹಣ ಮತ್ತು ಅಭ್ಯರ್ಥಿಗಳು

580 (438) ಕೋಟ್ಯಧಿಪತಿಗಳು



ಆಸ್ತಿ ವಿವರ
ಕೋಟಿ ₹ಗಳಲ್ಲಿ

4.71 (3.29) ಅಭ್ಯರ್ಥಿಗಳ ಸರಾಸರಿ ಆಸ್ತಿ

ಬಿಆರ್‌ಎಸ್	25.62
ಕಾಂಗ್ರೆಸ್	38
ಬಿಜೆಪಿ	16.15
ಎಐಎಂಐಎಂ	10.46
ಫಾರ್ವರ್ಡ್ ಬ್ಲಾಕ್	2.94
ಬಿಎಸ್ಪಿ	2.02
ಸಿಪಿಐ(ಎಂ)	1.01

ಶ್ರೀಮಂತ ಅಭ್ಯರ್ಥಿ: ಗಡ್ಡಂ ವಿವೇಕಾನಂದ (ಚೆನ್ನೂರು ಕ್ಷೇತ್ರದ ಕಾಂಗ್ರೆಸ್ ಹುರಿಯಾಳು): ₹606.67 ಕೋಟಿ

ಅತ್ಯಂತ ಬಡ ಅಭ್ಯರ್ಥಿಗಳು

● ಮಡ್ಡಿಲೇಟಿ (ಆಲಂಪುರದ ಅಖಿಲ ಭಾರತ ಸಮತಾ ಪಕ್ಷದ ಅಭ್ಯರ್ಥಿ)	₹500
● ಮಹೇಂದರ್ ಭುಕ್ಯ (ಡೋರ್ನಾಕಲ್‌ನ ಭರತ ಚೈತನ್ಯ ಯುವಜನ ಪಕ್ಷದ ಅಭ್ಯರ್ಥಿ)	₹500
● ವನಗುರಿ ಜಯಶಂಕರ್ (ನಾಗರ್ ಕರ್ನೂಲ್‌ನ ಬಹುಜನ ರಿಪಬ್ಲಿಕನ್ ಸೋಷಿಯಲಿಸ್ಟ್ ಪಾರ್ಟಿಯ ಅಭ್ಯರ್ಥಿ)	₹500
● ಶೂನ್ಯ ಆಸ್ತಿ ಘೋಷಿಸಿದ ಅಭ್ಯರ್ಥಿಗಳು	25

ವಯಸ್ಸು

25–40 ವರ್ಷ	1027
41- 60 ವರ್ಷ	1062
61 - 80 ವರ್ಷ	200
80 ವರ್ಷ ಮೇಲ್ಪಟ್ಟವರು	1

ಅಭ್ಯರ್ಥಿಗಳ ಶಿಕ್ಷಣ

979 5 - 12ನೇ ತರಗತಿ

1143 ಪದವಿ ಅಥವಾ ಮೇಲ್ಪಟ್ಟವರು

53 ಡಿಪ್ಲೊಮಾ

89 ಅನಕ್ಷರಸ್ಥರು

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಪ್ರಜಾವಾಣಿ ಗ್ರಾಫಿಕ್ಸ್

ಬಿಜೆಡಿಗೆ ಪಾಂಡಿಯನ್ ಸೇರ್ಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಪರಮಾಪ್ತ ಹಾಗೂ ಮಾಜಿ ಐಎಎಸ್ ಅಧಿಕಾರಿ ವಿ.ಕಾರ್ತಿಕೇಯನ್ ಪಾಂಡಿಯನ್ ಬಿಜು ಜನತಾ ದಳಕ್ಕೆ (ಬಿಜೆಡಿ) ಸೋಮವಾರಅಧಿಕೃತವಾಗಿಸೇರ್ಪಡೆಯಾದರು.

ಪಾಂಡಿಯನ್ ಅವರು ಮುಖ್ಯಮಂತ್ರಿ, ಮತ್ತು ಹಿರಿಯ ನಾಯಕರ ಸಮ್ಮುಖದಲ್ಲಿ ಪಟ್ನಾಯಕ್ ಅವರ ಭುವನೇಶ್ವರದ ನಿವಾಸದಲ್ಲಿ ಪಕ್ಷಕ್ಕೆ ಸೇರಿದರು.

‘ಪಾಂಡಿಯನ್ ಹಲವು ವರ್ಷಗಳಿಂದ ರಾಜ್ಯಕ್ಕಾಗಿ ತುಂಬಾ ಶ್ರಮಿಸುತ್ತಿದ್ದಾರೆ ಅವರು ಜನರ ಗೌರವ ಗಳಿಸಿದ್ದಾರೆ. ನಾನು ಅವರಿಗೆ ಶುಭ ಹಾರೈಸುತ್ತೇನೆ’ ಎಂದು ಪಟ್ನಾಯಕ್ ಹೇಳಿದ್ದಾರೆ.

49 ವರ್ಷದ ಪಾಂಡಿಯನ್ ಅವರು 2000ನೇ ಸಾಲಿನ ಐಎಎಸ್ ಅಧಿಕಾರಿ. ಒಡಿಶಾದಲ್ಲಿ ಅವರು ಸುದೀರ್ಘ ಅವಧಿ ಕಾರ್ಯನಿರ್ವಹಿಸಿದ್ದಾರೆ. ತಮಿಳುನಾಡಿನವರಾದ ಅವರು, 12 ವರ್ಷಗಳ ಕಾಲ ಸಿಎಂ ಆಪ್ತ ಕಾರ್ಯದರ್ಶಿಯಾಗಿದ್ದರು. ಈ ವರ್ಷದ ಅಕ್ಟೋಬರ್ 23ರಂದು ಸ್ವಯಂನಿವೃತ್ತಿ ಪಡೆದಿದ್ದರು. ಆಡಳಿತ ವಿಚಾರದಲ್ಲಿ ಪಟ್ನಾಯಕ್ ಅವರಿಗೆ ಕಣ್ಣು–ಕಿವಿ ಎಲ್ಲವೂ ಪಾಂಡಿಯನ್ ಆಗಿದ್ದಾರೆ. ಸ್ವಯಂನಿವೃತ್ತಿ ಪಡೆದ ಬೆನ್ನಲ್ಲೇ ಪಾಂಡಿಯನ್ ಅವರನ್ನು ರಾಜ್ಯದ ಪ್ರಮುಖ 5 ಟಿ (ಪರಿವರ್ತನೆಯ ಉಪಕ್ರಮ) ಮತ್ತು ನವೀನ್ (ಹೊಸ) ಒಡಿಶಾ ಯೋಜನೆಯ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ಕ್ಯಾಬಿನೆಟ್ ದರ್ಜೆಯ ಸಚಿವರ ಸ್ಥಾನಮಾನ ಹೊಂದಿರುವ ಹುದ್ದೆ ಇದು. ರಾಜಕೀಯಕ್ಕೆ ಸೇರುವ ಮೊದಲು, ಪಾಂಡಿಯನ್ ಅವರು ರಾಜ್ಯದ ಎಲ್ಲ 30 ಜಿಲ್ಲೆಗಳಿಗೆ ಭೇಟಿ ನೀಡಿದ್ದರು.

ರೈತ ಬಂಧು: ಅನುಮತಿ ವಾಪಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣದ ಹಣಕಾಸು ಸಚಿವ ಟಿ. ಹರೀಶ್ ರಾವ್ ಅವರು ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಕಾರಣಕ್ಕೆ ಬಿಆರ್‌ಎಸ್ ನೇತೃತ್ವದ ಸರ್ಕಾರಕ್ಕೆ ‘ರೈತ ಬಂಧು ಯೋಜನೆ’ಯಡಿ ರೈತರಿಗೆ ಆರ್ಥಿಕ ನೆರವು ವಿತರಿಸಲು ನೀಡಿದ ಅನುಮತಿಯನ್ನು ಕೇಂದ್ರ ಚುನಾವಣಾ ಆಯೋಗ ಸೋಮವಾರ ಹಿಂಪಡೆದಿದೆ.

ತೆಲಂಗಾಣದಲ್ಲಿ ನವೆಂಬರ್ 30ರಂದು ಮತದಾನ ನಡೆಯಲಿದೆ. ‘ಫಲಾನುಭವಿಗಳಿಗೆ ಹಣದ ವಿತರಣೆ ಸೋಮವಾರದಿಂದ ನಡೆಯಲಿದೆ. ರೈತರು ಬೆಳಗಿನ ಉಪಾಹಾರ ಮತ್ತು ಚಹಾ ಸೇವಿಸುವ ಮೊದಲೇ ಅವರ ಖಾತೆಗೆ ಹಣ ಜಮೆಯಾಗಲಿದೆ’ ಎಂದು ಸಚಿವ ರಾವ್ ಹೇಳಿದ್ದರು. ಈ ಯೋಜನೆಯಡಿ ವಿತರಿಸುತ್ತಿರುವ ಹಣದ ಬಗ್ಗೆ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಯಾವುದೇ ಹೇಳಿಕೆ ನೀಡದಂತೆ ಬಿಆರ್‌ಎಸ್ ಪಕ್ಷದ ಮುಖಂಡರಿಗೆ ನಿರ್ಬಂಧ ಹೇರಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗಕ್ಕೆ ಮನವಿ ಮಾಡಿತ್ತು. ಆಯೋಗದ ನಡೆಗೆ ಬಿಆರ್‌ಎಸ್ ಆಶ್ಚರ್ಯ ವ್ಯಕ್ತಪಡಿಸಿದ್ದು, ‘ಹಣ ವಿತರಣೆ ನಿಲ್ಲಿಸುವುದರಿಂದ ರೈತರಿಗೆ ಭರಿಸಲಾಗದ ನಷ್ಟ ಉಂಟಾಗಬಹುದು. ಹಾಗಾಗಿ, ಅನುಮತಿಯನ್ನು ಮರು ಸ್ಥಾಪಿಸಬೇಕು’ ಎಂದು ಆಗ್ರಹಿಸಿದೆ.

ಆಯೋಗಕ್ಕೆ ಪತ್ರ ಬರೆದಿರುವ ಪಕ್ಷದ ಸಂಸದ ಕೆ.ಕೇಶವ ರಾವ್, ‘ಹಣ ವಿತರಣೆಯ ಬಗ್ಗೆ ಹಣಕಾಸು ಸಚಿವರು ಯಾವುದೇ ಘೋಷಣೆ ಮಾಡಿಲ್ಲ. ಅವರು ಆಯೋಗಕ್ಕೆ ಕೃತಜ್ಞತೆಯನ್ನಷ್ಟೇ ಹೇಳಿದ್ದಾರೆ. ಇದು ಅಚಾತುರ್ಯದ ಹೇಳಿಕೆ ಹಾಗೂ ಕೃತಜ್ಞತೆಯ ಅಭಿವ್ಯಕ್ತಿಯಾಗಿದೆ’ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ‘ರೈತ ಬಂಧು ಯೋಜನೆಯಡಿ ಫಲಾನುಭವಿಗಳಿಗೆ ಹಣಕಾಸು ನೆರವು ಸಿಗದೆ ಇರಲು ಸಚಿವರ ಹೇಳಿಕೆಯೇ ಕಾರಣ. ಇದಕ್ಕೆ ಕಾಂಗ್ರೆಸ್ ಅನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ತಮ್ಮ ಮೂರ್ಖತನವನ್ನು ಒಪ್ಪಿಕೊಂಡ ನಂತರ, ಈ ಘೋರ ತಪ್ಪಿಗೆ ಅವರು ತಕ್ಷಣವೇ ತೆಲಂಗಾಣದ ರೈತರ ಕ್ಷಮೆಯಾಚಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಕಳೆದ ಐದು ವರ್ಷಗಳಿಂದ ರೈತ ಬಂಧು ಯೋಜನೆ ಜಾರಿಯಲ್ಲಿದೆ. ಇದು ಚಾಲ್ತಿಯಲ್ಲಿರುವ ಯೋಜನೆಯಾಗಿರುವ ಕಾರಣಕ್ಕೆ ರೈತರಿಗೆ ಹಿಂಗಾರು ಕಂತನ್ನು ವಿತರಿಸಲು ಆಯೋಗವು ಸರ್ಕಾರಕ್ಕೆ ನವೆಂಬರ್ 24ರಂದು ಅನುಮತಿ ನೀಡಿತ್ತು. ಸರ್ಕಾರವು ಈ ಬಗ್ಗೆ ಯಾವುದೇ ಸಾರ್ವಜನಿಕ ಘೋಷಣೆಗಳನ್ನು ಮಾಡಬಾರದು ಎಂದೂ ಆಯೋಗವು ಹೇಳಿತ್ತು. ರೈತರಿಗೆ ನೆರವು ವಿತರಿಸಲು ಅನುಮತಿ ನೀಡುವಂತೆ ಕೋರಿ ಸರ್ಕಾರವು ಆಯೋಗಕ್ಕೆ ನವೆಂಬರ್ 18ರಂದು ಪತ್ರ ಬರೆದಿತ್ತು.

’ಮತದಾನಕ್ಕೆ ಕೆಲವೇ ದಿನಗಳು ಉಳಿದಿರುವಾಗ ಯೋಜನೆ ಬಗ್ಗೆ ಸಚಿವರು ಹೇಳಿಕೆ ನೀಡಿದ್ದಾರೆ. ಇದು ನೀತಿಸಂಹಿತೆ’ ಎಂದು ಆಯೋಗ ಹೇಳಿದೆ.

‘ಅಧಿಕಾರಕ್ಕೆ ಬಂದರೆ ಯೋಜನೆ ಮುಂದುವರಿಕೆ’

ಶಾದ್‌ನಗರ (ಪಿಟಿಐ): ರೈತ ಬಂಧು ಯೋಜನೆ ಅಡಿ ಆರ್ಥಿಕ ನೆರವು ವಿತರಿಸಲು ತೆಲಂಗಾಣ ಸರ್ಕಾರಕ್ಕೆ ನೀಡಿದ್ದ ಅನುಮತಿಯನ್ನು ಚುನಾವಣಾ ಆಯೋಗ (ಇ.ಸಿ) ಹಿಂಪಡೆದಿದ್ದಕ್ಕೆ ಬಿಆರ್‌ಎಸ್ ಪಕ್ಷವು ಕಾಂಗ್ರೆಸ್ ವಿರುದ್ಧ ಆಪಾದನೆ ಹೊರಿಸಿದೆ.

ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಮರಳಿದ ಬಳಿಕ ಬಾಕಿ ಹಣವನ್ನು ವಿತರಿಸಲಾಗುತ್ತದೆ ಎಂದು ರಾಜ್ಯದ ಮುಖ್ಯಮಂತ್ರಿ, ಬಿಆರ್‌ಎಸ್ ಅಧ್ಯಕ್ಷ ಕೆ. ಚಂದ್ರಶೇಖರ ರಾವ್ ಅವರು ಜನರಿಗೆ ಭರವಸೆ ನೀಡಿದ್ದಾರೆ.

2.5 ಲಕ್ಷ ಚುನಾವಣಾ ಸಿಬ್ಬಂದಿ ನಿಯೋಜನೆ

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆಯ ಚುನಾವಣಾ ಕರ್ತವ್ಯಕ್ಕೆ 2.5 ಲಕ್ಷ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ರಾಜ್ಯದಲ್ಲಿ ನೀತಿ ಸಂಹಿತೆ ಜಾರಿ ಆದಾಗಿನಿಂದ ₹ 709 ಕೋಟಿ ಮೌಲ್ಯದ ಚಿನ್ನ, ಮದ್ಯ, ಉಡುಗೊರೆಗಳು, ನಗದು ಮತ್ತು ಇತರ ವಸ್ತುಗಳನ್ನು ಕಾನೂನು ಜಾರಿ ಸಂಸ್ಥೆಗಳು ವಶಕ್ಕೆ ತೆಗೆದುಕೊಂಡಿವೆ ಎಂದು ಮುಖ್ಯ ಚುನಾವಣಾ ಅಧಿಕಾರಿ ವಿಕಾಸ್ ರಾಜ್ ತಿಳಿಸಿದರು.

ನುಡಿ-ಕಿಡಿ

ಬಿಜೆಪಿ ಅಧಿಕಾರಕ್ಕೆ ಬಂದರೆ ಹೈದರಾಬಾದ್ ನಗರದ ಹೆಸರನ್ನು ಖಂಡಿತವಾಗಿ ಬದಲಿಸುತ್ತೇವೆ. ಹೈದರ್ ಯಾರು? ಹೈದರ್ ಬಂದದ್ದು ಎಲ್ಲಿಂದ? ನಾವು ಸರ್ಕಾರ ರಚಿಸಿದರೆ, ಹೈದರಾಬಾದ್ ತೆಗೆದು ಭಾಗ್ಯನಗರ ಎಂದು ಹೆಸರು ಬದಲಿಸುತ್ತೇವೆ. ಮದ್ರಾಸ್– ಚೆನ್ನೈ, ಬಾಂಬೆ–ಮುಂಬೈ, ಕಲ್ಕತ್ತ– ಕೋಲ್ಕತ್ತ, ರಾಜ್‌ಪಥ– ಕರ್ತವ್ಯ ಪಥ ಎಂದು ಮರುನಾಮಕರಣಗೊಂಡಿರುವಾಗ ಹೈದರಾಬಾದ್ ಹೆಸರನ್ನು ಯಾಕೆ ಬದಲಿಸಬಾರದು?

ಜಿ. ಕಿಶನ್ ರೆಡ್ಡಿ, ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ

ತೆಲಂಗಾಣದ ದೊಡ್ಡ ನಾಯಕರು ತಮ್ಮ ಬಂಗಲೆಗಳಲ್ಲಿ, ತೋಟದ ಮನೆಗಳಲ್ಲಿ ಕುಳಿತು ಸರ್ಕಾರ ನಡೆಸುತ್ತಿದ್ದಾರೆ. ಬಿಆರ್‌ಎಸ್‌ನ ಎಲ್ಲಾ ನಾಯಕರು ಬಂಗಲೆಗಳಲ್ಲಿ ಇದ್ದಾರೆ. ಅವರ ನೀತಿಗಳು ಏನಿದ್ದರೂ ದೊಡ್ಡ ಉದ್ಯಮಿಗಳಿಗೆ ಮಾತ್ರ. ಸಣ್ಣ ವ್ಯಾಪಾರಿಗಳಿಗೆ, ಮಧ್ಯಮ ವರ್ಗದವರಿಗೆ, ದಲಿತರಿಗೆ ಮತ್ತು ಆದಿವಾಸಿಗಳಿಗೆ ಅವರ ಕೊಡುಗೆ ಏನೂ ಇಲ್ಲ.

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General
ಮನೆಯಲ್ಲಿಯೇ ಸ್ಯಾಲರಿಯೊಂದಿಗೆ ಆಫೀಸ್ ಮಾಡುದಿದ್ದಲ್ಲಿ ಸಂಪರ್ಕಿಸಿ: 9620449302

Multiple Vacancy
REQUIRED EXPERIENCED Telecaller and Field_Executive For Bank_loan Collection. Direct Recruitment to Company. Contact: 7899040499, 9620206756.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted
ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರೆಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852

ಭವಿಷ್ಯ

Astrology
“ಕೆಲಸ ಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಪ್ರವಾಸ

Travel
ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/12 ದಿನಗಳು. 08.12.2023 ಗೋವ,ಕಾರವಾರ, ಗೋಕರಣ,ಮುರುಡೇಶ್ವರ ಕೊಲ್ಲೂರು 8000/-. 18.01.2024 ಅಹೋಬಲ,ನವನರಸಿಂಹ,ಶ್ರೀಶೈಲ ಮಂತ್ರಾಲಯ ಇತ್ಯಾದಿ 8000/-. 13.02.2024 ವೈಷ್ಣೋದೇವಿ ಅಮೃತ್‌ಸರ್ ವಾಘಬಾರ್ಡರ್ ದೆಹಲಿ,ಹರಿದ್ವಾರ,ಮಥುರ ಇತ್ಯಾದಿ 21000/-. 9448390735 9449721678

08.01.2024 12.03.2024 12.04.2024 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 13.01.2024 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 12.01.2024 05.03.2024 ನೇಪಾಳ 9 ದಿನಗಳು. 23.12.2023 12.01.2024 06.03.2024 ಭೂತಾನ್ 8 ದಿನಗಳು. 09.01.2024 05.02.2024 25.03.2024 ಶ್ರೀಲಂಕಾ 6 ದಿನಗಳು. 06.01.2024 15.02.2024 02.04.2024 ಅಸ್ಸಾಂ,ಮೇಘಾಲಯ 9 ದಿನಗಳು 13.01.2024 05.02.2024 ಗುಜರಾತ್ 8 ದಿನಗಳು. 13.01.2024 12.02.2024 ರಾಜಸ್ಥಾನ್ 10 ದಿನಗಳು. 12.04.2024 06.05.2024 ಕಾಶ್ಮೀರ್ 6 ದಿನಗಳು. 05.04.2024 25.04.2024 02.05.2024 ಶಿಮ್ಲಾ,ಮನಾಲಿ 8 ದಿನಗಳು. 18 04.2024 17.05.2024 ಗ್ಯಾಂಗ್ ಟಾಕ್,ಡಾರ್ಜಲಿಂಗ 6 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು: 2024 ದುಬೈ,ಅಬುದಾಬಿ ವಿಯೆಟ್ನಾಂ,ಕಾಂಬೋಡಿಯ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ನೇಪಾಳ,ಮುಕ್ತಿನಾಥ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9900080796

6 ದಿನಗಳ ದುಬೈ, 7/11 ದಿನಗಳ ಸಿಂಗಪುರ, ಮಲೇಷ್ಯಾ ಥೈಲ್ಯಾಂಡ್, 6 ದಿನಗಳ ಅಂಡಮಾನ್, 10 ದಿನಗಳ ಕಾಂಬೋಡಿಯಾ ವಿಯಟ್ನಾಂ. ಭಟ್ ಟ್ರಾವೆಲ್ಸ್: 9844037295

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮುಖದ ಮೇಲೆ ಮೂತ್ರ ವಿಸರ್ಜನೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಪ್ರದೇಶದ ಮೀರತ್‌ನಲ್ಲಿ ಯುವಕನ ಮೇಲೆ ಭಾನುವಾರ ತೀವ್ರ ಹಲ್ಲೆ ನಡೆಸಿ, ಆತನ ಮುಖದ ಮೇಲೆ ಮೂತ್ರ ವಿಸರ್ಜಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಲ್ಲದೆ, ತಲೆ ಮರೆಸಿಕೊಂಡಿರುವ ಇನ್ನೂ ನಾಲ್ವರು ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ಮುಂದುವರಿದಿದೆ ಎಂದೂ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಕೆಲವು ದಿನಗಳ ಹಿಂದೆ ಸಂಬಂಧಿಕರೊಬ್ಬರ ಮನೆಯಿಂದ ವಾಪಸ್ ತನ್ನ ಮನೆಗೆ ಬರುತ್ತಿದ್ದ ಸಂತ್ರಸ್ತನನ್ನು ಅಡ್ಡಗಟ್ಟಿದ್ದ ಏಳು ಮಂದಿ, ಮನಸೋ ಇಚ್ಛೆ ಥಳಿಸಿದ್ದರು. ಜೊತೆಗೆ ಆತನ ಮುಖದ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದರು. ಸಂತ್ರಸ್ತನಿಗೆ ಪರಿಚಯವಿರುವ ಕೆಲವರು ಇದರಲ್ಲಿ ಇದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಸಂತ್ರಸ್ತನ ಕುಟುಂಬಸ್ಥರು ನೀಡಿದ ದೂರಿನ ಮೇಲೆ ಒಬ್ಬ ಆರೋಪಿಯನ್ನು ಬಂಧಿಸಲಾಗಿತ್ತು. ಈ ಎಫ್‌ಐಆರ್‌ನಲ್ಲಿ ಯುವಕನ ಮುಖದ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದ ವಿವರ ಇರಲಿಲ್ಲ. ಆದರೆ, ಈ ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊದಿಂದಾಗಿ ಆರೋಪಿಗಳು ಯುವಕನ ಮೇಲೆ ಮೂತ್ರ ವಿಸರ್ಜನೆ ಮಾಡಿರುವುದು ಗೊತ್ತಾಗಿದೆ ಎಂದೂ ಹೇಳಿದ್ದಾರೆ.

ಮೃತ ಸಫಾಯಿ ಕರ್ಮಚಾರಿ ಪತ್ನಿಗೆ ₹30 ಲಕ್ಷ ಪರಿಹಾರ: ಕೋರ್ಟ್ ಆದೇಶ

ನವದೆಹಲಿ (ಪಿಟಿಐ): ಮಲದ ಗುಂಡಿ ಸ್ವಚ್ಛಗೊಳಿಸುವ ವೇಳೆ ಮೃತಪಟ್ಟ ಸಫಾಯಿ ಕರ್ಮಚಾರಿಯೊಬ್ಬರ ಪತ್ನಿಗೆ ₹30 ಲಕ್ಷ ಪರಿಹಾರ ನೀಡಬೇಕು ಎಂದು ದೆಹಲಿ ಹೈಕೋರ್ಟ್ ದೆಹಲಿ ಸರ್ಕಾರಕ್ಕೆ ಆದೇಶಿಸಿದೆ.

ಕರ್ತವ್ಯದ ವೇಳೆ ಮೃತಪಟ್ಟ ಸಫಾಯಿ ಕರ್ಮಚಾರಿ ಕುಟುಂಬಕ್ಕೆ ನೀಡುವ ಪರಿಹಾರ ಮೊತ್ತವನ್ನು ₹10 ಲಕ್ಷದಿಂದ ₹30 ಲಕ್ಷಕ್ಕೆ ಏರಿಸಬೇಕು ಎಂದು ಸುಪ್ರೀಂ ಕೋರ್ಟ್ ಈಚೆಗಷ್ಟೇ ಆದೇಶ ಹೊರಡಿಸಿತ್ತು.

ಅದರಂತೆ ತಮಗೆ ನೀಡಲಾಗಿರುವ ಪರಿಹಾರ ಮೊತ್ತವನ್ನು ₹10 ಲಕ್ಷದಿಂದ ₹30 ಲಕ್ಷಕ್ಕೆ ಏರಿಸಬೇಕು ಎಂದು ಮಹಿಳೆಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿ ಪುರಸ್ಕರಿಸಿದ ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್ ಅವರು ₹30 ಲಕ್ಷ ಪರಿಹಾರ ನೀಡುವಂತೆ ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡಿದರು ಮತ್ತು ಎರಡು ತಿಂಗಳ ಒಳಗೆ ಈ ಆದೇಶ ಜಾರಿಗೊಳಿಸಲು ಸೂಚಿಸಿದರು.

‘ಯುವಗಳಂ’ ಪಾದಯಾತ್ರೆ ಪುನರಾರಂಭ

ಹೈದರಾಬಾದ್: ಟಿಡಿಪಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಾರಾ ಲೋಕೇಶ್ ಅವರು ಆಂಧ್ರ ಪ್ರದೇಶದ ರಜೋಲೆಯಿಂದ ಯುವ ಗಳಂ ಪಾದಯಾತ್ರೆಯನ್ನು ಪುನರಾರಂಭಿಸಿದರು. ಪಕ್ಷದ ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರನ್ನು ಸೆಪ್ಟೆಂಬರ್ 9ರಂದು ರಾಜ್ಯದ ಸಿಐಡಿ ಬಂಧಿಸಿದ್ದ ಹಿನ್ನೆಲೆಯಲ್ಲಿ ಅವರು ಈ ಯಾತ್ರೆಯನ್ನು ಮೊಟಕುಗೊಳಿಸಿದ್ದರು.

ಪಾದಯಾತ್ರೆ ವೇಳೆ ಪಿ. ಗನ್ನವರಂ ವಿಧಾನಸಭಾ ಕ್ಷೇತ್ರದ ಗ್ರಾಮಸ್ಥರು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಿಂದ (ಜಿಎಐಎಲ್) ತಮಗಾಗಿರುವ ತೊಂದರೆಗಳ ಕುರಿತು ಲೋಕೇಶ್ ಅವರ ಜೊತೆ ಚರ್ಚಿಸಿದರು. ಗ್ರಾಮಸ್ಥರ ಪರಿಸ್ಥಿತಿ ಕುರಿತು ಒಎನ್‌ಜಿಸಿ (ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್) ಗಮನ ಸೆಳೆಯಲಾಗುವುದು ಎಂದು ಅವರು ಭರವಸೆ ನೀಡಿದರು.

ಇಂದೋರ್ ಖಾಸಗಿ ಶಾಲೆಯಲ್ಲಿ ಘಟನೆ: ತನಿಖೆಗೆ ಸಿಡಬ್ಲ್ಯುಸಿ ಸೂಚನೆ

ವಿದ್ಯಾರ್ಥಿಗೆ ಕಂಪಸ್‌ನಿಂದ 108 ಬಾರಿ ಚುಚ್ಚಿದರು!

ಇಂದೋರ್ (ಪಿಟಿಐ): ಮಧ್ಯಪ್ರದೇಶದ ಇಂದೋರ್ ನಗರದ ಖಾಸಗಿ ಶಾಲೆಯೊಂದರಲ್ಲಿ ನಾಲ್ಕನೇ ತರಗತಿಯ ವಿದ್ಯಾರ್ಥಿಯೊಬ್ಬನ ಕಾಲಿಗೆ ಆತನ ಮೂವರು ಸಹಪಾಠಿಗಳೇ ಕೈವಾರದಿಂದ (ಕಂಪಸ್) 108 ಬಾರಿ ಚುಚ್ಚಿ ಗಾಯಗೊಳಿಸಿರುವ ಘಟನೆ ನಡೆದಿದೆ.

ಗಾಯಗೊಂಡಿರುವ ವಿದ್ಯಾರ್ಥಿ ಆರಾಧ್ಯ ಪಾಂಡೆಗೆ (10) ಮನೆಯಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದ್ದು, ಆತನ ಆರೋಗ್ಯ ಸ್ಥಿರವಾಗಿದೆ. ಆತನ ಹೊಟ್ಟೆ ಮತ್ತು ಎದೆಯ ಭಾಗಕ್ಕೂ ಬಲವಾಗಿ ಗುದ್ದಿದ್ದಾರೆ. ತರಗತಿಯಲ್ಲಿ ನಡೆದ ಗಲಾಟೆ ವೇಳೆ ಸಹಪಾಠಿಗಳು ಈ ಕೃತ್ಯ ಎಸಗಿದ್ದಾರೆ ಎಂದು ಸೋಮವಾರ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣ ಪೊಲೀಸ್ ಠಾಣೆಗೆ ಸಂತ್ರಸ್ತ ಬಾಲಕನ ಪೋಷಕರು ಈ ಬಗ್ಗೆ ದೂರು ನೀಡಿದ್ದಾರೆ. ಘಟನೆ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಮಕ್ಕಳ ಕಲ್ಯಾಣ ಸಮಿತಿಯು (ಸಿಡಬ್ಲ್ಯುಸಿ) ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸರಿಗೆ ಸೂಚಿಸಿದೆ.

ಬಾಲಕನ ತಂದೆ ಹೇಳಿದ್ದೇನು?: ‘ನವೆಂಬರ್ 24ರಂದು ಮಧ್ಯಾಹ್ನ 2 ಗಂಟೆಗೆ ಶಾಲೆಯಲ್ಲಿ ಈ ಘಟನೆ ನಡೆದಿದೆ. ಸಂಜೆ ಮನೆಗೆ ಬಂದ ಬಳಿಕ ಸಹಪಾಠಿಗಳು ಎಸಗಿದ ಕೃತ್ಯದ ಬಗ್ಗೆ ಪುತ್ರ ನನಗೆ ಮಾಹಿತಿ ನೀಡಿದ. ಇದರಿಂದ ಆತ ಭಯಗೊಂಡಿದ್ದಾನೆ’ ಎಂದು ಸಂತ್ರಸ್ತ ಬಾಲಕನ ತಂದೆ ಹೇಳಿದ್ದಾರೆ.

‘ಆತನ ಸಹಪಾಠಿಗಳು ಏಕೆ ಹಿಂಸಾತ್ಮಕವಾಗಿ ವರ್ತಿಸಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಮತ್ತೊಂದೆಡೆ ಶಾಲಾ ಆಡಳಿತ ಮಂಡಳಿ ಕೂಡ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳನ್ನು ನನಗೆ ನೀಡಿಲ್ಲ’ ಎಂದು ದೂರಿದ್ದಾರೆ.

ಮಕ್ಕಳ ಕಲ್ಯಾಣ ಸಮಿತಿ ಕಳವಳ: ‘ತರಗತಿಯಲ್ಲಿ ನಡೆದಿರುವ ಗಲಾಟೆ ವೇಳೆ ಕೈವಾರದಿಂದ ವಿದ್ಯಾರ್ಥಿಯ ಮೇಲೆ ದಾಳಿ ನಡೆಸಲಾಗಿದೆ. ಇದು ಆತಂಕಕಾರಿಯಾದ ವಿದ್ಯಮಾನ. ಎಳೆಯ ವಯಸ್ಸಿನಲ್ಲಿಯೇ ಮಕ್ಕಳಲ್ಲಿ ಇಂತಹ ಹಿಂಸಾತ್ಮಕ ವರ್ತನೆ ಬೆಳೆಯಲು ಕಾರಣ ಏನೆಂಬುದರ ಬಗ್ಗೆ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚಿಸಲಾಗಿದೆ’ ಎಂದು ಸಿಡಬ್ಲ್ಯುಸಿ ಅಧ್ಯಕ್ಷೆ ಪಲ್ಲವಿ ಪೋರ್ವಾಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಕೃತ್ಯ ಎಸಗಿರುವ ಮಕ್ಕಳು ಮತ್ತು ಅವರ ಪೋಷಕರ ಜೊತೆಗೂ ಘಟನೆಗೆ ಸಂಬಂಧಿಸಿದಂತೆ ಚರ್ಚಿಸಲಾಗುವುದು. ಈ ಮಕ್ಕಳು ಮನೆಯಲ್ಲಿ ಹಿಂಸಾತ್ಮಕ ದೃಶ್ಯಗಳಿರುವ ವಿಡಿಯೊ ಗೇಮ್‌ಗಳನ್ನು ವೀಕ್ಷಣೆ ಮಾಡುತ್ತಾರೆಯೇ ಎಂಬ ಬಗ್ಗೆಯೂ ಪರಿಶೀಲಿಸಲಾಗುವುದು’ ಎಂದು ತಿಳಿಸಿದ್ದಾರೆ.

‘ಪ್ರಕರಣ ದಾಖಲಿಸಿಕೊಂಡಿದ್ದು ಸಂತ್ರಸ್ತ ಬಾಲಕನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ’ ಎಂದು ಎಸಿಪಿ ವಿವೇಕ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

‘ಕೃತ್ಯ ಎಸಗಿರುವ ಎಲ್ಲರೂ ಹತ್ತು ವರ್ಷದ ಒಳಗಿನವರಾಗಿದ್ದು, ಕಾನೂನಿನಲ್ಲಿ ಇರುವ ಅವಕಾಶಗಳ ಪ್ರಕಾರ ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ರಾಹುಲ್‌ಗೆ ಸಮನ್ಸ್

ಸುಲ್ತಾನ್‌ಪುರ (ಪಿಟಿಐ): ಮಾನನಷ್ಟ ಮೊಕದ್ದಮೆ ವಿಚಾರವಾಗಿ ಡಿಸೆಂಬರ್ 16ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಜನಪ್ರತಿನಿಧಿಗಳ ನ್ಯಾಯಾಲಯವು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸಮನ್ಸ್ ನೀಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ರಾಹುಲ್ ಅವರು ಪತ್ರಿಕಾಗೋಷ್ಠಿಯಲ್ಲಿ ನಿಂದನಾತ್ಮಕ ಹೇಳಿಕೆ ನೀಡಿದ್ದರು ಎಂದು ಆರೋಪಿಸಿದ್ದ ಬಿಜೆಪಿ ಮುಖಂಡ ವಿಜಯ್ ಮಿಶ್ರಾ ಅವರು 2018ರಲ್ಲಿ ಮಾನನಷ್ಟಮೊಕದ್ದಮೆದಾಖಲಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆಯನ್ನು ಸೋಮವಾರ ನಡೆಸಿದ ನ್ಯಾಯಾಲಯವು ರಾಹುಲ್ ಅವರಿಗೆ ಸಮನ್ಸ್ ಜಾರಿ ಮಾಡಿದೆ.

ನಾರಾಯಣಸ್ವಾಮಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ

ಒಂದನೇ ಪುಟದಿಂದ...

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನವರಾದ ಎಲ್. ನಾರಾಯಣಸ್ವಾಮಿ, ಕಾನೂನು ಪದವಿ ಪೂರ್ಣಗೊಳಿಸಿ 1987ರಲ್ಲಿ ವಕೀಲಿ ವೃತ್ತಿ ಆರಂಭಿಸಿದ್ದರು.

2007ರ ಜುಲೈ 4ರಂದು ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2009ರ ಏಪ್ರಿಲ್ 17 ರಿಂದ ಕಾಯಂ ನ್ಯಾಯಮೂರ್ತಿಯಾಗಿದ್ದರು. 2019ರ ಆಗಸ್ಟ್‌ನಲ್ಲಿ ಹಿಮಾಚಲಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಗೊಂಡಿದ್ದ ಅವರು, 2021ರ ಜುಲೈ 30ರಂದು ನಿವೃತ್ತರಾಗಿದ್ದರು.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ • ವಿದ್ವತ್, ಕೌಶಿಕ್ ದಾಳಿಗೆ ಕುಸಿದ ದೆಹಲಿ • ಆಯುಷ್ ಶತಕ

ಮಯಂಕ್ ಬಳಗಕ್ಕೆ ಮೂರನೇ ಜಯ

ಅಹಮದಾಬಾದ್: ವಿದ್ವತ್ ಕಾವೇರಪ್ಪ ಮತ್ತು ವಿ. ಕೌಶಿಕ್ ಅವರ ಬೌಲಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ 'ಗೆಲುವಿನ ಹ್ಯಾಟ್ರಿಕ್' ಸಾಧಿಸಿತು.

ಸರ್ದಾರ್ ಪಟೇಲ್ ಕ್ರೀಡಾಂಗಣದ ಬಿ ಗ್ರೌಂಡ್‌ನಲ್ಲಿ ಸೋಮವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ 6 ವಿಕೆಟ್‌ಗಳಿಂದ ದೆಹಲಿ ವಿರುದ್ಧ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತಂಡದ ಆಯುಷ್ ಬಡೋಣಿ (100; 106ಎ, 4X12, 6X4) ಶತಕ ಬಾರಿಸಿದರೂ ತಂಡವು ದೊಡ್ಡ ಮೊತ್ತ ಗಳಿಸಲಿಲ್ಲ. ಕೇವಲ 143 ರನ್ ಗಳಿಗೆ ಕುಸಿಯಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ತಮ್ಮ ನಾಯಕನ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಕರ್ನಾಟಕದ ವಿದ್ವತ್ ಕಾವೇರಪ್ಪ ಮತ್ತು ವಿ ಕೌಶಿಕ್ ಯಶಸ್ವಿಯಾದರು. ಇಬ್ಬರೂ ತಲಾ ಮೂರು ವಿಕೆಟ್ ಗಳಿಸಿ ದೆಹಲಿ ಬ್ಯಾಟಿಂಗ್ ಪಡೆಗೆ ಆಘಾತ ನೀಡಿದರು. ಆದರೆ ಆಯುಷ್ ಮಾತ್ರ ಏಕಾಂಗಿ ಹೋರಾಟ ನಡೆಸಿ ಶತಕ ಹೊಡೆದರು.

ಸಣ್ಣ ಗುರಿಯನ್ನು ಬೆನ್ನಟ್ಟಿದ ಕರ್ನಾಟಕ ತಂಡದ ದೇವದತ್ತ ಪಡಿಕ್ಕಲ್ ಮತ್ತೊಮ್ಮೆ ಮಿಂಚಿದರು. 69 ಎಸೆತಗಳಲ್ಲಿ 70 ರನ್ ಗಳಿಸಿದರು. ಅರ್ಧ ಡಜನ್ ಸಿಕ್ಸರ್ ಮತ್ತು ಮೂರು ಬೌಂಡರಿ ಬಾರಿಸಿದರು. ಆರಂಭಿಕ ಜೋಡಿ ಸಮರ್ಥ್ ಮತ್ತು ಮಯಂಕ್ ಅವರು ತಂಡದ ಮೊತ್ತ 35 ರನ್‌ಗಳಾಗುವಷ್ಟರಲ್ಲಿ ಪೆವಿಲಿಯನ್‌ಗೆ ಮರಳಿದ್ದರು. ಇದರಿಂದಾಗಿ ಮೂಡಿದ್ದ ಆತಂಕವನ್ನು ದೇವದತ್ತ ದೂರ ಮಾಡಿದರು. ಇದರಿಂದಾಗಿ ತಂಡವು 27.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿ ಗೆದ್ದಿತು.

ದೇವದತ್ತ ಟೂರ್ನಿಯಲ್ಲಿ ಆಡಿರುವ ಮೂರು ಪಂದ್ಯಗಳಿಂದ ಒಟ್ಟು 258 ರನ್ ಗಳಿಸಿದ್ದಾರೆ. ಅದರಲ್ಲಿ ಎರಡು ಅರ್ಧಶತಕ ಮತ್ತು ಒಂದು ಶತಕ ಸೇರಿದೆ. ಕರ್ನಾಟಕ ತಂಡವು ಒಟ್ಟು 12 ಅಂಕ ಗಳಿಸಿದ ತಂಡವು ಮೊದಲ ಸ್ಥಾನಕ್ಕೇರಿತು. ಅಗ್ರಸ್ಥಾನದಲ್ಲಿದ್ದ ದೆಹಲಿ ನಾಲ್ಕನೇ ಸ್ಥಾನಕ್ಕಿಳಿಯಿತು.

ಸಂಕ್ಷಿಪ್ತ ಸ್ಕೋರು: ದೆಹಲಿ: 36.3 ಓವರ್‌ಗಳಲ್ಲಿ 143 (ಆಯುಷ್ ಬಡೋನಿ 100, ಪ್ರಿಯಾಂಶ್ ಆರ್ಯ 15, ವಿದ್ವತ್ ಕಾವೇರಪ್ಪ 25ಕ್ಕೆ3, ವಿ. ಕೌಶಿಕ್ 19ಕ್ಕೆ3, ವೈಶಾಖ ವಿಜಯಕುಮಾರ್ 27ಕ್ಕೆ2, ಕೆ. ಗೌತಮ್ 32ಕ್ಕೆ2) ಕರ್ನಾಟಕ: 27.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 144 (ದೇವದತ್ತ ಪಡಿಕ್ಕಲ್ 70, ಮನೀಷ್ ಪಾಂಡೆ ಔಟಾಗದೆ 28, ಹರ್ಷಿತ್ ರಾಣಾ 28ಕ್ಕೆ 1, ಲಲಿತ್ ಯಾದವ್ 24ಕ್ಕೆ1) **ಫಲಿತಾಂಶ:** ಕರ್ನಾಟಕ ತಂಡಕ್ಕೆ 6 ವಿಕೆಟ್‌ಗಳ ಜಯ.



ಕರ್ನಾಟಕ ತಂಡದ ವಿದ್ವತ್ ಕಾವೇರಪ್ಪ (ಎಡ) ವಿ. ಕೌಶಿಕ್

ಚಾಂಪಿಯನ್ ಸೌರಾಷ್ಟ್ರಕ್ಕೆ ತ್ರಿಪುರ ಆಘಾತ

ಬೆಂಗಳೂರು: ಹಾಲಿ ಚಾಂಪಿಯನ್ ಸೌರಾಷ್ಟ್ರ ತಂಡವನ್ನು 'ದುರ್ಬಲ' ತ್ರಿಪುರ ತಂಡವು ಸೋಮವಾರ ನಡೆದ ಪಂದ್ಯದಲ್ಲಿ ಸೋಲಿಸಿತು.

ಟೆಸ್ಟ್ ಪರಿಣತ ಆಟಗಾರ ಚೇತೇಶ್ವರ್ ಪೂಜಾರ ಇರುವ ಸೌರಾಷ್ಟ್ರ ತಂಡವು 148 ರನ್‌ಗಳ ಸೋಲಿನ ಆಘಾತ ಅನುಭವಿಸಿತು. 5 ವಿಕೆಟ್ ಗಳಿಸಿದ ಜಯದೇವ್ ದೇವ್ ಅವರು ತ್ರಿಪುರ ತಂಡದ ಗೆಲುವಿನ ರೂವಾರಿಯಾದರು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಸೌರಾಷ್ಟ್ರ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿಕ್ರಂಕುಮಾರ್ ದಾಸ್ (59; 76ಎ), ಸುದೀಪ್ ಚಟರ್ಜಿ (61; 93ಎ) ಮತ್ತು ಕನ್ನಡಿಗ ಗಣೇಶ್ ಸತೀಶ್ (71; 74ಎ) ಅರ್ಧಶತಕಗಳನ್ನು ದಾಖಲಿಸಿದರು. ಇದರಿಂದಾಗಿ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 258 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಸೌರಾಷ್ಟ್ರ ತಂಡದಲ್ಲಿ ಪೂಜಾರ (24 ರನ್) ಅವರದ್ದೇ ಗರಿಷ್ಠ ಸ್ಕೋರ್. ಉಳಿದವರೆಲ್ಲರೂ ಜಯದೇವ್ ಬೌಲಿಂಗ್ ಮುಂದೆ ಕುಸಿದರು. 31.4 ಓವರ್‌ಗಳಲ್ಲಿ 110 ರನ್ ಗಳಿಸಿದ ತಂಡ ಮಣಿಯಿತು.

ಸಂಕ್ಷಿಪ್ತ ಸ್ಕೋರು: ತ್ರಿಪುರಾ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 258 (ವಿಕ್ರಮ್ ಕುಮಾರ್ ದಾಸ್ 59, ಸುದೀಪ್ ಚಟರ್ಜಿ 61, ಜಿ. ಸತೀಶ್ 71, ಮುರಾಸಿಂಗ್ 25, ಜಯದೇವ್ ಉನದ್ಕತ್ 35ಕ್ಕೆ5) ಸೌರಾಷ್ಟ್ರ: 31.4 ಓವರ್‌ಗಳಲ್ಲಿ 110 (ಚೇತೇಶ್ವರ್ ಪೂಜಾರ 24, ಪ್ರೇರಕ್ ಮಂಕಡ್ 21, ಪಾರ್ಥ್ ಭುತ್ 21, ಮಣಿಶಂಕರ್ ಮುರಾಸಿಂಗ್ 13ಕ್ಕೆ2, ಜಯದೇವ್ ದೇವ್ 15ಕ್ಕೆ5) **ಫಲಿತಾಂಶ:** ತ್ರಿಪುರ ತಂಡಕ್ಕೆ 148 ರನ್‌ಗಳ ಜಯ

ರಾಜೀವ್ ಗಾಂಧಿ ಅಥ್ಲೆಟಿಕ್ಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಅಂತರ ಕಾಲೇಜು ಅಥ್ಲೆಟಿಕ್ ಕೂಟ ಮಂಗಳವಾರದಿಂದ ನ.30ರವರೆಗೆ ಇಲ್ಲಿನ ಸ್ವರಾಜ್ಯ ಮೈದಾನದಲ್ಲಿ ನಡೆಯಲಿದೆ.

ಆಳ್ವಾಸ್ ಆಯುರ್ವೇದ ಕಾಲೇಜು ಆಶ್ರಯದಲ್ಲಿ ಕೂಟ ನಡೆಯಲಿದೆ. ಕಳೆದ ಬಾರಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದಿದ್ದ ಆಳ್ವಾಸ್ ಶಿಕ್ಷಣ ಸಂಸ್ಥೆ ಸಮಗ್ರ ಚಾಂಪಿಯನ್ ಪಟ್ಟವನ್ನೂ ಮುಡಿಗೇರಿಸಿಕೊಂಡಿತ್ತು.

28ರಂದು ಬೆಳಿಗ್ಗೆ 6.45ಕ್ಕೆ ಪುರುಷರ 5 ಸಾವಿರ ಮೀಟರ್ಸ್ ಓಟದ ಫೈನಲ್‌ನೊಂದಿಗೆ ಸ್ಪರ್ಧೆಗಳು ಆರಂಭವಾಗಲಿವೆ. 7.15ಕ್ಕೆ ಮಹಿಳೆಯರ 5 ಸಾವಿರ ಮೀಟರ್ಸ್ ಓಟದ ಪದಕ ನಿರ್ಧರಿಸುವ ಸ್ಪರ್ಧೆ ನಡೆಯಲಿದೆ. ಪುರುಷ ಮತ್ತು ಮಹಿಳೆಯರ 1500 ಮೀಟರ್ಸ್ ಓಟದ ಫೈನಲ್‌ನೊಂದಿಗೆ ಮೊದಲ ದಿನದ ಸ್ಪರ್ಧೆಗಳು ಮುಕ್ತಾಯಗೊಳ್ಳಲಿವೆ. ಕೂಟದ ವೇಗದ ಅಥ್ಲೀಟ್‌ಗಳನ್ನು ನಿರ್ಧರಿಸುವ 100 ಮೀಟರ್ಸ್ ಓಟ ಮೊದಲ ದಿನವೇ ನಡೆಯಲಿದೆ. ಪುರುಷ ಮತ್ತು ಮಹಿಳೆಯರ ವಿಭಾಗದ ಸ್ಪರ್ಧೆಗಳು ಕ್ರಮವಾಗಿ ಮಧ್ಯಾಹ್ನ 2.40 ಮತ್ತು 2.45ಕ್ಕೆ ಆರಂಭವಾಗಲಿವೆ.

ಪುರುಷರ 20 ಸಾವಿರ ಮೀಟರ್ಸ್ ಮತ್ತು ಮಹಿಳೆಯರ 5 ಸಾವಿರ ಮೀಟರ್ಸ್ ವೇಗ ನಡಿಗೆಯ ಫೈನಲ್ ಮೂಲಕ ಎರಡನೇ ದಿನದ ಸ್ಪರ್ಧೆಗಳು ಬೆಳಿಗ್ಗೆ 6.30ಕ್ಕೆ ಆರಂಭಗೊಳ್ಳಲಿವೆ. ಪುರುಷ ಮತ್ತು ಮಹಿಳೆಯರ 200 ಮೀಟರ್ಸ್ ಫೈನಲ್ ಸಂಜೆ 4 ಗಂಟೆಗೆ ನಡೆಯಲಿದ್ದು ಎರಡೂ ವಿಭಾಗಗಳ 4x400 ಮೀಟರ್ಸ್ ರಿಲೇ ದಿನದ ಕೊನೆಯ ಸ್ಪರ್ಧೆ ಆಗಿರುತ್ತದೆ. ಈ ಸ್ಪರ್ಧೆಗಳು ಕ್ರಮವಾಗಿ ಸಂಜೆ 5 ಮತ್ತು 5.10ಕ್ಕೆ ನಡೆಯಲಿವೆ. ಇದಕ್ಕೂ ಮೊದಲು 3000 ಮೀಟರ್ಸ್ ಸ್ಟೀಪಲ್ ಚೇಸ್‌ನ ರೋಮಾಂಚನವಿದೆ. ಬೆಳಿಗ್ಗೆ 6.45ಕ್ಕೆ ಪುರುಷರ ಹಾಗೂ ಮಹಿಳೆಯರ 10 ಸಾವಿರ ಮೀಟರ್ಸ್ ಫೈನಲ್ ಕೊನೆಯ ದಿನದ ಮೊದಲ ಸ್ಪರ್ಧೆ. ಎರಡೂ ವಿಭಾಗಗಳ 4x100 ಮೀಟರ್ಸ್ ರಿಲೆಯೊಂದಿಗೆ ಕೂಟಕ್ಕೆ ತೆರೆ ಬೀಳಲಿದೆ. ಈ ಸ್ಪರ್ಧೆಗಳು ಕ್ರಮವಾಗಿ ಸಂಜೆ 5 ಮತ್ತು 5.10ಕ್ಕೆ ನಡೆಯಲಿವೆ.

ವಿಶ್ವವಿದ್ಯಾಲಯದ ಅಥ್ಲೆಟಿಕ್ಸ್‌ನಲ್ಲಿ ಮುರಿಯದೇ ಉಳಿದಿರುವ ಹಳೆಯ ದಾಖಲೆ ಪುರುಷರ 200 ಮೀಟರ್ಸ್ ಓಟದ್ದು. ಬೆಂಗಳೂರಿನಲ್ಲಿ 1999ರಲ್ಲಿ ನಡೆದ ಕೂಟದಲ್ಲಿ ಸುಳ್ಯದ ಕೆವಿಜಿ ದಂತ ವೈದ್ಯಕೀಯ ಕಾಲೇಜಿನ ಸುರೇಶ್ ಕುಮಾರ್ 22.09 ಸೆಕೆಂಡುಗಳಲ್ಲಿ ಈ ಸಾಧನೆ ಮಾಡಿದ್ದಾರೆ.

ಕ್ರೀಡಾಪಟುಗಳು ಮೂಡುಬಿದಿರೆ ಸ್ವರಾಜ್ಯ ಮೈದಾನದಲ್ಲಿ ಸೋಮವಾರ ದೈಹಿಕ ಕಸರತ್ತು ನಡೆಸಿದರು

ಅಥ್ಲೆಟಿಕ್ಸ್: ಪ್ರಿಯೋಮ್, ಸಿರಿಗೆ ಚಿನ್ನ ಪದಕ

ಬೆಂಗಳೂರು: ಆರ್ಮಿ ಪಬ್ಲಿಕ್ ಸ್ಕೂಲ್‌ನ ಪ್ರಿಯೋಮ್ ಸಿಂಗ್ ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸ್ಟಾರ್ ಟ್ರೆಕ್ ಅಥ್ಲೆಟಿಕ್ ಕ್ಲಬ್ ಅಂತರ ಶಾಲಾ ಕೂಟದಲ್ಲಿ ಸೀನಿಯರ್ ಬಾಲಕರ ವಿಭಾಗದ 100 ಮೀಟರ್ ಓಟವನ್ನು 11.49 ಸೆಕೆಂಡುಗಳಲ್ಲಿ ತಲುಪಿ ಚಿನ್ನಕ್ಕೆ ಕೊರಳೊಡ್ಡಿದರು. ವಿದ್ಯಾಶಿಲ್ಪ ಅಕಾಡೆಮಿಯ ಎನ್.ಸಿರಿ ಅವರು ಸೀನಿಯರ್ ಬಾಲಕಿಯರ ವಿಭಾಗದಲ್ಲಿ ಮೂರು ಚಿನ್ನ ಗೆದ್ದು ಪ್ರಾಬಲ್ಯ ಮೆರೆದರು.

ಜೂನಿಯರ್ ಬಾಲಕರ ವಿಭಾಗದಲ್ಲಿ ದೆಹಲಿ ಪಬ್ಲಿಕ್ ಸ್ಕೂಲ್ ಈಸ್ಟ್‌ನ ನೀಲ್ ಪಾಲ್ಕೊಂಡ ಅವರು 100 ಮತ್ತು 200 ಮೀ. ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು. ಅವರು 100 ಮೀ ಗುರಿಯನ್ನು 12.62 ಸೆಕೆಂಡುಗಳಲ್ಲಿ ತಲುಪಿದರು.

ಫಲಿತಾಂಶಗಳು (ವಿಜೇತರು ಮಾತ್ರ): ಸೀನಿಯರ್ ಬಾಲಕರು: 100 ಮೀ: ಪ್ರಿಯೋಮ್ ಸಿಂಗ್ (ಆರ್ಮಿ ಪಬ್ಲಿಕ್ ಸ್ಕೂಲ್); 200 ಮೀ: ಅಬ್ದುಲ್ ಹುಸೇನ್ ಅದುಲ್ ತಾಯೆಬ್ (ಎಂಎಸ್‌ಬಿ ಎಜುಕೇಷನಲ್ ಇನ್‌ಸ್ಟಿಟ್ಯೂಟ್), 400 ಮೀ: ಅರಿಯನ್ ಸಿಂಗ್ ರಾವತ್ (ಸೇಕ್ರೆಡ್ ಹಾರ್ಟ್ಸ್ ಬಾಯ್ಸ್ ಸ್ಕೂಲ್); 1500 ಮೀ: ಯಜತ್ ಗೌಡ (ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್); ಲಾಂಗ್ ಜಂಪ್: ಅನುಭವ್ ಶರ್ಮಾ (ಸೇಂಟ್ ಮೈಕಲ್ ಶಾಲೆ); ಶಾಟ್ ಪಟ್: ತನುಷ್ ಟಿವಿ (ವಿದ್ಯಾನಿಕೇತನ); 4x100ಮೀ ರಿಲೇ: ಜಥಾನಿಯಲ್ (ಸೇಂಟ್ ಜಾನ್ಸ್ ಹೈಸ್ಕೂಲ್); ಬೆಸ್ಟ್ ಸೀನಿಯರ್ ಬಾಲಕರ ಸ್ಕೂಲ್ ಚಾಂಪಿಯನ್: ಅಬ್ದುಲ್‌ಹುಸೇನ್ ಅದುಲ್ ತಾಯೆಬ್, ಜೋಶುವಾಸ್ ಸ್ಕೂಲ್ ಚಾಂಪಿಯನ್: ದೆಹಲಿ ಪಬ್ಲಿಕ್ ಸ್ಕೂಲ್ ಈಸ್ಟ್, ಸಿಲ್ವರ್ ಜ್ಯುಬಿಲಿ ವೇಗದ ಅಥ್ಲೀಟ್: ಮೊನೀಶ್ ಚಂದ್ರಶೇಖರ್ (ಎನ್‌ಇಟಿ ಪಬ್ಲಿಕ್ ಸ್ಕೂಲ್).

19 ವರ್ಷದೊಳಗಿನ ಬಾಲಕರು: 200 ಮೀ: ಬ್ರೈಟ್‌ಸನ್ (ಸೇಂಟ್ ಜಾನ್ಸ್ ಹೈಸ್ಕೂಲ್); 400 ಮೀ: ದೇಶ್ ಕಾರ್ತಿಕ್ ದಾಸ್‌ಗುಪ್ತಾ (ಇಂಡಸ್ ಇಂಟರ್‌ನ್ಯಾಷನಲ್ ಸ್ಕೂಲ್).

ಜೂನಿಯರ್ ಬಾಲಕರು: 100 ಮೀ, 200 ಮೀ: ನೀಲ್ ಪಾಲ್ಕೊಂಡ (ದೆಹಲಿ ಪಬ್ಲಿಕ್ ಸ್ಕೂಲ್ ಈಸ್ಟ್); 400 ಮೀ: ಪವನ್ ಕುಮಾರ್ (ಶ್ರೀ ರಾಮಕೃಷ್ಣ ವಿದ್ಯಾಪೀಠ); 800 ಮೀ: ಪವನ್ ಎಂ. (ಶ್ರೀ ರಾಮಕೃಷ್ಣ ವಿದ್ಯಾಪೀಠ); ಲಾಂಗ್ ಜಂಪ್: ಎಸ್. ಶ್ರವಣ್ ನೈರುದ್ಧ್ (ಪ್ರಸಿದ್ಧಿ ಸ್ಕೂಲ್); ಶಾಟ್ ಪಟ್: ಶ್ರೀಹರನ್ ರೈ (ವಿದ್ಯಾನಿಕೇತನ); 4x100ಮೀ ರಿಲೇ: ನಿಖಿಲ್ ಸಿಂಗ್ (ಆರ್ಮಿ ಪಬ್ಲಿಕ್ ಸ್ಕೂಲ್); ವೈಯಕ್ತಿಕ ಚಾಂಪಿಯನ್: ನೀಲ್ ಪಾಲ್ಕೊಂಡ

ಸೀನಿಯರ್ ಬಾಲಕಿಯರು: 100 ಮೀ, 200 ಮೀ: ಸಿರಿ ಎನ್. (ವಿದ್ಯಾಶಿಲ್ಪ ಅಕಾಡೆಮಿ); 400 ಮೀ: ಶ್ರೇಯಾ ಎ. (ವಿದ್ಯಾನಿಕೇತನ); 1500 ಮೀ: ಯಶಿತಾ ಎಂ.ಡಿ. (ವಿದ್ಯಾನಿಕೇತನ); ಲಾಂಗ್ ಜಂಪ್: ಸಿರಿ ಎನ್. (ವಿದ್ಯಾಶಿಲ್ಪ ಅಕಾಡೆಮಿ); ಶಾಟ್ ಪಟ್: ಬೆನುಷಾ ಎಂ. (ವಿದ್ಯಾನಿಕೇತನ); 4x100 ಮೀ ರಿಲೇ: ಶ್ರೇಯಾ ಎ. (ವಿದ್ಯಾನಿಕೇತನ); ವೈಯಕ್ತಿಕ ಚಾಂಪಿಯನ್: ಸಿರಿ ಎನ್; ಜೋಶುವಾಸ್ ಸ್ಕೂಲ್ ಚಾಂಪಿಯನ್: ದೆಹಲಿ ಪಬ್ಲಿಕ್ ಸ್ಕೂಲ್ ಈಸ್ಟ್.

19 ವರ್ಷದೊಳಗಿನ ಬಾಲಕಿಯರು: 200 ಮೀ: ಎಸ್. ನಿತ್ಯಶ್ರೀ (ಜ್ಯೋತಿ ನಿವಾಸ್ ಪಿಯು ಕಾಲೇಜು); 400 ಮೀ: ಎಸ್. ನಿತ್ಯಶ್ರೀ (ಜ್ಯೋತಿ ನಿವಾಸ್ ಪಿಯು ಕಾಲೇಜು).

ಜೂನಿಯರ್ ಬಾಲಕಿಯರು: ಬಿಯಾಂಕಾ ಸಿ. (ವಿದ್ಯಾನಿಕೇತನ); 200 ಮೀ: ಶ್ರೇಯಾ ರೆಡ್ಡಿ (ಡಿಪಿಎಸ್ ಈಸ್ಟ್); 400 ಮೀ, 800 ಮೀ: ಸಾಧ್ವಿ ರವಿಕುಮಾರ್ (ಡಿಪಿಎಸ್ ಈಸ್ಟ್); ಲಾಂಗ್ ಜಂಪ್: ಶ್ರೀ ಸ್ವರ್ಣರೇಖಾ (ಪ್ರಸಿದ್ಧಿ ಸ್ಕೂಲ್) ಶಾಟ್ ಪಟ್: ತೇಜಸ್ವಿನಿ ಜಿ. ರಾವ್ (ಮರಿಯನ್ ಸ್ಕೂಲ್); 4x100 ಮೀ ರಿಲೇ: ಶ್ರೇಯಾ ರೆಡ್ಡಿ (ಡಿಪಿಎಸ್ ಈಸ್ಟ್); ವೈಯಕ್ತಿಕ ಚಾಂಪಿಯನ್: ಸಾಧ್ವಿ ರವಿಕುಮಾರ್

ಗಾಲ್ಫ್ ಟೂರ್ನಿ: ಅದಿತಿಗೆ ಪ್ರಶಸ್ತಿ

ಮಬೆಲ್ಲಾ, ಸ್ಪೇನ್ (ಪಿಟಿಐ): ಒಲಿಂಪಿಯನ್ ಅದಿತಿ ಅಶೋಕ್ ಅವರು ಅಂದಾಲುಸಿಯಾ ಕೊಸ್ತಾ ದೆಲ್ ಸೋಲ್ ಓಪನ್ ಡಿ ಸ್ಪಾನಾ ಗಾಲ್ಫ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರು.

ಬೆಂಗಳೂರಿನ ಅದಿತಿ ಅವರಿಗೆ ಪ್ರಸಕ್ತ ಲೇಡಿಸ್ ಯುರೋಪಿಯನ್ ಟೂರ್ (ಎಲ್‌ಇಟಿ) ಇದು ಎರಡನೇ ಪ್ರಶಸ್ತಿಯಾಗಿದೆ. ಅವರ ವೃತ್ತಿಜೀವನದಲ್ಲಿ ಒಟ್ಟಾರೆ 5ನೇ ಪ್ರಶಸ್ತಿಯೂ ಇದಾಗಿದೆ. ಭಾನುವಾರ ನಡೆದ ಫೈನಲ್ ಸುತ್ತಿನಲ್ಲಿ ಅವರು ನೆದರ್ಲೆಂಡ್ಸ್‌ನ ಅನಾ ವ್ಯಾನ್ ಡ್ಯಾಮ್ (68) ಅವರನ್ನು ಎರಡು ಶಾಟ್‌ಗಳಿಂದ ಹಿಂದಿಕ್ಕಿ ಜಯಿಸಿದರು.

'ಆನ್ ಅವರ ಎದುರಿನ ಪೈಪೋಟಿ ಯು ಉನ್ನತ ದರ್ಜೆಯದಾಗಿತ್ತು. ಅವರು ಉತ್ತಮವಾಗಿ ಆಡಿದರು. ಅವರು 5 ರಿಂದ 10 ಶಾಟ್‌ಗಳ ಅಂತರದಲ್ಲಿ ಜಯಿಸುವ ಸಾಧ್ಯತೆಯೂ ಇತ್ತು. ಅದನ್ನು ಅರಿತಿದ್ದ ನಾನು ಬರ್ಡೀಸ್ ಮಾಡುವುದನ್ನು ನಿಲ್ಲಿಸಲಿಲ್ಲ ಮತ್ತು ನಿರಂತರವಾಗಿ ಪ್ರಯತ್ನಿಸುತ್ತಲೂ ಇದ್ದೆ' ಎಂದು ಅದಿತಿ ಹೇಳಿದರು.

ಹಾಕಿ: ಪಂಜಾಬ್‌ಗೆ ಮಣಿದ ಕರ್ನಾಟಕ

ಚೆನ್ನೈ: ಸಾಂಘಿಕ ಆಟವಾಡಿದ ಪಂಜಾಬ್ ತಂಡವು ಸೋಮವಾರ ನಡೆದ 13ನೇ ಹಾಕಿ ಇಂಡಿಯಾ ಸೀನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ 5–1ರಿಂದ ಕರ್ನಾಟಕ ತಂಡವನ್ನು ಮಣಿಸಿತು.

ರಾಷ್ಟ್ರೀಯ ತಂಡದ ನಾಯಕರೂ ಆಗಿರುವ ಹರ್ಮನ್‌ಪ್ರೀತ್ ಸಿಂಗ್ (39, 44ನೇ ನಿ) ಪಂಜಾಬ್ ತಂಡದ ಪರ ಎರಡು ಗೋಲು ಗಳಿಸಿ ಮಿಂಚಿದರೆ, ಶಂಶೇರ್ ಸಿಂಗ್ (4ನೇ), ಸುಖಜೀತ್ ಸಿಂಗ್ (13ನೇ) ಮತ್ತು ಆಕಾಶದೀಪ್ ಸಿಂಗ್ (45ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿ ತಂಡವನ್ನು ಫೈನಲ್‌ಗೆ ಮುನ್ನಡೆಸಿದರು. ಕರ್ನಾಟಕದ ಪರ ಏಕೈಕ ಗೋಲನ್ನು ಬಿ. ಅಭರಣ ಸುದೇವ್ (18ನೇ) ತಂದಿತ್ತರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಆತಿಥೇಯ ತಮಿಳುನಾಡು ತಂಡವನ್ನು ಶೂಟೌಟ್‌ನಲ್ಲಿ 4-2ರಿಂದ ಹಾಲಿ ಚಾಂಪಿಯನ್ ಹರಿಯಾಣ ಸೋಲಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತು. 60 ನಿಮಿಷಗಳ ಪಂದ್ಯದಲ್ಲಿ ಹರಿಯಾಣ ಮತ್ತು ತಮಿಳುನಾಡು 1–1 ಗೋಲುಗಳ ಸಮಬಲ ಸಾಧಿಸಿತ್ತು.

ಪ್ರಶಸ್ತಿಗೆ ಪಂಜಾಬ್ ಮತ್ತು ಹರಿಯಾಣ ತಂಡಗಳು ಸೆಣಸಲಿವೆ.

ಮುಂಬೈನಲ್ಲಿ ಮಾರ್ಚ್ 2ರಿಂದ 9ರವರೆಗೆ ನಿಗದಿ

ಟೆನಿಸ್‌ಬಾಲ್ ಕ್ರಿಕೆಟ್‌ಗೂ ಫ್ರಾಂಚೈಸಿ ಲೀಗ್!

• ನಾಗೇಶ್ ಶೆಣೈ

ಮುಂಬೈ: ಈಗ ದೇಶದಲ್ಲಿ ಟೆನಿಸ್ ಬಾಲ್ ಕ್ರಿಕೆಟ್‌ಗೂ ದೊಡ್ಡ ಮಟ್ಟದಲ್ಲಿ ಫ್ರಾಂಚೈಸಿ ಆಧಾರಿತ ಲೀಗ್ ಯೋಗ ಒಲಿದಿದೆ. ಎಲ್ಲವೂ ಯೋಜನೆಯಂತೆ ನಡೆದರೆ ಬೆಂಗಳೂರು ಸೇರಿ ಆರು ಫ್ರಾಂಚೈಸಿ ತಂಡಗಳ ಮೊದಲ 'ಇಂಡಿಯನ್ ಸ್ಟ್ರೀಟ್ ಪ್ರೀಮಿಯರ್ ಲೀಗ್' (ಐಎಸ್‌ಪಿಎಲ್) ಮುಂದಿನ ವರ್ಷದ ಮಾರ್ಚ್ 2 ರಿಂದ 9ರವರೆಗೆ ನಡೆಯಲಿದೆ. ಟಿ10 ಮಾದರಿಯ ಈ ಪ್ರಥಮ ಲೀಗ್ ಮುಂಬೈನಲ್ಲಿ ನಡೆಯಲಿದೆ.

ಐಎಸ್‌ಪಿಎಲ್‌ನ ವೆಬ್‌ಸೈಟ್, ಪ್ರೊಮೊ ವಿಡಿಯೊ, ಆಟಗಾರರ ನೋಂದಣಿ ಪ್ರಕ್ರಿಯೆಗೆ ಸೋಮವಾರ ವಾಂಖೆಡೆ ಕ್ರೀಡಾಂಗಣದ ಗರ್ವಾರೆ ಪೆವಿಲಿಯನ್‌ನಲ್ಲಿ ಚಾಲನೆ ನೀಡಲಾಯಿತು. ಭಾರತ ತಂಡದ ಮಾಜಿ ಮುಖ್ಯ ಕೋಚ್ ಹಾಗೂ ಐಎಸ್‌ಪಿಎಲ್ ಮೆಂಟರ್ ರವಿ ಶಾಸ್ತ್ರಿ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಖಜಾಂಚಿ ಆಶಿಶ್ ಶೆಲಾರ್, ಮುಂಬೈ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಅಮೋಲ್ ಕಾಳೆ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಈ ಸಂಬಂಧ ನಡೆದ ಸಂವಾದದಲ್ಲೂ ಅವರು ಪಾಲ್ಗೊಂಡರು.

ಮುಂಬೈನ ಕ್ರೀಡಾಂಗಣದಲ್ಲಿ ನಡೆಯುವ ಈ ಲೀಗ್‌ನಲ್ಲಿ ಭಾಗವಹಿಸುವ ಆರು ತಂಡಗಳೆಂದರೆ– ಮುಂಬೈ, ಹೈದರಾಬಾದ್, ಬೆಂಗಳೂರು, ಚೆನ್ನೈ, ಕೋಲ್ಕತ್ತ ಮತ್ತು ಶ್ರೀನಗರ. ಕ್ರೀಡಾ ನಿರ್ವಹಣಾ ಸಂಸ್ಥೆಯಾದ ಸಿಸಿಎಸ್ ಸ್ಪೋರ್ಟ್ ಎಲ್‌ಎಲ್‌ಪಿ ಈ ಲೀಗ್ ಆಯೋಜಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ರವಿ ಶಾಸ್ತ್ರಿ, 'ಇದೊಂದು ಒಳ್ಳೆಯ ಉಪಕ್ರಮ. ಟೆನಿಸ್ ಬಾಲ್ ಕ್ರಿಕೆಟ್ ಈ ದೇಶದಲ್ಲಿ ಅತ್ಯಂತ ಜನಪ್ರಿಯ. ಮುಂಬೈನ ಓಣಿ, ಬೀದಿಗಳಲ್ಲೂ ಆಡುತ್ತಾರೆ. ನಾನೂ ಮುಂಬೈನ ನವಜೀವನ ಸೊಸೈಟಿಯ ಪುಟ್ಟ ಜಾಗದಲ್ಲಿ ಆಡಿ ಬೆಳೆದವನು. ಈ ಲೀಗ್‌ನಲ್ಲಿ ಆಡಿ ಯಶಸ್ಸು ಗಳಿಸಿದವರು ಮುಂದೆ ಐಪಿಎಲ್, ಭಾರತ ತಂಡಕ್ಕೆ ಆಡುವಂತಾದರೆ ಅದು ಲೀಗ್‌ನ ದೊಡ್ಡ ಯಶಸ್ಸು ಎನಿಸಲಿದೆ' ಎಂದು ಅಭಿಪ್ರಾಯಪಟ್ಟರು.

'ಟೆಲಿವಿಷನ್ ಪ್ರಸಾರದ ಮೂಲಕ ಈ ಲೀಗ್ ಪ್ರೇಕ್ಷಕ ಸಮೂಹ ಕಂಡುಕೊಳ್ಳಲಿದೆ. ಆಟಗಾರರಿಗೆ ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ವೇದಿಕೆಯಾಗಲಿದೆ. ಅವರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ. ಬ್ರ್ಯಾಂಡ್‌ಗಳಿಗೆ ರಾಯಭಾರಿಗಳಾಗುವ ಅವಕಾಶಗಳೂ ಒದಗಲಿವೆ' ಎಂದರು.

ರಾಷ್ಟ್ರೀಯ ಮಟ್ಟದಲ್ಲಿ ಆಟಗಾರರಿಗೆ ಸಾಮರ್ಥ್ಯ ಪ್ರದರ್ಶನಕ್ಕೆ ಈ ಲೀಗ್ ಉತ್ತಮ ಅವಕಾಶವಾಗಿದೆ ಎಂದು ಆಶಿಶ್ ಶೆಲ್ಲಾರ್ ಹೇಳಿದರು.

ಟೆನಿಸ್ ಬಾಲ್ ಕ್ರಿಕೆಟ್‌ನಲ್ಲಿ ಹಲವು ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಮುಂಬೈನ ಸುಮೀತ್ ಧೇಖಲೆ ಅವರು ಲೀಗ್‌ನ ಮೊದಲ ಆಟಗಾರನಾಗಿ ನೋಂದಾಯಿಸಿಕೊಂಡರು. 'ಇದು ನಮಗೆಲ್ಲಾ ದೊಡ್ಡ ಅವಕಾಶ. ಇದನ್ನು ನಾವೆಲ್ಲರೂ ಬಾಚಿಕೊಳ್ಳಬೇಕು' ಎಂದು ಅವರು ಹೇಳಿದರು.



ಐಎಸ್‌ಪಿಎಲ್‌ಗೆ ಮುಂಬೈನಲ್ಲಿ ಸೋಮವಾರ ಚಾಲನೆ ಸಮಾರಂಭದಲ್ಲಿ ಲೀಗ್ ಕಮಿಷನರ್ ಸೂರಜ್ ಸಮತ್, ಮುಂಬೈ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಅಮೋಲ್ ಕಾಳೆ, ಲೀಗ್‌ನ ಮೆಂಟರ್ ರವಿಶಾಸ್ತ್ರಿ, ಬಿಸಿಸಿಐ ಖಜಾಂಚಿ ಆಶಿಶ್ ಶೆಲಾರ್ ಇದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1580)
ಸೋಯಾ (ರಿಫೈನ್ಡ್)	₹950 (955)
ಸೂರ್ಯಕಾಂತಿ (ರಿಫೈನ್ಡ್)	₹955 (950)
ಪಾಮೋಲಿನ್	₹840 (837)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹11800
ಎಸಿ	₹6300
ಆರ್‌ಪಿ	₹9800
ಆರ್‌ಸಿ	₹6075

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹242-469
ದ್ವಿತಳಿ (ಬಿ.ವಿ)	₹285-633

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹130.50

ಗ್ರಾಮೀಣ ಭಾಗದಲ್ಲಿ ಬೇಡಿಕೆ ಸುಧಾರಿಸಬೇಕಿದೆ

'ವೇಗದ ಬೆಳವಣಿಗೆ ಮುಂದುವರಿಕೆ'

ಬೆಂಗಳೂರು (ರಾಯಿಟರ್ಸ್): ಭಾರತದ ಆರ್ಥಿಕ ಬೆಳವಣಿಗೆ ಪ್ರಮಾಣವು ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಇಳಿಕೆ ಆಗಿರುವ ಸಾಧ್ಯತೆ ಇದೆ. ಹೀಗಿದ್ದರೂ ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆಯಾಗಿಯೇ ಭಾರತ ಇರಲಿದೆ ಎಂದು ರಾಯಿಟರ್ಸ್ ಸಂಸ್ಥೆಯು ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ.

ಕೇಂದ್ರ ಸರ್ಕಾರವು ಜಿಡಿಪಿಗೆ ಸಂಬಂಧಿಸಿದ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದ ಅಂಕಿ-ಅಂಶಗಳನ್ನು ಗುರುವಾರ ಬಿಡುಗಡೆ ಮಾಡುವ ನಿರೀಕ್ಷೆ ಇದೆ.

ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 7.8ರಷ್ಟು ಬೆಳವಣಿಗೆ ಕಂಡಿದೆ. ಆದರೆ, ಜುಲೈ-ಸೆಪ್ಟೆಂಬರ್ ಅವಧಿಯಲ್ಲಿ ಶೇ 6.8ಕ್ಕೆ ಇಳಿಕೆ ಕಂಡಿದೆ ಎನ್ನುವ ಅಂದಾಜನ್ನು ಸಮೀಕ್ಷೆಯಲ್ಲಿ ಭಾಗವಹಿಸಿದ್ದ 55 ತಜ್ಞರು ಅಂದಾಜು ಮಾಡಿದ್ದಾರೆ. ಜಾಗತಿಕ ಮಂದಗತಿಯ ಆರ್ಥಿಕ ಬೆಳವಣಿಗೆಯು ರಫ್ತು ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಆದರೆ, ಸೇವಾ ಚಟುವಟಿಕೆಗಳು ಹೆಚ್ಚಾಗಿರುವುದು ಮತ್ತು ನಗರ ಪ್ರದೇಶದಲ್ಲಿ ಬೇಡಿಕೆ ಏರಿಕೆ ಕಾಣುತ್ತಿರುವುದು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಗೆ ಬಲ ತುಂಬಿರುವ ನಿರೀಕ್ಷೆ ಇದೆ ಎಂದು ಆರ್ಥಿಕ ತಜ್ಞರು ಸಮೀಕ್ಷೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನವೆಂಬರ್ 17 ರಿಂದ 27ರ ಅವಧಿಯಲ್ಲಿ ಸಮೀಕ್ಷೆ ನಡೆಸಲಾಗಿದೆ. ಸರ್ಕಾರದ ವೆಚ್ಚವು ಆರ್ಥಿಕ ಬೆಳವಣಿಗೆಗೆ ಪ್ರಮುಖ ಚಾಲಕ ಶಕ್ತಿ ಎಂದು 14 ತಜ್ಞರು ಹೇಳಿದ್ದರೆ, ಖರೀದಿ ಸಾಮರ್ಥ್ಯ ಮುಖ್ಯ ಎನ್ನುವುದು 13 ತಜ್ಞರ ಅಭಿಪ್ರಾಯ. ಆರ್ಥಿಕ ಬೆಳವಣಿಗೆಗೆ ಹೂಡಿಕೆಯೇ ಮುಖ್ಯ ಎಂದು 5 ತಜ್ಞರು ಹೇಳಿದ್ದಾರೆ.

ಗ್ರಾಹಕ ಬೇಡಿಕೆಯು ಜಗತ್ತಿನ ಪ್ರಮುಖ ದೇಶಗಳಲ್ಲಿ ಏಕರೂಪವಾಗಿಲ್ಲ. ಇದು ಭಾರತದ ಬೆಳವಣಿಗೆ ಮೇಲೆ ಪರಿಣಾಮ ಬೀರಬಹುದಾಗಿದೆ. ದೇಶದಲ್ಲಿ ಅಗತ್ಯ ವಸ್ತುಗಳ ದರ ಏರಿಕೆ ಆಗಿದ್ದರಿಂದ ಗ್ರಾಮೀಣ ಭಾಗದ ಬೇಡಿಕೆಯು ಜುಲೈ-ಸೆಪ್ಟೆಂಬರ್ ಅವಧಿಯಲ್ಲಿ ಕುಗ್ಗಿದೆ. ಆದರೆ, ನಗರ ಪ್ರದೇಶದಲ್ಲಿ ಬೇಡಿಕೆ ಉತ್ತಮವಾಗಿದೆ. ಗ್ರಾಮೀಣ ಭಾಗದ ಬೇಡಿಕೆಯ ದುರ್ಬಲ ಸ್ಥಿತಿಯು ಅಲ್ಪಾವಧಿಗಷ್ಟೇ ಇರುವ ಅಂದಾಜು ಮಾಡಲಾಗಿದೆ ಎಂದು ಸಮೀಕ್ಷೆಯು ಹೇಳಿದೆ.

ನಗರ ಮತ್ತು ಗ್ರಾಮೀಣ ಭಾಗದ ಮಧ್ಯೆ ಖರೀದಿ ಸಾಮರ್ಥ್ಯದಲ್ಲಿ ಇರುವ ಅಂತರವು 2-3 ವರ್ಷಗಳಲ್ಲಿ ಕಡಿಮೆ ಆಗಲಿದೆ ಎಂದು ಶೇ 69ರಷ್ಟು ಆರ್ಥಿಕ ತಜ್ಞರು ಹೇಳಿದ್ದಾರೆ.

ಸೇವೆಗಳು ಮತ್ತು ನಿರ್ಮಾಣ ವಲಯಗಳ ಬೆಳವಣಿಗೆ ಪ್ರಮಾಣ ಹೆಚ್ಚಿಗೆ ಇರಲಿರುವುದು ಆರ್ಥಿಕ ಬೆಳವಣಿಗೆ ಮೇಲೆ ಪ್ರಭಾವ ಬೀರಲಿದೆ.

ಬಾಹ್ಯ ಬೇಡಿಕೆಯು ದುರ್ಬಲವಾಗಿಯೇ ಇರುವುದರಿಂದ ದೇಶಿ ಬೇಡಿಕೆಯು ಆರ್ಥಿಕ ಚಟುವಟಿಕೆಗಳಿಗೆ ಮುಖ್ಯವಾಗಲಿವೆ ಎಂದು ಬರ್ಕ್ಲೇಸ್‌ನ ಆರ್ಥಿಕ ತಜ್ಞ ರಾಹುಲ್ ಬಜೋರಿಯಾ ತಿಳಿಸಿದ್ದಾರೆ.

ಕೇಂದ್ರದ ಬಂಡವಾಳ ವೆಚ್ಚ (ಲಕ್ಷ ಕೋಟಿಗಳಲ್ಲಿ)

₹4.89	2023–24ರ ಮೊದಲಾರ್ಧ
₹3.43	2022–23ರ ಮೊದಲಾರ್ಧ

ಜಿಡಿಪಿ ಅಂದಾಜು ಹೆಚ್ಚಿಸಿದ ಎಸ್ ಆ್ಯಂಡ್ ಪಿ

ನವದೆಹಲಿ (ಪಿಟಿಐ): ಭಾರತದ ಆರ್ಥಿಕ ಬೆಳವಣಿಗೆಯ ಅಂದಾಜನ್ನು ಎಸ್ ಆ್ಯಂಡ್ ಪಿ ಸಂಸ್ಥೆಯು ಪರಿಷ್ಕರಣೆ ಮಾಡಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕತೆಯು ಶೇ 6.4ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಹೇಳಿದೆ.

ಶೇ 6ರಷ್ಟು ಬೆಳವಣಿಗೆ ಕಾಣಲಿದೆ ಎನ್ನುವ ಅಂದಾಜನ್ನು ಈ ಮೊದಲು ಸಂಸ್ಥೆಯು ಮಾಡಿತ್ತು. ಆದರೆ, ದೇಶಿ ಬೇಡಿಕೆ ಹೆಚ್ಚಾಗಿರುವುದರಿಂದ ಆಹಾರ ಹಣದುಬ್ಬರ ಮತ್ತು ರಫ್ತು ಇಳಿಕೆಯಂತಹ ಅಡೆತಡೆಗಳನ್ನು ಮೀರಿ ಬೆಳವಣಿಗೆ ಕಾಣಲಿದೆ ಎಂದು ಅದು ತಿಳಿಸಿದೆ.

2024–25ನೇ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇ 6.9ಕ್ಕೆ ಬದಲಾಗಿ ಶೇ 6.4ಕ್ಕೆ ತಗ್ಗಿಸಿದೆ. ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಬೇಡಿಕೆ ಕಡಿಮೆ ಆಗಲಿರುವುದರಿಂದ ಈ ಪರಿಷ್ಕರಣೆ ಮಾಡಿರುವುದಾಗಿ ಹೇಳಿದೆ.

ತೆರಿಗೆರಹಿತ ವಸ್ತುಗಳ ಹೆಸರಿನಲ್ಲಿ, ಒಣಹಣ್ಣುಗಳ ಹೆಸರಿನಲ್ಲಿ ವಿದೇಶದಿಂದ ಆಮದು

ಮಾರುಕಟ್ಟೆಯಲ್ಲಿ 'ಹುರಿದ ಅಡಿಕೆ'ಯ ಉರಿ

• ಸಂಧ್ಯಾ ಹೆಗಡೆ

ಮಂಗಳೂರು: ಹುರಿದ ಅಡಿಕೆ ರೂಪದಲ್ಲಿ ಕಸ್ಟಮ್ಸ್ ಸುಂಕ ತಪ್ಪಿಸಿಕೊಂಡು ಅವ್ಯಾಹತವಾಗಿ ವಿದೇಶ ಅಡಿಕೆ ಭಾರತಕ್ಕೆ ಬರುತ್ತಿರುವುದು ರಾಜ್ಯದ ಅಡಿಕೆ ವಹಿವಾಟು ಸಂಸ್ಥೆಗಳು ಹಾಗೂ ಬೆಳೆಗಾರರ ನಿದ್ದೆಗೆಡಿಸಿದೆ.

'ತಿಂಗಳ ಈಚೆಗೆ ಸುಮಾರು 20 ಕಂಟೇನರ್ ಅಡಿಕೆ ವಿದೇಶದಿಂದ ಭಾರತಕ್ಕೆ ಬಂದಿದ್ದು, ಪ್ರತಿ ಕಂಟೇನರ್‌ನಲ್ಲಿ 20ರಿಂದ 24 ಟನ್ ಅಡಿಕೆ ಇರಬಹುದೆಂದು ಅಂದಾಜಿಸಲಾಗಿದೆ. ಇವುಗಳಲ್ಲಿ ಬಹುಪಾಲು ಹುರಿದ ಅಡಿಕೆ ಎಂಬ ಅಧಿಕೃತ ಮಾಹಿತಿ ಲಭ್ಯವಾಗಿದೆ. ಕಸ್ಟಮ್ಸ್ ಇಲಾಖೆಯವರು ಹೇಳುವಂತೆ ಹುರಿದ ಅಡಿಕೆಗೆ ಕನಿಷ್ಠ ಆಮದು ಸುಂಕ ಅನ್ವಯವಾಗುವುದಿಲ್ಲ. ಹೀಗಾಗಿ, ಆಮದುದಾರರು ಇದರ ಲಾಭ ಪಡೆದುಕೊಳ್ಳುತ್ತಿರುವ ಸಾಧ್ಯತೆ ಇದೆ' ಎನ್ನುತ್ತಾರೆ ಮಾರುಕಟ್ಟೆ ತಜ್ಞರೊಬ್ಬರು.

'ವಿದೇಶದಿಂದ ಬಂದಿರುವ ಅಡಿಕೆಯ ಮಾದರಿಗಳ ಮೇಲೆ ಮಂಗಳೂರಿನ ಸಂಶೋಧನಾ ಸಂಸ್ಥೆಯೊಂದು ಅಧ್ಯಯನ ನಡೆಸಿದೆ. ಸ್ಥಳೀಯ ರೈತರು ತಯಾರಿಸುವ ಕೆಂಪಡಿಕೆಗೆ ಹೋಲುವ ಇವು ಸ್ವಲ್ಪ ಕಂದುಬಣ್ಣದಲ್ಲಿದ್ದು, ನೈಜ ಅಡಿಕೆಗಿಂತ ಭಿನ್ನವಾಗಿವೆ. ಅಡಿಕೆ ಗುಣಮಟ್ಟ ನಿಗದಿಪಡಿಸಿದ (ಬಿಐಎಸ್- ಬ್ಯುರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್) ಮಾನದಂಡಕ್ಕೆ ಅನುಗುಣವಾಗಿಲ್ಲ. ಅಲ್ಲದೆ, ಇವು ತುಸು ಹೊಗೆಯ ವಾಸನೆ ಹೊಂದಿವೆ. ಇದು ಇಂಡೊನೇಷ್ಯಾ ಅಡಿಕೆ ಆಗಿರುವ ಸಾಧ್ಯತೆ ಇದ್ದು, ಮೇಲ್ನೋಟಕ್ಕೆ ಸ್ಥಳೀಯ ಅಡಿಕೆಯನ್ನು ಹೋಲುತ್ತದೆ. ಆದರೆ, ಕಳಪೆ ಗುಣಮಟ್ಟದ ಈ ಅಡಿಕೆಗಳಲ್ಲಿ ಶೇ 33ರಷ್ಟು ಸೋಂಕು ತಗುಲಿದಂತಿವೆ ಎಂದು ಆ ವರದಿಯಲ್ಲಿ ತಿಳಿಸಲಾಗಿದೆ' ಎಂದು ಅವರು ವಿವರಿಸಿದರು.

'ವಿದೇಶಿ ಅಡಿಕೆ ಅವ್ಯಾಹತವಾಗಿ ದೇಸಿ ಮಾರುಕಟ್ಟೆಗೆ ಬರುತ್ತಿದ್ದು, ಕೆಲವು ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ತೆರಿಗೆರಹಿತ ವಸ್ತುಗಳ ಹೆಸರಿನಲ್ಲಿ, ಒಣಹಣ್ಣುಗಳ ಹೆಸರಿನಲ್ಲಿ ವಿಮಾನಗಳ ಮೂಲಕವೂ ಅಡಿಕೆ ಬರುತ್ತಿದೆ. ಇಂಡೊನೇಷ್ಯಾ ಅಡಿಕೆಯು ಶ್ರೀಲಂಕಾ ಗಡಿ ಮೂಲಕ ಭಾರತಕ್ಕೆ ಬರುತ್ತದೆ. ಬೇರೆ ದೇಶಗಳಿಂದ ಅಡಿಕೆ ನುಸುಳುತ್ತಿದ್ದು, ವಾರದ ಈಚೆಗೆ ತಮಿಳುನಾಡಿನ ಬಂದರಿಗೆ ಬಂದ ವಿದೇಶಿ ಅಡಿಕೆಯನ್ನು ಕಸ್ಟಮ್ಸ್ ಇಲಾಖೆ ವಶಪಡಿಸಿಕೊಂಡಿದೆ' ಎನ್ನುತ್ತಾರೆ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ ಮಹೇಶ್ ಪುಚ್ಚಪ್ಪಾಡಿ.

'ಸ್ಥಳೀಯ ಮಾರುಕಟ್ಟೆಗಳಲ್ಲಿ ಈಗಾಗಲೇ ವಿದೇಶ ಅಡಿಕೆ ತಲ್ಲಣ ಸೃಷ್ಟಿಸಿದೆ. ಶಿರಸಿ, ಸಿದ್ದಾಪುರ, ಯಲ್ಲಾಪುರ, ಸಾಗರ, ಶಿವಮೊಗ್ಗ ಭಾಗಗಳಲ್ಲಿ ಕೆಂಪಡಿಕೆ ಹೆಚ್ಚು ತಯಾರಾಗುತ್ತದೆ. ಕೆಂಪಡಿಕೆಯೊಂದಿಗೆ ಕಳಪೆ ಗುಣಮಟ್ಟದ ಹುರಿ ಅಡಿಕೆ ಮಿಶ್ರಣ ಮಾಡಿ ಕಾಳದಂಧೆಕೋರರು ಮಾರಾಟಕ್ಕಿಳಿದರೆ, ನಮ್ಮ ಅಡಿಕೆ ದರವೂ ಕುಸಿಯುವ ಅಪಾಯ ಇದೆ. ಕ್ವಿಂಟಲ್‌ವೊಂದಕ್ಕೆ ಗರಿಷ್ಠ ₹52ಸಾವಿರದವರೆಗೆ ಇದ್ದ ಕೆಂಪಡಿಕೆ ದರ ಈಗ ₹45ಸಾವಿರಕ್ಕೆ ಕುಸಿದಿದೆ. ಹೀಗಾಗಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ನಿಯೋಗದಲ್ಲಿ ತೆರಳಿ ಕೇಂದ್ರ ಸರ್ಕಾರದ ಪ್ರಮುಖರನ್ನು ಸದ್ಯದಲ್ಲಿ ಭೇಟಿ ಮಾಡಲಾಗುವುದು' ಎಂದು ಅಡಿಕೆ ವಹಿವಾಟು ಸಹಕಾರಿ ಸಂಸ್ಥೆಯಾಗಿರುವ ಶಿರಸಿ ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ವಿದೇಶದಿಂದ ಬಂದಿರುವ ಹುರಿದ ರೂಪದಲ್ಲಿರುವ ಅಡಿಕೆ (ಮೇಲ್ಭಾಗದಲ್ಲಿರುವುದು) ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆದಿರುವ ಅಡಿಕೆ (ಕೆಳಭಾಗದಲ್ಲಿರುವುದು)

> **ಅಡಿಕೆ ಅಕ್ರಮ ನುಸುಳುವಿಕೆ ತಡೆಯಲು ಕೇಂದ್ರ ವಾಣಿಜ್ಯ ಸಚಿವಾಲಯ ಮಧ್ಯ ಪ್ರವೇಶಿಸಿ, ದೇಶದ ಅಡಿಕೆ ಬೆಳೆಗಾರರ ಹಿತ ಕಾಪಾಡಬೇಕು.**
> **ಕಿಶೋರ್‌ಕುಮಾರ್ ಕೊಡ್ಗಿ,** ಕ್ಯಾಂಪ್ಕೊ ಅಧ್ಯಕ್ಷ

ಪ್ರಧಾನಿಗೆ ಕ್ಯಾಂಪ್ಕೊದಿಂದ ಪತ್ರ

ನೆಲ, ಜಲ, ವಾಯು ಮಾರ್ಗಗಳ ಮೂಲಕ ವಿದೇಶದ ಕಳಪೆ ಅಡಿಕೆ ಭಾರತಕ್ಕೆ ಬರುತ್ತಿದೆ. ಗಡಿ ಪ್ರದೇಶದಿಂದ ವಿಮಾನಗಳ ಮೂಲಕ ಬರುವ ಅಡಿಕೆಯನ್ನು, ಇಂಫಾಲ್, ದಿಮಾಪುರ್, ಕೊಲ್ಕತ್ತಾ ಮತ್ತು ಅಗರ್ತಲಾ ವಿಮಾನ ನಿಲ್ದಾಣಗಳ ಲೋಡಿಂಗ್ ಪಾಯಿಂಟ್‌ಗೆ ಕಳುಹಿಸಲಾಗುತ್ತದೆ. ಬೆಂಗಳೂರು, ಹೈದರಾಬಾದ್, ನಾಗ್ಪುರ ಮತ್ತು ಅಹಮದಾಬಾದ್‌ನಲ್ಲಿ ಕಾರ್ಗೊ ಏಜೆಂಟರಿಗೆ ಈ ಅಡಿಕೆ ತಲುಪುತ್ತದೆ. ಆಹಾರ ವಸ್ತುಗಳ ಹೆಸರಿನಲ್ಲಿ ಬಂದರುಗಳ ಮೂಲಕವೂ ಅಡಿಕೆ ಬರುತ್ತಿದೆ. ಪ್ರತಿದಿನ 10 ಟನ್‌ಗಳಷ್ಟು ಸರಕು ಭಾರತಕ್ಕೆ ಪ್ರವೇಶಿಸುತ್ತಿದೆ ಎಂದು ಅಂದಾಜಿಸಲಾಗಿದೆ. ಈ ಬಗ್ಗೆ ಪ್ರಧಾನಿಗೆ ಪತ್ರ ಬರೆದು, ಕ್ರಮ ಕೈಗೊಳ್ಳುವಂತೆ ವಿನಂತಿಸಲಾಗಿದೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್‌ಕುಮಾರ್ ಕೊಡ್ಗಿ ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

27-11-2023

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1590)
ಒಂದು ವಾರದ ಡೆಲಿವರಿ	1595 (1585)
ಸೋಯಾ ಕಚ್ಚಾ	930 (935)
ಪಾಮ್ ವಾರದ ಡೆಲಿವರಿ	842 (839)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 61,800 (61,400)

ಬೆಳ್ಳಿ ಕೆ.ಜಿ 74,850 (74,000)

ಆವರಣದಲ್ಲಿ ಶನಿವಾರದ ಧಾರಣೆ

ರೇಮಂಡ್‌ನ ಸುಲಲಿತ ವಹಿವಾಟಿಗೆ ಬದ್ಧ: ಸಿಂಘಾನಿಯಾ

ನವದೆಹಲಿ (ಪಿಟಿಐ): ರೇಮಂಡ್ ಕಂಪನಿಯ ಕಾರ್ಯಾಚರಣೆಯನ್ನು ಸುಲಲಿತವಾಗಿ ನಡೆಸಲು ಬದ್ಧ ಇರುವುದಾಗಿ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಗೌತಮ್ ಸಿಂಘಾನಿಯಾ ಅವರು ಉದ್ಯೋಗಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರಿಗೆ ಭರವಸೆ ನೀಡಿದ್ದಾರೆ.

ಪತ್ನಿ ನವಾಜ್‌ಗೆ ವಿಚ್ಛೇದನ ನೀಡಿರುವುದಾಗಿ ಸಿಂಘಾನಿಯಾ ಅವರು ನವೆಂಬರ್ 13ರಂದು ತಿಳಿಸಿದ್ದರು. ಈ ಕುರಿತಾಗಿ ಮಾಧ್ಯಮಗಳಲ್ಲಿ ಬರುತ್ತಿರುವ ವರದಿಗಳನ್ನು ಗಮನದಲ್ಲಿ ಇಟ್ಟುಕೊಂಡು ಉದ್ಯೋಗಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರಿಗೆ ಇ-ಮೇಲ್ ಮಾಡಿದ್ದಾರೆ.

'ನನ್ನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಮಾಧ್ಯಮಗಳ ವರದಿಗೆ ಪ್ರತಿಕ್ರಿಯೆ ನೀಡದಿರಲು ಬಯಸಿದ್ದೇನೆ. ನನ್ನ ಕುಟುಂಬದ ಘನತೆ ಕಾಪಾಡಿಕೊಳ್ಳುವುದು ನನಗೆ ಮುಖ್ಯ' ಎಂದು ಇ-ಮೇಲ್‌ನಲ್ಲಿ ಗೌತಮ್ ಸಿಂಘಾನಿಯಾ ತಿಳಿಸಿದ್ದಾರೆ.



ಗೌತಮ್ ಸಿಂಘಾನಿಯಾ

ಸಂಕ್ಷಿಪ್ತ ಸುದ್ದಿ

ಜನವರಿಯಿಂದ ಔಡಿ, ಮಾರುತಿ, ಮಹೀಂದ್ರ ಕಾರು ದುಬಾರಿ

ನವದೆಹಲಿ (ಪಿಟಿಐ): ಔಡಿ, ಮಾರುತಿ ಸುಜುಕಿ ಇಂಡಿಯಾ ಮತ್ತು ಮಹೀಂದ್ರ ಕಂಪನಿಗಳು ಮುಂದಿನ ವರ್ಷದ ಜನವರಿ 1ರಿಂದ ವಾಹನಗಳ ಬೆಲೆ ಹೆಚ್ಚಿಸುವುದಾಗಿ ಸೋಮವಾರ ಹೇಳಿವೆ.

ಐಷಾರಾಮಿ ಕಾರು ತಯಾರಿಸುವ ಔಡಿ ಕಂಪನಿಯು ಭಾರತದಲ್ಲಿ 2024ರ ಜನವರಿ 1ರಿಂದ ತನ್ನೆಲ್ಲಾ ಕಾರುಗಳ ಬೆಲೆ ಶೇ 2ರವರೆಗೆ ಹೆಚ್ಚಿಸುವುದಾಗಿ ಸೋಮವಾರ ಹೇಳಿದೆ. ತಯಾರಿಕೆ ಮತ್ತು ಕಾರ್ಯಾಚರಣಾ ವೆಚ್ಚಗಳ ಏರಿಕೆ ಆಗಿರುವುದರಿಂದ ಈ ನಿರ್ಧಾರಕ್ಕೆ ಬಂದಿರುವುದಾಗಿ ತಿಳಿಸಿದೆ.

ಮಾರುತಿ ಸುಜುಕಿ ಇಂಡಿಯಾ ಕಂಪನಿಯು 2024ರ ಜನವರಿ ಯಿಂದ ತನ್ನ ವಾಹನಗಳ ಬೆಲೆಯನ್ನು ಹೆಚ್ಚಳ ಮಾಡುವುದಾಗಿ ತಿಳಿಸಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಆಟೊಮೋಟಿವ್ ವಿಭಾಗದ ಸಿಇಒ ನಳಿನಿಕಾಂತ ಗೊಲ್ಲಗುಂಟ ಅವರು ಸಹ ಜನವರಿಯಿಂದ ಬೆಲೆ ಏರಿಕೆ ಮಾಡುವುದಾಗಿ ಹೇಳಿದ್ದಾರೆ.

'ಉತ್ತಮ ಬೆಳವಣಿಗೆಯತ್ತ ಬಾಹ್ಯಾಕಾಶ ಆರ್ಥಿಕತೆ'

ತಿರುವನಂತಪುರಂ (ಪಿಟಿಐ): ಭಾರತದ ಬಾಹ್ಯಾಕಾಶ ಆರ್ಥಿಕತೆಯು 2040ರ ವೇಳೆಗೆ ₹3.32 ಲಕ್ಷ ಕೋಟಿಗೆ ತಲುಪಲಿದೆ. ವಿಜ್ಞಾನಿಗಳಿಗೆ ಕೆಲಸ ಮಾಡಲು ಉತ್ತಮವಾದ ಪರಿಸರವು ಲಭ್ಯವಾಗಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಎಡಿಯಂತಹ ವಿದೇಶಿ ಸಂಸ್ಥೆಗಳು ಮಾಡಿರುವ ಅಂದಾಜಿನ ಪ್ರಕಾರ, ಬಾಹ್ಯಾಕಾಶ ಆರ್ಥಿಕತೆಯು 2040ರ ವೇಳೆಗೆ ₹8.30 ಲಕ್ಷ ಕೋಟಿಗೂ ತಲುಪಬಲ್ಲದು ಎಂದಿದ್ದಾರೆ.

ಸದ್ಯ ನಮ್ಮ ಬಾಹ್ಯಾಕಾಶ ಆರ್ಥಿಕತೆ ಅಷ್ಟೇನು ಪರಿಣಾಮಕಾರಿ ಆಗಿಲ್ಲ. ₹66.68 ಕೋಟಿಯಷ್ಟು ಮಾತ್ರ ಇದೆ. ಆದರೆ, ಬೆಳವಣಿಗೆಗೆ ವೇಗ ದೊರೆತಿದೆ. ಯುರೋಪ್‌ನ ಉಪಗ್ರಹಗಳ ಉಡಾವಣೆಯಿಂದ ₹2,187 ಕೋಟಿ ಹಾಗೂ ಅಮೆರಿಕ ಉಪಗ್ರಹಗಳ ಉಡಾವಣೆಯಿಂದ ₹1500 ಕೋಟಿವರೆಗೆ ಗಳಿಸಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿ ಒಂದಿಷ್ಟು ಷೇರು ಇರಲಿದೆ: ಎಲ್‌ಐಸಿ

ನವದೆಹಲಿ (ಪಿಟಿಐ): ಬ್ಯಾಂಕ್ ಇನ್ಶುರೆನ್ಸ್ ಪ್ರಯೋಜನಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಐಡಿಬಿಐ ಬ್ಯಾಂಕ್‌ನಲ್ಲಿ ಒಂದಿಷ್ಟು ಷೇರುಪಾಲನ್ನು ಉಳಿಸಿಕೊಳ್ಳಲಾಗುವುದು ಎಂದು ಎಲ್‌ಐಸಿ ಹೇಳಿದೆ.

'ಬ್ಯಾಂಕ್ ಇನ್ಶುರೆನ್ಸ್ ವಿಭಾಗದಲ್ಲಿ ಐಡಿಬಿಐ ಬ್ಯಾಂಕ್ ಎಲ್‌ಐಸಿಯ ನಂಬರ್ 1 ಪಾಲುದಾರ ಆಗಿದೆ ಎನ್ನುವುದನ್ನು ನಾವು ಸ್ಪಷ್ಟಪಡಿಸಿದ್ದೇವೆ. ಹೀಗಾಗಿ ಈ ಪಾಲುದಾರಿಕೆ ಮುಂದುವರಿಸುವ ಸಲುವಾಗಿ ಬ್ಯಾಂಕ್‌ನಲ್ಲಿ ಒಂದಿಷ್ಟು ಷೇರುಪಾಲನ್ನು ಉಳಿಸಿಕೊಳ್ಳಲಾ ಗುವುದು' ಎಂದು ಕಂಪನಿ ಅಧ್ಯಕ್ಷ ಸಿದ್ಧಾರ್ಥ ಮೊಹಂತಿ ಹೇಳಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿ ಕೇಂದ್ರ ಸರ್ಕಾರ ಶೇ 45ರಷ್ಟು, ಎಲ್‌ಐಸಿ ಶೇ 49.24ರಷ್ಟು ಷೇರುಪಾಲು ಹೊಂದಿದೆ. ಕೇಂದ್ರ ಮತ್ತು ಎಲ್‌ಐಸಿ ಒಟ್ಟಾಗಿ ಶೇ 60.7ರಷ್ಟು ಷೇರು ಮಾರಾಟ ಮಾಡಲು ನಿರ್ಧರಿಸಿವೆ.

ಬೈಜುಸ್ ನೂತನ ಸಿಟಿಒ ಜಿನಿ ಥಟ್ಟಿಲ್

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯು ತನ್ನ ಎಂಜಿನಿಯರಿಂಗ್ ವಿಭಾಗದ ಹಿರಿಯ ಉಪಾಧ್ಯಕ್ಷ ಜಿನಿ ಥಟ್ಟಿಲ್ ಅವರಿಗೆ ಮುಖ್ಯ ತಾಂತ್ರಿಕ ಅಧಿಕಾರಿಯಾಗಿ ಬಡ್ತಿ ನೀಡಿದೆ.

ಇಂಡಿಯನ್ ಪ್ರೀಮಿಯರ್ ಲೀಗ್: ಮುಂಬೈಗೆ ವಾಪಸಾದ ಆಲ್‌ರೌಂಡ್ ಆಟಗಾರ ಪಾಂಡ್ಯ

ಗುಜರಾತ್ ಟೈಟನ್ಸ್‌ಗೆ ಗಿಲ್ ಸಾರಥ್ಯ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 2024ರ ಆವೃತ್ತಿಯಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಮುನ್ನಡೆಸಲಿದ್ದಾರೆ.

ಗುಜರಾತ್ ತಂಡದ ನಾಯಕರಾಗಿದ್ದ ಹಾರ್ದಿಕ್ ಪಾಂಡ್ಯ ಮತ್ತೆ ಮುಂಬೈ ಇಂಡಿಯನ್ಸ್ ತಂಡಕ್ಕೆ ವಾಪಸಾದ ಬೆನ್ನಲ್ಲೇ ಗುಜರಾತ್ ಫ್ರಾಂಚೈಸಿಯಿಂದ ಈ ನಿರ್ಧಾರ ಹೊರಬಿದ್ದಿದೆ.

ಏಕಬಾರಿಯ ನಗದು ಪಾವತಿಯ ಒಪ್ಪಂದ ಅಂತಿಮಗೊಂಡ ಬೆನ್ನಲ್ಲೇ ಭಾರತ ಟಿ20 ತಂಡದ ನಾಯಕರೂ ಆಗಿರುವ ಪಾಂಡ್ಯ ಅವರು ಈ ಹಿಂದೆ ಪ್ರತಿನಿಧಿಸಿದ್ದ ಮುಂಬೈ ತಂಡಕ್ಕೆ ಪಾಂಡ್ಯ ಹಿಂದಿರುಗಿದ್ದಾರೆ. ಇದರನ್ವಯ, ಗುಜರಾತ್ ಟೈಟನ್ಸ್ ಫ್ರಾಂಚೈಸಿಗೆ ಮುಂಬೈ ಫ್ರಾಂಚೈಸಿಯಿಂದ ₹15 ಕೋಟಿ ವ್ಯಾಪಾರ ಒಪ್ಪಂದದಿಂದ ಸಿಗಲಿದೆ. ಜೊತೆಗೆ ಬಹಿರಂಗಪಡಿಸದ ದೊಡ್ಡ ಮೊತ್ತವನ್ನು ವರ್ಗಾವಣೆ ಶುಲ್ಕ ಹೊರತುಪಡಿಸಿ, ಒಂದು ಭಾಗ ಕ್ರಿಕೆಟಿಗನಿಗೆ ನೀಡಲಿದೆ.

ಕಳೆದ ಐಪಿಎಲ್ ಆವೃತ್ತಿಯಲ್ಲಿ 24 ವರ್ಷದ ಗಿಲ್ ಅವರು 890 ರನ್ ಸಿಡಿಸಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ (973) ನಂತರ ಐಪಿಎಲ್ ಸರಣಿಯೊಂದರಲ್ಲಿ ಅತಿ ಹೆಚ್ಚು ರನ್ ಗಳಿಸಿದ್ದ ಗಿಲ್ ಅವರನ್ನು ಟೈಟಾನ್ಸ್ ತಂಡದ ನಾಯಕನಾಗಿ ಆಯ್ಕೆ ಮಾಡಲಾಗಿದೆ.

‘ತಂಡದ ನಾಯಕನಾಗಿ ಆಯ್ಕೆಯಾಗಿದ್ದಕ್ಕೆ ಹೆಮ್ಮೆ ಮತ್ತು ಸಂತಸವಾಗುತ್ತಿದೆ. ನನ್ನ ಮೇಲೆ ನಂಬಿಕೆ ಇಟ್ಟು ಇಂತಹ ಅದ್ಭುತ ಹೊಣೆಗಾರಿಕೆ ನೀಡಿದ ಫ್ರಾಂಚೈಸಿಗೆ ಧನ್ಯವಾದಗಳು. ಎರಡು ಶ್ರೇಷ್ಠ ಆವೃತ್ತಿಗಳನ್ನು ನಾವು ಕಂಡಿದ್ದೇವೆ. ತಂಡವನ್ನು ಮುನ್ನಡೆಸಲು ಉತ್ಸುಕನಾಗಿದ್ದೇನೆ’ ಎಂದು ಗಿಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಾರ್ದಿಕ್ ಪಾಂಡ್ಯ ಮತ್ತು ಶುಭಮನ್ ಗಿಲ್

ಎರಡು ಆವೃತ್ತಿಯಲ್ಲಿ ಗುಜರಾತ್ ತಂಡದ ಪರ 30 ಇನ್ನಿಂಗ್ಸ್ ಆಡಿರುವ ಪಾಂಡ್ಯ ಅವರು 133.49ರ ಸ್ಟ್ರೈಕ್ ರೇಟ್‌ನಲ್ಲಿ 833 ರನ್ ಗಳಿಸುವ ಜತೆಗೆ 11 ವಿಕೆಟ್ ಪಡೆದಿದ್ದಾರೆ.

‘ಎರಡು ವರ್ಷಗಳ ಅದ್ಭುತ ಪಯಣಕ್ಕಾಗಿ ಗುಜರಾತ್ ತಂಡದ ಆಡಳಿತ ಮಂಡಳಿಗೆ, ಅಭಿಮಾನಿಗಳಿಗೆ ವಿಶೇಷ ಧನ್ಯವಾದಗಳು. ತಂಡದಲ್ಲಿ ನನಗೆ ಉತ್ತಮ ಪ್ರೋತ್ಸಾಹ ಮತ್ತು ಶ್ರೇಷ್ಠ ಗೌರವ ದೊರಕಿದೆ. ಆ ನೆನಪುಗಳನ್ನು ಎಂದಿಗೂ ಮರೆಯಲಾಗದು’ ಎಂದು ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿರುವ ಆಲ್‌ರೌಂಡರ್, ‘ಮತ್ತೆ ತಮ್ಮ ತವರು ತಂಡಕ್ಕೆ ಮರಳಲು ಉತ್ಸುಕನಾಗಿದ್ದೇನೆ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ಆವೃತ್ತಿಗಳಲ್ಲಿ ನಾಯಕರಾಗಿ ಹಾರ್ದಿಕ್ ಪಾಂಡ್ಯ ನೀಡಿರುವ ಕೊಡುಗೆಯನ್ನು ಗುಜರಾತ್ ತಂಡದ ನಿರ್ದೇಶಕ ವಿಕ್ರಮ್ ಸೋಳಂಕಿ ಶ್ಲಾಘಿಸಿದ್ದಾರೆ.

‘ಗುಜರಾತ್ ತಂಡದ ಮೊದಲ ನಾಯಕರಾಗಿ ಪಾಂಡ್ಯ ಎರಡು ಆವೃತ್ತಿಗಳಲ್ಲಿ ಅದ್ಭುತವಾಗಿ ತಂಡವನ್ನು ಮುನ್ನಡೆಸಿದ್ದಾರೆ. ಒಮ್ಮೆ ತಂಡ ಟ್ರೋಫಿ ಜಯಿಸಿದರೆ, ಮತ್ತೊಮ್ಮೆ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಈಗ ಅವರು ಮುಂಬೈ ಇಂಡಿಯನ್ಸ್ ತಂಡಕ್ಕೆ ಮರಳಲು ಬಯಸಿದ್ದಾರೆ. ಅವರ ನಿರ್ಧಾರವನ್ನು ನಾವು ಗೌರವಿಸುತ್ತೇವೆ. ಅವರಿಗೆ ಶುಭ ಕೋರುತ್ತೇವೆ’ ಎಂದು ಸೋಳಂಕಿ ಹೇಳಿದ್ದಾರೆ.

‘ಶುಭಮನ್ ಗಿಲ್ ಅವರ ಪ್ರಭುದ್ಧತೆಯನ್ನು ಮೈದಾನದಲ್ಲಿ ನಾವು ಕಂಡಿದ್ದೇವೆ. ಗಿಲ್‌ರಂತಹ ಯುವ ನಾಯಕನ ಜೊತೆ ಹೊಸ ಪ್ರಯಾಣ ಆರಂಭಿಸಲು ಅತ್ಯಂತ ಉತ್ಸುಕರಾಗಿದ್ದೇವೆ’ ಎಂದು ಅವರು ಹೇಳಿದ್ದಾರೆ.

ಇತ್ತ, ಹಾರ್ದಿಕ್ ಪಾಂಡ್ಯ ಅವರನ್ನು ‘ಮುಂಬೈ ಇಂಡಿಯನ್ಸ್ ಕುಟುಂಬ’ಕ್ಕೆ ಸ್ವಾಗತಿಸುತ್ತಿರುವುದು ಅತ್ಯಂತ ರೋಮಾಂಚನಕಾರಿಯಾಗಿದೆ ಎಂದು ಮಾಲೀಕರಾದ ನೀತಾ ಅಂಬಾನಿ ಮತ್ತು ಆಕಾಶ್ ಅಂಬಾನಿ ಹೇಳಿದ್ದಾರೆ.

ಆರ್‌ಸಿಬಿ ತೆಕ್ಕೆಗೆ ಕ್ಯಾಮರೂನ್ ಗ್ರೀನ್

ಹಾರ್ದಿಕ್ ಪಾಂಡ್ಯ ಅವರನ್ನು ಮುಂಬೈ ಇಂಡಿಯನ್ಸ್ ತನ್ನ ತೆಕ್ಕೆಗೆ ಹಾಕಿಕೊಂಡ ಬೆನ್ನಲ್ಲೇ ತಮ್ಮಲ್ಲಿದ್ದ ಆಸ್ಟ್ರೇಲಿಯಾದ ಆಲ್‌ರೌಂಡ್ ಆಟಗಾರ ಕ್ಯಾಮರೂನ್ ಗ್ರೀನ್ ಅವರನ್ನು ಬಿಟ್ಟುಕೊಟ್ಟಿದೆ. ಅವರು ಇದೀಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪಾಲಾಗಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ನಡೆದ ಬಿಡ್ಡಿಂಗ್‌ನಲ್ಲಿ ₹ 17.50 ಕೋಟಿ ಮೊತ್ತಕ್ಕೆ ಗ್ರೀನ್ ಅವರನ್ನು ಮುಂಬೈ ತಂಡ ತನ್ನತ್ತ ಸೆಳೆದಿತ್ತು. ಕಳೆದ ಆವೃತ್ತಿಯಲ್ಲಿ ಗ್ರೀನ್ ಎರಡನೇ ದುಬಾರಿ ಆಟಗಾರ ಎನಿಸಿದ್ದರು. 24 ವರ್ಷದ ಅವರು ಕಳೆದ ಆವೃತ್ತಿಯಲ್ಲಿ ಅಜೇಯ ಶತಕ ಮತ್ತು ಎರಡು ಅರ್ಧ ಶತಕಗಳನ್ನು ಬಾರಿಸುವುದರ ಜೊತೆಗೆ ಆರು ವಿಕೆಟ್‌ಗಳನ್ನು ಪಡೆದಿದ್ದರು. ಅವರನ್ನು ಅದೇ ಬೆಲೆಗೆ ಆರ್‌ಸಿಬಿ ತನ್ನತ್ತ ಆಕರ್ಷಿಸಿದೆ.

‘ಹ್ಯಾಟ್ರಿಕ್ ಜಯ’ದ ಮೇಲೆ ಭಾರತ ಕಣ್ಣು

ಗುವಾಹಟಿ (ಪಿಟಿಐ): ಮೊದಲೆರಡೂ ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿರುವ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ಮಂಗಳವಾರ ‘ಹ್ಯಾಟ್ರಿಕ್ ಜಯ’ ಸಾಧಿಸಿ, ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯನ್ನು ಕೈವಶ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಇಶಾನ್ ಕಿಶನ್, ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್ ಅವರು ಭರ್ಜರಿ ಲಯದಲ್ಲಿದ್ದಾರೆ. ಇವರ ಆಟದ ಬಲದಿಂದಲೇ ಎರಡನೇ ಪಂದ್ಯದಲ್ಲಿ ಭಾರತ ತಂಡವು ದೊಡ್ಡ ಮೊತ್ತ ಪೇರಿಸಿತ್ತು. ಆಸ್ಟ್ರೇಲಿಯಾದ ಬೌಲಿಂಗ್ ಪಡೆಯ ಎಸೆತಗಳನ್ನು ರಿಂಕು ಸಿಂಗ್ ಅವರಂತೂ ಬೀಡುಬೀಸಾಗಿ ಬೌಂಡರಿ ಗೆರೆ ದಾಟಿಸಿದ್ದರು.

ಈ ಬೃಹತ್ ಮೊತ್ತದಿಂದಾಗಿ ಬೌಲರ್‌ಗಳಲ್ಲಿ ಆತ್ಮವಿಶ್ವಾಸ ತುಂಬಿ ತುಳುಕಿತ್ತು. ಅದರಿಂದಾಗಿ ಕನ್ನಡಿಗ ಪ್ರಸಿದ್ಧ ಕೃಷ್ಣ, ಅರ್ಷದೀಪ್ ಸಿಂಗ್, ಮುಕೇಶ್ ಕುಮಾರ್, ವಾಷಿಂಗ್ಟನ್ ಸುಂದರ್ ಮತ್ತು ಅಕ್ಷರ್ ಪಟೇಲ್ ಅವರು ಎದುರಾಳಿ ತಂಡವನ್ನು ಕಟ್ಟಿಹಾಕಿದರು.

ಆದರೆ ಬ್ಯಾಟರ್‌ಗಳು ಒತ್ತಡದಿಂದಾಗಿ ಹೆಚ್ಚು ವಿಕೆಟ್ ಕಳೆದುಕೊಂಡಿದ್ದರು ಎನ್ನುವುದೂ ಗಮನಾರ್ಹ. ಅದರಿಂದಾಗಿ ಬೌಲರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಉತ್ತಮವಾಗಿ ಬೌಲಿಂಗ್ ಮಾಡುವ ಸವಾಲು ಇದೆ. ಮೂರನೇ ಪಂದ್ಯದಲ್ಲಿ ಬೌಲರ್‌ಗಳು ಸುಧಾರಿತ ಪ್ರದರ್ಶನ ನೀಡುವ ವಿಶ್ವಾಸವಿದೆ.

ಸರಣಿಯ ಮೊದಲ ಪಂದ್ಯದಲ್ಲಿ ಕೊನೆಯ ಎಸೆತದವರೆಗೂ ಆಸ್ಟ್ರೇಲಿಯಾ ತಂಡವು ಹೋರಾಟ ಮಾಡಿ ಸೋತಿತ್ತು. ಎರಡನೇಯ ಪಂದ್ಯದಲ್ಲಿ ಹೆಚ್ಚು ಪ್ರತಿರೋಧವಿಲ್ಲದೇ ಪಂದ್ಯದಲ್ಲಿ ಪರಾಭವಗೊಂಡಿತು.

ಆದರೆ ಮೂರನೇ ಪಂದ್ಯದಲ್ಲಿ ಗೆದ್ದರೆ ಪ್ರವಾಸಿ ತಂಡಕ್ಕೆ ಸರಣಿ ಗೆಲುವಿನ ಕನಸು ಜೀವಂತವಾಗುಳಿಯುತ್ತದೆ. ಆದ್ದರಿಂದ ತಿರುಗೇಟು ನೀಡುವ ಛಲದಲ್ಲಿ ಮ್ಯಾಥ್ಯೂ ವೇಡ್ ಬಳಗವಿದೆ. ತಂಡದ ಪ್ರಮುಖ ಬ್ಯಾಟರ್ ಗ್ಲೆನ್ ಮ್ಯಾಕ್ಸ್‌ವೆಲ್ ತಮ್ಮ ನೈಜ ಲಯಕ್ಕೆ ಮರಳಿದರೆ ತಂಡಕ್ಕೆ ಆನೆ ಬಲ ಲಭಿಸುವಲ್ಲಿ ಅನುಮಾನವೇ ಇಲ್ಲ.

ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯದ ಹೀರೊ ಟ್ರಾವಿಸ್ ಹೆಡ್ ಈ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆ ಇದೆ. ತಂಡದಲ್ಲಿರುವ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಉತ್ತಮ ಲಯದಲ್ಲಿದ್ದಾರೆ. ಬ್ಯಾಟರ್ ಜೋಷ್ ಇಂಗ್ಲಿಸ್, ನಾಯಕ ಮ್ಯಾಥ್ಯೂ ವೇಡ್ ಅವರು ಬಿರುಸಾದ ಬ್ಯಾಟಿಂಗ್ ಮಾಡಿದರೆ ತಂಡವು ದೊಡ್ಡ ಮೊತ್ತ ಗಳಿಸಬಹುದು.

ಅಸ್ಸಾಂನ ಗುವಾಹಟಿಯಲ್ಲಿ ಚಳಿಗಾಲದ ಸಂಜೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇಬ್ಬನಿ ಸುರಿಯುತ್ತದೆ. ಆದ್ದರಿಂದ ಟಾಸ್ ಗೆಲ್ಲುವ ನಾಯಕ ತೆಗೆದುಕೊಳ್ಳುವ ನಿರ್ಧಾರವೂ ಮುಖ್ಯವಾಗಲಿದೆ.

ಆರಂಭ: ರಾತ್ರಿ 7
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಅಭ್ಯಾಸನಿರತ ಭಾರತ ತಂಡದ ಆವೇಶ್ ಖಾನ್, ಇಶಾನ್ ಕಿಶನ್ ಮತ್ತು ರಿಂಕು ಸಿಂಗ್ –ಪಿಟಿಐ ಚಿತ್ರ

ಶ್ರೀಲಂಕಾ ಕ್ರೀಡಾ ಸಚಿವ ವಜಾ

ರೋಷನ್ ರಣಸಿಂಘೆ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕ್ರೀಡಾ ಸಚಿವ ರೋಷನ್ ರಣಸಿಂಘೆ ಅವರನ್ನು ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ವಜಾ ಮಾಡಿದ್ದಾರೆ.

‘ಕ್ರಿಕೆಟ್ ಮಂಡಳಿಯನ್ನು ಭ್ರಷ್ಟಾಚಾರ ಮುಕ್ತಗೊಳಿಸುವ ನನ್ನ ಪ್ರಯತ್ನದ ಕಾರಣಕ್ಕೆ ನನಗೆ ಪ್ರಾಣ ಭಯವಿದೆ. ಹಾಗೇನಾದರೂ ಆದರೆ ಅದಕ್ಕೆ ವಿಕ್ರಮಸಿಂಘೆ ಮತ್ತು ಅವರ ಸಿಬ್ಬಂದಿಯೇ ಹೊಣೆಗಾರರು’ ಎಂದು ರೋಷನ್ ಸಂಸತ್ತಿನಲ್ಲಿ ಸೋಮವಾರ ಹೇಳಿದ್ದಾರೆ. ಅದರ ಬೆನ್ನಲ್ಲೇ ಸಚಿವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಟೆನಿಸ್: ಮುಖ್ಯ ಸುತ್ತಿಗೆ ರಿಷಿ, ಭರತ್

• ಬಸವರಾಜ ದಳವಾಯಿ

ಕಲಬುರಗಿ: ಜಿದ್ದಾಜಿದ್ದಿಯ ಸ್ಪರ್ಧೆಯಲ್ಲಿ ಗೆದ್ದ ರಿಷಿ ರೆಡ್ಡಿ ಹಾಗೂ ಭರತ್ ನಿಶೋಕ್ ಕುಮಾರನ್ ಸೇರಿದಂತೆ ಭಾರತದ ಏಳು ಆಟಗಾರರು ಕಲಬುರಗಿ ಓಪನ್ ಟೆನಿಸ್ ಟೂರ್ನಿಯ ಮುಖ್ಯಸುತ್ತು ಪ್ರವೇಶಿಸಿದರು.

ಇಲ್ಲಿನ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಟೂರ್ನಿಯ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ಕರ್ನಾಟಕದ ರಿಷಿ 6–2, 7–6 (4)ರಿಂದ ತಮಿಳುನಾಡಿನ ಓಜಸ್ ತೇಜೊ ಜಯಪ್ರಕಾಶ್ ಅವರನ್ನು ಮಣಿಸಿದರು.

ಮೊದಲ ಸೆಟ್‌ನಲ್ಲಿ ಸುಲಭ ಜಯಸಾಧಿಸಿದ ರಿಷಿ ಅವರಿಗೆ ಎರಡನೇ ಸೆಟ್‌ನಲ್ಲಿ ಓಜಸ್ ಅವರಿಂದ ತೀವ್ರ ಪೈಪೋಟಿ ಎದುರಾಯಿತು. ಈ ಸೆಟ್‌ನ ಮೊದಲ ಗೇಮ್ ರಿಷಿ ಜಯಿಸಿದರು. ಆದರೆ, ಡ್ರಾಪ್ ಶಾಟ್‌ಗಳಲ್ಲಿ ಪ್ರಾಬಲ್ಯ ಸಾಧಿಸಿದ ಓಜಸ್, ಎರಡು ಮತ್ತು ಮೂ ರನೇ ಗೇಮ್‌ಗಳನ್ನು ಒಲಿಸಿಕೊಂಡರು. ನಾಲ್ಕನೇ ಗೇಮ್ ರಿಷಿ ಪಾಲಾಯಿತು.

ಕರಾರುವಾಕ್ ಹೊಡೆತಗಳನ್ನು ಪ್ರಯೋಗಿಸಿದ ಓಜಸ್, ಐದು ಮತ್ತು ಆರನೇ ಗೇಮ್‌ಗಳನ್ನು ಗೆದ್ದು 4–2ರ ಮುನ್ನಡೆ ಸಾಧಿಸಿದರು. ಇಬ್ಬರೂ ಆಕರ್ಷಕ ಸರ್ವ್‌ಗಳನ್ನು ಪ್ರಯೋಗಿಸಿದರು. ಬಳಿಕ ರಿಷಿ ಕೂಡ ಸತತ ಎರಡು ಗೇಮ್ (7 ಮತ್ತು 8ನೇ) ತಮ್ಮದಾಗಿಸಿಕೊಂಡರು. ಸ್ಕೋರ್ 4–4ರಿಂದ ಸಮಬಲವಾಯಿತು. ಸೋಲೊಪ್ಪಿಕೊಳ್ಳದ ಮನೋಭಾವ ಇಬ್ಬರಲ್ಲೂ ಕಂಡುಬಂತು. ಒಂಬತ್ತನೇ ಗೇಮ್ ಓಜಸ್, 10 ಮತ್ತು 11ನೇ ಗೇಮ್ ರಿಷಿ ಮತ್ತು 12ನೇ ಗೇಮ್ ಓಜಸ್ ಜಯಿಸಿದರು. ಕೊನೆಗೆ ಟೈಬ್ರೇಕರ್‌ನ ಒತ್ತಡ ಮೀರುವಲ್ಲಿ ರಿಷಿ ಯಶಸ್ವಿಯಾದರು. 1 ತಾಸು 58 ನಿಮಿಷ ಗಳ ಕಾಲ ಈ ಹಣಾಹಣಿ ನಡೆಯಿತು.

ಧ್ರುವ ಹಿರ್ಪಾರ 6–0, 3–0 ಯಿಂದ ಮುನ್ನಡೆಯಲ್ಲಿದ್ದಾಗ ಎದುರಾಳಿ ಯಶ್ ಯಾದವ್ ಗಾಯಗೊಂಡು ನಿವೃತ್ತಿಯಾದರು. ಇದರೊಂದಿಗೆ ಧ್ರುವ ಮುಖ್ಯ ಸುತ್ತಿಗೆ ಕಾಲಿಟ್ಟರು.

ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯದಲ್ಲಿ ಸೋಮವಾರ ಕರ್ನಾಟಕದ ರಿಷಿ ರೆಡ್ಡಿ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಸ್ಪೇನ್‌ನ ಮಾರ್ಟಿನ್ ಕಾರ್ಪೆನಾ ಸ್ಪೋರ್ಟ್ಸ್‌ಶಾಲ್‌ನಲ್ಲಿ ಭಾನುವಾರ ನಡೆದ ಡೇವಿಸ್ ಕಪ್ ಟೆನಿಸ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಇಟಲಿ ತಂಡದ ಆಟಗಾರರು ಆಸ್ಟ್ರೇಲಿಯಾ ತಂಡವನ್ನು ಮಣಿಸಿ 47 ವರ್ಷಗಳ ನಂತರ ಪ್ರಶಸ್ತಿಯನ್ನು ಗೆದ್ದು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಬ್ಯಾಡ್ಮಿಂಟನ್: ಪ್ರಣಯ್ ಗೈರು

ಲಖನೌ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆಗಳಾದ ಎಚ್.ಎಸ್. ಪ್ರಣಯ್, ಲಕ್ಷ್ಯಸೇನ್ ಮತ್ತು ಪಿ.ವಿ. ಸಿಂಧು ಅವರು ಇಲ್ಲಿ ಮಂಗಳವಾರ ಆರಂಭವಾಗುವ ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಿಂದ ದೂರ ಉಳಿದಿದ್ದಾರೆ.

ವಿಶ್ವದ 24ನೇ ಕ್ರಮಾಂಕದ ಕಿದಂಬಿ ಶ್ರೀಕಾಂತ್, ಟೋಕಿಯೊ ಒಲಿಂಪಿಯನ್ ಬಿ. ಸಾಯಿ ಪ್ರಣೀತ್, ಇಂಡೊನೇಷ್ಯಾದ ಮಾಸ್ಟರ್ಸ್ ವಿಜೇತ ಕಿರಣ್ ಜಾರ್ಜ್, ಓರ್ಲಿಯನ್ಸ್ ಮಾಸ್ಟರ್ಸ್ ವಿಜೇತ ಪ್ರಿಯಾಂಶು ರಾಜಾವತ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಆರನೇ ಶ್ರೇಯಾಂಕದ ಶ್ರೀಕಾಂತ್ ಅವರು ಆರಂಭಿಕ ಸುತ್ತಿನಲ್ಲಿ ಚೀನಾ ತೈಪೆಯ ಚಿಯಾ ಹಾವೊ ಲೀ ಅವರನ್ನು ಎದುರಿಸುವರು. ಪ್ರಿಯಾಂಶು ಅವರು ಕಜಕಿಸ್ತಾನದ ಡಿಮಿಟ್ರಿ ಪನಾರಿನ್ ವಿರುದ್ಧ ಸೆಣಸಲಿದ್ದಾರೆ. ಪ್ರಣೀತ್ ಅವರು ಎರಡನೇ ಕ್ರಮಾಂಕದ ಜಪಾನ್‌ನ ಕೆಂಟಾ ನಿಶಿಮೊಟೊ ಅವರೊಂದಿಗೆ ಪೈಪೋಟಿ ನಡೆಸುವರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋಡ್, ಆಕರ್ಷಿ ಕಶ್ಯಪ್, ಉನ್ನತಿ ಹೂಡಾ, ಅನುಪಮಾ ಉಪಾಧ್ಯಾಯ, ಅಶ್ಮಿತಾ ಚಲಿಹಾ, ತಾನ್ಯಾ ಹೇಮಂತ್, ತಸ್ನಿಮ್ ಮಿರ್ ಮತ್ತು ರುತ್ವಿಕಾ ಶಿವಾನಿ ಕಣದಲ್ಲಿದ್ದಾರೆ.

PARISHRAMA GROUP OF INSTITUTIONS
PARISHRAMA PU COLLEGE
WITH INTEGRATED NEET, JEE MAIN & KCET TRAINING
Presents
ಪ್ರಜಾವಾಣಿ
QUIZ CHAMPIONSHIP
Powered by
BHIMA
GOLD • DIAMONDS • SILVER • PLATINUM
SINCE 1925

ಮೆದುಳನ್ನು ಚುರುಕುಗೊಳಿಸುವ ರಸಪ್ರಶ್ನೆ ಕಾರ್ಯಕ್ರಮಕ್ಕೆ ಕ್ಷಣಗಣನೆ ಪ್ರಾರಂಭವಾಗಿದೆ

ಪ್ರತಿ ವರ್ಷದಂತೆ ಈ ವರ್ಷವೂ ಆಯೋಜಿಸಲಾಗಿರುವ ಪ್ರಜಾವಾಣಿ ಕ್ವಿಜ್ ಚಾಂಪಿಯನ್ ಶಿಪ್ ಗೆ ಪ್ರಜಾವಾಣಿಯು ಅತ್ಯುತ್ಸಾಹದಿಂದ ಪ್ರಕಟಣೆಯನ್ನು ನೀಡುತ್ತಿದೆ.

8 ರಿಂದ 10ನೇ ತರಗತಿಯ ವಿದ್ಯಾರ್ಥಿಗಳೇ ಇಲ್ಲಿ ಗಮನಿಸಿ !

ಐದು ವಲಯಗಳಲ್ಲಿ ನಡೆಯಲಿರುವ ರಸಪ್ರಶ್ನೆ ಕಾರ್ಯಕ್ರಮದಲ್ಲಿ ನೂರಾರು ಶಾಲೆಗಳು ಮತ್ತು ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದು , ಅದರಲ್ಲಿ ನೀವೂ ಒಬ್ಬರಾಗಿ ಭಾಗವಹಿಸಿ. ನಿಮ್ಮ ಬುದ್ಧಿಗೆ ಸವಾಲೆಸೆಯುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ, ವಿಜೇತರಾಗಿ ಹೊರಹೊಮ್ಮಿ!

ನಿಮ್ಮೊಳಗಿನ ಜ್ಞಾನವನ್ನು ಪ್ರದರ್ಶಿಸಿ, ಆಕರ್ಷಕ ಬಹುಮಾನವನ್ನು ಗೆಲ್ಲಿರಿ.

ಆಯಾ ವಲಯದ ವಿಜೇತರು ನಗದು ಬಹುಮಾನಗಳನ್ನು ಸ್ವೀಕರಿಸಿ, ಒಂದು ದಿನದ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವರು. ಆದರೆ ಅಂತಿಮ ಘಟ್ಟಕ್ಕೆ ಆಯ್ಕೆಯಾದ ಸ್ಪರ್ಧಿಗಳು ಅತ್ಯಾಕರ್ಷಕ ಬಹುಮಾನಗಳನ್ನು ಗೆಲ್ಲಲು ಸ್ಪರ್ಧೆಯನ್ನು ಮುಂದುವರೆಸುತ್ತಾರೆ!

ವಲಯಗಳ ಸುತ್ತಿನ ವೇಳಾಪಟ್ಟಿ

ಸ್ಥಳ	ಮೈಸೂರು	ಮಂಗಳೂರು	ಧಾರವಾಡ	ದಾವಣಗೆರೆ	ಬೆಂಗಳೂರು
ದಿನಾಂಕ	11.12.2023	12.12.2023	13.12.2023	14.12.2023	16.12.2023

ತಕ್ಷಣವೇ QR ಕೋಡನ್ನು ಸ್ಕ್ಯಾನ್ ಮಾಡಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ. ಅಥವಾ www.prajavani.net ಗೆ ಭೇಟಿ ನೀಡಿ.
ಸಂಪರ್ಕಿಸಿ 7338018541

ಪ್ರವೇಶಾತಿ ಉಚಿತ

Associate Sponsor Dukes Waffy
Associate Sponsor
Knowledge Partner QURIOSITY Knowledge Solutions